ಭಾನುವಾರ ಫೆಬ್ರುವರಿ 8 2026 ₹ 7.00
www.prajavani.net
ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಸೂರ್ಯ ಅರ್ಧಶತಕ

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಐಸಿಸಿ ಟಿ20 ವಿಶ್ವಕಪ್ ಪಂದ್ಯದಲ್ಲಿ ಶನಿವಾರ ಅಮೆರಿಕ ಎದುರು ಅರ್ಧಶತಕ ಗಳಿಸಿ ಗೆಲುವಿಗೆ ಕಾರಣರಾದರು

ಉದ್ಯಮಗಳಿಗೆ ಇನ್ನು ಎಐ ಅವಲಂಬನೆ 8

‘ಮುಕ್ತ ವ್ಯಾಪಾರ’ಕ್ಕೆ ಮುನ್ನುಡಿ

ಭಾರತದ ರಫ್ತುದಾರರಿಗೆ ವಿಶಾಲ ಮಾರುಕಟ್ಟೆ ಲಭ್ಯ ● ಕೃಷಿ, ಡೇರಿ ಉತ್ಪನ್ನಗಳಿಗೆ ರಕ್ಷಣೆ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಶನಿವಾರ ಜಂಟಿಯಾಗಿ ಘೋಷಿಸಿದ್ದು, ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ಪೂರಕವಾಗಿ ಹಲವು ಸರಕುಗಳ ಮೇಲಿನ ಆಮದು ಸುಂಕ ಕಡಿತಗೊಳಿಸುವುದಾಗಿ ಪ್ರಕಟಿಸಿವೆ.

ಅಮೆರಿಕವು ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಈಗಿನ ಶೇ 50ರಿಂದ ಶೇ 18ಕ್ಕೆ ಇಳಿಸಿದರೆ, ಅದಕ್ಕೆ ಪ್ರತಿಯಾಗಿ ಭಾರತವು ಅಮೆರಿಕದ ಕೈಗಾರಿಕಾ ಸರಕುಗಳು, ಪಶು ಆಹಾರಕ್ಕೆ ಬಳಸುವ ಗೋವಿನ ಜೋಳ, ‘ಡ್ರೈಫ್ರೂಟ್ಸ್’, ಕೆಲ ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಸ್ಪಿರಿಟ್ ಮೇಲಿನ ಸುಂಕವನ್ನು ಪೂರ್ಣವಾಗಿ ತೆಗೆದು ಹಾಕಲಿದೆ ಅಥವಾ ಕಡಿತಗೊಳಿಸಲಿದೆ.

ಈ ಒಪ್ಪಂದದ ಪರಿಣಾಮ ಭಾರತದ ರಫ್ತುದಾರರಿಗೆ ಅಮೆರಿಕದ 30 ಟ್ರಿಲಿಯನ್ ಡಾಲರ್‌ನಷ್ಟು ವಿಶಾಲ ಮಾರುಕಟ್ಟೆ ತೆರೆದುಕೊಳ್ಳಲಿದೆ. ಅಲ್ಲದೆ ಕೃಷಿ, ಮೀನುಗಾರಿಕೆ, ಎಂಎಸ್‌ಎಂಇ ಕ್ಷೇತ್ರಗಳ ಹಿತಾಸಕ್ತಿಯನ್ನು ರಕ್ಷಿಸಲಾಗಿದೆ ಎಂದು ಭಾರತ ಪ್ರತಿಪಾದಿಸಿದೆ.

ಉಭಯ ದೇಶಗಳು ಬಿಡುಗಡೆ ಮಾಡಿರುವ ಜಂಟಿ ಹೇಳಿಕೆ ಪ್ರಕಾರ, ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಬಿಲಿಯನ್ ಡಾಲರ್ ಮೊತ್ತದಷ್ಟು ಇಂಧನ ಉತ್ಪನ್ನಗಳು, ವಿಮಾನ ಮತ್ತು ವಿಮಾನದ ಬಿಡಿ ಭಾಗಗಳು, ಅಮೂಲ್ಯ ಲೋಹಗಳು, ತಂತ್ರಜ್ಞಾನದ ಉತ್ಪನ್ನಗಳು, ಕಲ್ಲಿದ್ದಲನ್ನು ಖರೀದಿಸುವ ಉದ್ದೇಶವನ್ನು ಭಾರತ ವ್ಯಕ್ತಪಡಿಸಿದೆ.

ಔಷಧ, ವಜ್ರಕ್ಕೆ ಶೂನ್ಯ ಸುಂಕ: ಈ ಒಪ್ಪಂದದಿಂದಾಗಿ ಭಾರತದ ಜೆನರಿಕ್ ಔಷಧಗಳು, ರತ್ನಗಳು, ವಜ್ರಗಳು ಮತ್ತು ವಿಮಾನ ಬಿಡಿಭಾಗಗಳ ರಫ್ತಿನ ಮೇಲಿನ ಸುಂಕ ಶೂನ್ಯಕ್ಕೆ ಇಳಿಯುತ್ತದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮಾಹಿತಿ ನೀಡಿದ್ದಾರೆ. ಇದರಿಂದ ಭಾರತದ ರಫ್ತು ಸ್ಪರ್ಧಾತ್ಮಕತೆ ಮತ್ತು ‘ಮೇಕ್ ಇನ್ ಇಂಡಿಯಾ’ ಅಭಿಯಾನ ವೃದ್ಧಿಸುತ್ತದೆ. ಇದರ ಪರಿಣಾಮ ಈ ವಲಯಗಳಲ್ಲಿನ ರಫ್ತಿನಿಂದ ಹೆಚ್ಚಿನ ಲಾಭ ನಿರೀಕ್ಷಿಸಬಹುದು ಎಂದು ಪ್ರತಿಕ್ರಿಯಿಸಿದ್ದಾರೆ.

ರಫ್ತು ಹೆಚ್ಚಳಕ್ಕೆ ದೊರೆತಿರುವ ಈ ಅವಕಾಶವು ದೇಶದ ಮಹಿಳೆಯರು ಮತ್ತು ಯುವ ಸಮುದಾಯಕ್ಕೆ ಲಕ್ಷಾಂತರ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತವು ಅಮೆರಿಕದ ಜತೆಗೆ ಮಧ್ಯಂತರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಿದೆ. ಇದರ ಭಾಗವಾಗಿ ವಿಶ್ವದ ಅತಿದೊಡ್ಡ ಆರ್ಥಿಕತೆಯಲ್ಲಿ ಭಾರತದ ಜವಳಿ, ಉಡುಪು, ಚರ್ಮ ಮತ್ತು ಪಾದರಕ್ಷೆಗಳು, ಪ್ಲಾಸ್ಟಿಕ್, ರಬ್ಬರ್ ಉತ್ಪನ್ನಗಳು, ಸಾವಯವ ರಾಸಾಯನಿಕಗಳು, ಗೃಹಾಲಂಕಾರ, ಕುಶಲಕರ್ಮಿ ಉತ್ಪನ್ನಗಳು, ಸ್ಮಾರ್ಟ್‌ಫೋನ್‌ಗಳು ಸೇರಿದಂತೆ ಆಯ್ದ ಯಂತ್ರೋಪಕರಣಗಳಿಗೆ ಹೆಚ್ಚಿನ ಅವಕಾಶ ದೊರೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಈ ವ್ಯಾಪಾರ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕ ಮಾರ್ಚ್‌ನಲ್ಲಿ ಸಹಿ ಹಾಕುವ ನಿರೀಕ್ಷೆಯಿದೆ.

ಹೆಚ್ಚುವರಿ ಸುಂಕದ ಆದೇಶ ರದ್ದು

ರಷ್ಯಾದಿಂದ ತೈಲ ಖರೀದಿಸುತ್ತಿದ್ದ ಕಾರಣ ಭಾರತದ ಮೇಲೆ 2025ರ ಆಗಸ್ಟ್‌ನಲ್ಲಿ ವಿಧಿಸಿದ್ದ ಶೇ 25ರಷ್ಟು ಹೆಚ್ಚುವರಿ ಆಮದು ಸುಂಕದ ಆದೇಶವನ್ನು ರದ್ದುಗೊಳಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರ್ಯಕಾರಿ ಆದೇಶ ಹೊರಡಿಸಿದ್ದಾರೆ. ‘ಭಾರತವು ಮಹತ್ವದ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ಮಾಸ್ಕೊದಿಂದ ನೇರ ಅಥವಾ ಪರೋಕ್ಷವಾಗಿ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಬದ್ಧತೆ ವ್ಯಕ್ತಪಡಿಸಿದೆ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಯಾವುದಕ್ಕೆ ಪೂರ್ಣ ರಕ್ಷಣೆ?

- ಗೋಧಿ, ಅಕ್ಕಿ, ಸೋಯಾ, ಮೆಕ್ಕೆಜೋಳ, ಎಣ್ಣೆ ಬೀಜಗಳು, ಕೋಳಿ, ಕೆಲ ಬಗೆಯ ಮಾಂಸ, ಎಥೆನಾಲ್, ತಂಬಾಕು. ಹಾಲು, ಚೀಸ್, ಬೆಣ್ಣೆ, ತುಪ್ಪ, ಕ್ರೀಮ್, ಮೊಸರು, ಮಜ್ಜಿಗೆ, ಯೋಗರ್ಟ್, ಪನ್ನೀರ್
- ಆಲೂಗಡ್ಡೆ, ಬೆಳ್ಳುಳ್ಳಿ, ಈರುಳ್ಳಿ, ಅಣಬೆ, ಸೋರೆಕಾಯಿ, ಬೆಂಡೆಕಾಯಿ, ಹಸಿರು ಮೆಣಸು, ಬಟಾಣಿ, ಬೀನ್ಸ್, ಕುಂಬಳಕಾಯಿ ಸೇರಿದಂತೆ ಇತರ ತಾಜಾ ತರಕಾರಿಗಳು, ಹಾಗೂ ಘನೀಕರಿಸಿದ ಆಲೂಗಡ್ಡೆ, ಬಟಾಣಿ, ಬೀನ್ಸ್, ಮಿಶ್ರ ತರಕಾರಿ, ಅಣಬೆಗಳು
- ಬಾಳೆಹಣ್ಣು, ಬಾಳೆ ಉತ್ಪನ್ನಗಳು, ಮಾವು ಮತ್ತು ಮಾವಿನ ಉತ್ಪನ್ನಗಳು, ಕಿತ್ತಳೆ, ನಿಂಬೆ, ದ್ರಾಕ್ಷಿ ಸೇರಿದಂತೆ ಸಿಟ್ರಿಕ್ ಹಣ್ಣುಗಳು, ಸ್ಟ್ರಾಬೆರಿ ಸೇರಿದಂತೆ ವಿವಿಧ ಹಣ್ಣುಗಳು
- ಕರಿಮೆಣಸು, ಲವಂಗ, ಮೆಣಸಿನಕಾಯಿ, ಕೊತ್ತಂಬರಿ, ಜೀರಿಗೆ, ಅರಿಸಿನ, ಓಮಕಾಳು, ಮೆಂತ್ಯ, ಸಾಸಿವೆ ಸೇರಿದಂತೆ ಮಸಾಲೆ ಪದಾರ್ಥಗಳು. ಬ್ಲ್ಯಾಕ್ ಟೀ, ಗ್ರೀನ್ ಟೀ ಮತ್ತು ಟೀ ಬ್ಯಾಗ್‌ಗಳು

ಯಾವುದಕ್ಕೆ ಸುಂಕ ಕಡಿತ / ಸುಂಕ ತೆರವು

- ಯಂತ್ರೋಪಕರಣ, ಎಲೆಕ್ಟ್ರಿಕಲ್ಸ್, ವಾಹನಗಳು ಮತ್ತು ಘಟಕಗಳು, ರಾಸಾಯನಿಕಗಳು
- ಉನ್ನತ ಮಟ್ಟದ ಸರ್ವರ್‌ಗಳು, ಎಐ ಹಾರ್ಡ್‌ವೇರ್, ದತ್ತಾಂಶ ಕೇಂದ್ರದ ಉಪಕರಣಗಳು, ಸೆಮಿಕಂಡಕ್ಟರ್ ಇನ್‌ಪುಟ್‌ಗಳು
- ಡ್ರೈಫ್ರೂಟ್‌ಗಳು, ಸೋಯಾಬೀನ್ ಎಣ್ಣೆ, ಆಯ್ದ ಹಣ್ಣುಗಳು, ವೈನ್, ಸ್ಪಿರಿಟ್



ಅಮೆರಿಕವು ಭಾರತಕ್ಕೆ ಏನು ನೀಡುತ್ತದೆ?

- ಈ ಮೊದಲು ಹೆಚ್ಚಿನ ಸುಂಕಗಳನ್ನು ಎದುರಿಸುತ್ತಿದ್ದ ಭಾರತೀಯ ರಫ್ತು ಸರಕುಗಳ ಮೇಲಿನ ಸುಂಕವನ್ನು ಅಮೆರಿಕ ಏಕರೂಪವಾಗಿ ಶೇ 18ಕ್ಕೆ ಅನ್ವಯಿಸಲಿದೆ
- ಜವಳಿ, ಉಡುಪು, ಚರ್ಮ ಮತ್ತು ಪಾದರಕ್ಷೆ, ಪ್ಲಾಸ್ಟಿಕ್, ರಬ್ಬರ್ ಸರಕುಗಳು, ಗೃಹ ಅಲಂಕಾರ, ಕಾರ್ಪೆಟ್‌ಗಳು, ಯಂತ್ರೋಪಕರಣ, ರಾಸಾಯನಿಕಗಳು, ಕುಶಲಕರ್ಮಿ ಸರಕುಗಳಿಗೆ ಏಕರೂಪ ಸುಂಕ ಅನ್ವಯವಾಗಲಿದೆ
- ಒಪ್ಪಂದದಲ್ಲಿ ಮದ್ಯವನ್ನು ‘ಮುಕ್ತ ವರ್ಗ’ದಲ್ಲಿ ಸೂಚಿಸಲಾಗಿದೆ
- ಈ ಹಿಂದೆ ಶೇ 150ರಷ್ಟು ಸುಂಕ ಎದುರಿಸುತ್ತಿದ್ದ ವಿಸ್ಕಿ, ಜಿನ್, ರಮ್ ಮತ್ತು ಸ್ಪಿರಿಟ್‌ಗಳ ಮೇಲಿನ ಸುಂಕ ಗಣನೀಯವಾಗಿ ಕಡಿಮೆಯಾಗಲಿದೆ. ಭಾರತ– ಅಮೆರಿಕ ಮತ್ತು ಭಾರತ– ಐರೋಪ್ಯ ಒಕ್ಕೂಟದ (ಇ.ಯು) ವ್ಯಾಪಾರ ಒಪ್ಪಂದಗಳಿಂದಾಗಿ ಇದು ಶೇ 30ರಿಂದ ಶೇ 40ರಷ್ಟಕ್ಕೆ ಇಳಿಯುವ ನಿರೀಕ್ಷೆಯಿದೆ.

ಇನ್ನಷ್ಟು ಸುದ್ದಿಗಳು 8

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಅಥವಾ ಅದರ ಅಧಿಕಾರಿಗಳು ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಿಸುವುದು ಅಥವಾ ಪ್ರೀಮಿಯಂಗಳ ಹೂಡಿಕೆ, ಮೊತ್ತಗಳ ಮರುಪಾವತಿಯಂತಹ ವಿಮಾ ವ್ಯವಹಾರದ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ. ಪಾಲಿಸಿದಾರರು ಅಥವಾ ಅಂತಹ ಕರೆಗಳನ್ನು ಸ್ವೀಕರಿಸುವ ಪ್ರಾಸ್ಪೆಕ್ಟ್ ಪೋಲೀಸ್ ದೂರು ದಾಖಲಿಸುವಂತೆ ವಿನಂತಿಸಲಾಗಿದೆ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಲಿಂಕ್ ಮಾಡಲಾದ ಉತ್ಪನ್ನಗಳು ಸಾಂಪ್ರದಾಯಿಕ ವಿಮಾ ಉತ್ಪನ್ನಗಳಿಗಿಂತ ಭಿನ್ನವಾಗಿರುತ್ತವೆ ಮತ್ತು ಅಪಾಯದ ಅಂಶಗಳಿಗೆ ಒಳಪಟ್ಟಿರುತ್ತವೆ.
ಲಿಂಕ್ ಮಾಡಲಾದ ವಿಮಾ ಪಾಲಿಸಿಗಳಲ್ಲಿ ಪಾವತಿಸಿದ ಪ್ರೀಮಿಯಂ ಬಂಡವಾಳ ಮಾರುಕಟ್ಟೆಗಳು ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದೊಂದಿಗೆ ಸಂಬಂಧಿಸಿದ ಹೂಡಿಕೆ ಅಪಾಯಗಳಿಗೆ ಒಳಪಟ್ಟಿರುತ್ತದೆ. ಫಂಡ್‌ಗಳ ಕಾರ್ಯಕ್ಷಮತೆ ಮತ್ತು ಬಂಡವಾಳ ಮಾರುಕಟ್ಟೆ/ ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದ ಮೇಲೆ ಪ್ರಭಾವ ಬೀರುವ ಅಂಶಗಳ ಆಧಾರದ ಮೇಲೆ ಘಟಕಗಳ NAVಗಳು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಮತ್ತು ವಿಮಾದಾರನು ಅವನ / ಅವಳ ನಿರ್ಧಾರಗಳಿಗೆ ಜವಾಬ್ದಾರನಾಗಿರುತ್ತಾನೆ.
ಭಾರತೀಯ ಜೀವ ವಿಮಾ ನಿಗಮವು ಜೀವವಿಮಾ ಕಂಪನಿಯ ಹೆಸರು ಮಾತ್ರ ಮತ್ತು ಪ್ರೊಟೆಕ್ಷನ್ ಪ್ಲಸ್ ಎಂಬುದು ಲಿಂಕ್ ಮಾಡಲಾದ ವಿಮಾ ಒಪ್ಪಂದದ ಹೆಸರಾಗಿದೆ ಮತ್ತು ಯಾವುದೇ ರೀತಿಯಲ್ಲಿ ಒಪ್ಪಂದದ ಗುಣಮಟ್ಟ, ಅದರ ಭವಿಷ್ಯದ ನಿರೀಕ್ಷೆಗಳು ಅಥವಾ ಆದಾಯವನ್ನು ಸೂಚಿಸುವುದಿಲ್ಲ.
ನಿಮ್ಮ ವಿಮಾ ಏಜೆಂಟ್ ಅಥವಾ ಮಧ್ಯವರ್ತಿ ಅಥವಾ ವಿಮಾ ಕಂಪನಿಯಿಂದ ನೀಡಲಾದ ಪಾಲಿಸಿ ದಾಖಲೆಯಿಂದ ಸಂಬಂಧಿಸಿದ ಅಪಾಯಗಳು ಮತ್ತು ಅನ್ವಯವಾಗುವ ಶುಲ್ಕಗಳನ್ನು ದಯವಿಟ್ಟು ತಿಳಿದುಕೊಳ್ಳಿ.
ಈ ಒಪ್ಪಂದದ ಅಡಿಯಲ್ಲಿ ನೀಡಲಾಗುವ ವಿವಿಧ ಫಂಡ್‌ಗಳು ಹೆಸರಾಗಿವೆ ಮತ್ತು ಯಾವುದೇ ರೀತಿಯಲ್ಲಿ ಈ ಯೋಜನೆಗಳ ಗುಣಮಟ್ಟ, ಅವುಗಳ ಭವಿಷ್ಯದ ನಿರೀಕ್ಷೆ ಮತ್ತು ಆದಾಯವನ್ನು ಸೂಚಿಸುವುದಿಲ್ಲ.

‘ಮೆಟ್ರೊ’ ದರ: ವಾಕ್ಸಮರ

ಬೆಂಗಳೂರು: ಮೆಟ್ರೊ ರೈಲು ದರ ಏರಿಕೆಗೆ ರಾಜ್ಯ ಸರ್ಕಾರವೇ ಒತ್ತಡ ಹೇರಿತ್ತು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶನಿವಾರ ಬೆಳಿಗ್ಗೆ ಹೇಳಿದ್ದರು ಹಾಗೂ ಅದರ ಬೆನ್ನಲ್ಲೇ ನಿಖಿಲ್ ಕುಮಾರಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಸಂಬಂಧಿತ ದಾಖಲೆ ಬಿಡುಗಡೆ ಮಾಡಿದ್ದರು. ಆದರೆ ಮಧ್ಯಾಹ್ನದ ಹೊತ್ತಿಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ದರ ಏರಿಕೆ ಮಾಡುವುದಕ್ಕೆ ಕೇಂದ್ರ ಸರ್ಕಾರ ತಡೆ ನೀಡಿದೆ ಎಂದಿದ್ದಾರೆ.

‘ರಾಜ್ಯ ಸರ್ಕಾರದ ಒತ್ತಡದಿಂದ ಏರಿಕೆ’

‘ಮೆಟ್ರೊ ದರ ಏರಿಕೆಗೆ ಮನವಿ ಸಲ್ಲಿಸುವಂತೆ ರಾಜ್ಯ ಸರ್ಕಾರವೇ ಬಿಎಂಆರ್‌ಸಿಎಲ್ ಮೇಲೆ ಒತ್ತಡ ಹೇರಿತ್ತು. ಈ ಕಾರಣದಿಂದಲೇ ಪದೇ–ಪದೇ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಲಾಗುತ್ತಿದೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಎಂಆರ್‌ಸಿಎಲ್‌ಗೆ ₹13,000 ಕೋಟಿಗೂ ಹೆಚ್ಚು ಮೊತ್ತದ ಸಾಲವನ್ನು ಕೇಂದ್ರವು ಒದಗಿಸಿದೆ. ಬಡ್ಡಿ ಮತ್ತು ಸಾಲ ಮರುಪಾವತಿ, ಕಾರ್ಯಾಚರಣೆ–ನಿರ್ವಹಣೆ ವೆಚ್ಚವನ್ನು ಹೊಂದಿಸಿಕೊಳ್ಳಲು ಬಿಎಂಆರ್‌ಸಿಎಲ್‌ಗೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ರಾಜ್ಯ ಸರ್ಕಾರವು ಪ್ರತಿ ವರ್ಷ ಸರಾಸರಿ ₹200 ಕೋಟಿಯನ್ನು (ಶ್ಯಾಡೊ ಕ್ಯಾಶ್ ಸಪೋರ್ಟ್) ನೀಡುತ್ತಿತ್ತು. ಕಾಂಗ್ರೆಸ್ ಸರ್ಕಾರ ಬಂದ ನಂತರ ಅದನ್ನು ನಿಲ್ಲಿಸಿದೆ. ಗ್ಯಾರಂಟಿಗಳಿಂದ ದಿವಾಳಿಯಾಗಿರುವ ಕಾಂಗ್ರೆಸ್ ಸರ್ಕಾರ, ಶ್ಯಾಡೊ ಕ್ಯಾಶ್ ಸಪೋರ್ಟ್ ಬದಲಿಗೆ ದರ ಹೆಚ್ಚಳ ಮಾಡುವಂತೆ ಒತ್ತಡ ಹೇರಿದೆ’ ಎಂದು ವಿವರಿಸಿದರು.

ಸುಳ್ಳು ಹೇಳುವ ಕಾಂಗ್ರೆಸ್: ಎಚ್‌ಡಿಕೆ

‘ಮೆಟ್ರೊ ದರ ಪರಿಷ್ಕರಣೆ ನಮ್ಮ ಕೈಯಲ್ಲಿಲ್ಲ ಎಂದು ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ. ದರ ಏರಿಸುವಂತೆ ಒತ್ತಡ ಹೇರಿ, ಈಗ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುತ್ತಿದೆ. ಕಾಂಗ್ರೆಸ್ ಎಷ್ಟು ಸುಳ್ಳು ಹೇಳುತ್ತಿದೆ ಎಂಬುದಕ್ಕೆ ನಿಖಿಲ್ ಅವರು ದಾಖಲೆಗಳನ್ನು ಬಿಡುಗಡೆ ಮಾಡಲಿದ್ದಾರೆ’ ಎಂದು ಎಚ್.ಡಿ. ಕುಮಾರಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಬದಲಾವಣೆ ಇಲ್ಲ: ಬಿಎಂಆರ್‌ಸಿಎಲ್

‘ಶೇ 5ರಷ್ಟು ದರ ಹೆಚ್ಚಳ ಮಾಡಿ ಸೋಮವಾರ ಜಾರಿಗೊಳಿಸುವ ನಿರ್ಧಾರ ಬದಲಾಯಿಸಲು ಅಧಿಕೃತವಾಗಿ ಯಾವುದೇ ಸೂಚನೆಗಳು ಬಂದಿಲ್ಲ. ಹಾಗಾಗಿ ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಜನಪ್ರತಿನಿಧಿಗಳ ಹೇಳಿಕೆಗೆ ನಾವು ಪ್ರತಿಕ್ರಿಯಿಸಲು ಆಗುವುದಿಲ್ಲ. ನಮಗೆ ಆದೇಶ ಬಂದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಕೇಂದ್ರದಿಂದ ತಾತ್ಕಾಲಿಕ ತಡೆ’

‘ಮೆಟ್ರೊ ಪ್ರಯಾಣ ದರ ಏರಿಕೆಗೆ ಕೇಂದ್ರ ಸರ್ಕಾರ ತಾತ್ಕಾಲಿಕವಾಗಿ ತಡೆ ನೀಡಿದೆ. ಸೋಮವಾರದಿಂದ ದರ ಏರಿಕೆ ಇರುವುದಿಲ್ಲ. ಕೇಂದ್ರ ನಗರ ವ್ಯವಹಾರಗಳ ಸಚಿವ ಮನೋಹರ ಲಾಲ್ ಖಟ್ಟರ್ ಅವರು ಈ ಸೂಚನೆ ನೀಡಿದ್ದಾರೆ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರಯಾಣ ದರ ಏರಿಸುವ ನಿರ್ಧಾರದ ವಿರುದ್ಧ ತಕ್ಷಣ ಮಧ್ಯ ಪ್ರವೇಶಿಸುವಂತೆ ಸಚಿವರನ್ನು ಕೇಳಿಕೊಂಡಿದ್ದೆ. ಒಂದು ವಾರದಿಂದ ಈ ಬಗ್ಗೆ ಸಚಿವರೊಂದಿಗೆ ಚರ್ಚಿಸಿದ್ದೆ. ಇದಕ್ಕೆ ಸ್ಪಂದಿಸಿರುವ ಸಚಿವರು, ದರ ಏರಿಕೆ ಜಾರಿ ಮಾಡದೇ ಇರುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೇ ಸೋಮವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದಿದ್ದಾರೆ’ ಎಂದರು.

‘ಅರ್ಧ ಯುದ್ಧವಷ್ಟೇ ಮುಗಿದಿದೆ. ಮೆಟ್ರೊಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಒಪ್ಪಂದದ ಪ್ರಕಾರ ದರ ನಿಗದಿ ಮಾಡುವ, ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಕಾರ ಇರುವುದು ರಾಜ್ಯ ಸರ್ಕಾರಕ್ಕೆ. ಹಾಗಾಗಿ ದರ ಏರಿಕೆ ಮಾಡುವುದು ಕೇಂದ್ರ ಸರ್ಕಾರ ಎಂದು ಸುಳ್ಳು ಹೇಳುವುದನ್ನು ರಾಜ್ಯ ಸರ್ಕಾರವು ನಿಲ್ಲಿಸಬೇಕು’ ಎಂದು ಆಗ್ರಹಿಸಿದರು.

‘ಸಂಸದರು ಕಳೆದ ವರ್ಷ ಏಕೆ ಮಾಡಿಲ್ಲ’

ದರ ಏರಿಕೆಗೆ ಎರಡೂ ಸರ್ಕಾರಗಳು ಕಾರಣವಾಗಿದ್ದು, ಈಗ ನಾಟಕವಾಡುತ್ತಿದ್ದಾರೆ. ಬಿಎಂಆರ್‌ಸಿಎಲ್ ಅಧಿಕಾರಿಗಳು ಕಣ್ಣಾಮುಚ್ಚಾಲೆ ಆಡುತ್ತಿದ್ದಾರೆ. ಮೆಟ್ರೊ ದರ ಹೆಚ್ಚಳವನ್ನು ತಡೆ ಹಿಡಿಯಲು ಈಗ ಸಾಧ್ಯವಾಗುವುದಾದರೆ ಸಂಸದರು (ತೇಜಸ್ವಿ ಸೂರ್ಯ) ಈ ಕೆಲಸವನ್ನು ಕಳೆದ ವರ್ಷ ಯಾಕೆ ಮಾಡಿಲ್ಲ. ದುಬಾರಿ ದರ ಏರಿಕೆ ಮಾಡಿದಾಗ ಯಾವುದೇ ಕ್ರಮ ಗೊಂಡಿಲ್ಲ. ಬಿಎಂಆರ್‌ಸಿಎಲ್ ಹೇಳಿದ ಕೂಡಲೇ ಅದಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು ಏಕೆ?

ದರ ನಿಗದಿ ಸಮಿತಿಯ ಶಿಫಾರಸನ್ನು ನಾವು ಪಾಲನೆ ಮಾಡಲೇ ಬೇಕಾಗುತ್ತದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು ನಮಗೆ ತಿಳಿಸಿದ್ದಾರೆ. ಈ ನಿಯಮವನ್ನು ಕಳೆದ ವರ್ಷ ಯಾಕೆ ಪಾಲನೆ ಮಾಡಿಲ್ಲ? ಸಮಿತಿಯು ಶೇ 51.55ರಷ್ಟು ದರ ಹೆಚ್ಚಳ ಮಾಡಿ ಎಂದಾಗ ಇವರು ಶೇ 100ಕ್ಕೂ ಅಧಿಕ ಹೆಚ್ಚಳ ಹೇಗೆ ಮಾಡಿದರು?

ರಾಜೇಶ್ ಭಟ್, ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘದ ಸದಸ್ಯ

‘ಮೆಟ್ರೊ: ಹೊಸ ಎಫ್‌ಎಫ್‌ಸಿ ರಚಿಸಿ’

‘ನಮ್ಮ ಮೆಟ್ರೊದಲ್ಲಿ ಭಾರತದಲ್ಲೇ ಅತ್ಯಂತ ದುಬಾರಿ ದರವಿದೆ. ಮತ್ತೊಂದು ದರ ಏರಿಕೆಯಿಂದ ಲಕ್ಷಾಂತರ ಪ್ರಯಾಣಿಕರಿಗೆ ಬರೆ ಎಳೆದಂತಾಗುತ್ತದೆ. ದರ ನಿಗದಿ ಸಮಿತಿಯಲ್ಲಿನ ಲೋಪದೋಷಗಳ ಬಗ್ಗೆ ಪರಿಶೀಲಿಸುವುದಾಗಿ ಮನೋಹರ ಲಾಲ್ ಖಟ್ಟರ್ ತಿಳಿಸಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

‘ಎಕ್ಸ್’ನಲ್ಲಿ ಈ ಕುರಿತು ಹೇಳಿಕೆ ನೀಡಿರುವ ಅವರು, ‘ದರಗಳ ವೈಜ್ಞಾನಿಕ ಪರಿಷ್ಕರಣೆಗೆ ಹೊಸ ಸಮಿತಿ ರಚಿಸುವ ಭರವಸೆಯನ್ನು ಕೇಂದ್ರ ಸಚಿವರು ನೀಡಿದ್ದಾರೆ. ರಾಜ್ಯ ಸರ್ಕಾರ ತನ್ನ ಹಟಮಾರಿ ಧೋರಣೆ ಬಿಟ್ಟು ಹೊಸ ದರ ನಿಗದಿ ಸಮಿತಿ (ಎಫ್‌ಎಫ್‌ಸಿ) ರಚಿಸುವ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಬೇಕು. ಮೆಟ್ರೊ ಪ್ರಯಾಣವು ಪ್ರತಿಯೊಬ್ಬ ನಾಗರಿಕನಿಗೂ ಕೈಗೆಟುಕುವ ದರದಲ್ಲಿ ಸಿಗುವವರೆಗೂ ಹಾಗೂ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದು ಹೇಳಿದ್ದಾರೆ.

‘ಬೆಂಗಳೂರು–ವಿಜಯಪುರ ರೈಲು ಪ್ರಯಾಣ ಅವಧಿ ತಗ್ಗಿಸಿ’

ವಿಶೇಷ ರೈಲು: ಪಾಟೀಲ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಧಾನಿಯಿಂದ ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲು, ಬೆಂಗಳೂರು– ಮುಂಬೈ ನಡುವೆ ಹೈಸ್ಪೀಡ್ ರೈಲು ಕಾರಿಡಾರ್ ಮತ್ತು ಬೆಂಗಳೂರು– ವಿಜಯಪುರ ನಡುವೆ ದಿನವಹಿ ವಿಶೇಷ ರೈಲುಗಳನ್ನು ಮಂಜೂರು ಮಾಡಬೇಕೆಂದು ಕೋರಿ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರೊಂದಿಗೆ ಚರ್ಚೆ ನಡೆಸಿದರು

ಬಾಗಲೂರಿನ ಹೈಟೆಕ್ ಹಾರ್ಡ್‌ವೇರ್ ಪಾರ್ಕ್‌ನಲ್ಲಿ ಜೆಟ್ ವೆರ್ಕ್ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಉತ್ಪಾದನೆಗೆ ಚಾಲನೆ ನೀಡಿದ ಬಳಿಕ, ಕೆಲ ಹೊತ್ತು ವೈಷ್ಣವ್ ಅವರನ್ನು ಸಚಿವರು ಭೇಟಿ ಮಾಡಿ, ಮನವಿ ಪತ್ರಗಳನ್ನು ಸಲ್ಲಿಸಿದರು. ಸಕಾರಾತ್ಮಕವಾಗಿ ಪರಿಶೀಲಿಸುವುದಾಗಿ ರೈಲ್ವೆ ಸಚಿವರು ಈ ವೇಳೆ ಭರವಸೆ ನೀಡಿದ್ದಾರೆ.

ಬೆಂಗಳೂರು ದೇಶದ ತಂತ್ರಜ್ಞಾನ ರಾಜಧಾನಿಯಾಗಿದ್ದು, ಮುಂಬೈ ಆರ್ಥಿಕ ರಾಜಧಾನಿ ಆಗಿದೆ. ಇವೆರಡೂ ನಗರಗಳನ್ನು ಅತ್ಯುತ್ತಮ ಸಂಪರ್ಕ ವ್ಯವಸ್ಥೆಯಿಂದ ಬೆಸೆಯುವುದು ಅನಿವಾರ್ಯ. ಇದಕ್ಕಾಗಿ ಈಗ ಮುಂಬೈ–ಪುಣೆ ನಡುವೆ ಘೋಷಿಸಿರುವ ಹೈಸ್ಪೀಡ್ ರೈಲು ಕಾರಿಡಾರನ್ನು ಬೆಂಗಳೂರಿನ ತನಕ ವಿಸ್ತರಿಸಬೇಕು ಎಂದು ಮನವಿ ಮಾಡಿದರು.

ಬೆಂಗಳೂರು– ವಿಜಯಪುರ ನಡುವೆ 530 ಕಿ.ಮೀ. ದೂರವಿದ್ದು, ರೈಲು ಪ್ರಯಾಣಕ್ಕೆ 15-16 ಗಂಟೆ ಹಿಡಿಯುತ್ತಿದೆ. ಇದನ್ನು 10 ಗಂಟೆಗೆ ಇಳಿಸಬೇಕು. ಇದಕ್ಕಾಗಿ ಬೆಂಗಳೂರು-ಹುಬ್ಬಳ್ಳಿ ನಡುವೆ ನಿಯಮಿತ ನಿಲುಗಡೆಗಳನ್ನು ಮಾತ್ರ ಕೊಟ್ಟು, ರೈಲುಗಳನ್ನು ಹುಬ್ಬಳ್ಳಿ, ಗದಗ ಬೈಪಾಸ್ ಮೂಲಕ ಓಡಿಸಬೇಕು. ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಓಡಿಸಬೇಕು ಎಂದೂ ಸಚಿವರು ಮನವಿ ಸಲ್ಲಿಸಿದರು.

ಇದೇ ರೀತಿಯಲ್ಲಿ ದಿನವಹಿ ಆಧಾರದ ಮೇಲೆ ಇದೇ ಮಾರ್ಗದಲ್ಲಿ ವಿಶೇಷ ರೈಲನ್ನು ಓಡಿಸಬೇಕು. ಈ ಮೂರೂ ಬಗೆಯ ಸೇವೆಗಳಿಂದ ಮಧ್ಯ ಮತ್ತು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಿಗೆ ಸಾಮಾಜಿಕ, ಕೈಗಾರಿಕಾ ಮತ್ತು ಆರ್ಥಿಕ ಲಾಭವಾಗಲಿದೆ ಎಂದು ಅವರು ಮನವಿ ಪತ್ರದಲ್ಲಿ ಹೇಳಿದ್ದಾರೆ.

ಮೂರೂ ಮನವಿಗಳಿಗೆ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪಾಟೀಲ ತಿಳಿಸಿದರು. ನೈರುತ್ಯ ರೈಲ್ವೆ ಮುಖ್ಯ ಆಡಳಿತಾಧಿಕಾರಿ ಅಜಯ್ ಶರ್ಮ ಸೇರಿದಂತೆ ಇತರ ಹಿರಿಯ ರೈಲ್ವೆ ಅಧಿಕಾರಿಗಳು ಇದ್ದರು.

‘ರೈಲ್ವೆ ಪರೀಕ್ಷೆ ಕನ್ನಡಿಗರಿಗೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ದಾಂಡೇಲಿ: ‘ರೈಲ್ವೆ ಇಲಾಖೆಯ ನೇಮಕಾತಿ ಹಾಗೂ ಇಲಾಖಾ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲೂ ಬರೆಯಲು ಅವಕಾಶ ಕಲ್ಪಿಸಬೇಕು’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಶನಿವಾರ ಪತ್ರ ಬರೆದಿದ್ದಾರೆ.

‘ಪ್ರಾದೇಶಿಕ ಭಾಷೆಗಳಿಗೆ ಯೋಗ್ಯ ಸ್ಥಾನಮಾನ ಮತ್ತು ಗೌರವ ಒದಗಿಸುವುದು ನಮ್ಮೆಲ್ಲರ ಹೊಣೆಯಾಗಿದೆ. ಇತ್ತೀಚಿನ ದಿನಗಳಲ್ಲಿ ರೈಲ್ವೆ ನೇಮಕಾತಿ ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ನೀಡದೇ ನಿರ್ಲಕ್ಷ್ಯ ವಹಿಸುತ್ತಿರುವುದು ಕನ್ನಡಿಗರಿಗೆ ಬೇಸರ ಮತ್ತು ಆಕ್ರೋಶ ಮೂಡಿಸಿದೆ’ ಎಂದು ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸಿರುವ ಸಚಿವ ವಿ. ಸೋಮಣ್ಣ, ‘ರೈಲ್ವೆ ಇಲಾಖೆಯಲ್ಲಿ ಹುದ್ದೆಗಳ ಭರ್ತಿ, ಬಡ್ತಿಗೆ ನಡೆಸುವ ಪರೀಕ್ಷೆಯನ್ನು ಕನ್ನಡ ಭಾಷೆಯಲ್ಲೂ ನಡೆಸಲು ಪ್ರಯತ್ನ ನಡೆದಿದೆ. ಆದರೆ, ಕೆಲ ಸ್ವಲ್ಪ ಕಾಲ ಬೇಕಾಗಬಹುದು. ರೈಲ್ವೆ ಮಂಡಳಿ ಪರೀಕ್ಷೆಯ ಬದಲಾವಣೆಗಳತ್ತ ಚಿಂತನೆ ನಡೆಸಿದೆ’ ಎಂದು ತಿಳಿಸಿದರು.

ಕರ್ನಾಟಕದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ: ಕೇಂದ್ರ ಸಚಿವ ಅಶ್ವಿನಿ ವೈಷ್ಣವ್

ಬೆಂಗಳೂರು–ಮಂಗಳೂರು: ವಂದೇ ಭಾರತ್ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು–ಮಂಗಳೂರು ಮಧ್ಯೆ ವಂದೇ ಭಾರತ್ ರೈಲು ಸಂಚಾರ ಶೀಘ್ರ ಆರಂಭವಾಗಲಿದೆ. ಎರಡು ರೈಲುಗಳಿಗೆ ಅನುಮತಿ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಕಾರವಾರದವರೆಗೂ ವಿಸ್ತರಿಸಲಾಗುವುದು’ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಈ ಸಾಲಿನ ಬಜೆಟ್‌ನಲ್ಲಿ ಕರ್ನಾಟಕದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ ಸಿಗಲಿದೆ. ಇದು ಹಿಂದಿನ ಯುಪಿಎ ಅವಧಿಯಲ್ಲಿ ನೀಡಿದ್ದ ಮೊತ್ತಕ್ಕಿಂತ 9 ಪಟ್ಟು ಹೆಚ್ಚು. ಯುಪಿಎ ಅವಧಿಯಲ್ಲಿ ಕರ್ನಾಟಕಕ್ಕೆ ವಾರ್ಷಿಕ ₹800 ಕೋಟಿ ಸಿಗುತ್ತಿತ್ತು ಎಂದರು.

ಬೆಂಗಳೂರಿನಿಂದ ಚೆನ್ನೈ ಹಾಗೂ ಹೈದರಾಬಾದ್ ನಗರಗಳಿಗೆ ಹೈಸ್ಪೀಡ್ ರೈಲು ಯೋಜನೆಗಳಿಗೆ ನೀಲನಕ್ಷೆ ಸಿದ್ಧಪಡಿಸಲಾಗುತ್ತಿದೆ. ಯೋಜನೆ ಅನುಷ್ಠಾನದ ನಂತರ ಬೆಂಗಳೂರಿನಿಂದ ಚೆನ್ನೈಗೆ 73 ನಿಮಿಷಗಳಲ್ಲಿ ತಲುಪಬಹುದು. ಯಶವಂತಪುರದಿಂದ ಕೋಲಾರಕ್ಕೆ ಮತ್ತೊಂದು ರೈಲು ಆರಂಭವಾಗಲಿದೆ ಎಂದರು.

> ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಸಿಕ್ಕಿರುವುದು ಚೊಂಬು ಎಂಬ ಸಿ.ಎಂ ಸಿದ್ದರಾಮಯ್ಯ ಹೇಳಿಕೆ ಸರಿಯಲ್ಲ. ಸಂಕುಚಿತ ದೃಷ್ಟಿಕೋನ ಹೊಂದಿರುವವರು ಮಾತ್ರ ಆ ರೀತಿ ವ್ಯಾಖ್ಯಾನಿಸಲು ಸಾಧ್ಯ
>
> **ಅಶ್ವಿನಿ ವೈಷ್ಣವ್**, ಕೇಂದ್ರ ಸಚಿವ

ನಿರ್ಮಾಣ ಮತ್ತು ಮೂಲ ಸೌಕರ್ಯ ಉಪಕರಣಗಳ ಉತ್ಪಾದನೆಗೆ ಆದ್ಯತೆ ನೀಡಬೇಕಿದೆ. 200 ಪರಂಪರಾ ಕೈಗಾರಿಕಾ ಸಮೂಹಗಳ ಪುನರುತ್ಥಾನ ಕಾರ್ಯ ನಡೆಯಬೇಕಿದೆ. ವೆಚ್ಚದ ಮೇಲಿನ ನಿಯಂತ್ರಣ, ಸಮೂಹ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಹೊಂದುವುದು, ನೀರಿನ ಸೌಕರ್ಯ ವೃದ್ಧಿ, ಕಾರ್ಮಿಕರ ಸಮೂಹ ಗೃಹ ವ್ಯವಸ್ಥೆ, ಉತ್ತಮ ರಸ್ತೆ ವ್ಯವಸ್ಥೆಯನ್ನು ಪರಂಪರಾ ಕೈಗಾರಿಕಾ ಸಮೂಹಗಳಲ್ಲಿ ಅಳವಡಿಸಬೇಕಿದೆ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಪಿ.ಸಿ.ಮೋಹನ್, ಡಾ.ಸಿ.ಎನ್. ಮಂಜುನಾಥ್, ಮಾಜಿ ಸಂಸದ ಮುನಿಸ್ವಾಮಿ ಇದ್ದರು.

ಕರ್ನಾಟಕದ ಸಾಧನೆಗೆ ಮೆಚ್ಚುಗೆ

ದೇಶದ ವಾಯುಯಾನ, ಬಾಹ್ಯಾಕಾಶ ಯೋಜನೆಗಳಿಗೆ ಬೆಂಗಳೂರಿನ ಹಿಂದುಸ್ತಾನ್ ಏರೋನಾಟಿಕ್ಸ್ ಸಾಕಷ್ಟು ಉಪಕರಣಗಳನ್ನು ಪೂರೈಸುತ್ತಿದೆ. ಸೆಮಿ ಕಂಡಕ್ಟರ್ ವಲಯದಲ್ಲಿ ಬೆಂಗಳೂರು ಮತ್ತು ಮೈಸೂರು ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಅಶ್ವಿನಿ ವೈಷ್ಣವ್ ಮೆಚ್ಚುಗೆ ವ್ಯಕ್ತಪಡಿಸಿದರು.

2026–27ನೇ ಸಾಲಿನ ಬಜೆಟ್ ಮೂಲಕ 2047ರ ಭಾರತದ ಪರಿಕಲ್ಪನೆಗೆ ಪೂರಕವಾಗಿ ಯೋಜನೆಗಳ ನೀಲನಕ್ಷೆ ನೀಡಲಾಗಿದೆ. ಮೇಕ್ ಇನ್ ಇಂಡಿಯಾಗೆ ಮತ್ತಷ್ಟು ಬಲ ತುಂಬಲಾಗಿದೆ. ಸೆಮಿ ಕಂಡಕ್ಟರ್, ಬಯೋಫಾರ್ಮಾ, ವಾಯುಯಾನ, ಬಾಹ್ಯಾಕಾಶ, ಹೈಟೆಕ್ ಟೂಲ್ ಉತ್ಪಾದನೆಗೆ ಒತ್ತು ನೀಡಲಾಗಿದೆ. ಎಐ ಕ್ರಾಂತಿಗೆ ಅನುಗುಣವಾಗಿ ಬಿ.ಟೆಕ್, ಎಂ.ಟೆಕ್ ಪಠ್ಯಕ್ರಮದಲ್ಲೂ ಬದಲಾವಣೆ ಆಗುತ್ತಿದೆ ಎಂದು ಹೇಳಿದರು.

ಭಾನುವಾರ, ಫೆಬ್ರುವರಿ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 39 | ಪುಟ 22

• www.prajavani.net   prajavani.net   prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಮೂಕಾಭಿನಯ
'ಬಾಲ್ಯ ವಿವಾಹ ಮುಕ್ತ ಭಾರತ' ಅಭಿಯಾನದಡಿ ಮಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಾಗಾರದಲ್ಲಿ ಮೂಕಾಭಿನಯ ಪ್ರದರ್ಶಿಸಿ ಗಮನಸೆಳೆದ ರೋಶನಿ ನಿಲಯದ ವಿದ್ಯಾರ್ಥಿಗಳು

'ಬಸ್‌ನಲ್ಲಿ ಮಹಿಳೆಯರೇ ಹೆಚ್ಚು ಇರುತ್ತಾರೆ..' 6

'ಸ್ಪೀಕರ್ ಕೊಠಡಿಗೆ ನುಗ್ಗಿದ ಸಂಸದರು' 9

ಅಕ್ಕಸಾಲಿಗರ ಹೊಟ್ಟೆಗೆ ಬರೆ

ಚಿನ್ನ, ಬೆಳ್ಳಿ ಬೆಲೆ ಏರಿಳಿತ: ಕೆಲಸವಿಲ್ಲದೇ ಆಟೊ, ಗಾರೆ, ಹೋಟೆಲ್, ಸೆಕ್ಯುರಿಟಿ ಕೆಲಸಕ್ಕೆ ಮೊರೆ

ಒಳನೋಟ

• ಬಸವರಾಜ ಹವಾಲ್ದಾರ

ಬಾಗಲಕೋಟೆ: 'ಬೆಳಿಗ್ಗೆಯಿಂದ ರಾತ್ರಿಯವರೆಗೆ ಕೈಯಲ್ಲಿ ಚಿನ್ನ, ಬೆಳ್ಳಿ ಇರುತ್ತಿತ್ತು. ಆದರೀಗ ಚಿನ್ನ, ಬೆಳ್ಳಿ ಬೆಲೆ ಏರಿಳಿತದಿಂದ ಒಂದು ಹೊತ್ತಿನ ಊಟಕ್ಕೂ ಪರದಾಡಬೇಕಿದೆ. ತಿಂಗಳ ದಿನಸಿ ಖರೀದಿಗೆ ಬೇಕಾದಷ್ಟೂ ಆದಾಯ ಬರುತ್ತಿಲ್ಲ. ಎಷ್ಟೋ ಅಕ್ಕಸಾಲಿಗರು ಬೇರೆ ಕೆಲಸ ಹುಡುಕಿಕೊಂಡು ಹೋಗಿದ್ದಾರೆ'.

ಹೀಗೆ ಸಂಕಷ್ಟವನ್ನು ತೋಡಿಕೊಂಡವರು ಬಾಗಲಕೋಟೆಯ ಅಕ್ಕಸಾಲಿಗ ಶ್ರೀಕಾಂತ ಪತ್ತಾರ. ಎರಡು ದಶಕಗಳಿಂದ ಅವರದ್ದು ಇದೇ ಕಸುಬು. 'ಇಷ್ಟು ವರ್ಷ ಹೊಟ್ಟೆ, ಬಟ್ಟೆಗೆ ಯಾವತ್ತೂ ತೊಂದರೆ ಆಗಿರಲಿಲ್ಲ. ಮೊದಲ ಬಾರಿಗೆ ಕಷ್ಟ ಅನುಭವಿಸ್ತಿದ್ದೇವೆ. ಬೆಳಿಗ್ಗೆಯಿಂದ ರಾತ್ರಿವರೆಗೆ ಅಂಗಡಿ ತೆಗೆದರೂ, ಬರಿಗೈಯಲ್ಲಿ ಮನೆಗೆ ಹೋಗಬೇಕು. ಬದುಕಲು ಸಾಲ ಮಾಡಬೇಕಿದೆ' ಎಂದು ನೊಂದು ನುಡಿದರು. ಇದು ಅವರೊಬ್ಬರ ವ್ಯಥೆಯಲ್ಲ. ರಾಜ್ಯದಲ್ಲಿರುವ ಲಕ್ಷಾಂತರ ಅಕ್ಕಸಾಲಿಗರ ದಯನೀಯ ಸ್ಥಿತಿ.

ಬಾಗಲಕೋಟೆಯ ಚಿನ್ನ, ಬೆಳ್ಳಿ ದುರಸ್ತಿ ಅಂಗಡಿಯಲ್ಲಿ ಗ್ರಾಹಕರಿಗಾಗಿ ಕಾಯುತ್ತಿರುವ ಅಕ್ಕಸಾಲಿಗ

'ಮಕ್ಕಳ ಶಿಕ್ಷಣದ ಶುಲ್ಕ, ಮನೆ ಬಾಡಿಗೆ, ಅಂಗಡಿಗಳ ಬಾಡಿಗೆ ಕಟ್ಟಲೂ ಆಗದ ಸ್ಥಿತಿ ಇದೆ. ಅಂಗಡಿ ಬಾಡಿಗೆ ಕಟ್ಟಲಾಗದೇ ಕೆಲವರು ಅಂಗಡಿ ಮುಚ್ಚಿದ್ದಾರೆ. ಹೋಟೆಲ್ ಮತ್ತು ಗಾರೆ ಕೆಲಸದಲ್ಲಿ ತೊಡಗಿದ್ದಾರೆ. ಇನ್ನೂ ಕೆಲವರು ಆಟೊ ಓಡಿಸುತ್ತಾರೆ. ಹೀಗೆ ಹಲವಾರು ಅಕ್ಕಸಾಲಿಗರು ತಮ್ಮ ಕಸುಬನ್ನೇ ಬಿಟ್ಟು ಬೇರೆ ಕೆಲಸಗಳಲ್ಲಿ ನಿರತರಾಗಿದ್ದಾರೆ' ಎಂದು ಕರ್ನಾಟಕ ಸ್ವರ್ಣಕಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಆರ್. ರಾಮಮೂರ್ತಿ ಸತ್ಯವನ್ನು ಬಿಚ್ಚಿಡುತ್ತಾರೆ.

ರಾಜ್ಯದ ಪ್ರತಿ ಗ್ರಾಮದಲ್ಲೂ ಒಂದೆರಡು ಅಕ್ಕಸಾಲಿಗರ ಕುಟುಂಬಗಳಿವೆ. ನೋಂದಣಿ ಮಾಡಿಕೊಳ್ಳದವರ ಸಂಖ್ಯೆಯೇ ಹೆಚ್ಚಿದೆ. ಕಡಿಮೆ ಎಂದರೂ ಎಲ್ಲ ಖರ್ಚುಗಳನ್ನು ಕಳೆದು ನಿತ್ಯ ₹500 ರಿಂದ ₹700 ಕೂಲಿ ಸಿಗುತಿತ್ತು. ಈಗ ಕೆಲಸವೇ ಕಡಿಮೆಯಾಗಿದೆ.

ಬೆಲೆ ಹೆಚ್ಚಳದ ಬಿಸಿ: ಮನೆಯಲ್ಲಿ ಪೂಜೆಗಾಗಿ 200ರಿಂದ 300 ಗ್ರಾಂ ತೂಕದ ದೇವರ ಮೂರ್ತಿಗಳನ್ನು ಗ್ರಾಹಕರು ಮಾಡಿಸುತ್ತಿದ್ದರು. ಕೆ.ಜಿ ಲೆಕ್ಕದಲ್ಲಿ ಮೂರ್ತಿಗಳನ್ನು ದೇವಸ್ಥಾನದವರು ಮಾಡಿಸುತ್ತಿದ್ದರು. ಮನೆಗಳಿಗೆ ₹30 ಸಾವಿರ ವೆಚ್ಚದಲ್ಲಿ ಮಾಡುತ್ತಿದ್ದ ಮೂರ್ತಿಯ ವೆಚ್ಚ ಈಗ ₹1 ಲಕ್ಷ ದಾಟಿದೆ. ಬೆಲೆ ಇಂದು, ನಾಳೆ ಇಳಿಕೆ ಆಗಬಹುದು ಎಂಬ ನಿರೀಕ್ಷೆ ಕೊಳ್ಳುವವರದ್ದು.

ಬೆಳ್ಳಿ ಗ್ಲಾಸು, ತಟ್ಟೆ, ಚಮಚ ಮಾಡಿಸುವವರ ಸಂಖ್ಯೆಯೂ ಕುಸಿದಿದೆ. ₹700ಕ್ಕೆ ಸಿದ್ಧವಾಗುತ್ತಿದ್ದ ಕಾಲುಂಗುರದ ಬೆಲೆ ಈಗ ₹3,500ಕ್ಕೆ ಜಿಗಿದಿದೆ. ಅದೇ ರೀತಿ ₹3 ಸಾವಿರವಿದ್ದ ಕಾಲು ಚೈನಿನ ಬೆಲೆ ₹12 ಸಾವಿರಕ್ಕೆ ಹೆಚ್ಚಾಗಿದೆ. ಹೀಗೆ ಆಭರಣದ ಬೆಲೆ ಮೂರು, ನಾಲ್ಕು ಪಟ್ಟು ಬೆಲೆ ಹೆಚ್ಚಳವಾಗಿದ್ದು ಕೊಳ್ಳುವವರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ.

'ಹೊಸ ಆಭರಣಗಳು ಇಲ್ಲದಿದ್ದರೂ ಬೆಳ್ಳಿ, ಚಿನ್ನಾಭರಣಗಳ ದುರಸ್ತಿಗಾದರೂ ಜನ ಬರುತ್ತಿದ್ದರು. ಬೆಳ್ಳಿ ಚೈನು, ಕಾಲುಂಗರದ ಕೊಂಡಿ ಹಾಕಲು, ಒಂದು ಗ್ರಾಂ ಬೇಕು.

▶ 4

ಬೆಳಗಾವಿ, ಬೆಂಗಳೂರಿನಲ್ಲೂ ಸಂಕಷ್ಟ

ಬೆಳಗಾವಿ ನಗರದ ವಡಗಾವಿ ಹಾಗೂ ಶಹಾಪುರ ಪ್ರದೇಶದಲ್ಲಿ ಸುಮಾರು 100ಕ್ಕೂ ಹೆಚ್ಚು ಚಿನ್ನ– ಬೆಳ್ಳಿ ಸಾಮಗ್ರಿಗಳನ್ನು ತಯಾರು ಮಾಡುವ ಯೂನಿಟ್‌ಗಳಿವೆ. 'ಸರಾಫ್ ಬಜಾರ್' ಎಂಬ ಮಾರುಕಟ್ಟೆಯೇ ಇಲ್ಲಿದೆ. ದರ ಏರಿಕೆ ಆದಾಗಿನಿಂದ ವ್ಯಾಪಾರಿಗಳು, ಕಾರ್ಮಿಕರು, ಸರಬರಾಜುದಾರರೂ ಕೆಲಸವಿಲ್ಲದೇ ಕುಳಿತಿದ್ದಾರೆ.

'ದೀಪಾವಳಿಗೂ ಮುನ್ನ ಒಂದು ದಿನಕ್ಕೆ ಮಾರುತ್ತಿದ್ದ ಆಭರಣಗಳು ಈಗ ಒಂದು ತಿಂಗಳಿಗೂ ಮಾರುತ್ತಿಲ್ಲ. ಚಿನ್ನ– ಬೆಳ್ಳಿ ದರಗಳು ಈ ಮಟ್ಟಕ್ಕೆ ಏರಬಹುದು ಎಂದು ನಾವು ಊಹಿಸಲೂ ಇಲ್ಲ. ಕೆಲಸಗಾರರನ್ನು ಬಿಡಿಸಿದ್ದೇವೆ. ₹20 ಲಕ್ಷ ಅವರ ಬಳಿ ಮುಂಗಡ ಇದೆ. ಈಗ ಅದನ್ನು ಕೇಳಲೂ ಆಗುತ್ತಿಲ್ಲ, ಕೆಲಸವನ್ನೂ ನೀಡಲು ಆಗತ್ತಿಲ್ಲ' ಎಂದು ವಡಗಾವಿಯ ಆನಂದ ಹಾವನೂರ ಸಂಕಷ್ಟ ಬಿಚ್ಚಿಟ್ಟರು.

ಬೆಂಗಳೂರು ನಗರ ವ್ಯಾಪ್ತಿಯಲ್ಲೇ ಚಿನ್ನ, ಬೆಳ್ಳಿ ಕೆಲಸ ಮಾಡುವವರ ಸಂಖ್ಯೆ 2 ಲಕ್ಷವಿದೆ. ಇದರಲ್ಲಿ ಚಿಕ್ಕಪೇಟೆ ಸುತ್ತಮುತ್ತಲಲ್ಲೇ 50 ಸಾವಿರ ಜನರು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆರು ತಿಂಗಳಿನಿಂದ ಅಕ್ಕಸಾಲಿ ಕೆಲಸಕ್ಕೇ ಬೇಡಿಕೆಯೇ ಇಲ್ಲವಾಗಿದೆ ಎಂದು ಶ್ರೀ ವಿಶ್ವಕರ್ಮ ಸೇವಾ ಸಮಿತಿ ಚಿನ್ನ, ಬೆಳ್ಳಿ ಕೆಲಸಗಾರರ ಘಟಕದ ಅಧ್ಯಕ್ಷ ಆರ್. ಮಧುಸೂದನ್ ಆತಂಕ ವ್ಯಕ್ತಪಡಿಸಿದರು.

> **ಬೆಲೆ ಏರಿಕೆ ಕಾರಣದಿಂದ ಚಿನ್ನ, ಬೆಳ್ಳಿ ಖರೀದಿಸುವವರ ಸಂಖ್ಯೆ ತೀವ್ರವಾಗಿ ಕುಸಿದಿದೆ. ಪರಿಣಾಮ ಅಕ್ಕಸಾಲಿಗರಿಗೂ ಕೆಲಸ ನೀಡಲು ಸಾಧ್ಯವಾಗುತ್ತಿಲ್ಲ**
> **ಚೇತನ್‌ಕುಮಾರ್ ಮೆಹ್ತಾ,** ಅಧ್ಯಕ್ಷ,ಕರ್ನಾಟಕ ಜುವೆಲರ್ಸ್ ಅಸೋಸಿಯೇಷನ್

ಟಿ20 ವಿಶ್ವಕಪ್ ಶುಭಾರಂಭ

ಪಿಟಿಐ ಚಿತ್ರ:



ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಶನಿವಾರ ಚಾಲನೆ ದೊರೆಯಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ–ಅಮೆರಿಕ ಪಂದ್ಯಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ ಬಾದ್‌ಶಾ ಗಾಯನಕ್ಕೆ ಕಲಾವಿದರು ಹೆಜ್ಜೆ ಹಾಕಿದರು

ವಿವರಣೆ ನೀಡಿ: ಪಿಸಿಬಿಗೆ ಸೂಚನೆ

ಟಿ20 ವಿಶ್ವಕಪ್: ಭಾರತ ವಿರುದ್ಧ ಪಂದ್ಯಕ್ಕೆ ಪಾಕ್ ಬಹಿಷ್ಕಾರ

ನವದೆಹಲಿ (ಪಿಟಿಐ): ಶನಿವಾರ ಆರಂಭವಾದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಎದುರಿನ ಪಂದ್ಯದಲ್ಲಿ ತಮ್ಮ ತಂಡ ಆಡುವುದಿಲ್ಲ ಎಂದು ಹೇಳಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಯಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಿವರಣೆ ಕೇಳಿದೆ.

'ಪಿಸಿಬಿಯು ತನ್ನ ಸರ್ಕಾರದ ಮೇಲೆ ಹೊಣೆ ಹೊರಿಸಿ, ಕೈಮೀರಿದ ಕಾರಣಗಳ ಹೆಸರಿನಲ್ಲಿ ಹೊಣೆಯಿಂದ ನುಣುಚಿಕೊಳ್ಳುತ್ತಿಲ್ಲ ಎಂಬುದರ ಬಗ್ಗೆ ವಿವರಣೆ ನೀಡಬೇಕು' ಎಂದು ಐಸಿಸಿ ಹೇಳಿದೆ.

ಫೆಬ್ರುವರಿ 15ರಂದು ಕೊಲಂಬೊದಲ್ಲಿ ನಡೆಯಲಿರುವ ಭಾರತ ವಿರುದ್ಧದ ಪಂದ್ಯದಲ್ಲಿ ತಮ್ಮ ದೇಶದ ತಂಡವು ಆಡುವುದಿಲ್ಲ ಎಂದು ಪಾಕಿಸ್ತಾನ ಸರ್ಕಾರ ಹೇಳಿತ್ತು. ಆದರೆ ಇದೀಗ ಪಿಸಿಬಿಯು ಪಂದ್ಯ ಆಡಲು ಐಸಿಸಿ ಜೊತೆ ಮಾತುಕತೆಗೆ ಮುಂದಾಗಿದೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಭಾರತ ಮತ್ತು ಪಾಕ್ ಪಂದ್ಯವು ನಡೆಯುವ ಸಣ್ಣದೊಂದು ಭರವಸೆ ಮೂಡಿದಂತಾಗಿದೆ.

'ಈ ಕುರಿತು ಮಾತುಕತೆಗಳು ಆರಂಭವಾಗಿವೆ' ಎಂದು ಐಸಿಸಿಯ ನಿರ್ದೇಶಕರೊಬ್ಬರು ತಿಳಿಸಿದ್ದಾರೆ.

ಟೂರ್ನಿಯಲ್ಲಿ ಉಳಿದೆಲ್ಲ ಪಂದ್ಯಗಳನ್ನು ಆಡಿ, ಭಾರತದ ಎದುರಿನ ಹಣಾಹಣಿಯನ್ನು ಮಾತ್ರ ಬಹಿಷ್ಕರಿಸಿದ್ದರ ಕುರಿತು ಐಸಿಸಿಯು ವಿವರಣೆ ಕೇಳಿದೆ.

ಐಸಿಸಿಯಿಂದ ಸೂಚನೆ ಬಂದ ನಂತರ ಪಿಸಿಬಿಯು ಮಾತುಕತೆ ಚುರುಕುಗೊಳಿಸಿದೆ. ಐಸಿಸಿ ಕೂಡ ಪಾಕ್ ಮಂಡಳಿಯೊಂದಿಗೆ ರಚನಾತ್ಮಕ ರೀತಿಯಲ್ಲಿ ಸಂಭಾವ್ಯ ನಿರ್ಣಯಗಳನ್ನು ತೆಗೆದು ಕೊಳ್ಳುವತ್ತ ಕಾರ್ಯಪ್ರವೃತ್ತವಾಗಿದೆ

▶ 6

ಭಾರತ ವಿಶ್ವಾಸಾರ್ಹ ಪಾಲುದಾರ: ಮೋದಿ

ಕ್ವಾಲಾಲಂಪುರ (ಪಿಟಿಐ): 'ಭಾರತವು ಪ್ರಗತಿಯ ವಿಶ್ವಾಸಾರ್ಹ ಪಾಲುದಾರ' ಎಂಬುದಾಗಿ ಜಗತ್ತು ನೋಡುತ್ತಿದೆ. ಐರೋಪ್ಯ ಒಕ್ಕೂಟವಲ್ಲದೇ ಹಲವು ದೇಶಗಳೊಂದಿಗೆ ಇತ್ತೀಚೆಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದಗಳೇ ಇದಕ್ಕೆ ಸಾಕ್ಷಿ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಎರಡು ದಿನಗಳ ಮಲೇಷ್ಯಾ ಪ್ರವಾಸ ಕೈಗೊಂಡಿರುವ ಅವರು, ಇಲ್ಲಿ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಿದರು.

ಬ್ರಿಟನ್, ಅಮೆರಿಕ, ಯುನೈಟೆಡ್ ಅರಬ್ ಎಮಿರೇಟ್ಸ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಒಮಾನ್ ಹಾಗೂ ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದಗಳನ್ನು ಉಲ್ಲೇಖಿಸಿದ ಮೋದಿ,'ನಂಬಿಕೆಯು ಭಾರತದ ಬಲಿಷ್ಠ ಕರೆನ್ಸಿಯಾಗಿದೆ' ಎಂದರು.

ಸ್ವಾಗತ: ಇದಕ್ಕೂ ಮುನ್ನ, ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮೋದಿ ಅವರನ್ನು ಪ್ರಧಾನಿ ಅನ್ವರ್ ಇಬ್ರಾಹಿಂ ಸ್ವಾಗತಿಸಿದರು. ಬಳಿಕ, ಇಬ್ಬರೂ ಒಂದೇ ಕಾರಿನಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ತೆರಳಿದರು.

▶ 8

ಪ್ರಮುಖ ಘೋಷಣೆಗಳು

- ಮಲೇಷ್ಯಾದಲ್ಲಿ ಹೊಸ ಕಾನ್ಸುಲೇಟ್ ಕಚೇರಿ ಸ್ಥಾಪನೆ
- ಬಾಂಧವ್ಯ ವೃದ್ಧಿಗೆ ತಿರುವಳ್ಳುವರ್ ಕೇಂದ್ರ ಸ್ಥಾಪನೆ
- ಭಾರತದಲ್ಲಿ ವ್ಯಾಸಂಗ ಕೈಗೊಳ್ಳುವ ಮಲೇಷ್ಯಾ ವಿದ್ಯಾರ್ಥಿಗಳಿಗಾಗಿ 'ತಿರುವಳ್ಳುವರ್ ವಿದ್ಯಾರ್ಥಿವೇತನ' ಆರಂಭ
- ಭಾರತದ ಯುಪಿಐ ಮೂಲಕ ಹಣ ಪಾವತಿ ಸೌಲಭ್ಯ ಮಲೇಷ್ಯಾದಲ್ಲಿ ಶೀಘ್ರದಲ್ಲೇ ಜಾರಿ

₹ 5 ಲಕ್ಷಕ್ಕೆ ಹಸುಳೆ ಮಾರಾಟ, ಸೆರೆ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ಶ್ರೀನಿವಾಸಪುರದಲ್ಲಿ ₹5 ಲಕ್ಷಕ್ಕೆ 7 ದಿನದ ಗಂಡು ಶಿಶುವನ್ನು ಮಾರಾಟ ಮಾಡಲಾಗಿದ್ದು, ಪೋಷಕರು, ಶಿಶು ಖರೀದಿಸಿದ್ದ ದಂಪತಿ ಹಾಗೂ ಮಧ್ಯವರ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಗುವಿನ ಪೋಷಕರಾದ ರಾಘವೇಂದ್ರ, ಅನಿತಾ (ನೀತಾ), ಮಧ್ಯವರ್ತಿ ನಾರಾಯಣಸ್ವಾಮಿ, ಖರೀದಿದಾರ ದಂಪತಿ ಬಾಲಕೃಷ್ಣ ಹಾಗೂ ಮಂಜುಳಾ ಬಂಧಿತ ಆರೋಪಿಗಳು. ಶ್ರೀನಿವಾಸಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ನಡೆಸುತ್ತಿದ್ದಾರೆ.

ಸಹ ಜೀವನ (ಲಿವ್ ಇನ್ ರಿಲೇಷನ್) ನಡೆಸುತ್ತಿದ್ದ ಶ್ರೀನಿವಾಸಪುರದ ವೆಂಕಟೇಶ್ವರ ಬಡಾವಣೆಯ ಅನಿತಾ (ನೀತಾ) ಹಾಗೂ ರಾಘವೇಂದ್ರ, ಮಧ್ಯವರ್ತಿ ನಾರಾಯಣಸ್ವಾಮಿ ಮೂಲಕ ಮಗು ಮಾರಾಟ ಮಾಡಿದ್ದಾರೆ. ಚಿಂತಾಮಣಿ ತಾಲ್ಲೂಕಿನ ಬಾಲಕೃಷ್ಣ ಹಾಗೂ ಮಂಜುಳಾ ಈ ಮಗು ಖರೀದಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಎಜುಕೇಷನ್ ಹಬ್’ ದಾವಣಗೆರೆಯ ಹಿರಿಮೆ

ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ

ಶಿಕ್ಷಣ ತಜ್ಞರ ಕಣ್ಣರಳಿಸುವಂತೆ ಬೆಳೆದು ನಿಂತ ವಿದ್ಯಾಸಂಸ್ಥೆ; ವಿಶೇಷ ಬೋಧನಾ ಶೈಲಿ, ಕ್ರೀಡಾ ಚಟುವಟಿಕೆಗೆ ರಾಷ್ಟ್ರಮಟ್ಟದಲ್ಲಿ ಖ್ಯಾತಿ

‘ಎಜುಕೇಷನ್ ಹಬ್’ ಎಂದೇ ಹೆಸರಾಗಿರುವ ‘ಕರ್ನಾಟಕದ ಹೃದಯಭಾಗ’ದಲ್ಲಿನ ದಾವಣಗೆರೆ ನಗರದಲ್ಲಿರುವ ಶಾಮನೂರು ಎಜುಕೇಷನ್ ಟ್ರಸ್ಟ್‌ನ ‘ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ’ಯು ಗ್ರಾಮೀಣ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಆಶಾಕಿರಣವಾಗಿ ಹೊರಹೊಮ್ಮಿದೆ.

‘ಶಿಕ್ಷಣವೆಂಬುದು ಕೇವಲ ಪಠ್ಯಪುಸ್ತಕಗಳ ಜ್ಞಾನವಲ್ಲ, ಅದು ವ್ಯಕ್ತಿತ್ವ ನಿರ್ಮಾಣದ ಪೂರ್ಣ ಪ್ರಕ್ರಿಯೆ’ ಎಂಬ ತತ್ವವನ್ನು ಅಕ್ಷರಶಃ ಪಾಲಿಸುತ್ತಿರುವ ‘ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ’ಯು ವಿಶೇಷ ಬೋಧನಾ ಶೈಲಿ ಹಾಗೂ ಕ್ರೀಡಾ ಚಟುವಟಿಕೆಗಳ ಸಾಧನೆಯ ಮೂಲಕ ‘ಬೆಣ್ಣೆನಗರಿ’ಯಲ್ಲಿ ಅತಿ ದೊಡ್ಡ ಹೆಸರು ಮಾಡಿದೆ.

ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ (ಪಿಯುಸಿ) ವರೆಗಿನ ವಿವಿಧ ಹಂತಗಳ ಶಿಕ್ಷಣವನ್ನು ಒಂದೇ ಸೂರಿನಡಿ ಒದಗಿಸುವ ಧ್ಯೇಯದಡಿ ಕಾರ್ಯ ನಿರ್ವಹಿಸುತ್ತಿರುವ ಈ ವಿದ್ಯಾಸಂಸ್ಥೆಯು ‘ಆಲದ ಮರ’ದ ರೀತಿ ಬೆಳೆದು ನಿಂತಿರುವುದು ಶಿಕ್ಷಣ ಪ್ರೇಮಿಗಳ, ಶಿಕ್ಷಣ ತಜ್ಞರ ಕಣ್ಣರಳಿಸಿದೆ.

ಪ್ರತೀ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮಾತ್ರ ಸಣ್ಣ ರಾಜಿಯನ್ನೂ ಮಾಡಿಕೊಳ್ಳದ ಕಾರಣಕ್ಕೆ ‘ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆ’ಯು ಜಿಲ್ಲೆ, ರಾಜ್ಯ ಮಾತ್ರವಲ್ಲದೇ ರಾಷ್ಟ್ರ ಮಟ್ಟದಲ್ಲೂ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಸಂಸ್ಥೆಯ ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಶೈಕ್ಷಣಿಕ ಸೌಲಭ್ಯಗಳು ದೊರೆಯುತ್ತಿರುವ ಕಾರಣ ಫಲಿತಾಂಶದಲ್ಲಿ ವಿದ್ಯಾಸಂಸ್ಥೆಯು ವರ್ಷದಿಂದ ವರ್ಷಕ್ಕೆ ಏರುಮುಖದಲ್ಲೇ ಸಾಗಿ ಉತ್ತುಂಗ ಶಿಖರದಲ್ಲಿದೆ. ನಗರ–ಗ್ರಾಮ ವಿಭಜನೆಯ ಗೋಡೆಯನ್ನು ಅಳಿಸಿ, ಎಲ್ಲ ವಿದ್ಯಾರ್ಥಿಗಳಿಗೂ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ರೂಪುಗೊಂಡಿರುವ ಈ ಸಂಸ್ಥೆಯು ಸಾಮಾಜಿಕ ಬದ್ಧತೆಯನ್ನೂ ಪಾಲಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಂಸ್ಥೆಯಲ್ಲಿರುವ ಅತ್ಯಾಧುನಿಕ ಬೋಧನಾ ಕೊಠಡಿಗಳು, ವ್ಯವಸ್ಥಿತವಾಗಿ ರೂಪುಗೊಂಡಿರುವ ವಿಜ್ಞಾನ ಮತ್ತು ಗಣಿತ ಪ್ರಯೋಗಾಲಯಗಳು ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆಯನ್ನು ಮತ್ತಷ್ಟು ಹೆಚ್ಚಿಸಲು ಸಹಕಾರಿಯಾಗಿವೆ.

ಸಂಸ್ಥೆಯಲ್ಲಿ ಪಾಠ ಕೇಳುವುದು ಮತ್ತು ಬರೆಯುವುದಕ್ಕೆ ಮಾತ್ರ ಕಲಿಕೆಯನ್ನು ಸೀಮಿತಗೊಳಿಸಿಲ್ಲ. ವೀಡಿಯೊ ಮೂಲಕ ಪಾಠ ಕೇಳುವುದು ಹಾಗೂ ಪ್ರಾಯೋಗಿಕ ಕಲಿಕೆಗೂ ಆದ್ಯತೆ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯು ಆಸಕ್ತಿದಾಯಕವಾಗಿ ಮುಂದುವರಿದಿದೆ.

ವಿದ್ಯಾಭ್ಯಾಸದ ಜೊತೆಗೆ ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ಹಾಗೂ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಆರಂಭಿಸಿರುವ ಜೀವನ ಕೌಶಲ ಕೇಂದ್ರ, ಸೃಜನಶೀಲತಾ ಕೇಂದ್ರ ಹಾಗೂ ಗಣಿತ ಪ್ರಯೋಗಾಲಯಗಳು ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ಹಿಂದೆ ಬಿದ್ದಿಲ್ಲ.

ಸಂಸ್ಥೆಯಲ್ಲಿ ಎಲ್ಲ ಶೈಕ್ಷಣಿಕ ಸೌಲಭ್ಯಗಳಿಗೆ ಜೀವ ತುಂಬುವ ಮೂಲಕ ವಿದ್ಯಾರ್ಥಿಗಳನ್ನು ಹಂತಹಂತವಾಗಿ ಶೈಕ್ಷಣಿಕವಾಗಿ ಮೇಲೆತ್ತುವವರು ಶಿಕ್ಷಕರು, ಉಪನ್ಯಾಸಕರು. ಅಪಾರ ಅನುಭವವುಳ್ಳ, ನುರಿತ ಹಾಗೂ ನಿತ್ಯವೂ ತಮಗೆ ತಾವೇ ಹೊಸತನಕ್ಕೆ ತೆರೆದುಕೊಳ್ಳುವ (ಅಪ್‌ಡೇಟ್) ಇಲ್ಲಿನ ‘ಗುರು’ಗಳು ವಿದ್ಯಾರ್ಥಿಗಳ ಪಾಲಿಗೆ ವರವಾಗಿದ್ದಾರೆ.

ವಿದ್ಯಾರ್ಥಿಗಳ ಮನೋಭಾವ ಅರಿತುಕೊಳ್ಳುವ ಇಲ್ಲಿನ ಶಿಕ್ಷಕರು, ಉಪನ್ಯಾಸಕರು ಅತ್ಯುತ್ತಮ ಬೋಧನೆಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ವೈಯಕ್ತಿಕ ಕಾಳಜಿ ತೋರುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಮೂಡುವ ಜೊತೆಗೆ ಅವರ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸುತ್ತಿದೆ. ಇದರ ಫಲವಾಗಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮಾತ್ರವಲ್ಲದೇ ವ್ಯಕ್ತಿತ್ವದ ದೃಷ್ಟಿಯಿಂದಲೂ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದ್ದಾರೆ.

ಇಂದಿನ ವಿದ್ಯಾರ್ಥಿಗಳನ್ನು ಭವಿಷ್ಯದ ನಾಯಕರು, ಸತ್ಪ್ರಜೆಗಳನ್ನಾಗಿಸುವಲ್ಲಿ ವಿದ್ಯಾಸಂಸ್ಥೆಯು ನಂಬಿಕೆಯನ್ನು ಹೊಂದಿದೆ. ಜಾಗತೀಕರಣದ ಜಗತ್ತಿನಲ್ಲಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ವಿದ್ಯಾಸಂಸ್ಥೆಯಲ್ಲಿ ಉತ್ತಮ ಕಲಿಕಾ ವಾತಾವರಣ ರೂಪಿಸಿದೆ.

ಜಗತ್ತು ವೇಗವಾಗಿ ಬದಲಾಗುತ್ತಿದ್ದು, ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಅಣಿಗೊಳಿಸಲು ಸೃಜನಶೀಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಇದರೊಂದಿಗೆ ಪ್ರಾಮಾಣಿಕತೆ, ನಿಷ್ಠೆ, ಸಹನಶೀಲತೆ ಮತ್ತು ಕರುಣೆ ಎಂಬ ಮೌಲ್ಯಗಳನ್ನೂ ಬೆಳೆಸಲಾಗುತ್ತಿದೆ.

ದಾವಣಗೆರೆಯಲ್ಲಿರುವ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಸತಿ ಶಾಲೆ ಮತ್ತು ಪಿಯು ಕಾಲೇಜು

ವಿದ್ಯಾಸಂಸ್ಥೆಯ ಗುರಿ, ಉದ್ದೇಶಗಳು

- ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಶ್ರಮಿಸುವಂತಹ ಅನುಭವಿ ಹಾಗೂ ಉತ್ಸಾಹಿ ಶಿಕ್ಷಕರನ್ನು ನಿಯೋಜಿಸುವುದು
- ಕುತೂಹಲ, ಅನ್ವೇಷಣೆ ಹಾಗೂ ಜ್ಞಾನಾರ್ಜನೆಗೆ ಪ್ರೇರೇಪಿಸುವಂತಹ ವಿದ್ಯಾರ್ಥಿಸ್ನೇಹಿ ಕಲಿಕಾ ವಾತಾವರಣವನ್ನು ನಿರ್ಮಿಸುವುದು
- ಸಂವಹನ ಕೌಶಲ ಬೆಳೆಸುವುದು, ಅಭಿಪ್ರಾಯ ಮತ್ತು ಆಲೋಚನೆಗಳನ್ನು ಸ್ಪಷ್ಟವಾಗಿ, ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವ ಸಾಮರ್ಥ್ಯವನ್ನು ವೃದ್ಧಿಸುವುದು
- ವಿದ್ಯಾರ್ಥಿಗಳಲ್ಲಿ ಸ್ವತಂತ್ರ ಚಿಂತನೆ ಮತ್ತು ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಬೆಳೆಸುವುದು
- ಪ್ರತಿ ವಿದ್ಯಾರ್ಥಿಗಳಲ್ಲಿನ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನು ಗುರುತಿಸಿ ಮಾರ್ಗದರ್ಶನದ ಮೂಲಕ ಸುಧಾರಣೆ ಸಾಧಿಸುವುದು
- ಭಾರತೀಯ ಸಂಸ್ಕೃತಿ, ಮೌಲ್ಯ ಮತ್ತು ಪರಂಪರೆಯನ್ನು ಕಾಪಾಡಿಕೊಂಡು ವಿದ್ಯಾರ್ಥಿಗಳನ್ನು ಜಾಗತಿಕ ಸವಾಲುಗಳನ್ನು ಎದುರಿಸಲು ಸಿದ್ಧಗೊಳಿಸುವ ಸಮಗ್ರ ಶಿಕ್ಷಣ ನೀಡುವುದು

ಸುರಕ್ಷಿತ, ಆರೋಗ್ಯಕರ ವಸತಿ ಸೌಲಭ್ಯ

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿ ವಸತಿಯೇತರ ಹಾಗೂ ವಸತಿ ಸೌಲಭ್ಯ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಅಗತ್ಯ ಹಾಗೂ ಆಯ್ಕೆಯ ಅನುಸಾರವಾಗಿ ಶಿಕ್ಷಣ ಒದಗಿಸಲಾಗುತ್ತಿದೆ. ಗ್ರಾಮೀಣ ಪ್ರದೇಶ ಹಾಗೂ ಬೇರೆ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ವ್ಯವಸ್ಥಿತವಾಗಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ವಸತಿ ವಿದ್ಯಾರ್ಥಿಗಳಿಗಾಗಿ ಸಂಸ್ಥೆಯ ಆವರಣದಲ್ಲೇ ಅತ್ಯಾಧುನಿಕ ಹಾಗೂ ಸುಸಜ್ಜಿತ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಗೂ ಸುರಕ್ಷಿತವಾದ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಖಾಸಗಿತನದ ರಕ್ಷಣೆ ಹಾಗೂ ಆರೈಕೆಗೂ ಆದ್ಯತೆ ನೀಡಲಾಗಿದೆ.

ಇಡೀ ಕ್ಯಾಂಪಸ್‌ನಲ್ಲಿ 24/7 ಭದ್ರತಾ ವ್ಯವಸ್ಥೆ ಇದೆ. ಸೆಕ್ಯೂರಿಟಿ ಸಿಬ್ಬಂದಿ, ಪ್ರವೇಶ–ನಿರ್ಗಮನದ ಮೇಲ್ವಿಚಾರಕರು ಸದಾ ಕಾರ್ಯ ನಿರ್ವಹಿಸುತ್ತಾರೆ. ಮಾತ್ರವಲ್ಲದೇ ಸಿ.ಸಿ.ಟಿವಿ ಕ್ಯಾಮೆರಾಗಳ ಕಣ್ಗಾವಲೂ ಇರುವುದು ವಿದ್ಯಾರ್ಥಿಗಳ ಭದ್ರತೆಯ ಬಗ್ಗೆ ಪಾಲಕರಿಗೆ ಯಾವುದೇ ಚಿಂತೆ ಇಲ್ಲದಂತೆ ಮಾಡಿದೆ.

ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಪೌಷ್ಟಿಕ ಆಹಾರ ಬಹು ಅಗತ್ಯ. ಇದಕ್ಕಾಗಿಯೇ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಪೋಷಕಾಂಶಯುಕ್ತ, ಗುಣಮಟ್ಟದ ಆಹಾರವನ್ನು ನೀಡಲಾಗುತ್ತಿದೆ. ಆಧುನಿಕ, ಸ್ವಚ್ಛ ಮತ್ತು ಸುಸಜ್ಜಿತವಾದ ಭೋಜನಾಲಯ ಕಾರ್ಯ ನಿರ್ವಹಿಸುತ್ತಿದ್ದು, ಅಡುಗೆ ಸಿಬ್ಬಂದಿಯೂ ವಿದ್ಯಾರ್ಥಿಸ್ನೇಹಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

Olympiad program (IIT, JEE, NEET ಕಲಿಕೆಗೆ ಫೌಂಡೇಶನ್

ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 6ನೇ ತರಗತಿಯಿಂದ 10ನೇ ತರಗತಿವರೆಗೆ ಐಐಟಿ ಫೌಂಡೇಷನ್ ಕೋರ್ಸ್ ಅನ್ನು ಪರಿಚಯಿಸಿದೆ. ಇಷ್ಟು ಮಾತ್ರವಲ್ಲದೇ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಸಂಸ್ಥೆಯು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ಗ್ರಂಥಾಲಯ

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ಪ್ರಯೋಗಾಲಯ

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ವಿವಿಧ ಆಟಗಳ ಮೈದಾನ

ಹವಾನಿಯಂತ್ರಿತ (ಎಸಿ) ಸಭಾಂಗಣ

ಸಂಸ್ಥೆಯು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆರಾಮದಾಯಕವಾಗಿ ಕುಳಿತುಕೊಳ್ಳಬಹುದಾದ ಹವಾನಿಯಂತ್ರಿತ (ಎಸಿ) ಸಭಾಂಗಣವನ್ನು ಹೊಂದಿದೆ. ಬೋಧನಾ ಚಟುವಟಿಕೆಗಳ ಜೊತೆಗೆ ಶಾಲೆ ಹಾಗೂ ಕಾಲೇಜು ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಮಾರಂಭಗಳು ಮತ್ತು ವಿಶೇಷ ಕಾರ್ಯಾಗಾರಗಳನ್ನು ವಿದ್ಯಾಸಂಸ್ಥೆಯಲ್ಲಿ ನಿಯಮಿತವಾಗಿ ಆಯೋಜಿಸಲಾಗುತ್ತಿದೆ.

ಬೋಧನೆಯ ಜೊತೆಗೆ ಕಲೆ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗಿದೆ. ಶಾಲೆಯಲ್ಲಿ ಅಬಾಕಸ್, ಸಂಗೀತ, ನೃತ್ಯ, ಕರಾಟೆ, ಸ್ಕೌಟ್ಸ್ ಮತ್ತು ಗೈಡ್ಸ್ ಕ್ಲಬ್‌ಗಳು ಮುಂತಾದ ಚಟುವಟಿಕೆಗಳು ಮಕ್ಕಳ 360 ಡಿಗ್ರಿ ಬೆಳವಣಿಗೆಗೆ ಕಾರಣವಾಗಿವೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಲು ಸೂಕ್ತ ವೇದಿಕೆಯನ್ನು ಕಲ್ಪಿಸಲಾಗಿದೆ.

ವಿದ್ಯಾಸಂಸ್ಥೆಯಲ್ಲಿ ಪ್ರತೀ ವರ್ಷವೂ ಸಾವಿರಾರು ವಿದ್ಯಾರ್ಥಿಗಳಿಗೆ ಪರಸ್ಪರ ಸೌಹಾರ್ದತೆ, ಸಹಕಾರ ಮತ್ತು ಶಿಸ್ತಿನ ಪಾಠಗಳನ್ನು ಕಲಿಸಲಾಗುತ್ತಿದೆ.

ಭಾಷಣ, ಉಪನ್ಯಾಸ, ಸಂವಾದ, ವಿಚಾರಗೋಷ್ಠಿ ಹಾಗೂ ವಿಚಾರ ಸಂಕಿರಣಗಳಂತಹ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ, ನಾಯಕತ್ವ ಗುಣ ಬೆಳೆಸುವುದು ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲಾಗಿದೆ. ಎಚ್. ಮಹಾಲಿಂಗಪ್ಪ – ಪುಷ್ಪಾ ಮಹಾಲಿಂಗಪ್ಪ ದಂಪತಿ ನೇತೃತ್ವದ ಆಡಳಿತ ಮಂಡಳಿಯು ಶಾಲೆಯಲ್ಲಿ ಸಮಗ್ರ ಶಿಕ್ಷಣ ವಾತಾವರಣವನ್ನು ಅಂದವಾಗಿ ಸೃಷ್ಟಿಸಿದೆ.

ಪ್ರಸ್ತುತಿ ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪುಷ್ಪಾ ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯು ದೃಢ ನಿಶ್ಚಯ, ಸಹನೆ ಹಾಗೂ ನಿರಂತರ ಪ್ರಯತ್ನ ಎಂಬ ಯಶಸ್ಸಿನ ಮೆಟ್ಟಿಲುಗಳನ್ನು ದಾಟಿ ಉತ್ತುಂಗಕ್ಕೇರಿದೆ. ಆತ್ಮವಿಶ್ವಾಸ ಹೊಂದಿರುವ ವಿದ್ಯಾರ್ಥಿಗಳು ಎಷ್ಟೇ ಜಟಿಲವಾದ ಶಿಕ್ಷಣವನ್ನೂ ಸರಳವಾಗಿ ಕಲಿಯಬಲ್ಲರು ಎಂಬ ನಂಬಿಕೆಯನ್ನು ಹೊಂದಿರುವ ವಿದ್ಯಾಸಂಸ್ಥೆಯು ಮಕ್ಕಳಿಗೆ ಆತ್ಮವಿಶ್ವಾಸವನ್ನು ತುಂಬುವ ಕಾರ್ಯದಲ್ಲಿ ತೊಡಗಿದೆ.

ಶಿಕ್ಷಣವು ಸೇವೆ ಎಂದ ಆಡಳಿತ ಮಂಡಳಿ

‘ವಿದ್ಯೆಯೇ ಅತಿ ದೊಡ್ಡ ಆಸ್ತಿ’ಯಾಗಿರುವ ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಾಧಾರಿತ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ, ಸನ್ನಡತೆ, ಸೇವಾ ಮನೋಭಾವ ಹಾಗೂ ಸದ್ವಿಚಾರಗಳನ್ನು ಬೆಳೆಸುವ ಕಾರ್ಯದಲ್ಲೂ ಎಚ್.ಮಹಾಲಿಂಗಪ್ಪ ಮತ್ತು ಪುಷ್ಪಾ ಮಹಾಲಿಂಗಪ್ಪ ದಂಪತಿ ಸದಾ ಮುಂಚೂಣಿಯಲ್ಲಿದ್ದಾರೆ.

ಶಿಕ್ಷಣವನ್ನು ವ್ಯಾಪಾರವಾಗಿ ಪರಿಗಣಿಸುವ ಅನೇಕ ಸಂಸ್ಥೆಗಳ ನಡುವೆ ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯು ಶಿಕ್ಷಣವನ್ನು ಸೇವೆಯಾಗಿ ಪರಿಗಣಿಸಿದೆ. ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯ ರೂಪಿಸಿಕೊಡುವುದನ್ನೇ ತನ್ನ ಪ್ರಧಾನ ಧ್ಯೇಯವನ್ನಾಗಿ ಮಾಡಿಕೊಂಡಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸುಸಜ್ಜಿತ ತರಗತಿ ಕೊಠಡಿಗಳು, ವಿಶಾಲ ಮೈದಾನ, ಅಗತ್ಯ ಮೂಲಸೌಕರ್ಯಗಳನ್ನು ಹೊಂದಿರುವ ಉತ್ತಮ ಹಾಸ್ಟೆಲ್ ವ್ಯವಸ್ಥೆಯನ್ನು ಶಾಲೆ ಮತ್ತು ಕಾಲೇಜಿನಲ್ಲಿ ಕಲ್ಪಿಸಲಾಗಿದೆ.

‘ಸಂಸ್ಥೆಯ ಶೈಕ್ಷಣಿಕ ಸಾಧನೆ ಬಗ್ಗೆ ಹೆಮ್ಮೆ’

‘ವಿದ್ಯಾರ್ಥಿಗಳನ್ನು ಜಾಣ, ದಡ್ಡ ಎಂದು ವಿಭಜಿಸುವುದು ಸರಿಯಲ್ಲ. ಅವರು ಬೆಳೆದು ಬಂದ ಪರಿಸರದ ಮೇಲೆ ಆ ಮಕ್ಕಳ ಬುದ್ಧಿವಂತಿಕೆಯ ಅವಲಂಬಿತವಾಗಿರುತ್ತದೆ. ಉತ್ತಮ ಪರಿಸರ, ಕಲಿಕಾ ವಾತಾವರಣದ ಕೊರತೆಯಿಂದಾಗಿ ಕೆಲ ಮಕ್ಕಳು ಶಿಕ್ಷಣದಲ್ಲಿ ಹಿಂದುಳಿದಿರುತ್ತಾರೆ. ಜಾಣ ವಿದ್ಯಾರ್ಥಿಗಳನ್ನೇ ಮತ್ತಷ್ಟು ಜಾಣರನ್ನಾಗಿಸುವುದು ವಿಶೇಷ ಸಾಧನೆಯಲ್ಲ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಶೈಕ್ಷಣಿಕ ಪ್ರಗತಿಯತ್ತ ಕೊಂಡೊಯ್ಯುವುದೇ ನಿಜವಾದ ಸಾಧನೆಯಾಗಿದೆ. ಆ ಕೆಲಸವನ್ನು ಆತ್ಮವಿಶ್ವಾಸದಿಂದ ನಮ್ಮ ಇಡೀ ಸಂಸ್ಥೆಯು ನಿರ್ವಹಿಸುತ್ತಿರುವ ಬಗ್ಗೆ ತುಂಬಾ ಹೆಮ್ಮೆ ಇದೆ’ ಎನ್ನುತ್ತಾರೆ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯ ಟ್ರಸ್ಟಿಗಳಾದ ಪುಷ್ಪಾ ಮಹಾಲಿಂಗಪ್ಪ.

‘ಸರ್ವಾಂಗೀಣ ಪ್ರಗತಿ, ಉಜ್ವಲ ಭವಿಷ್ಯಕ್ಕೆ ಬುನಾದಿ’



‘ಒಂದೂವರೆ ದಶಕದಿಂದ ಸದುದ್ದೇಶದೊಂದಿಗೆ ಸಂಸ್ಥೆಯು ಸತ್ಪಥದಲ್ಲಿ ಸಾಗುತ್ತಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಉತ್ತಮ ಸಂಸ್ಕಾರ, ಸದ್ಗುಣ, ಸನ್ನಡತೆ, ಸಚ್ಚಾರಿತ್ರ್ಯ, ಸೇವಾ ಮನೋಭಾವ, ದೇಶಭಕ್ತಿ ಮೂಡಿಸುತ್ತಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ, ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವುದೇ ನಮ್ಮ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಬೋಧನಾ ವರ್ಗ ಹಾಗೂ ಸಿಬ್ಬಂದಿ ಸಂತಸದಿಂದಲೇ ಕಾರ್ಯನಿರ್ವಹಿಸುತ್ತಿದ್ದೇವೆ’ ಎನ್ನುತ್ತಾರೆ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎಚ್.ಮಹಾಲಿಂಗಪ್ಪ.

ಕ್ರೀಡೆಯಲ್ಲೂ ವಿದ್ಯಾರ್ಥಿಗಳ ‘ಮಿಂಚಿನ ಓಟ’

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿ ಶೈಕ್ಷಣಿಕ ಪ್ರಗತಿಗೆ ನೀಡುವ ಆದ್ಯತೆಯನ್ನು ಕ್ರೀಡಾ ಚಟುವಟಿಕೆಗೂ ನೀಡಲಾಗುತ್ತಿದೆ. ವಿದ್ಯಾರ್ಥಿಗಳನ್ನು ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳಿಸುವ, ಮನಸ್ಸನ್ನು ಉಲ್ಲಾಸಗೊಳಿಸುವ ಕ್ರೀಡೆಯಲ್ಲಿ ಭಾಗವಹಿಸಲು ಹುರಿದುಂಬಿಸಲಾಗುತ್ತಿದೆ.

ಕ್ರಿಕೆಟ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಕೊಕ್ಕೊ, ಈಜುಕೊಳ ಹಾಗೂ ವಿಶಾಲ ಆಟದ ಮೈದಾನಗಳಿರುವ ಅತ್ಯುತ್ತಮ ಕ್ರೀಡಾ ಸೌಲಭ್ಯಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ತಂಡದ ಭಾವನೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತಿವೆ.

ಪ್ರತೀ ವರ್ಷ ನಡೆಯುವ ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿವಿಧ ಕ್ರೀಡಾಕೂಟಗಳಲ್ಲಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರುತ್ತಿದ್ದಾರೆ. ಆ ಮೂಲಕ ವಿದ್ಯಾಸಂಸ್ಥೆ ಹಾಗೂ ಪಾಲಕರ ಕೀರ್ತಿ ಹೆಚ್ಚಿಸುತ್ತಿದ್ದಾರೆ.

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿನ ಕೋರ್ಸ್‌ಗಳು

- ಎಲ್‌ಕೆಜಿಯಿಂದ 10ನೇ ತರಗತಿವರೆಗೆ CBSE ಪಠ್ಯಕ್ರಮ
- 1ರಿಂದ 10ನೇ ತರಗತಿವರೆಗೆICSE ಪಠ್ಯಕ್ರಮ
- PUC ಯೊಂದಿಗೆ NEET ಪರೀಕ್ಷೆಗೆ ತರಬೇತಿ
- ಪಿಯುಸಿಯೊಂದಿಗೆ KCET ಪರೀಕ್ಷೆಗೆ ತರಬೇತಿ
- ಪಿಯುಸಿಯೊಂದಿಗೆ JEE ಪರೀಕ್ಷೆಗೆ ತರಬೇತಿ
- IIT ಮತ್ತು ಫೌಂಡೇಷನ್ ಕೋರ್ಸ್‌ಗಳು

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ

ಪುಷ್ಪಾ ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯು ಪಠ್ಯಕ್ರಮದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವಲ್ಲಿ ನಿರತವಾಗಿದೆ. ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (KCET), ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (NEET), JEE ಮೇನ್ ಆ್ಯಂಡ್ ಅಡ್ವಾನ್ಸ್‌ಡ್ ಸೇರಿದಂತೆ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳಿಗೆ ಅತ್ಯಂತ ವ್ಯವಸ್ಥಿತವಾಗಿ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿಯೇ ಅನುಭವಿ ಹಾಗೂ ತಜ್ಞ ಬೋಧಕರು ವಿಶೇಷ ತರಗತಿಗಳನ್ನು ನಡೆಸುತ್ತಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆ ವಿಚಾರದಲ್ಲಿ ಸಂಸ್ಥೆಯ ಅಧ್ಯಕ್ಷರು, ಟ್ರಸ್ಟಿಗಳು, ಶಿಕ್ಷಕರು ಹೆಚ್ಚಿನ ಕಾಳಜಿ ವಹಿಸುತ್ತಿದ್ದಾರೆ. ‘PUC ಬಳಿಕ ಮುಂದೇನು?’ ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಆರಂಭದಲ್ಲೇ ಸ್ಪಷ್ಟ ಮಾರ್ಗದರ್ಶನ ನೀಡುತ್ತಿದ್ದಾರೆ. ಹೀಗಾಗಿ, ವಿದ್ಯಾರ್ಥಿಗಳು ಯಾವ ವಿಷಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬುದನ್ನು ಅರಿತು ಆ ನಿಟ್ಟಿನಲ್ಲಿಯೇ ಕಾರ್ಯೋನ್ಮುಖರಾಗುತ್ತಿದ್ದಾರೆ. ಇದು ಅವರ ಯಶಸ್ಸಿಗೂ ಕಾರಣವಾಗುತ್ತಿದೆ.

ಆರಂಭದಿಂದಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿರುವ ಕಾರಣ ಪ್ರತೀ ವರ್ಷವೂ KCET, NEET, JEE ಪರೀಕ್ಷೆಗಳಲ್ಲಿ ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರುತ್ತಿದ್ದಾರೆ.

ಸುಸಜ್ಜಿತ ಗ್ರಂಥಾಲಯ, ಪ್ರಯೋಗಾಲಯ

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿ ಅತ್ಯಂತ ಸುಸಜ್ಜಿತವಾದ ಗ್ರಂಥಾಲಯವಿದೆ. ಪ್ರಾಥಮಿಕ ಹಂತದಿಂದ ಪಿಯು ಶಿಕ್ಷಣದವರೆಗೆ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಅಗತ್ಯವಿರುವ ಪಠ್ಯಪುಸ್ತಕಗಳು, ಪಠ್ಯೇತರ ಗ್ರಂಥಗಳು, ಸಾಮಾನ್ಯ ಜ್ಞಾನ, ವಿಜ್ಞಾನ, ಸಾಹಿತ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಸಾವಿರಾರು ಮೌಲ್ಯಯುತ ಪುಸ್ತಕಗಳು ಇಲ್ಲಿ ಲಭ್ಯವಿವೆ. ವಿದ್ಯಾರ್ಥಿಗಳು ಕೇವಲ ಪಠ್ಯಾಧಾರಿತ ಶಿಕ್ಷಣಕ್ಕೆ ಸೀಮಿತವಾಗಬಾರದು ಎಂಬ ಸದುದ್ದೇಶದಿಂದ ಪಠ್ಯೇತರ ವಿಷಯಗಳ ಓದಿಗೂ ಶಿಕ್ಷಕರು, ಉಪನ್ಯಾಸಕರು ಪ್ರೇರೇಪಿಸುತ್ತಿದ್ದಾರೆ. ಪಿಯುಸಿ ವಿದ್ಯಾರ್ಥಿಗಳಿಗಾಗಿ ಕೆಮಿಸ್ಟ್ರಿ, ಫಿಸಿಕ್ಸ್, ಬಯಾಲಜಿ ಹಾಗೂ ಕಂಪ್ಯೂಟರ್ ವಿಜ್ಞಾನ ವಿಭಾಗಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅತ್ಯುತ್ತಮ, ಗುಣಮಟ್ಟದ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ.

ದಾವಣಗೆರೆಯ ಶಾಮನೂರು ಎಜುಕೇಷನ್ ಟ್ರಸ್ಟ್‌ನ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ಕ್ಯಾಂಟಿನ್‌ನಲ್ಲಿ ವಿದ್ಯಾರ್ಥಿನಿಯರು ಉಪಾಹಾರ ಸವಿಯುತ್ತಿರುವುದು

ದಾವಣಗೆರೆಯ ಶಾಮನೂರು ಎಜುಕೇಷನ್ ಟ್ರಸ್ಟ್‌ನ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳು ಆಟದಲ್ಲಿ ತೊಡಗಿರುವುದು

ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ವಿದ್ಯಾಸಂಸ್ಥೆಯಲ್ಲಿರುವ ಸ್ಪೋರ್ಟ್ಸ್ ಕ್ಲೈಂಬಿಂಗ್

SMT. PUSHPA SHAMANUR MAHALINGAPPA
CBSE & ICSE RESIDENTIAL SCHOOL & PU SCIENCE COLLEGE
ADMISSIONS OPEN for the year 2026-27
1st Main, Swami Vivekananda Extn, Near BIET College, DAVANAGERE
Seperate Hostel Facility for Boys & Girls

For More Info.
08192-263766
8970071100 • 9035289011
www.spsmrs.org
For 1st PUC Science
Pre KG to Grade 10
CBSE / ICSE
We offer NEET • KCET • JEE • IIT & Foundation Courses

ಭಾನುವಾರ, ಫೆಬ್ರುವರಿ 8, 2026 | ₹ 7.00
● www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶಿಲ್ಪಕಲಾ ಶಿಬಿರ
ಹಂಪಿ ಉತ್ಸವದ ಪ್ರಯುಕ್ತ ವಿರೂಪಾಕ್ಷ ದೇವಸ್ಥಾನ ಬಳಿ ಶಿಲ್ಪಕಲಾ ಶಿಬಿರ ಶನಿವಾರ ಆರಂಭವಾಗಿದ್ದು, ಮೂರ್ತಿ ಕೆತ್ತನೆಯಲ್ಲಿ ತೊಡಗಿರುವ ಶಿಲ್ಪಿಗಳು

ಆರ್‌ಎಸ್‌ಎಸ್ ಸಂಭ್ರಮದಲ್ಲಿ ಸಲ್ಮಾನ್ ಖಾನ್
ಮುಂಬೈನಲ್ಲಿ ಶನಿವಾರ ನಡೆದ ಆರ್‌ಎಸ್‌ಎಸ್ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ಹಾಜರಾಗಿದ್ದರು

‘ಎಂಎಸ್‌ಐಎಲ್ ಚಿಟ್ಸ್ ಸುಭದ್ರ’ 6
‘ನಾನು ಯಾವುದೇ ತಪ್ಪು ಮಾಡಿಲ್ಲ’ 8

ಇಂದಿನ ಸಂಚಿಕೆಯೊಂದಿಗೆ
ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

₹100 ಕೋಟಿ ವಂಚನೆ ಪತ್ತೆ

ಬಂಧಿತರ ಸಂಖ್ಯೆ 14ಕ್ಕೆ ಏರಿಕೆ: ವಂಚಕರ ಜಾಡು ಹಿಡಿದ ಸೈಬರ್ ಕಮಾಂಡ್ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಬ್ಯಾಂಕ್ ಖಾತೆಗಳನ್ನು ತೆರೆದು ಜನರಿಗೆ ವಂಚಿಸುತ್ತಿದ್ದ ಸೈಬರ್ ಜಾಲದ ವಿರುದ್ಧ ಬಿರುಸಿನ ಕಾರ್ಯಾಚರಣೆ ಕೈಗೊಂಡಿರುವ ‘ಸೈಬರ್ ಕಮಾಂಡ್ ಘಟಕ’, ಈ ಜಾಲವು ₹100 ಕೋಟಿ ದೋಚಿರುವುದನ್ನು ಪತ್ತೆ ಮಾಡಿದೆ.

ಸಾರ್ವಜನಿಕರಿಗೆ ಹಣದ ಆಮಿಷವೊಡ್ಡಿ ಅವರ ಬ್ಯಾಂಕ್ ಖಾತೆ, ಆಧಾರ್ ಕಾರ್ಡ್, ಎಟಿಎಂ ಕಾರ್ಡ್ ಹಾಗೂ ಮೊಬೈಲ್ ಪಡೆದು, ಸೈಬರ್ ವಂಚಕರಿಗೆ ನೀಡುತ್ತಿರುವ ಜಾಲ ರಾಜ್ಯದಲ್ಲಿ ಸಕ್ರಿಯವಾಗಿದೆ. ವಂಚಕರ ಜಾಡು ಹಿಡಿದ ‘ಸೈಬರ್ ಕಮಾಂಡ್ ಘಟಕ’ದ ಅಧಿಕಾರಿಗಳು ಕಳೆದ ಮೂರು ದಿನಗಳಲ್ಲಿ 14 ‘ಮ್ಯೂಲ್ ಹೆರ್ಡರ್’ಗಳನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ. ಜತೆಗೆ, ರಾಜ್ಯದಲ್ಲಿ 42 ಸಾವಿರ ನಕಲಿ ಖಾತೆಗಳನ್ನೂ ಪತ್ತೆಹಚ್ಚಿದ್ದಾರೆ.

ಮುಖ್ಯಾಂಶಗಳು
- ರಾಜ್ಯದಲ್ಲಿ 42 ಸಾವಿರ ನಕಲಿ ಖಾತೆಗಳು ಪತ್ತೆ
- 29 ಜಿಲ್ಲೆಗಳಲ್ಲಿ ಕಾರ್ಯಾಚರಣೆ
- ಸೈಬರ್ ವಂಚನೆ ಪ್ರಕರಣಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ ಅವರು ಕಾರ್ಯಾಚರಣೆಯ ವಿವರ ನೀಡಿದರು.

‘ನಕಲಿ ಖಾತೆಗಳನ್ನು(ಮ್ಯೂಲ್ ಅಕೌಂಟ್) ಒಟ್ಟುಗೂಡಿಸುತ್ತಿದ್ದ ಮ್ಯೂಲ್ ಹೆರ್ಡರ್‌ಗಳ (ಬ್ಯಾಂಕ್‌ನ ಖಾತೆಗಳ ವಿವರ ಪಡೆದು ದುರುಪಯೋಗ ಮಾಡಿ-ಕೊಳ್ಳುವವರು) ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಬಂಧಿತರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗು-ತ್ತಿದೆ’ ಎಂದರು.

‘ಶಿವಮೊಗ್ಗದಲ್ಲಿ ಬಂಧಿಸಿರುವ ಆರೋಪಿ ಶರತ್‌ಕುಮಾರ್ 19 ನಕಲಿ ಖಾತೆಗಳನ್ನು ಹೊಂದಿದ್ದ. ಈ ಖಾತೆಗಳಲ್ಲಿ ₹11 ಕೋಟಿ ಹಣ ವರ್ಗಾವಣೆ ಆಗಿರುವುದು ಕಂಡುಬಂದಿದೆ. ಈ ಸಂಬಂಧ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲೂ 96 ಪ್ರಕರಣಗಳು ದಾಖಲಾಗಿದ್ದವು.

▶7

ಪ್ರತ್ಯೇಕ ಕಚೇರಿ ಆರಂಭಿಸಲು ಸಿದ್ಧತೆ

ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟುವ, ಸೈಬರ್ ವಂಚಕರನ್ನು ಪತ್ತೆಹಚ್ಚಲು ನಾಲ್ಕು ತಿಂಗಳ ಹಿಂದೆಯೇ ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ‘ಸೈಬರ್ ಕಮಾಂಡ್ ಘಟಕ’ ಆರಂಭಿಸಲಾಗಿದೆ. ಸದ್ಯ ಸಿಐಡಿ ಕಚೇರಿಯಲ್ಲಿಯೇ ಈ ಘಟಕ ಕಾರ್ಯ ನಿರ್ವಹಿಸುತ್ತಿದೆ. ಪ್ರತ್ಯೇಕ ಕಚೇರಿ ತೆರೆಯುವ ಸಂಬಂಧ ಸರ್ಕಾರದಿಂದ ಆದೇಶವಾಗಿದೆ. ಸೂಕ್ತ ಸ್ಥಳ ಲಭಿಸಿದ ಕೂಡಲೇ ಹೊಸ ಕಚೇರಿ ತೆರೆಯಲಾಗುವುದು ಎಂದು ಮೂಲಗಳು ಹೇಳಿವೆ.

ಬಂಧಿತರು ಯಾರ್‍ಯಾರು?
- ಬೆಂಗಳೂರಿನ ಎಚ್.ಜಿ.ಧರ್ಮಪಾಲ್, ಸುಹೇಲ್ ಪಾಷಾ, ಅಕೀಲ್ ಪಾಷಾ, ಮೊಹಮ್ಮದ್ ಮುಜಾಮಿಲ್, ಪಟೇಲ್ ಜಿತೇಂದ್ರ ಕುಮಾರ್, ಮೋಹನ್ ಕುಮಾರ್
- ಕೋಲಾರದ ಜುನೇದ್ ಪಾಷಾ, ಮುಜೀದ್ ಮದೀನಿ, ಶಹೀದ್ ಆಲಂ ಖಾನ್
- ತುಮಕೂರಿನ ಚಂದ್ರಶೇಖರ್, ರಾಮಕಿರಣ್
- ಶಿವಮೊಗ್ಗದ ಶರತ್‌ಕುಮಾರ್

ಸ್ಫೋಟ: ಸಾವಿನ ಸಂಖ್ಯೆ 27ಕ್ಕೆ ಏರಿಕೆ

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಪೂರ್ವ ಜಯಂತಿಯಾ ಹಿಲ್ಸ್ ಜಿಲ್ಲೆಯಲ್ಲಿ ಅಕ್ರಮ ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ್ದ ಸ್ಫೋಟದಲ್ಲಿ ಇಬ್ಬರ ಶವಗಳು ಶನಿವಾರ ಪತ್ತೆಯಾಗಿದ್ದು, ಮೃತಪಟ್ಟವರ ಸಂಖ್ಯೆ 27ಕ್ಕೆ ಏರಿಕೆಯಾಗಿದೆ. ಉಮ್ಸಂಗತ್ ಗ್ರಾಮದ ಥಾಂಗ್ಸ್ಕು ಪ್ರದೇಶದಲ್ಲಿ ಗುರುವಾರ ಸ್ಫೋಟ ಸಂಭವಿಸಿತ್ತು.

‘ಅವಘಡದಲ್ಲಿ ಇನ್ನೂ ಅನೇಕರು ನಾಪತ್ತೆಯಾಗಿದ್ದು, ರಕ್ಷಣಾ ತಂಡಗಳು ಶೋಧ ಕಾರ್ಯವನ್ನು ಮುಂದುವರಿಸಿವೆ. ಮೃತರ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ’ ಎಂದು ಎಸ್‌ಪಿ ವಿಕಾಶ್ ಕುಮಾರ್ ತಿಳಿಸಿದ್ದಾರೆ.

ಘಟನೆ ಸಂಬಂಧ ಫಾರ್ಮೆ ಚಿರ್ಮಾಂಗ್ (36) ಮತ್ತು ಶಮೇಹಿ ವಾರ್ (42) ಎಂಬವರನ್ನು ಬಂಧಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಪಾರ್ಶ್ವವಾಯು ಪೀಡಿತ ಚಿರತೆ ‘ಭದ್ರ’ನಿಗೆ ಅರಿವಳಿಕೆ ಮದ್ದು ನೀಡಿ ನಂಜಪ್ಪ ಆಸ್ಪತ್ರೆಯಲ್ಲಿ ಶುಕ್ರವಾರ ತಡರಾತ್ರಿ ಎಂಆರ್‌ಐ ಸ್ಕ್ಯಾನ್ ಮಾಡಲಾಯಿತು

ತ್ಯಾವರೆಕೊಪ್ಪದ ಚಿರತೆಗೆ ಎಂಆರ್‌ಐ ಸ್ಕ್ಯಾನಿಂಗ್!

ಪಾರ್ಶ್ವವಾಯು: ಕಾಲಿನ ಸ್ವಾಧೀನ ಕಳೆದುಕೊಂಡ ‘ಭದ್ರ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮನುಷ್ಯರು ಅನಾರೋಗ್ಯಕ್ಕೆ ಒಳಗಾದರೆ ಕಾಯಿಲೆಯ ಹಿನ್ನೆಲೆ, ಮೂಲ, ಹಂತ ಮತ್ತಿತರ ವಿವರ ತಿಳಿಯಲು ರಕ್ತ, ಮೂತ್ರ ಪರೀಕ್ಷೆ ಹಾಗೂ ಸ್ಕ್ಯಾನಿಂಗ್ ಪರಿಶೀಲನೆಗೆ ಒಳಪಡಿಸುವುದು ಸಾಮಾನ್ಯ. ಕೆಲವು ದಿನಗಳಿಂದ ಅಸ್ವಸ್ಥವಾಗಿರುವ ತ್ಯಾವರೆಕೊಪ್ಪದ ಹುಲಿ–ಸಿಂಹ ಧಾಮದಲ್ಲಿನ ಚಿರತೆಗೂ ಇಲ್ಲಿನ ನಂಜಪ್ಪ ಆಸ್ಪತ್ರೆಯಲ್ಲಿ ಶುಕ್ರವಾರ ತಡರಾತ್ರಿ ಸ್ಕ್ಯಾನಿಂಗ್ ಮಾಡಲಾಗಿದೆ.

ಪಾರ್ಶ್ವವಾಯುವಿಗೆ ತುತ್ತಾಗಿ ಕಾಲುಗಳ ಸ್ವಾಧೀನ ಕಳೆದುಕೊಂಡಿರುವ ಗಂಡು ಚಿರತೆ ‘ಭದ್ರ’ನಿಗೆ (15) ಚಿಕಿತ್ಸೆಯ ಭಾಗವಾಗಿ ಎಂಆರ್‌ಐ ಸ್ಕ್ಯಾನ್ ಮಾಡಲಾಯಿತು.

ಭದ್ರ ಕೆಲ ದಿನಗಳಿಂದ ಅಸ್ವಸ್ಥವಾಗಿ ಓಡಾಡಲು ಆಗದಂತಾಗಿತ್ತು. ‘ದಿಢೀರ್ ಅಸ್ವಸ್ಥತೆಗೆ ಕಾರಣವೇನು ಎಂಬುದನ್ನು ಅರಿಯುವುದು ಅಗತ್ಯವಾಗಿತ್ತು. ಬೆನ್ನುಹುರಿಗೆ ಪೆಟ್ಟು ಬಿದ್ದಿದಿಯೇ? ಅಥವಾ ಸೋಂಕಿಗೆ ತುತ್ತಾಗಿ ಅನಾರೋಗ್ಯಕ್ಕೆ ಒಳಗಾಗಿದೆಯೇ?’ ಎಂದು ತಿಳಿದುಕೊಳ್ಳಲು ವೈದ್ಯರು ಎಂಆರ್‌ಐ ಸ್ಕ್ಯಾನ್‌ಗೆ ಶಿಫಾರಸು ಮಾಡಿದ್ದರು.

ಪ್ರಾಣಿಗಳಿಗೆ ಇರುವ ಪ್ರತ್ಯೇಕ ಚಿಕಿತ್ಸಾಲಯಗಳಲ್ಲಿ ಸ್ಕ್ಯಾನಿಂಗ್ ಸೌಲಭ್ಯ ಇಲ್ಲದ್ದರಿಂದ ಚಿರತೆಯ ಎಂಆರ್‌ಐ ಸ್ಕ್ಯಾನ್ ಮಾಡಲು ನಂಜಪ್ಪ ಆಸ್ಪತ್ರೆಯ ಆಡಳಿತ ಮಂಡಳಿ ಮುಖ್ಯಸ್ಥರಿಗೆ ಕೋರಿದಾಗ ಅವರು ಒಪ್ಪಿಗೆ ಸೂಚಿಸಿದರು. ಹಗಲು ಹೊತ್ತು ರೋಗಿಗಳು, ಆಸ್ಪತ್ರೆಯ ಸಿಬ್ಬಂದಿ ಹೆದರಿಕೊಳ್ಳಬಹುದು ಅಥವಾ ಚಿರತೆ ನೋಡಲು ನೂಕುನುಗ್ಗಲಾಗಬಹುದು ಎಂಬ ಕಾರಣಕ್ಕೆ ತಡರಾತ್ರಿ ಈ ಚಿರತೆಯನ್ನು ಆಸ್ಪತ್ರೆಗೆ ಕರೆತರಲು ಮೃಗಾಲಯ ಪ್ರಾಧಿಕಾರ ನಿರ್ಧರಿಸಿತ್ತು ಎಂದು ಡಾ.ಮುರಳಿಮೋಹನ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅದರಂತೆ ಹುಲಿ- ಸಿಂಹ ಧಾಮದ ಕಾರ್ಯನಿರ್ವಾಹಕ ನಿರ್ದೇಶಕ ಕೆ.ವಿ. ಅಮರಾಕ್ಷರ ಹಾಗೂ ವನ್ಯಜೀವಿ ವೈದ್ಯ ಮುರಳಿಮೋಹನ್ ನೇತೃತ್ವದ ತಂಡ ಚಿರತೆಯನ್ನು ಆಸ್ಪತ್ರೆಗೆ ತಂದಿತ್ತು.

ಚಿರತೆಗೆ ಅರಿವಳಿಕೆ ಮದ್ದು ನೀಡಿ ಪ್ರಜ್ಞೆ ತಪ್ಪಿಸಿ ನಂತರ ಎಂಆರ್‌ಐ ಸ್ಕ್ಯಾನ್ ಯಂತ್ರದೊಳಗೆ ಕಳುಹಿಸಿ ಪರೀಕ್ಷೆಗೆ ಒಳಪಡಿಸಲಾಯಿತು. ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ತಜ್ಞರು, ಸಿಬ್ಬಂದಿ ಹೀಗೊಂದು ವಿಶಿಷ್ಟ ಪ್ರಯೋಗಕ್ಕೆ ಸಹಕರಿಸಿದರು ಎಂದರು.

‘ಚಿರತೆಯನ್ನು ಸ್ಕ್ಯಾನಿಂಗ್‌ಗೆ ಒಳಪಡಿಸಲಾಯಿತು. ವರದಿ ಬಂದಿದ್ದು, ಅದಕ್ಕೆ ವಯೋಸಹಜವಾಗಿಯೇ ಪಾರ್ಶ್ವವಾಯು ತಗುಲಿರುವುದು ಗೊತ್ತಾಗಿದೆ’ ಎಂದರು.

▶9

ಹಸ್ತಾಂತರ: ಶುರುವಾಯ್ತು ಮಾತಿನ ಸಮರ

ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರದ ವಿಷಯ ಮತ್ತೆ ಮುನ್ನೆಲೆಗೆ ಬಂದಿದೆ. ಬಜೆಟ್ ತಯಾರಿಯಲ್ಲಿ ಸಿದ್ದರಾಮಯ್ಯ ತೊಡಗಿಕೊಂಡಿದ್ದರೆ, ‘ಮುಂದಿನದನ್ನು ಕಾಲವೇ ಹೇಳುತ್ತದೆ’ ಎಂಬ ನಂಬಿಕೆಯ ಮಾತುಗಳನ್ನು ಶಿವಕುಮಾರ್ ಪುನರುಚ್ಚರಿಸುತ್ತಿದ್ದಾರೆ. ಮುಖ್ಯಮಂತ್ರಿ ಪುತ್ರ ಯತೀಂದ್ರ ಅವರ ಮಾತುಗಳು ಪಕ್ಷದಲ್ಲಿ ಅಂತರಕಲಹದ ಕಿಡಿ ಹೊತ್ತಿಸಿವೆ. ನಾಯಕರ ಆಪ್ತರು ದಿನಕ್ಕೊಂದು ಹೇಳಿಕೆಯ ಬಾಣ ಬಿಡತೊಡಗಿದ್ದಾರೆ.

ಸಿದ್ದರಾಮಯ್ಯಗಿಂತ ಯತೀಂದ್ರ ಮೇಲೆ’

‘ಯತೀಂದ್ರ ಅವರು ಸಿದ್ದರಾಮಯ್ಯ ಅವರಿಗಿಂತ ಮೇಲೆ ಕುಳಿತಿದ್ದಾರೆ. ಅದಕ್ಕೇ ಅವರನ್ನು ನಮ್ಮ ಹೈಕಮಾಂಡ್ ಎಂದು ಹೇಳಿದ್ದೇನೆ...’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ರಾಯಚೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಹೈಕಮಾಂಡ್ ಅಂತಿದ್ದಾರೆ. ಇವರು (ಯತೀಂದ್ರ) ಅವರಿಗಿಂತ ಮೇಲೆ ಹೇಳ್ತಿದ್ದಾರೆ. ಮುಂದಿನದನ್ನು ಕಾಲವೇ ಹೇಳುತ್ತದೆ’ ಎಂದರು.

▶6

> ‘ಹೈಕಮಾಂಡ್ ಹೈಕಮಾಂಡೇ. ಮುಖ್ಯಮಂತ್ರಿ ಬದಲಾವಣೆಯ ವಿಚಾರವಾಗಿ ಹೈಕಮಾಂಡ್ ಏನೂ ಹೇಳದೇ ಇರುವುದರಿಂದ ಮುಖ್ಯಮಂತ್ರಿ ಬದಲಾವಣೆ ಆಗಲ್ಲ ಎಂದರ್ಥ, ಅವರೇ ಮುಂದುವರಿಯಲಿದ್ದಾರೆ
>
> **ಯತೀಂದ್ರ ಸಿದ್ದರಾಮಯ್ಯ**, ವಿಧಾನಪರಿಷತ್ ಸದಸ್ಯ

‘ಹೈಕಮಾಂಡ್ ಮೌನವೇ ಸೂಚನೆ’

ಮೈಸೂರು: ‘ಪಕ್ಷದೊಳಗೆ ಮುಖ್ಯಮಂತ್ರಿ ಅಧಿಕಾರ ಹಂಚಿಕೆಯ ಪ್ರಸ್ತಾವವೇ ನಡೆದಿಲ್ಲ. ಹೈಕಮಾಂಡ್ ಸುಮ್ಮನಿದೆ ಎಂದರೆ ಅದರಲ್ಲಿ ಬದಲಾವಣೆಗಳಿಲ್ಲ ಎಂದರ್ಥ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಮುಖ್ಯಮಂತ್ರಿ ಕುರ್ಚಿಯ ಬಗ್ಗೆ ಗೊಂದಲ ಇದ್ದಿದ್ದರೆ ಶಾಸಕರು ಸಿಎಲ್‌ಪಿ ಸಭೆಯಲ್ಲಿ ಹೇಳುತ್ತಿದ್ದರು. ಯಾರೊಬ್ಬರೂ ಈ ಬಗ್ಗೆ ಮಾತನಾಡಿಲ್ಲ. ಯತೀಂದ್ರ ಅವರ ಹೇಳಿಕೆ ವೈಯಕ್ತಿಕ’ ಎಂದರು.

▶6

ಜಲಸಂಪನ್ಮೂಲ ಇಲಾಖೆ
ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ ಶಂಕುಸ್ಥಾಪನೆ
ಹಾಗೂ ನವಲಗುಂದ ವಿಧಾನಸಭಾ ಕ್ಷೇತ್ರದ
ವಿವಿಧ ಕಾಮಗಾರಿಗಳ ಉದ್ಘಾಟನಾ, ಭೂಮಿಪೂಜಾ ಸಮಾರಂಭ

ದಿನಾಂಕ: 08-02-2026 | ಸಮಯ: ಮಧ್ಯಾಹ್ನ 3:00 ಗಂಟೆಗೆ
ಸ್ಥಳ: ಶಿರಗುಪ್ಪಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ

ಶಂಕುಸ್ಥಾಪನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಬಸವರಾಜ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ, ಬೆಂಗಳೂರು ನಗರಾಭಿವೃದ್ಧಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಪ್ರಹ್ಲಾದ ಜೋಶಿ
ಮಾನ್ಯ ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವರು ಭಾರತ ಸರ್ಕಾರ, ನವದೆಹಲಿ

ಗೌರವ ಉಪಸ್ಥಿತಿ
ಶ್ರೀ ಸಂತೋಷ ಎಸ್. ಲಾಡ್
ಮಾನ್ಯ ಕಾರ್ಮಿಕ ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ಎಚ್.ಕೆ. ಪಾಟೀಲ
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರು

ಗೌರವ ಅತಿಥಿಗಳು
ಶ್ರೀ ಬಸವರಾಜ ಬೊಮ್ಮಾಯಿ
ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಲೋಕಸಭಾ ಸದಸ್ಯರು, ಹಾವೇರಿ
ಶ್ರೀ ಅಬ್ಬಯ್ಯ ಪ್ರಸಾದ
ಮಾನ್ಯ ಅಧ್ಯಕ್ಷರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಮಾನ್ಯ ಶಾಸಕರು, ವಿಧಾನ ಸಭೆ, ಹುಬ್ಬಳ್ಳಿ-ಧಾರವಾಡ (ಪೂರ್ವ)

ವಿಶೇಷ ಅತಿಥಿಗಳು
ಶ್ರೀ ಸಲೀಂ ಅಹ್ಮದ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್ತು

ಅಧ್ಯಕ್ಷತೆ
ಶ್ರೀ ಎನ್. ಹೆಚ್. ಕೋನರಡ್ಡಿ
ಮಾನ್ಯ ಶಾಸಕರು, ವಿಧಾನಸಭೆ, ನವಲಗುಂದ

ಧಾರವಾಡ ಹಾಗೂ ಗದಗ ಜಿಲ್ಲೆಯ ಎಲ್ಲಾ ಮಾನ್ಯ ಸಚಿವರು, ಸಂಸದರು, ವಿಧಾನಸಭಾ ಮತ್ತು ವಿಧಾನಪರಿಷತ್ತಿನ ಸದಸ್ಯರು ಹಾಗೂ ಎಲ್ಲಾ ಆಯೋಗ ಹಾಗೂ ನಿಗಮ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಆತ್ಮೀಯ ಸ್ವಾಗತ

ಸೌಜನ್ಯದ ಉಪಸ್ಥಿತಿ
ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
ಶ್ರೀ ಗೌರವ್ ಗುಪ್ತ, ಭಾ.ಆ.ಸೇ.
ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ

ಸ್ವಾಗತ ಬಯಸುವವರು
ಶ್ರೀ ಕೃಷ್ಣಮೂರ್ತಿ ಬಿ. ಕುಲಕರ್ಣಿ, ಕೆ.ಇ.ಎಸ್
ಮಾನ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ರಾಜೇಶ ಅಮ್ಮಿನಭಾವಿ, ಕೆ.ಇ.ಎಸ್.
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು

ಜಲವೇ ಜಗದ ಜೀವಾಳ | ಜಲವೇ ಅಮೂಲ್ಯ ಸಂಪತ್ತು | ಜಲ ಉಳಿಸಿ | ಜಲ ರಕ್ಷಿಸಿ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಬಿಹಾರದಲ್ಲಿ ನಗರದ ನಾಲ್ವರ ಆತ್ಮಹತ್ಯೆ

ಬಾಲಕನ ಸಾವಿನಿಂದ ಮನನೊಂದಿದ್ದ ಕುಟುಂಬ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಒಂದೇ ಕುಟುಂಬದ ನಾಲ್ವರು, ಬಿಹಾರ ಪ್ರವಾಸಕ್ಕೆ ತೆರಳಿದ್ದ ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಾಲಕನ ಕೊಲೆ ಪ್ರಕರಣದ ಆರೋಪಿ ನಾಗಪ್ರಸನ್ನ (55), ಅವರ ತಾಯಿ ಸುಮಂಗಲಾ (78), ಸಹೋದರಿಯರಾದ ಶಿಲ್ಪಾ (48) ಹಾಗೂ ಶ್ರುತಿ (43) ಆತ್ಮಹತ್ಯೆ ಮಾಡಿಕೊಂಡವರು. ನಾಲ್ವರೂ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ತುಮಕೂರಿನ ನಾಗಪ್ರಸನ್ನ ಕುಟುಂಬವು 20 ವರ್ಷಗಳಿಂದ ಸೋಲದೇವನಹಳ್ಳಿಯ ವಿನಾಯಕ ಬಡಾವಣೆಯಲ್ಲಿ ನೆಲಸಿತ್ತು.

ಅನ್‌ಲೈನ್ ಆಟದ ವ್ಯಸನಿಯಾಗಿದ್ದ ಸಹೋದರಿಯ ಪುತ್ರನನ್ನು ಕಳೆದ ಆಗಸ್ಟ್‌ನಲ್ಲಿ ಕೊಲೆ ಮಾಡಿದ್ದ ಆರೋಪಿ ನಾಗಪ್ರಸನ್ನ ಸೋಲದೇವನಹಳ್ಳಿ ಠಾಣೆಯ ಪೊಲೀಸರಿಗೆ ಶರಣಾಗಿದ್ದ. ಠಾಣಾ ವ್ಯಾಪ್ತಿಯ ಕುಂಬಾರಹಳ್ಳಿಯ ವಿನಾಯಕ ಬಡಾವಣೆಯಲ್ಲಿ ಕೃತ್ಯ ನಡೆದಿತ್ತು. ಬಾಲಕನ ಸಾವಿನ ಹಿನ್ನೆಲೆಯಲ್ಲಿ ಮನನೊಂದಿದ್ದ ಕುಟುಂಬಸ್ಥರು ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಹೇಳಲಾಗಿದೆ.

'ಮೃತದೇಹಗಳ ಪಕ್ಕದಲ್ಲಿ ನಿದ್ರೆಯ ಮಾತ್ರೆಗಳು ಸಿಕ್ಕಿವೆ' ಎಂದು ಮೂಲಗಳು ಹೇಳಿವೆ.

ಬಾಲಕನ ಕತ್ತುಸೀಳಿ ಕೊಲೆ: 'ಶಿಲ್ಪಾ ಅವರ ಪುತ್ರ ಅಮೋಘ ಕೀರ್ತಿ (14) ತನ್ನ ಮಾವ, ಆರೋಪಿ ನಾಗಪ್ರಸನ್ನ ಮನೆಯಲ್ಲಿ ಎಂಟು ತಿಂಗಳಿಂದ ನೆಲಸಿದ್ದ. ಮನೆಯಲ್ಲಿದ್ದಾಗ ಆನ್‌ಲೈನ್‌ನಲ್ಲಿ ಫ್ರೀಫೈರ್ ಆಟವಾಡುತ್ತಿದ್ದ. ಆನ್‌ಲೈನ್ ಆಟದ ವ್ಯಸನಿಯಾಗಿದ್ದ. ಆನ್‌ಲೈನ್‌ನಲ್ಲಿ ಆಟವಾಡದಂತೆ ನಾಗಪ್ರಸನ್ನ ಪದೇ ಪದೇ ಹೇಳುತ್ತಿದ್ದ. ಅಲ್ಲದೇ ಮಾವನ ಬಳಿ ಅಮೋಘ ಕೀರ್ತಿ ಹಣವನ್ನೂ ಕೇಳುತ್ತಿದ್ದ. ಸಹೋದರಿಯ ಪುತ್ರನ ವರ್ತನೆಯಿಂದ ಆರೋಪಿ ಬೇಸರಗೊಂಡಿದ್ದ. ಕಳೆದ ಆಗಸ್ಟ್ 7ರಂದು ರಾತ್ರಿ ನಿದ್ರೆಯಲ್ಲಿದ್ದ ಬಾಲಕನ ಕತ್ತುಸೀಳಿ ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದ' ಎಂದು ಮೂಲಗಳು ತಿಳಿಸಿವೆ.

ಆತ್ಮಹತ್ಯೆಗೂ ಯತ್ನಿಸಿದ್ದ ಆರೋಪಿ: ಕೃತ್ಯ ಎಸಗಿದ ಬಳಿಕ ಆತಂಕಕ್ಕೆ ಒಳಗಾದ ನಾಗಪ್ರಸನ್ನ ತಾನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ. ನಂತರ, ಆತ್ಮಹತ್ಯೆ ಆಲೋಚನೆ ಬಿಟ್ಟು ಮೆಜೆಸ್ಟಿಕ್‌ಗೆ ತೆರಳಿ ಅಲ್ಲಿಂದ ಬೇರೆ ರಾಜ್ಯಕ್ಕೆ ಪರಾರಿಯಾಗಲು ಮುಂದಾಗಿದ್ದ. ಪ್ರಯಾಣಕ್ಕೆ ಹಣವಿಲ್ಲದೇ ಮೆಜೆಸ್ಟಿಕ್ ನಲ್ಲೇ ನಾಲ್ಕು ದಿನ ಕಾಲ ಕಳೆದಿದ್ದ. ನಂತರ, ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದ.

'ಸಹೋದರಿ ಶಿಲ್ಪಾ ಅವರೇ ನ್ಯಾಯಾಲಯಕ್ಕೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಜಾಮೀನು ಮಂಜೂರು ಮಾಡಿತ್ತು. ಅದಾದ ಮೇಲೆ ಕುಟುಂಬಸ್ಥರು ದೇವಸ್ಥಾನಕ್ಕೆ ತೆರಳಿದ್ದರು. ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕುರಿತು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪತಿ ಸಾವು: ವಿಷಯ ತಿಳಿದು ಪತ್ನಿ ಆತ್ಮಹತ್ಯೆ

ಮೀನಾ, ರಾಜು

ಪೀಣ್ಯ ದಾಸರಹಳ್ಳಿ: ನೆಲಮಂಗಲದ ಜಕ್ಕಸಂದ್ರದ ಮನೆಯಲ್ಲಿ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ಪತಿ ಮೃತಪಟ್ಟ ಮಾಹಿತಿ ತಿಳಿದು, ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ರಾಜು (48) ಅವರು ಮೃತಪಟ್ಟರೆ, ಅವರ ಪತ್ನಿ ಮೀನಾ (42) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್‌ನ ದಂಪತಿ ಜಕ್ಕಸಂದ್ರದಲ್ಲಿ ನೆಲಸಿದ್ದರು. ಶುಕ್ರವಾರ ಸಂಜೆ ಪತಿ ರಾಜು ಮನೆಯಲ್ಲಿಯೇ ಇದ್ದರು. ಸ್ನಾನ ಮಾಡಲು ಬಾತ್‌ರೂಂಗೆ ತೆರಳಿದ್ದರು. ಒಂದು ಗಂಟೆಯಾದರೂ ಹೊರಕ್ಕೆ ಬಾರದೇ ಇದ್ದಾಗ ಬಾಗಿಲು ಒಡೆದು ಪರಿಶೀಲಿಸಿದಾಗ ಕುಸಿದು ಬಿದ್ದಿರುವುದು ಗೊತ್ತಾಗಿತ್ತು. ಮನೆಯಲ್ಲಿದ್ದ ಪುತ್ರ, ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದ ಮಧ್ಯೆ ರಾಜು ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

ಮೀನಾ ಅವರು ಬ್ಯಾಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಮನೆಯತ್ತ ತೆರಳುವಾಗ ಪತಿ ಮೃತಪಟ್ಟ ಮಾಹಿತಿ ತಿಳಿದು, ಮನೆಯ ಸ್ವಲ್ಪ ದೂರದಲ್ಲಿಯೇ ಇರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮರಣ ಪತ್ರ ಪತ್ತೆ: 'ನನ್ನ ಪತಿಯನ್ನು ಬಿಟ್ಟು ಒಂದು ನಿಮಿಷವೂ ನಾನು ಬದುಕಿರುವುದಿಲ್ಲ. ಯಾರಿಗೆ ಏನು ಕೊಡಬೇಕೋ ಅದನ್ನು ಕೊಟ್ಟುಬಿಡಿ. ನನ್ನನ್ನು ಕ್ಷಮಿಸಿ' ಎಂದು ಮೀನಾ ಅವರ ಬರೆದಿಟ್ಟಿರುವ ಮರಣ ಪತ್ರ ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

8.04 ಎಕರೆ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹27.72 ಕೋಟಿ ಅಂದಾಜು ಮೌಲ್ಯದ ಒಟ್ಟು 8.04 ಎಕರೆ ಸರ್ಕಾರಿ ಭೂಮಿಯನ್ನು ಶನಿವಾರ ತೆರವುಗೊಳಿಸಿ ಜಿಲ್ಲಾಡಳಿತದ ವಶಕ್ಕೆ ಪಡೆಯಲಾಯಿತು.

ವಿವಿಧ ತಾಲ್ಲೂಕು ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗೋಮಾಳ, ಸರ್ಕಾರಿ ಖರಾಬು ಕೆರೆ, ಮುಪತ್ತು ಕಾವಲ್, ಸರ್ಕಾರಿ ಬಂಜರು, ಖರಾಬು ತೋಪು, ಹದ್ದುಗಿಡದಹಳ್ಳ, ಇನಾಂತಿ ಜಮೀನು ಹಾಗೂ ಗುಂಡುತೋಪು ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಖಾಜಿಸೊಣ್ಣೇನಹಳ್ಳಿ ಗ್ರಾಮದಲ್ಲಿನ ₹6 ಕೋಟಿ ಮೌಲ್ಯದ 1.30 ಎಕರೆ ಗೋಮಾಳ, ಕಣ್ಣೂರು ಗ್ರಾಮದ ₹2 ಕೋಟಿ ಮೌಲ್ಯದ 22 ಗುಂಟೆ ಗೋಮಾಳ, ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಎಸ್. ಬಿಂಗೀಪುರ ಗ್ರಾಮದಲ್ಲಿರುವ ಅಂದಾಜು ₹9 ಕೋಟಿ ಮೌಲ್ಯದ 1.20 ಎಕರೆ ಸರ್ಕಾರಿ ಕೆರೆ, ಸರ್ಜಾಪುರ ಗ್ರಾಮದಲ್ಲಿರುವ ₹45 ಲಕ್ಷ ಅಂದಾಜು ಮೌಲ್ಯದ 0.13 ಗುಂಟೆ ಮುಪತು ಕಾವಲ್ ತೆರವು ಮಾಡಲಾಗಿದೆ.

ತಾವರೆಕೆರೆ ಹೋಬಳಿ ಶೇಷಗಿರಿಪುರದ ಅಂದಾಜು ₹15 ಲಕ್ಷ ಮೌಲ್ಯದ 20 ಗುಂಟೆ ಬಂಜರು, ಜಾಲ ಹೋಬಳಿ ಬಾಗಲೂರಿನಲ್ಲಿ ಒಂದು ಎಕರೆ ಖರಾಬ್ ತೋಪು, ಹೆಸರಘಟ್ಟ ಹೋಬಳಿ ಇಟ್ಟಗಲಾಪುರ ಗ್ರಾಮದ ₹64 ಲಕ್ಷ ಮೌಲ್ಯದ 32 ಗುಂಟೆ ಹದ್ದುಗಿಡದಹಳ್ಳ, ಸೊಣ್ಣೆನಹಳ್ಳಿ ಗ್ರಾಮದಲ್ಲಿರುವ ₹48 ಲಕ್ಷ ಅಂದಾಜು ಮೌಲ್ಯದ 24 ಗುಂಟೆ ಇನಾಂತಿ ಜಮೀನು, ಉತ್ತರ ತಾಲ್ಲೂಕು ದಾಸನಪುರ ಹೋಬಳಿ ಬೈಯಂಡಹಳ್ಳಿ ಗ್ರಾಮದಲ್ಲಿರುವ ಅಂದಾಜು ₹5 ಮೌಲ್ಯದ 1.03 ಎಕರೆ ಗುಂಡುತೋಪು ತೆರವುಗೊಳಿಸಲಾಗಿದೆ ಎಂದರು.

ಟೆಂಡರ್ ಹಾಗೂ ಬಹಿರಂಗ ಹರಾಜು

ವಲಯ ಕೃಷಿ ಸಂಶೋಧನಾ ಕೇಂದ್ರ, ಕೃ.ವಿ.ವಿ., ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ ದಿನಾಂಕ: **10–02–2026 ರಂದು ಮಂಗಳವಾರ ಬೆಳಗ್ಗೆ 10.30 ಗಂಟೆಗೆ 2025–26 ನೇ ಸಾಲಿನ ಮಾವಿನ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಮತ್ತು ಬಹಿರಂಗ ಹರಾಜು** ಮೂಲಕ ಮಾರಾಟ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರ ಕಛೇರಿ, ವ.ಕೃ.ಸಂ.ಕೇ., ಜಿ.ಕೆ.ವಿ.ಕೆ ಅಥವಾ **ದೂರವಾಣಿ ಸಂಖ್ಯೆ: 080–23330153/ ವಿಸ್ತರಣೆ: 315** ಇಲ್ಲಿ ಸಂಪರ್ಕಿಸಿ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ 37–ಸಿಡಬ್ಲ್ಯೂಎಂ–ಯುಬಿಎಲ್‌ಎಸ್–2025–26 ದಿನಾಂಕ 03.02.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿಯ ಕ್ಯಾರಿಯೇಜ್	ರೂ. 35,40,000 (ಜಿಎಸ್‌ಟಿ ಸೇರಿದಂತೆ)

ದುರಸ್ತಿ ವರ್ಕ್‌ಶಾಪ್‌ನಲ್ಲಿ ಶೂನ್ಯ–ಮೌಲ್ಯದ ವೇಸ್ಟ್‌ನ ಸಂಗ್ರಹ, ಸಾಗಣೆ ಮತ್ತು ವಿಲೇವಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–02–2026 ರಂದು 15:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು–II, ಹುಬ್ಬಳ್ಳಿ

ಪಿಯುಬಿ/881/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ವೈ/ಇ–29/2025–26/88 ದಿನಾಂಕ: 02.02.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಮೈಸೂರು ಮತ್ತು	ರೂ. 22,44,467.64/–

ಅರಸೀಕೆರೆಯ ಎಲ್ಲಾ ಪಿಟ್ ಲೈನ್‌ಗಳಲ್ಲಿ ಹೊಸ ಬೆಳಕಿನ ವ್ಯವಸ್ಥೆಗಳನ್ನು ಒದಗಿಸುವ ಮೂಲಕ ಬೆಳಕಿನ ಸುಧಾರಣೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23–02–2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ ಜಿ/ಮೈಸೂರು

ಪಿಯುಬಿ/883/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-378/4009/2025–26 ದಿನಾಂಕ: 07.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Rosewood Realty Solutions LLP	ಬೆಂಗಳೂರು ಉತ್ತರ	ಜಾಲ	ಸಾತನೂರು	128/2(ಪಿ)	6–18.50	ವ್ಯವಸಾಯ	ವಾಣಿಜ್ಯ
					129(ಪಿ)	20–36.5		
					ಒಟ್ಟು	27–15		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವ್ಯವಸಾಯ ಮಾಡಲು ಸಾಧ್ಯವಾಗುತ್ತಿಲ್ಲವೆಂದು, ಪ್ರಶ್ನಿತ ಜಮೀನಿನ ಸುತ್ತಮುತ್ತಲೂ ವಾಣಿಜ್ಯ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಾಣಿಜ್ಯ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಭಾರತೀಯ ಸಾಂಖ್ಯಿಕ ಸಂಸ್ಥೆ

203, ಬಿ.ಟಿ.ರೋಡ್, ಕೋಲ್ಕತ್ತಾ–700108.

ದಾಖಲಾತಿ ಪ್ರಕಟಣೆ

ಶೈಕ್ಷಣಿಕ ಸಾಲು 2026–27

ಭಾರತೀಯ ಸಾಂಖ್ಯಿಕ ಸಂಸ್ಥೆಯು ವಿವಿಧ ಪದವಿಪೂರ್ವ (Undergraduate), ಸ್ನಾತಕೋತ್ತರ (Postgraduate) ಪದವಿ/ಡಿಪ್ಲೋಮಾ ಕೋರ್ಸ್‌ಗಳು ಮತ್ತು ಸಂಶೋಧನಾ ಫೆಲೋಶಿಪ್ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ದಾಖಲಾತಿ ವಿವರ, ಮಾಹಿತಿ ಕೈಪಿಡಿ ಮತ್ತು ನೀತಿ ದಾಖಲೆಗಳ ಹೆಚ್ಚಿನ ವಿವರಗಳಿಗೆ ಸಂಸ್ಥೆಯ ಅಧಿಕೃತ ವೆಬ್‌ಸೈಟ್ **https://admission.isical.ac.in/** ಪರಿಶೀಲಿಸಬಹುದು.

ಪ್ರತಿಯೊಂದು ಕಾರ್ಯಕ್ರಮದ ವ್ಯಾಪ್ತಿ, ಅವಧಿ, ಅರ್ಹತೆ, ಸ್ಟೈಫಂಡ್/ಫೆಲೋಶಿಪ್, ಅರ್ಜಿ ಶುಲ್ಕ, ಬೋಧನಾ ಶುಲ್ಕ ಇತ್ಯಾದಿಗಳ ಮಾಹಿತಿಯು ಮಾಹಿತಿ ಕೈಪಿಡಿಯಲ್ಲಿ ಲಭ್ಯವಿದೆ.

ಅಭ್ಯರ್ಥಿಗಳು ಸಂಸ್ಥೆಯ ಅಧಿಕೃತ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಎಲ್ಲಾ ಕೋರ್ಸ್‌ಗಳಿಗೆ ಆನ್‌ಲೈನ್ ಅರ್ಜಿ (ಬ್ಯಾಚುಲರ್ ಆಫ್ ಸ್ಟ್ಯಾಟಿಸ್ಟಿಕಲ್ ಡೇಟಾ ಸೈನ್ಸ್ (BSDS) ಕೋರ್ಸ್ ಹೊರತುಪಡಿಸಿ)	: 12 ಫೆಬ್ರವರಿ – 13 ಮಾರ್ಚ್, 2026.
BSDS ಕೋರ್ಸ್‌ಗೆ ಆನ್‌ಲೈನ್ ಅರ್ಜಿ	: 28 ಏಪ್ರಿಲ್ – 28 ಮೇ, 2026.
ಎಲ್ಲಾ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ (BSDS ಕೋರ್ಸ್ ಹೊರತುಪಡಿಸಿ)	: 10 ಮೇ, 2026

cbc39103/11/0014/2526

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–560002

ಸಂ: ಮು.ನ.ಯೋ/ಜಿಬಿಎ/ಪಿಆರ್/CLU-2/2025–26 ದಿನಾಂಕ: 06.02.2026

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14ಎ–(1)(ಸಿ) ರಡಿಯಲ್ಲಿ] ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ (ಹೈ–ಟೆಕ್) ವಲಯದಿಂದ ವಸತಿ ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	M/s.Kesani Constructions	ಬೆಂಗಳೂರು ದಕ್ಷಿಣ	ಬೇಗೂರು	ನಾಗನಾಥ ಪುರ	49/1	2ಎ – 00ಗುಂ	ಕೈಗಾರಿಕೆ (ಹೈಟೆಕ್)	ವಸತಿ

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ/ಅಪಾರ್ಟ್‌ಮೆಂಟ್ ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ಕೈಗಾರಿಕೆ (Hi-Tech)'** ವಲಯದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/–
ಮುಖ್ಯ ನಗರ ಯೋಜಕರು,
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.

ಅಪಘಾತ: ಯುವತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಹಾಗೂ ಬೈಕ್ ನಡುವೆ ಕೆ.ಆರ್.ಪುರ ಮೆಟ್ರೊ ನಿಲ್ದಾಣದ ಬಳಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಯುವತಿ ಮೃತಪಟ್ಟಿದ್ದಾರೆ.

ಹನ್ನಾ ಹಿಂಕಾ (20) ಮೃತ ಯುವತಿ. ಮಣಿಪುರದ ಹನ್ನಾ ಹಿಂಕಾ, ಮಾರತ್‌ಹಳ್ಳಿಯಲ್ಲಿ ವಾಸವಾಗಿದ್ದರು. ಸಲೂನ್‌ನಲ್ಲಿ ಕೆಲಸ ಮಾಡುತ್ತಿದ್ದ ಅವರು ಸಂಬಂಧಿ ಚಿನ್ನು ಸಬಾ ಜತೆ ಬೈಕ್‌ನಲ್ಲಿ ಹೆಬ್ಬಾಳಕ್ಕೆ ತೆರಳುತ್ತಿದ್ದರು. ಆಗ ಅಪಘಾತ ನಡೆದಿದೆ ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಬಸ್, ಹನ್ನಾ ಅವರ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಆಗ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಹನ್ನಾ ಮೇಲೆ ಬಸ್‌ನ ಮುಂದಿನ ಚಕ್ರಗಳು ಹರಿದಿವೆ. ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬೈಕ್ ಚಾಲನೆ ಮಾಡುತ್ತಿದ್ದ ಚಿನ್ನು ಸಬಾ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕ ಅತಿವೇಗವಾಗಿ ಬಸ್ ಚಾಲನೆ ಮಾಡುತ್ತಿದ್ದ. ಅದೇ ಘಟನೆಗೆ ಕಾರಣವಾಗಿದೆ. ಬಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಪತ್ನಿಗೆ ಗುಂಡು: ಮತ್ತೊಬ್ಬನ ಸೆರೆ

ಪತ್ನಿಗೆ ಪಿಸ್ತೂಲ್‌ನಿಂದ ಗುಂಡು ಹಾರಿಸಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಮಾಗಡಿ ರಸ್ತೆ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಅಭಿಮನ್ಯು ಸಿಂಗ್ ಬಂಧಿತ ಆರೋಪಿ. ಪತಿ ಬಾಲಮುರುಗನ್ ಅವರಿಗೆ ಪಿಸ್ತೂಲ್ ಖರೀದಿಸಲು ಅಭಿಮನ್ಯು ಸಿಂಗ್ ನೆರವು ನೀಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು. ಡಿ.23ರ ಸಂಜೆ ಪತ್ನಿ ಭುವನೇಶ್ವರಿಗೆ ಗುಂಡು ಹಾರಿಸಿ ಪತಿ ಬಾಲಮುರುಗನ್ ಕೊಲೆ ಮಾಡಿದ್ದರು.

'ಆಭರಣ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಭಿಮನ್ಯು ಸಿಂಗ್ ಅವರಿಗೆ ಬಾಲಮುರುಗನ್ ಪರಿಚಯವಾಗಿತ್ತು. ಭುವನೇಶ್ವರಿ ಕೆಲಸ ಮಾಡುತ್ತಿದ್ದ ಬ್ಯಾಂಕ್ ಸಮೀಪದಲ್ಲಿದ್ದ ಜಿಮ್‌ಗೆ ಹೋಗುತ್ತಿದ್ದ ಅಭಿಮನ್ಯು ಸಿಂಗ್ ಅವರನ್ನು ಕೃತ್ಯ ಎಸಗಲು ಬಾಲಮುರುಗನ್ ಬಳಸಿಕೊಂಡಿದ್ದರು. ಭುವನೇಶ್ವರಿಯ ಚಲನವಲನಗಳ ಕುರಿತು ಬಾಲಮುರುಗನ್ ಅವರಿಗೆ ಅಭಿಮನ್ಯು ಮಾಹಿತಿ ನೀಡುತ್ತಿದ್ದರು. ಇಬ್ಬರೂ ಬಿಹಾರಕ್ಕೆ ತೆರಳಿ ಎರಡು ಪಿಸ್ತೂಲ್ ಖರೀದಿಸಿ ತಂದಿದ್ದರು' ಎಂದು ಪೊಲೀಸರು ಹೇಳಿದರು.

'ಒಂದು ಪಿಸ್ತೂಲ್‌ನ್ನು ತಮಿಳುನಾಡಿನ ಸೇಲಂ ಮೌಳೇಶ್ ಎಂಬುವವರಿಗೆ ನೀಡಿ ಪತ್ನಿಯ ಕೊಲೆಗೆ ಸುಪಾರಿ ನೀಡಿದ್ದರು. ನಗರಕ್ಕೆ ಬಂದಿದ್ದ ಮೌಳೇಶ್, ಬಾಲಮುರುಗನ್ ಅವರ ಸೂಚನೆಯಂತೆ ಭುವನೇಶ್ವರಿ ಕೆಲಸ ಮಾಡುತ್ತಿದ್ದ ಸ್ಥಳ ಮತ್ತು ಓಡಾಡುವ ರಸ್ತೆಗಳಲ್ಲಿ ಕೆಲವು ದಿನ ಚಲನವಲನ ಗಮನಿಸಿದ್ದರು. ಆದರೆ, ಕೃತ್ಯ ಎಸಗುವ ದಿನ ಮೌಳೇಶ್ ಕೈಕೊಟ್ಟು ವಾಪಸ್ ತಮಿಳುನಾಡಿಗೆ ಹಿಂದಿರುಗಿದ್ದರು. ಕೊನೆಗೆ ಬಾಲಮುರುಗನ್ ಅವರೇ ಪತ್ನಿಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ್ದರು. ಬಳಿಕ ಠಾಣೆಗೆ ತೆರಳಿ ಶರಣಾಗಿದ್ದರು' ಎಂದು ಪೊಲೀಸರು ತಿಳಿಸಿದರು.

ಮಾದಕ ವಸ್ತು: ವಿಶೇಷ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಿಭಾಗ ವ್ಯಾಪ್ತಿಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ದ್ರವ್ಯಗಳ ತಯಾರಿಕೆ, ಸಂಗ್ರಹಣೆ, ಸಾಗಣೆ ಹಾಗೂ ಮಾರಾಟ ತಡೆಯುವ ಸಲುವಾಗಿ ಪೊಲೀಸರು ಶನಿವಾರ ವಿಶೇಷ ಕಾರ್ಯಾಚರಣೆ ನಡೆಸಿದರು.

ಕಾರ್ಯಾಚರಣೆಯಲ್ಲಿ ಒಟ್ಟು 45 ಕಾರ್ಖಾನೆಗಳು, 165 ವರ್ಕ್ ಶಾಪ್‌ಗಳು ಮತ್ತು 116 ಗೋದಾಮುಗಳ ತಪಾಸಣೆ ಮತ್ತು ಶೋಧ ನಡೆಸಿ, ಮಾಲೀಕರಿಂದ ಮಾಹಿತಿ ಪಡೆದುಕೊಳ್ಳಲಾಯಿತು. ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ದಾಖಲೆಗಳ ಪರಿಶೀಲನೆ ಮಾಡಲಾಯಿತು.

ಮಾದಕ ದ್ರವ್ಯಗಳ ತಯಾರಿಕೆ, ಸಂಗ್ರಹಣೆ, ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕಂಡು ಬಂದಲ್ಲಿ, ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ನಗರದ ನಿರ್ಜನ ಪ್ರದೇಶಗಳು, ಪಾಳು ಬಿದ್ದ ಮನೆಗಳು ಸೇರಿ ಹಲವೆಡೆ ಸಿಸಿಬಿಯ ಆರು ಘಟಕಗಳಿಂದ ತಪಾಸಣೆ ನಡೆಸಲಾಗುತ್ತಿದೆ. ಔಷಧ ಅಂಗಡಿ, ಹಳೆ ಗೋದಾಮುಗಳು, ಸಣ್ಣ ಅಂಗಡಿಗಳು, ವಸತಿ ಗೃಹ, ಪೇಯಿಂಗ್ ಗೆಸ್ಟ್ (ಪಿ.ಜಿ), ರೌಡಿಶೀಟರ್‌ಗಳ ಮನೆಗಳು ಸೇರಿ ಅನುಮಾನಾಸ್ಪದ ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ. ಮಾದಕ ಪದಾರ್ಥಗಳು ಪತ್ತೆಯಾದರೆ ಸ್ಥಳೀಯ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ.

ಕಳ್ಳತನ, ದರೋಡೆ ಹಾಗೂ ಇತರೆ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೂರ್ವ ವಿಭಾಗದ ಠಾಣಾ ವ್ಯಾಪ್ತಿಯಲ್ಲಿ ಆಭರಣ ಅಂಗಡಿಗಳಿಗೆ ಪೊಲೀಸರು ಭೇಟಿ ನೀಡಿ, ಭದ್ರತಾ ಪರಿಶೀಲನೆ ಹಾಗೂ ಮಾಲೀಕರೊಂದಿಗೆ ಸಭೆ ನಡೆಸಿದರು. ಒಟ್ಟು 228 ಆಭರಣ ಅಂಗಡಿಗಳ ಪರಿಶೀಲನೆ ನಡೆಸಲಾಯಿತು.

ಭದ್ರತಾ ಸಿಬ್ಬಂದಿಯ ವಿಳಾಸ ತಿಳಿದುಕೊಂಡಿರಬೇಕು, ಸಿ.ಸಿ.ಟಿ.ವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿರಬೇಕು ಹಾಗೂ ಭದ್ರತಾ ವ್ಯವಸ್ಥೆ ಸರಿಯಾಗಿರಬೇಕು ಎಂದು ಮಾಲೀಕರಿಗೆ ಸೂಚನೆ ನೀಡಿದರು.

ವಾರಸುದಾರರಿಗೆ 145 ಮೊಬೈಲ್ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಿಭಾಗದ ಪೊಲೀಸರು ಜನವರಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ತಂತ್ರಾಂಶದ ಮೂಲಕ ₹22.34 ಲಕ್ಷ ಮೌಲ್ಯದ 172 ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಿದ್ದಾರೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ಇ–ಲಾಸ್ಟ್ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ಪೊಲೀಸರು ತನಿಖೆ ನಡೆಸಿ ಮೊಬೈಲ್ ಪತ್ತೆ ಹಚ್ಚುತ್ತಾರೆ.

ಪತ್ತೆ ಮಾಡಲಾದ 172 ಮೊಬೈಲ್ ಪೈಕಿ 145 ಮೊಬೈಲ್‌ಗಳನ್ನು ಸಂಬಂಧಿಸಿದ ವಾರಸುದಾರರಿಗೆ ಆಯಾ ಠಾಣಾ ವ್ಯಾಪ್ತಿಯಲ್ಲಿ ಹಸ್ತಾಂತರಿಸಲಾಯಿತು.

ಹಲಸೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 6, ಇಂದಿರಾನಗರ 30, ಬೈಯಪ್ಪನಹಳ್ಳಿ 3, ಜೆ.ಬಿ.ನಗರ 10, ಪುಲಕೇಶಿ ನಗರ 5, ಭಾರತಿನಗರ 4, ಶಿವಾಜಿನಗರ 4, ಕಮರ್ಷಿಯಲ್ ಸ್ಟ್ರೀಟ್ 6, ಬಾಣಸವಾಡಿ 25, ಆರ್.ಎಂ.ನಗರ 4, ಹೆಣ್ಣೂರು 28, ಕೆ.ಜಿ. ಹಳ್ಳಿ 20, ಡಿ.ಜೆ.ಹಳ್ಳಿ 3, ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ 24 ಮೊಬೈಲ್ ವಶಪಡಿಸಿಕೊಳ್ಳಲಾಗಿದ್ದು, ಇವುಗಳ ಮೌಲ್ಯ ₹22,94,651. ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬೆಂಗಳೂರು ದಕ್ಷಿಣ ಜಿಲ್ಲೆ

ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ–562159

Phone: 080-27274108/27276074, E-Mail: ka.ramanagara.dudc@gmail.com

ಸಂ.: ರಾಜಿನಕೋ/ಎಂಯುಎನ್(2)/ಸಿಆರ್/101/2025–26 ದಿನಾಂಕ: 03.02.2026

ಟೆಂಡರ್ ಅಧಿಸೂಚನೆ

ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ 02 ಸಂಖ್ಯೆಯ ಡಾಟಾ ಎಂಟ್ರಿ ಆಪರೇಟರ್ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ನೋಂದಾಯಿತ ಅರ್ಹ ಸಂಸ್ಥೆ/ ಏಜೆನ್ಸಿಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ ರೂ.ಗಳಲ್ಲಿ
1	ಡಾಟಾ ಎಂಟ್ರಿ ಆಪರೇಟರ್–02 ಸಂಖ್ಯೆ (ಇಂಡೆಂಟ್ ನಂ.DMA/2025-26/SE7189)	6,54,523/-	16,363/-

ಆಸಕ್ತಿವುಳ್ಳ ನೋಂದಾಯಿತ ಅರ್ಹ ಮಾನವ ಸಂಪನ್ಮೂಲ ಸಂಸ್ಥೆ/ ಏಜೆನ್ಸಿಗಳು ಸೇವೆ ಒದಗಿಸಲು ಸೇವಾ ಶುಲ್ಕ (Service Charge) ನಮೂದಿಸಿ, ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸುವುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.02.2026 ಸಂಜೆ 5.30 ಗಂಟೆ** ಆಗಿರುತ್ತದೆ. ಟೆಂಡರ್ ತೆರೆಯುವ **ದಿನಾಂಕ: 21.02.2026 ಪೂರ್ವಾಹ್ನ 11.30ಕ್ಕೆ** ಇಎಂಡಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಕೆ.ಪಿ.ಪಿ.ಪಿ. ಮೂಲಕವೇ ಪಾವತಿಸುವುದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– **ಯೋಜನಾ ನಿರ್ದೇಶಕರು**
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ

DIPR/BSD/620/SA/2025-26

ನಿಧನ ವಾರ್ತೆ

ಗೋವಿಂದಪ್ಪ



ಗೋವಿಂದಪ್ಪ

ಬೆಂಗಳೂರು: ಕೆಂಗೇರಿ ನಿವಾಸಿ ವಿ.ಗೋವಿಂದಪ್ಪ (100) ಅವರು ಶನಿವಾರ ನಿಧನರಾದರು. ಅವರಿಗೆ ಪುತ್ರಿ ಇದ್ದಾರೆ. ಚಾಮರಾಜನಗರದ ಗೋವಿಂದಪ್ಪ ಅವರು ಪಚ್ಚಪ್ಪ ಹೋಟೆಲ್‌ನ ಮಾಲೀಕರಾಗಿದ್ದರು. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಚಿತ್ರಾವಳಿ

ಭಾರತೀಯ ಸಾಮಗಾನ ಸಭಾ ಶನಿವಾರ ಆಯೋಜಿಸಿದ್ದ 'ಪುರಾಣ ಗೀತಂ' 17ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಪಿಟೀಲು ವಾದಕ ಕುಮರೇಶ್ ರಾಜಗೋಪಾಲನ್ ಅವರಿಗೆ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಾರತೀಯ ಸಾಮಗಾನ ಸಭಾದ ಟ್ರಸ್ಟಿ ಸಿ.ಎಸ್. ಗೀತಾ, ಸ್ಥಾಪಕ ಅಧ್ಯಕ್ಷ ಆರ್.ಆರ್. ರವಿಶಂಕರ್, ಡೆಕ್ಕನ್ ಹೆರಾಲ್ಡ್ ಸಹ ಸಂಪಾದಕ ಎಸ್.ಆರ್. ರಾಮಕೃಷ್ಣ, ಸಂಗೀತ ವಿದ್ವಾಂಸ ಆರ್. ಎಸ್. ನಂದಕುಮಾರ್ ಮತ್ತು ಗಾಯಕಿ ಸ್ಫೂರ್ತಿ ರಾವ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ನಗರದಲ್ಲಿ ಶನಿವಾರ 'ಗುರು ಗಾನಲಹರಿ ಸಂಗೀತ ಅಕಾಡೆಮಿ' ಆಯೋಜಿಸಿದ್ದ 'ಪುಟ್ಟರಾಜ ಗವಾಯಿ ಅವರ ಪುಣ್ಯ ಸ್ಮರಣೆ ಹಾಗೂ 16ನೇ ಸಂಗೀತೋತ್ಸವ' ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಗಾಯಕ ವಾಗೀಶ್ ಭಟ್ ಮತ್ತು ಪ್ರಭುರಾವ್ ಸೊನ್ನ ಅವರಿಗೆ "ಪುಟ್ಟಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ನೃತ್ಯಗಾರ್ತಿ ಪೂರ್ಣಾ ಆಚಾರ್ಯ, ತಬಲಾ ವಾದಕ ಸತೀಶ್ ಹಂಪಿಹೊಳಿ, ನಿವೃತ್ತ ನ್ಯಾಯಾಧೀಶ ಎನ್. ಸಂತೋಷ್ ಹೆಗ್ಡೆ, ಅಕಾಡೆಮಿ ಅಧ್ಯಕ್ಷ ಶಿವಾನಂದ ಹೇರೂರ್ ಮತ್ತು ದೇವೇಂದ್ರಕುಮಾರ್ ಪತ್ತಾರ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಕೇಂದ್ರ ಚುನಾವಣಾ ಆಯೋಗ ಘೋಷಿಸಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅಭಿಯಾನದ ವಿರುದ್ಧ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು

ಗಾಂಧಿನಗರ ಸಪ್ನ ಬುಕ್ ಹೌಸ್ ಶಾಖೆಯಲ್ಲಿ ಉದ್ಯಮಿ ಜಿ. ಕೆ. ಪ್ರಮೋದ್ ಅವರ ಬಿಸಿನೆಸ್ ಗುರು ಪುಸ್ತಕವನ್ನು ಸಪ್ನ ಬುಕ್ ಹೌಸ್ ನಿರ್ದೇಶಕ ದೀಪಕ್ ಷಾ ಜನಾರ್ಪಣೆಗೊಳಿಸಿದರು. ಪ್ರಧಾನ ವ್ಯವಸ್ಥಾಪಕ ಆರ್. ದೊಡ್ಡೇಗೌಡ, ವಿಕ್ರಮ ಪ್ರಕಾಶನದ ಹರಿಪ್ರಸಾದ್ ಉಪಸ್ಥಿತರಿದ್ದರು



ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್ ದೃಷ್ಟಿದೋಷವುಳ್ಳ ದೇವದಾನ್ ಗಾಯಕ್ವಾಡ್, ಅಭಿಜಿತ್ ಮೋರ್, ಪೂಜಾ ಘಾಡ್ಗೆ ಮತ್ತು ಪ್ರಜ್ವಲ್ ಬೀರ್ ಅವರನ್ನು ಕಿರಿಯ ತರಬೇತಿ ಅಧಿಕಾರಿಗಳಾಗಿ ನೇಮಿಸಿಕೊಂಡಿದೆ. ಬ್ಯಾಂಕ್ ಅಧ್ಯಕ್ಷ ಪ್ರಹ್ಲಾದ್ ಕೋಕರೆ ನೇಮಕಾತಿ ಪತ್ರ ವಿತರಿಸಿದರು. ಸಿ.ಎ ಯಶವಂತ್ ಕಸರ್ ಇದ್ದರು

ಮುಷ್ಕರಕ್ಕೆ ಎಐಟಿಯುಸಿ ಬೆಂಬಲ

ಬೆಂಗಳೂರು: ಕಾರ್ಮಿಕ ವಿರೋಧಿ ಆಡಳಿತ ನಡೆಸುತ್ತಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ವಿರೋಧಿಸಿ ಫೆಬ್ರುವರಿ 12ರಂದು ದೇಶ ವ್ಯಾಪಿ ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಲು ಎಐಟಿಯುಸಿ ಸಂಯೋಜಿತ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನಿರ್ಧರಿಸಿದೆ.

'ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಜಾರಿಯಲ್ಲಿದ್ದ ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ, ದುಡಿಯುವ ಸಮೂಹಕ್ಕೆ ಮಾರಕವಾಗಿರುವ ಹಾಗೂ ಶ್ರೀಮಂತ, ಕಾರ್ಪೊರೇಟ್ ಶಕ್ತಿಗಳ ಹಿತಕಾಯಲೆಂದೇ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುವ ಮೂಲಕ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆಯುತ್ತಿದೆ' ಎಂದು ಎಐಟಿಯುಸಿ ಅಧ್ಯಕ್ಷ ಬಿ. ಅಮ್ಜದ್ ತಿಳಿಸಿದ್ದಾರೆ.

5 ಪಾಲಿಕೆ ಗೆಲುವಿಗೆ ಬಿಜೆಪಿ ಕಾರ್ಯತಂತ್ರ

ಪಕ್ಷದ ಉಸ್ತುವಾರಿ ರಾಮ್ ಮಾಧವ್ ನೇತೃತ್ವದಲ್ಲಿ ಪೂರ್ವ ತಯಾರಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗೆ ಪಕ್ಷದ ಕಾರ್ಯಕರ್ತರನ್ನು ಸಜ್ಜುಗೊಳಿಸಲು, ಮುಂಬೈ ಮಾದರಿಯಲ್ಲಿ ಗೆಲುವು ಸಾಧಿಸಲು ಅಗತ್ಯ ಕಾರ್ಯತಂತ್ರ ರೂಪಿಸುವ ಕುರಿತು ಬಿಜೆಪಿ ನಾಯಕರು ಶನಿವಾರ ಸುದೀರ್ಘ ಚರ್ಚೆ ನಡೆಸಿದರು.

ಜಿಬಿಎ ವ್ಯಾಪ್ತಿಯ ಚುನಾವಣೆಗಾಗಿ ನೇಮಕಗೊಂಡಿರುವ ಪಕ್ಷದ ಉಸ್ತುವಾರಿ ರಾಮ್ ಮಾಧವ್, ಸಹ-ಉಸ್ತುವಾರಿಗಳಾದ ಸತೀಶ್ ಪೂನಿಯಾ, ಸಂಜಯ್ ಉಪಾಧ್ಯಾಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪೂರ್ವ ತಯಾರಿ ಸಭೆ ನಡೆಯಿತು.

ಪಕ್ಷದ ನಿಷ್ಠಾವಂತ, ಜನಾನುರಾಗಿ, ಕಾಂಗ್ರೆಸ್ ವಿರುದ್ಧ ಸೆಣಸಬಲ್ಲ ನಾಯಕತ್ವದ ಗುಣ ಇರುವ ಕಾರ್ಯಕರ್ತರನ್ನು ಕಣಕ್ಕೆ ಇಳಿಸಲು ಹಾಗೂ ಅದಕ್ಕಾಗಿ ಅಂತಹ ಕಾರ್ಯಕರ್ತರರ ಪಟ್ಟಿ ಸಿದ್ಧಪಡಿಸಲು ಸಭೆ ನಿರ್ಧರಿಸಿತು.

ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ವಿಜಯೇಂದ್ರ, 'ಕಾಂಗ್ರೆಸ್ ಪಕ್ಷದ ತಂತ್ರ- ಕುತಂತ್ರದ ನಡುವೆಯೂ ಐದೂ ನಗರ ಪಾಲಿಕೆಗಳಲ್ಲೂ ಗೆಲುವು ಸಾಧಿಸಲು ಅಗತ್ಯ ಕಾರ್ಯತಂತ್ರ ಸಿದ್ಧಪಡಿಸಲಾಗುವುದು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನೂ ಶೀಘ್ರ ಆರಂಭಿಸಲಾಗುವುದು. ವಾರ್ಡ್‌ವಾರು ಅಭ್ಯರ್ಥಿಗಳ ಆಯ್ಕೆಗೂ ಮೊದಲು ಜೆಡಿಎಸ್ ನಾಯಕರ ಜತೆ ಚರ್ಚಿಸಿ, ಅವರ ಅಭಿಪ್ರಾಯ ಪಡೆಯಲಾಗುವುದು' ಎಂದರು.

ಫೆ.28 ಮತ್ತು ಮಾರ್ಚ್ 1ರಂದು ಐದು ಪಾಲಿಕೆಗಳ ಪ್ರತ್ಯೇಕ ಸಭೆ ಕರೆಯಲು ನಿರ್ಧರಿಸಲಾಗಿದೆ. ಸಭೆಯಲ್ಲಿ ಪಕ್ಷದ ಹಿರಿಯ ನಾಯಕರು ಇರುತ್ತಾರೆ. ಸ್ಥಳೀಯ ಕಾರ್ಯಕರ್ತರ ಅಭಿಪ್ರಾಯ, ಸಲಹೆ ಪಡೆಯಲಾಗುವುದು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಕುರಿತು ಚರ್ಚೆ ಮಾಡಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ರಾಮ್ ಮಾಧವ್, ಸತೀಶ್ ಪೂನಿಯಾ, ಸಂಜಯ್ ಉಪಾಧ್ಯಾಯ ಅವರನ್ನು ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಸ್ವಾಗತಿಸಿದರು

> ಮತಪತ್ರದ (ಬ್ಯಾಲೆಟ್) ಬದಲು ವಿದ್ಯುನ್ಮಾನ ಯಂತ್ರಗಳನ್ನೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಬಳಸಲು ಕೋರಿ ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಲಾಗುವುದು
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> ಪ್ರತಿ ನಗರ ಪಾಲಿಕೆಗೂ ತಲಾ ಒಬ್ಬರು ಉಸ್ತುವಾರಿಗಳನ್ನು ನೇಮಿಸುವುದು, ಐದು ಪಾಲಿಕೆಗಳಲ್ಲೂ ಗೆಲುವು ಸಾಧಿಸಲು ಅಗತ್ಯ ಕಾರ್ಯತಂತ್ರ ರೂಪಿಸಲಾಗುವುದು
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪಕ್ಷದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ತಮ್ಮೇಶ್ ಗೌಡ, ಶಾಸಕ ಸಿ.ಕೆ. ರಾಮಮೂರ್ತಿ ಉಪಸ್ಥಿತರಿದ್ದರು.

'ಬಿಜೆಪಿ ಅವಧಿಯ ಕೆಲಸಗಳೇ ಶ್ರೀರಕ್ಷೆ'

ಬಿಜೆಪಿ ಆಡಳಿತದಲ್ಲಿ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿಗೆ ನೀಡಿದ ಆದ್ಯತೆ, ಅನುದಾನ, ಅಭಿವೃದ್ಧಿ ಕಾರ್ಯಗಳು ಬಿಜೆಪಿಗೆ ವರದಾನವಾಗಿವೆ. ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಸಹಕಾರಿಯಾಗಲಿವೆ ಎಂದು ವಿಜಯೇಂದ್ರ ಹೇಳಿದರು.

'ಕಾಂಗ್ರೆಸ್ ಸರ್ಕಾರದ ವೈಫಲ್ಯಗಳು, ನಗರದ ರಸ್ತೆಗುಂಡಿ, ಘನತ್ಯಾಜ್ಯ ವಿಲೇವಾರಿ ಸಮಸ್ಯೆಗಳನ್ನು ಜನರ ಮುಂದಿಟ್ಟು ಮತ ಕೇಳುತ್ತೇವೆ. ರಾಜ್ಯ ಸರ್ಕಾರದ ವೈಫಲ್ಯ ಬಿಜೆಪಿಯ ಗೆಲುವಿನ ದಾರಿಯನ್ನು ಸುಗಮಗೊಳಿಸಲಿದೆ' ಎಂದರು.

ಚಿರತೆ ಸೆರೆಗೆ ಬೋನು

ಬೆಂಗಳೂರು: ನಗರದ ಬನಶಂಕರಿ 6ನೇ ಹಂತದ 2ನೇ ಬಡಾವಣೆಯಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆಯು ಶನಿವಾರ ಬೋನು ಇರಿಸಿದೆ.

'ಅರಣ್ಯಾಧಿಕಾರಿಗಳು ಬಡಾವಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಚಿರತೆ ಸೆರೆ ಹಿಡಿಯುವವರೆಗೂ ಕಾಡಿನಂಚಿನ ರಸ್ತೆಯಲ್ಲಿ ವಾಯು ವಿಹಾರ ಮಾಡುವುದಾಗಲಿ ಅಥವಾ ಕತ್ತಲಾದ ಮೇಲೆ ಸಂಚರಿಸದಂತೆ ಸೂಚಿಸಲಾಗಿದೆ' ಎಂದು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಸತೀಶ್ ತಿಳಿಸಿದ್ದಾರೆ.



ಹೂಡಿಕೆ ಹೆಚ್ಚಿಸಲು ಎಸ್‌ಐಒ ಆಗ್ರಹ

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಶಿಕ್ಷಣ, ಅಲ್ಪಸಂಖ್ಯಾತ ಕಲ್ಯಾಣ, ಸಮಾಜ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸುವಂತೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಶನ್ ಆಫ್ ಇಂಡಿಯಾ (ಎಸ್‌ಐಒ) ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಐದು ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿರುವ ಈ ಶಿಫಾರಸುಗಳ ಪತ್ರವನ್ನು ಎಸ್‌ಐಒ ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಹಯ್ಯಾನ್ ಸರ್ಕಾರಕ್ಕೆ ಸಲ್ಲಿಸಿ, ಶಿಕ್ಷಣವು ರಾಷ್ಟ್ರ ನಿರ್ಮಾಣದ ಮೂಲಾಧಾರವಾಗಿದ್ದು, ಸಮಾನ ಹಂಚಿಕೆ ಮತ್ತು ಕಟ್ಟುನಿಟ್ಟಿನ ಉತ್ತರದಾಯಿತ್ವ ಅಗತ್ಯ ಎಂದರು.

'2025–26ರಲ್ಲಿ ಕರ್ನಾಟಕದ ಒಟ್ಟು ಬಜೆಟ್‌ನ ಶೇಕಡ 10.8 ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಟ್ಟಿದೆ. ದೇಶದ ಸರಾಸರಿ ಹಂಚಿಕೆ ಶೇ 15 ಆಗಿದ್ದು, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಈ ಮಟ್ಟದ ಹಂಚಿಕೆಯನ್ನು ನಿರಂತರವಾಗಿ ಪಾಲಿಸುತ್ತಿವೆ. ರಾಜ್ಯವು ಈ ಅಂತರವನ್ನು ನಿವಾರಿಸಬೇಕು' ಎಂದು ಸಂಘಟನೆ ಮನವಿ ಮಾಡಿದೆ.

ಮಲ್ಲೇಶ್ವರದಲ್ಲಿ ಹೊಸ ಮಳಿಗೆಯನ್ನು ಮಿನಿಸ್ಟರ್ ವೈಟ್ ಕ್ಲಾತಿಂಗ್‌ನ ವ್ಯವಸ್ಥಾಪಕ ನಿರ್ದೇಶಕ ಪೋತಿರಾಜ್ ಉದ್ಘಾಟಿಸಿದರು

ಮಿನಿಸ್ಟರ್ ವೈಟ್: ಹೊಸ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರುಷರ ಸಾಂಪ್ರದಾಯಿಕ ಮತ್ತು ಮದುವೆ ಉಡುಪುಗಳಲ್ಲಿ ಮುಂಚೂಣಿಯಲ್ಲಿರುವ ಮಿನಿಸ್ಟರ್ ವೈಟ್ ಕ್ಲಾತಿಂಗ್, ಮಲ್ಲೇಶ್ವರದಲ್ಲಿ ಹೊಸ ಮಳಿಗೆಯನ್ನು ಆರಂಭಿಸಿದೆ.

ಮಿನಿಸ್ಟರ್ ವೈಟ್ ಕ್ಲಾತಿಂಗ್‌ನ ವ್ಯವಸ್ಥಾಪಕ ನಿರ್ದೇಶಕ ಪೋತಿರಾಜ್ ಮಳಿಗೆ ಉದ್ಘಾಟಿಸಿದರು.

ಇದು ಬ್ರ್ಯಾಂಡ್‌ಗೆ ಮಹತ್ವದ ಮೈಲುಗಲ್ಲಾಗಿದ್ದು, ದೇಶದಲ್ಲಿ 60ನೇ ಮಳಿಗೆ, ಕರ್ನಾಟಕದಲ್ಲಿ 5ನೇ ಮಳಿಗೆ ಹಾಗೂ ಬೆಂಗಳೂರಿನಲ್ಲಿ 2ನೇ ಮಳಿಗೆಯಾಗಿದೆ. ಕಚ್ಚೆ ಪಂಚೆ, ರೆಡಿಮೇಡ್ ಧೋತಿ, ಶರ್ಟ್‌ಗಳು, ಕಾಟನ್ ಶರ್ಟ್‌ಗಳು ಲಭ್ಯವಿದೆ.

ಪೋತಿರಾಜ್ ಮಾತನಾಡಿ, 'ಭಾರತೀಯರ ಸಂಭ್ರಮ ಮತ್ತು ಮೌಲ್ಯಗಳ ಸಾರವನ್ನು ಉಳಿಸಿಕೊಂಡು ಗುಣಮಟ್ಟದ ಸಾಂಪ್ರದಾಯಿಕ ಉಡುಪುಗಳನ್ನು ಒದಗಿಸುವುದೇ ಮಿನಿಸ್ಟರ್ ವೈಟ್‌ನ ಬದ್ಧತೆ' ಎಂದು ತಿಳಿಸಿದರು.

ಸಿಎಂಆರ್ ವಿ.ವಿ ಘಟಿಕೋತ್ಸವದಲ್ಲಿ ಸಚಿವ ಸಿ.ಸುಧಾಕರ್

'ಕೌಶಲ ಆಧರಿತ ಶಿಕ್ಷಣಕ್ಕೆ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂತರರಾಷ್ಟ್ರೀಯ ಗುಣಮಟ್ಟದ ಸೌಕರ್ಯಗಳನ್ನು ಹೊಂದಿರುವ ನಗರದ ಸಿಎಂಆರ್ ವಿಶ್ವವಿದ್ಯಾಲಯವು ಕೌಶಲ ಆಧರಿತ ಶಿಕ್ಷಣ ನೀಡಲು ಒತ್ತು ನೀಡುತ್ತಿದ್ದು, ರಾಜ್ಯದಲ್ಲಿ ಮಾದರಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಸಿಎಂಆರ್ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಸಿಎಂಆರ್ ಸೇರಿ 29 ಖಾಸಗಿ ವಿಶ್ವವಿದ್ಯಾಲಯಗಳಿವೆ. ಸಿಎಂಆರ್ ವಿಶ್ವವಿದ್ಯಾಲಯದಲ್ಲಿ 6 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ವಿದ್ಯಾರ್ಥಿಗಳಿಗೆ ಈಗಿನ ಬೇಡಿಕೆಗಳಿಗೆ ಅಗತ್ಯವಾದ ಪಠ್ಯಕ್ರಮದೊಂದಿಗೆ ಶಿಕ್ಷಣ ನೀಡಲಾಗುತ್ತಿದೆ. ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸಲಾಗುತ್ತಿದೆ' ಎಂದು ಹೇಳಿದರು.

ಘಟಿಕೋತ್ಸವ ಭಾಷಣ ಮಾಡಿದ ಅರವಿಂದ್ ಕನ್ಸಲ್ಟೆನ್ಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ್ ಕೇಸ್ಕರ್, 'ಭಾರತದ ಶಿಕ್ಷಣ ಹಾಗೂ ಉದ್ಯೋಗ ವಲಯದ ಬೆಳವಣಿಗೆಯು ಕೌಶಲಪೂರ್ಣ ಮತ್ತು ನೈತಿಕ ವೃತ್ತಿಪರರ ಮೇಲೆ ಅವಲಂಬಿತವಾಗಿದೆ. ನಮ್ಮ ಶಿಕ್ಷಣ ಸಂಸ್ಥೆಗಳು ಪ್ರತಿಭಾ ಪೂರೈಕೆದಾರರಾಗಿ ಉಳಿಯುವ ಬದಲು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವವರನ್ನು ರೂಪಿಸಬೇಕಿದೆ' ಎಂದು ಸಲಹೆ ನೀಡಿದರು.

ಸಿಎಂಆರ್ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಕೆ.ಬಲವೀರರೆಡ್ಡಿ, ಗಾಯಕಿ ಸಂಗೀತಾ ಕಟ್ಟಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

'ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಸಮಗ್ರ, ಕಠಿಣ ಪರಿಶ್ರಮ ಹಾಗೂ ಬಲವಾದ ಮೌಲ್ಯಗಳು ಅತ್ಯಂತ ಮುಖ್ಯ. ಉದಯೋನ್ಮುಖ ತಂತ್ರಜ್ಞಾನಗಳನ್ನು ಜನರ ಬದುಕಿನ ಸುಧಾರಣೆಗೆ ಬಳಸುವ ಮೂಲಕ ದೇಶದ ಪ್ರಗತಿಗೆ ಕೊಡುಗೆ ನೀಡಬೇಕು' ಎಂದು ಕಿವಿಮಾತು ಹೇಳಿದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಹಾಗೂ ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಮಾತನಾಡಿ, 'ಸ್ಪರ್ಧಾತ್ಮಕ ಜಗತ್ತಿಗೆ ಪೂರಕವಾದ ಕಲಿಕಾ ಸೌಲಭ್ಯಗಳನ್ನು ನಾವು ನೀಡುತ್ತಿದ್ದೇವೆ. ಇದರ ಸದುಪಯೋಗ ಪಡೆದುಕೊಂಡ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗವಕಾಶ ಪಡೆದು ಸಾಧನೆ ಮಾಡಿದ್ದಾರೆ' ಎಂದು ಹೇಳಿದರು.

ವಿಶ್ವವಿದ್ಯಾಲಯ ಕುಲಾಧಿಪತಿ ಸಬಿತಾ ರಾಮಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಉಪಕುಲಪತಿ ಎಚ್.ಬಿ.ರಾಘವೇಂದ್ರ ವಾರ್ಷಿಕ ವರದಿ ಮಂಡಿಸಿದರು. ಸಿಎಂಆರ್ ಜ್ಞಾನಧಾರ ಟ್ರಸ್ಟ್‌ನ ಕಾರ್ಯದರ್ಶಿ ಕೆ.ಸಿ. ಜಗನ್ನಾಥ ರೆಡ್ಡಿ, ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಜಯದೀಪ್ ಕೆ.ಆರ್. ರೆಡ್ಡಿ, ಸಹ ಕುಲಪತಿ ಆರ್.ಪ್ರವೀಣ್, ಕುಲಸಚಿವ ಮೋಹನ್ ಬಾಬು, ಕುಲಸಚಿವ(ಮೌಲ್ಯಮಾಪನ) ಅಶ್ವಿನ್ ಕುಮಾರ್ ಉಪಸ್ಥಿತರಿದ್ದರು.

2024–25ನೇ ಸಾಲಿನಲ್ಲಿ ಶಿಕ್ಷಣ ಪೂರೈಸಿದ 2,350 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 33 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 37 ಪಿಎಚ್.ಡಿ ಸಾಧಕರಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು.

ಸ್ತ್ರೀಯರ ಕಾನೂನು ಸಲಹೆಗೆ 'ಸೋಜ್'

ಬೆಂಗಳೂರು: ಮನೆಗಳಲ್ಲಿ, ಕೆಲಸದ ಸ್ಥಳಗಳಲ್ಲಿ ಹಾಗೂ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಕಾನೂನಿನ ಸಮಸ್ಯೆಗಳು ಹಾಗೂ ಸವಾಲುಗಳಿಗೆ ಪರಿಹಾರ ನೀಡುವ ಸೋಜ್ ಕೇಂದ್ರಕ್ಕೆ ರೀಚ್‌ಲಾಯರ್‌ನ ಸಂಸ್ಥಾಪಕ ಬಿ.ಟಿ. ವೆಂಕಟೇಶ ಶನಿವಾರ ಚಾಲನೆ ನೀಡಿದರು.

ರೀಚ್‌ಲಾಯರ್, ಬಿಸ್ಮಿಲ್ಲಾ ನಗರದ ಎಕ್ಸಲೆಂಟ್ ಇಂಗ್ಲಿಷ್ ಸ್ಕೂಲ್ (ಇಇಎಸ್) ಸಹಯೋಗದಲ್ಲಿ ಈ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

'ಸೋಜ್' ಎಂಬುದು ರೀಚ್‌ಲಾಯರ್ ಟ್ರಸ್ಟ್‌ನ ಒಂದು ಕಾರ್ಯಕ್ರಮವಾಗಿದೆ. ಇದು ವಕೀಲರಲ್ಲಿ ವೃತ್ತಿಪರ ಕೌಶಲಗಳನ್ನು ವೃದ್ಧಿಸುವ ಕೆಲಸ ಮಾಡುವುದರ ಜೊತೆಗೆ ಮಹಿಳೆಯರಿಗಾಗಿ ಇರುವ ಕಾನೂನು, ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ. ಇದಕ್ಕಾಗಿ ವಕೀಲರ ಒಂದು ತಂಡದ ಸಲಹೆ ಸೂಚನೆಗಳನ್ನು ನೀಡುತ್ತದೆ' ಎಂದು ಆಯೋಜಕರು ತಿಳಿಸಿದ್ದಾರೆ.

ಎಕ್ಸಲೆಂಟ್ ಇಂಗ್ಲಿಷ್ ಶಾಲೆಯ ಸಂಸ್ಥಾಪಕಿ ಬೆನಜೀರ್ ಬೇಗ್, ವಕೀಲರಾದ ಅಪರ್ಣಾ, ತುಬಾ ಸಂಬೂರ್, ನಿತಿನ್ ಬಿ., ರವಿ, ಶಂಕರ್, ಎನ್.ಕೆ. ವಿನೋದಾ, ಮುಬಾರಕ್ ಇದ್ದರು.



ನಗರದಲ್ಲಿ ಇಂದು

ಎಚ್‌ಸಿಎಲ್ ಸೈಕ್ಲೋಥಾನ್: ಅತಿಥಿಗಳು: ಪ್ರಿಯಾಂಕ್ ಎಂ. ಖರ್ಗೆ, ನವೀನ್‌ರಾಜ್ ಸಿಂಗ್, ಮಣೀಂದರ್ ಪಾಲ್ ಸಿಂಗ್, ಸುಂದರ್ ಮಹಾಲಿಂಗಮ್, ಸೈಕ್ಲೋಥಾನ್ ಪ್ರಾರಂಭವಾಗುವ ಸ್ಥಳ: ಟೋಲ್‌ಗೇಟ್, ನೈಸ್ ರಸ್ತೆ, ಹೊಸಕೆರೆಹಳ್ಳಿ, ಬೆಳಿಗ್ಗೆ 6ರಿಂದ

ಈಶ್ವರಮ್ಮ ಪುರಸ್ಕಾರ ಸಂಭ್ರಮ–2026: ಅತಿಥಿಗಳು: ಪ್ರಮೋದಾ ದೇವಿ ಒಡೆಯರ್, ಅತಿಥಿ: ನೀತಾ ಖನ್ನಾ, ಪುರಸ್ಕಾರ ಸ್ವೀಕರಿಸುವವರು: ಮಲ್ಲಮ್ಮ ಸೂಲಗಿತ್ತಿ, ಆಶಾ ಎಸ್., ಸರೋಜ ವೈ. ಬಾಕಲೆ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 8.30

ಪ್ರಮೋದಾ ದೇವಿ ಒಡೆಯರ್

ರಾಜ್ಯಮಟ್ಟದ 10ನೇ ಯುವಜನ ಸಾಹಿತ್ಯ ಸಂಸ್ಕೃತಿ ಸಮ್ಮೇಳನ: ಸರ್ವಾಧ್ಯಕ್ಷ ಎಂ.ಆರ್. ಉಪೇಂದ್ರ ಕುಮಾರ್, ಉದ್ಘಾಟನೆ: ಎಲ್.ಎನ್. ಮುಕುಂದರಾಜ್, 'ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ದತ್ತಿ, ಕುವೆಂಪು ಶ್ರೀ ಪ್ರಶಸ್ತಿ' ಪ್ರದಾನ: ಮನು ಬಳಿಗಾರ್, ಪ್ರಶಸ್ತಿ ಸ್ವೀಕರಿಸುವವರು: ವಿ. ನಿಶಾ ಗೋಪಿನಾಥ್, ಸಿದ್ಧಲಿಂಗಸ್ವಾಮಿ, ಅಧ್ಯಕ್ಷತೆ: ಶಶಿಕಾಂತ್ ರಾವ್, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9ರಿಂದ


ಎಲ್.ಎನ್. ಮುಕುಂದರಾಜ್

'ಸಮ್ಮಿಲನ' ಪ್ರಥಮ ವಾರ್ಷಿಕೋತ್ಸವ ಸಮಾರಂಭ, ಸಮಕಾಲೀನ ಕನ್ನಡ ಸಂಶೋಧನೆಯ ಚಹರೆಗಳು ಮತ್ತು ಸಾಧ್ಯತೆಗಳು, ಬಾನು ಮುಷ್ತಾಕ್ ಅವರ ಕಥನ ಸಾಹಿತ್ಯದ ತಾತ್ವಿಕತೆ' ಒಂದು ದಿನದ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ರಹಮತ್ ತರೀಕೆರೆ, 'ಎದೆಯ ನುಡಿ', 'ಅರಿವು ಅಸ್ಮಿತೆ' ಪುಸ್ತಕಗಳ ಬಿಡುಗಡೆ: ನಟರಾಜ ತಲಘಟ್ಟಪುರ, ವಾರ್ಷಿಕ ಸಂಚಿಕೆ ಬಿಡುಗಡೆ: ಚಂದ್ರಮೂರ್ತಿ, ರಂಗನಾಥ ಕಂಟನಕುಂಟೆ, ಆಯೋಜನೆ: ಕನ್ನಡ ಸಂಶೋಧನ ಅಕಾಡೆಮಿ, ಸ್ಥಳ: ಸಭಾಂಗಣ, ಸುರಾನ ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 10ರಿಂದ


ರಹಮತ್ ತರೀಕೆರೆ

'ಲಾಕೌಟ್ ಅಲ್ಲ ನಾಕೌಟ್' ನಾಟಕ ಪ್ರದರ್ಶನ: ನಿರ್ದೇಶನ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 7.15

'ಹುತ್ತದಲ್ಲಿ ಹುತ್ತ' ನಾಟಕ ಪ್ರದರ್ಶನ: ರಚನೆ: ಟಿ.ಪಿ. ಕೈಲಾಸಂ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಅಂತರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ವಾರ್ಷಿಕ ಬಳಗಕೂಟ: ಅತಿಥಿ: ಕೆ.ಎನ್. ಗಣೇಶ್, 'ಬಿ.ಎಂ.ಶ್ರೀ' ಪ್ರಶಸ್ತಿ ಸ್ವೀಕರಿಸುವವರು: ಎಚ್.ಎಸ್. ನಾಗರಾಜ್, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಮತ್ತು ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿನಿಲಯ, ಶೇಷಾದ್ರಿಪುರ ರಸ್ತೆ, ಬೆಳಿಗ್ಗೆ 10

ವಾರ್ಷಿಕ ಉನ್ನತ ಶಿಕ್ಷಣ ವಿದ್ಯಾರ್ಥಿವೇತನ ವಿತರಣೆ ಸಮಾರಂಭ: ಸಾನ್ನಿಧ್ಯ: ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಅತಿಥಿಗಳು: ಡಿ.ವಿ. ಮಂಜುನಾಥ, ಅದಿತಿ ಕುಮಾರ್, ಐ.ಎಸ್. ಪ್ರಸಾದ್, ಕೆ.ಆರ್. ಪ್ರದೀಪ್, ಎಸ್.ವಿ.ಎಸ್. ಗುಪ್ತ, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಚಾರಿಟಬಲ್ ಟ್ರಸ್ಟ್, ಸ್ಥಳ: ಎನ್‌ಎಂಕೆಆರ್‌ವಿ ಕಾಲೇಜು, ಮೂರನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

ಯೋಗೇಶ್ ಮಾಸ್ಟರ್ ಅವರ 'ಅವಳು', ಚಾಂದಸಾಬ್ ಕುರಕುಂದ ಅವರ 'ಬೈದನಹಳ್ಳಿ' ಪುಸ್ತಕಗಳ ಬಿಡುಗಡೆ: ಚೇತನಾ ತೀರ್ಥಹಳ್ಳಿ, ಪುಸ್ತಕದ ಕುರಿತು: ಅಕ್ಕೈ ಪದ್ಮಶಾಲಿ, ಅಧ್ಯಕ್ಷತೆ: ಮಮತಾ ಸಾಗರ್, ಆಯೋಜನೆ: ರಾಜಮಾರ್ಗ ಸಾಹಿತ್ಯ ಸಂಸ್ಕೃತಿ, ಸ್ಥಳ: ಗ್ರೀನ್ ಪಾತ್, ಆರ್ಗ್ಯಾನಿಕ್ ರೆಸ್ಟೋರೆಂಟ್, ಮಂತ್ರಿಮಾಲ್ ಎದುರು, ಮಲ್ಲೇಶ್ವರ, ಬೆಳಿಗ್ಗೆ 11

ಸಂಘದ ಉದ್ಘಾಟನೆ, 15 ಜನ ಸಾಧಕರಿಗೆ ಅಭಿನಂದನೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಸಿದ್ಧರಾಜು ಸ್ವಾಮೀಜಿ, ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ಉಪಸ್ಥಿತಿ: ಆರ್. ದೇವದಾಸ್, ಎಂ. ರಾಮಕೃಷ್ಣ, ಅಧ್ಯಕ್ಷತೆ: ಎನ್. ಶ್ರೀನಿವಾಸ್, ಅತಿಥಿಗಳು: ಎಚ್. ಆಂಜನೇಯ, ಚಂದ್ರಣ್ಣ, ಎಲ್. ಹನುಮಂತಯ್ಯ, ಸುದಾಮದಾಸ್, ಎಸ್. ರವಿ, ಕೆ.ಟಿ. ತಿಮ್ಮರಾಯಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಅರುಂಧತಿ ಕ್ಷೇಮಾಭಿವೃದ್ಧಿ ಸಂಘ, ಅರುಂಧತಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಪವಾಡಶ್ರೀ ಬಸವಣ್ಣ ದೇವರ ಮಠ, ನೆಲಮಂಗಲ, ಬೆಳಿಗ್ಗೆ 11

ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭ: ಅತಿಥಿಗಳು: ಶಿವರಾಜಸಿಂಗ್ ಚೌಹಾಣ್, ಶೋಭಾ ಕರಂದ್ಲಾಜೆ, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ತ್ರಿಪುರವಾಸಿನಿ ಅರಮನೆ ಮೈದಾನ, ಮಧ್ಯಾಹ್ನ 12

17ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ 'ಪುರಾಣ ಗೀತಂ': ಶಾಸ್ತ್ರೀಯ ವಾದ್ಯ ಮೇಳ: ಅಪೂರ್ವ ಕೃಷ್ಣ ಮತ್ತು ತಂಡ, ಪಿಟೀಲು: ಅಪೂರ್ವ ಕೃಷ್ಣ, ಸಾರಂಗಿ: ಮೋಮಿನ್ ಖಾನ್, ಸಿತಾರ್: ಮಾಳ್ವಿಕಾ ಚೋಪ್ರಾ, ವೀಣಾ: ರಕ್ಷಿತಾ ರಮೇಶ್, ಮೃದಂಗ: ವಿನೋದ್ ಶ್ಯಾಮ್ ಆನೂರು, ತಬಲಾ: ರೂಪಕ್ ಕಲ್ಲೂರ್‌ಕರ್, ಯುಗಳ ಗಾಯನ: ರಂಜನಿ ಮತ್ತು ಗಾಯತ್ರಿ, ಪಿಟೀಲು: ವಿಠ್ಠಲ್ ರಂಗನ್, ಮೃದಂಗ: ದೆಹಲಿ ಶ್ರೀರಾಮ್, ಘಟ: ಗಿರಿಧರ್ ಉಡುಪ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿಕಾವಲ್, ಸಂಜೆ 5ರಿಂದ

ಹಿಂದೂ ಸಮಾಜೋತ್ಸವ: ಭಾಗವಹಿಸುವವರು: ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಚಕ್ರವರ್ತಿ ಸೂಲಿಬೆಲೆ, ಬಿ.ಜಿ. ಭಾಗ್ಯಲಕ್ಷ್ಮಿ, ಆಯೋಜನೆ: ಹಿಂದೂ ಸಮಾಜೋತ್ಸವ ಆಯೋಜನ ಸಮಿತಿ, ಸ್ಥಳ: ನಂದನ ಕನ್ವೆನ್ಷನ್ ಹಾಲ್, ಉಲ್ಲಾಳು ಮುಖ್ಯರಸ್ತೆ, ಸಂಜೆ 5

ಯುವ ಸಾಂಸ್ಕೃತಿಕ ಪ್ರತಿಭೋತ್ಸವದ ಉದ್ಘಾಟನೆ: ಶಂಕರ್, ಅತಿಥಿಗಳು: ಈಶ್ವರ್ ಎಸ್. ರಾಯಡು, ಬಿಕ್ಕಿ ಬಂಗರಿ, ನಳಿನಾಕ್ಷಿ ಸಣ್ಣಪ್ಪ, ಕೆ.ಸಿ. ಶಿವರಾಮಯ್ಯ, ನಂದೀಶ್ ಪಿ.ಎಸ್., ತಾರೀಹಳ್ಳಿ ಹನುಮಂತಪ್ಪ, ಎನ್. ಮಾಲತೇಶ್, ಕೆ.ಎಸ್. ನಿಖಿಲ್, ಡಿಂಗ್ರಿ ನಾಗರಾಜ್, ಮೈಸೂರು ರಮಾನಂದ್, ಎಂ.ವಿ. ಪೂರ್ಣಿಮಾ, ಆಯೋಜನೆ: ಕಲಾಬಂಧು ಫೌಂಡೇಷನ್, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 5

30ನೇ ವಾರ್ಷಿಕೋತ್ಸವ: ಸಾನ್ನಿಧ್ಯ: ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅತಿಥಿಗಳು: ಡಾ.ಎನ್. ಸೋಮೇಶ್ವರ, ಎಂ. ಪುಷ್ಪಾವತಿ, ತೇಜಸ್ವಿ ಸೂರ್ಯ, ರವಿ ಸುಬ್ರಮಣ್ಯ, ಅಶೋಕ್, 'ಡಾ. ಶಾಂತ ರಾಧಾಕೃಷ್ಣ ಸ್ಮಾರಕ ಪ್ರಶಸ್ತಿ' ಸ್ವೀಕರಿಸುವವರು: ದೊಡ್ಡಗುಡ್ಡಯ್ಯ, ಕೆ. ಮಾರುತಿ ಕೃಷ್ಣಗೌಡ್, ಆಯೋಜನೆ ಮತ್ತು ಸ್ಥಳ: ಎಸ್.ಜಿ.ಎಸ್. ವಾಗ್ದೇವಿ, ಕೇಂದ್ರ, ಮೂರನೇ ಮುಖ್ಯರಸ್ತೆ, ಗಿರಿನಗರ, ಎರಡನೇ ಹಂತ, ಸಂಜೆ 5

'ವೈಷ್ಣವಾಂಜಲಿ' ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ವೈಷ್ಣವಿ ಆಚಾರ್ಯ, ಅತಿಥಿಗಳು: ಹೇಮಾ ಪ್ರಭಾತ್, ಕೆ.ಪಿ. ಪುತ್ತೂರಾಯ, ವೈಜಯಂತಿ ಕಾಶಿ, ವನಿತಕ್ಕ, ಗಾರ್ಗಿ ಪಂಚಾಂಗಂ, ಕೃಷ್ಣರಾಜ ಕುತ್ಪಾಡಿ, ಆಯೋಜನೆ: ಸುಕೃತಿ ನಾಟ್ಯಾಲಯ, ಸ್ಥಳ: ಪ್ರಭಾತ್ ಕಲಾ ಸಂಭ್ರಮ ಸಭಾಂಗಣ, ಬಾಲಮಂದಿರ ರಸ್ತೆ, ಹೊಂಬೇಗೌಡನಗರ, ಸಂಜೆ 5

> ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
> nagaradalli_indu@prajavani.co.in

ಅಕ್ಕಸಾಲಿಗರ ಹೊಟ್ಟೆಗೆ ಬರೆ

ಒಂದನೇ ಪುಟದಿಂದ..

ಬೆಳ್ಳಿ ಕೆಲಸವಾದರೆ ₹100, ಬಂಗಾರದ ಕೆಲಸವಾದರೆ ₹600 ದರದಲ್ಲಿ ಮಾಡಿಕೊಡುತ್ತಿದ್ದೆವು. ಈಗ ಅದೇ ಕೆಲಸವನ್ನು ಬೆಳ್ಳಿಯದ್ದು ₹350 ಮತ್ತು ಬಂಗಾರದ್ದು ₹1,600 ದರದಲ್ಲಿ ಮಾಡಿಕೊಡಬೇಕಿದೆ. ಹೀಗಾಗಿ ಗ್ರಾಹಕರೇ ಕಡಿಮೆಯಾಗಿದ್ದಾರೆ' ಎಂದು ಅಕ್ಕಸಾಲಿಗರು ಹೇಳುತ್ತಾರೆ.

ಮೈಸೂರು ಶೈಲಿಗೂ ಸಂಕಷ್ಟ: ಸಾಂಸ್ಕೃತಿಕ ನಗರಿಯ ಅಕ್ಕಸಾಲಿಗರ ಚಿನ್ನದ ಕುಸುರಿಗೆ ವಿದೇಶಿಗರೂ ಮಾರು ಹೋಗಿದ್ದ ಕಾಲವಿತ್ತು. 'ಮೈಸೂರು ಶೈಲಿ' ಆಭರಣ ತಯಾರಿಕೆಯು ರಾಜಮನೆತನದ ಪರಂಪರೆಯಿಂದ ಪ್ರೇರಿತವಾಗಿತ್ತು. ಲಕ್ಷ್ಮಿ ದೇವಿ ಚಿತ್ರಣವುಳ್ಳ ಹಾರಗಳು (ನೆಕ್ಲೇಸ್) ಮತ್ತು ಪೆಂಡೆಂಟ್‌ಗಳಲ್ಲಿ ಹವಳ, ಪಚ್ಚೆ, ಮುತ್ತು ಕೂರಿಸಿ ಅದ್ಭುತ ವಿನ್ಯಾಸ ಮಾಡುತ್ತಿದ್ದ ನುರಿತ ಅಕ್ಕಸಾಲಿಗರು ಮೈಸೂರಿನಲ್ಲಿದ್ದರು. ಅವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖವಾಗಿದೆ.

'ಮೊದಲೆಲ್ಲ ಗ್ರಾಮೀಣ ಜನ ನಂಬಿಕಸ್ಥ ಅಕ್ಕಸಾಲಿಗರಲ್ಲಿ ಆಭರಣ ತಯಾರಿಕೆಗೆ ನೀಡುತ್ತಿದ್ದರು. ಅವರಿಗೆ ಈಗ ತಾಳಿ ಮಾಡಿಸಲೂ ಸಹ ಕಷ್ಟವಾಗಿದೆ. ಗ್ರಾಹಕರು ದೊಡ್ಡ ಚಿನ್ನಾಭರಣ ಅಂಗಡಿಗಳತ್ತ ಮುಖ ಮಾಡಿದ್ದಾರೆ. ಈಗ ಅವರು ನೀಡುವ ಕೆಲಸವನ್ನೇ ಮಾಡಬೇಕಾಗಿದೆ' ಎಂದು ಮೈಸೂರಿನ ಇರ್ವಿನ್ ರಸ್ತೆಯ ದೀಪಾ ಜ್ಯುವೆಲ್ಲರಿ ವರ್ಕ್ಸ್‌ನ ಪ್ರಕಾಶ್ ಹೇಳುತ್ತಾರೆ.

'ಮೈಸೂರಿನಲ್ಲಿ ಒಂದು ಕಾಲದಲ್ಲಿ 10 ಸಾವಿರಕ್ಕೂ ಹೆಚ್ಚು ಇದ್ದ ಅಕ್ಕಸಾಲಿಗರ ಸಂಖ್ಯೆ ಈಗ 4 ಸಾವಿರಕ್ಕೆ ಇಳಿದಿದೆ. ಎಷ್ಟೋ ಮಂದಿ ಬೇರೆ ಕೆಲಸದತ್ತ ಮುಖ ಮಾಡಿದ್ದಾರೆ. ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣ ಎನ್ನುವವರು ಸಾಲದ ಸುಳಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ. ಎಲ್ಲರ ಮನೆಯದ್ದೂ ಒಂದೊಂದು ಕಥೆ' ಎಂದು ಕಣ್ಣೀರಾದರು.

'10 ವರ್ಷಗಳ ಹಿಂದೆ ಚಿನ್ನಾಭರಣ ಮಾಡಿಸಲು ಹೆಚ್ಚು ಜನ ಬರುತ್ತಿದ್ದರು. ಬಂಗಾಳ, ಗುಜರಾತ್, ರಾಜಸ್ಥಾನ, ಕೇರಳದ ಜ್ಯುವೆಲ್ಲರಿ ಕಂಪನಿಗಳು ಮಳಿಗೆ ತೆರೆದ ನಂತರ ನಮ್ಮತ್ತ ಯಾರೂ ಬರುತ್ತಿಲ್ಲ. ಎಷ್ಟೋ ಸಲ ಕೆಲಸ ಇಲ್ಲದಿದ್ದರೂ ಅಂಗಡಿ ತೆರೆದು ಕುಳಿತಿರುತ್ತೇವೆ' ಎಂದು ಕೆ.ಟಿ.ಸ್ಟ್ರೀಟ್‌ನಲ್ಲಿರುವ ಅಕ್ಕಸಾಲಿಗ ಜಗದೀಶ್ ಬೇಸರ ವ್ಯಕ್ತಪಡಿಸಿದರು.

ಚಾಮರಾಜನಗರದ ದೊಡ್ಡಂಗಡಿ ಬೀದಿ, ಹಾಸನ, ಮಂಡ್ಯ, ಮಡಿಕೇರಿಯ ಅಕ್ಕಸಾಲಿಗರೂ ಬೇರೆ ಕೆಲಸದತ್ತ ಮುಖ ಮಾಡಿದ್ದಾರೆ. ಗ್ರಾಹಕರಿಂದ ಮುಂಗಡ ಹಣ ಪಡೆದು ಕೆಲಸ ಮಾಡುತ್ತಿರುವ ಅಕ್ಕಸಾಲಿಗರು, ಚಿನ್ನದ ದರ ಹೆಚ್ಚಾದಂತೆ ನಷ್ಟ ಅನುಭವಿಸುತ್ತಿದ್ದಾರೆ. ಬೆಲೆ ಹೆಚ್ಚಳವಾದಾಗ ಕೈಯಿಂದಲೇ ಹಣ ಹಾಕಿ ಖರೀದಿಸುವ ಕಷ್ಟ ಅವರದ್ದಾಗಿದೆ.

ವೃತ್ತಿಯಿಂದ ಯುವಜನತೆ ವಿಮುಖ

ದೊಡ್ಡ, ದೊಡ್ಡ ಶೋ ರೂಂಗಳ ಭರಾಟೆ, ಯಂತ್ರೋಪಕರಣಗಳ ಬಳಕೆಯಿಂದ ಅಕ್ಕಸಾಲಿಗ ವೃತ್ತಿ ಅಪಾಯದಲ್ಲಿದೆ. ಕೆಲವೇ ವರ್ಷಗಳಲ್ಲಿ ಈ ಕುಲಕಸುಬು ಇಲ್ಲವಾದರೂ ಆಶ್ಚರ್ಯವಿಲ್ಲ. ಕಂಬಾರ, ಕುಂಬಾರ ಸೇರಿ ಹಲವು ಕುಲಕಸಬುದಾರರಿಗೆ ಕೆಲಸವೇ ಇಲ್ಲ. ಈಗ ಅದೇ ಸಾಲಿನಲ್ಲಿ ಅಕ್ಕಸಾಲಿಗ ವೃತ್ತಿಯೂ ಸೇರ್ಪಡೆಯಾಗುವ ಭೀತಿ ಎದುರಾಗಿದೆ.

'ಶೇ 50ರಷ್ಟು ಜನರು ಈಗ ಕುಲಕಸುಬು ಬಿಟ್ಟು ಬೇರೆ ಕೆಲಸಗಳನ್ನು ಹುಡುಕಿಕೊಂಡು ಹೊರಟಿದ್ದಾರೆ. ಬೆಲೆ ಏರಿಕೆ ಬಳಿಕ ಆಭರಣಕ್ಕಿಂತ ಹೂಡಿಕೆ ದೃಷ್ಟಿಯಿಂದ ಗಟ್ಟಿ ಬಂಗಾರ ಮಾತ್ರ ಖರೀದಿಸುತ್ತಿದ್ದಾರೆ' ಎಂದು ಮಂಗಳೂರಿನ ರಾಘವೇಂದ್ರ ಮಠ ಸಮೀಪದ ಶ್ರೀ ಶಾರದಾ ಜುವೆಲ್ಲರಿ ವರ್ಕ್ಸ್ ಮಾಲೀಕ ಗಣೇಶ ಆಚಾರ್ಯ, ಕಲಬುರಗಿಯ ದೇವಿಂದ್ರ ದೇಸಾಯಿ ಕಲ್ಲೂರ ತಿಳಿಸಿದರು.

'ತಾತ, ತಂದೆ ಕಾಲದಿಂದ ಬಂದಿದೆ ಎಂದು ನಾವೂ ಇದೇ ವೃತ್ತಿಯನ್ನು ಮುಂದುವರೆಸಿದ್ದೇವೆ. ಆದರೆ, ಮಕ್ಕಳಿಗೆ ಈ ಕೆಲಸದಲ್ಲಿ ಆಸಕ್ತಿ ಇಲ್ಲ. ಕೆಲಸವೂ ಕಡಿಮೆ ಆಗುತ್ತಿದೆ. ಅದಕ್ಕೆ ಓದಿ, ನೌಕರಿ ಸೇರಲಿ ಎಂದು ವಿದ್ಯಾಭ್ಯಾಸ ಪಡೆಯಲು ಪ್ರೋತ್ಸಾಹಿಸುತ್ತಿದ್ದೇವೆ' ಎಂದು ಗಣೇಶ್ ಆಚಾರ್ಯ ಹೇಳಿದರು.

'ಬೀದರ್‌ನ ಹಳ್ಳಿಖೇಡ ಗ್ರಾಮದಲ್ಲಿ 17 ವರ್ಷಗಳಿಂದ ಚಿನ್ನಾಭರಣಗಳನ್ನು ತಯಾರಿಸಿ ಮಾರುತ್ತಿದ್ದೆ. ಮಳಿಗೆಯ ಬಾಡಿಗೆ ಕಟ್ಟಲು ಆಗದೆ 15 ದಿನಗಳ ಹಿಂದೆ ಬಾಗಿಲು ಹಾಕಿಕೊಂಡು ಬಂದು ಸ್ವಗ್ರಾಮದಲ್ಲಿದ್ದೇನೆ' ಎಂದು ಯಾದಗಿರಿ ತಾಲ್ಲೂಕಿನ ಬಾಡಿಯಾಳ ಗ್ರಾಮದ ಬಸವರಾಜ ವಿಶ್ವಕರ್ಮ ತಿಳಿಸಿದರು. ದಾವಣಗೆರೆ, ಕೊಪ್ಪಳ, ರಾಯಚೂರು ಜಿಲ್ಲೆಯ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಮುಚ್ಚುವ ಸ್ಥಿತಿಯಲ್ಲಿ ಬೆಳಗಾವಿಯ ಬೆಳ್ಳಿ, ಚಿನ್ನ ಆಭರಣ ಕಾರ್ಖಾನೆಗಳು

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಮಾಂಗೂರು ಗ್ರಾಮವು ಬೆಳ್ಳಿ ಸಾಮಗ್ರಿಗಳ ತಯಾರಿಕೆಯನ್ನೇ ನಂಬಿಕೊಂಡ ಊರು. 10 ಸಾವಿರ ಜನಸಂಖ್ಯೆ ಇರುವ ಈ ಊರಿನಲ್ಲಿ ಶೇ 80ಕ್ಕೂ ಹೆಚ್ಚು ಕುಟುಂಬಗಳು ಬೆಳ್ಳಿ ಕೆಲಸವನ್ನೇ ನಂಬಿವೆ. 200ಕ್ಕೂ ಹೆಚ್ಚು ಯೂನಿಟ್ (ಚಿಕ್ಕ ಕಾರ್ಖಾನೆ) ಇಲ್ಲಿವೆ. ಬೆಳ್ಳಿ ದರ ಗಗನಕ್ಕೇರಿದ್ದರಿಂದ ಊರಿನ ಜನರು ಕೆಲಸವಿಲ್ಲದೇ ಕಂಗಾಲಾಗಿದ್ದಾರೆ.

ಮಾಂಗೂರು ಮಾತ್ರವಲ್ಲ; ಸುತ್ತಮುತ್ತಲಿನ ಕಾರದಗಾ, ಬಾರವಾಡ, ಕುನ್ನೂರ ಗ್ರಾಮಗಳದ್ದೂ ಇದೇ ಕಥೆ. ಈ ಹಳ್ಳಿಗಳು ಮಹಾರಾಷ್ಟ್ರದ ಗಡಿಗೆ ಅಂಟಿಕೊಂಡಿವೆ. ಮುಂಬೈ, ಪುಣೆ, ಕೊಲ್ಹಾಪುರ, ಸೊಲ್ಲಾಪುರ, ಮೀರಜ್ ಬಹುಪಾಲು ಚಿನ್ನ–ಬೆಳ್ಳಿ ವ್ಯಾಪಾರಿಗಳು ಈ ಊರುಗಳ ಕಾರ್ಮಿಕರನ್ನೇ ಅವಲಂಬಿಸಿದ್ದಾರೆ. ಇವರಿಗೆ ಬೇಡಿಕೆ ಬರುವುದೂ ಮಹಾರಾಷ್ಟ್ರದಿಂದ, ಸರಬರಾಜು ಆಗುವುದೂ ಅಲ್ಲಿಗೇ.

ಚಿನ್ನ– ಬೆಳ್ಳಿ ಮಳಿಗೆಗಳೇ ಹೆಚ್ಚಾಗಿರುವ ಬೆಳಗಾವಿ ನಗರದ ಶಹಾಪುರದ 'ಸರಾಫ್ ಬಜಾರ್'ನಲ್ಲಿ ಈಗ ಗ್ರಾಹಕರ ಕೊರತೆ ಕಾಣುತ್ತಿದೆ ಚಿತ್ರ: ಏಕನಾಥ ಅಗಸಿಮನಿ

ಮಾಂಗೂರಿನ ಪ್ರತಿ ಮನೆಯಲ್ಲಿ ಬೆಳ್ಳಿಯ ಸಾಮಗ್ರಿ ತಯಾರು ಮಾಡುವ ಸಣ್ಣ ಘಟಕಗಳಿವೆ. ಕುಟುಂಬದ ಸದಸ್ಯರ ಜತೆಗೆ, ಐದಾರು ಕೆಲಸಗಾರರನ್ನು ಇಟ್ಟುಕೊಂಡು ಪುಟ್ಟ ಕಾರ್ಖಾನೆಗಳನ್ನು ನಡೆಸುತ್ತಿದ್ದರು. ಕಳೆದ ದೀಪಾವಳಿಯ ನಂತರ ಬೆಳ್ಳಿ ದರ ಊಹೆಗೂ ಮೀರಿ ಹೆಚ್ಚಾಗಿದೆ. ಇದರಿಂದ 'ಆರ್ಡರ್'ಗಳು ಬಂದ್ ಆಗಿವೆ. ಮೂರು ತಿಂಗಳಿಂದ ಅಕ್ಕಸಾಲಿಗರಿಗೆ ಕೆಲಸವಿಲ್ಲ.

ಕೆಲವರು ಮುಂಬೈ, ಪುಣೆ ಕಡೆಗೆ ಬೇರೆ ಉದ್ಯೋಗ ಅರಸಿ ವಲಸೆ ಹೋದರೆ, ಮತ್ತೆ ಕೆಲವರು ಹೊಲಗಳತ್ತ ಮುಖ ಮಾಡಿದ್ದಾರೆ. ಬೇರೆ ಯಾವುದೂ ಕೆಲಸ ಬಾರದವರು ದಿನದೂಡುವುದೇ ದುಸ್ತರವಾಗಿದೆ ಎನ್ನುತ್ತಾರೆ ಮಾಂಗೂರಿನ ವಿನೋದ ಪಾಟೀಲ.

ಬೆಳ್ಳಿ, ಬಂಗಾರದ ಬೆಲೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಖರೀದಿ ಮತ್ತು ದುರಸ್ತಿಗೆಂದು ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಗ್ರಾಹಕರು ಬಾರದ ಕಾರಣ ನಮಗೂ ಕೆಲಸ ಇಲ್ಲದಂತಾಗಿದೆ.
ಶ್ರೀಕಾಂತ ಪತ್ತಾರ, ಜಿಲ್ಲಾ ಘಟಕದ ಅಧ್ಯಕ್ಷ, ಕರ್ನಾಟಕ ಸ್ವರ್ಣಕಾರರ ಸಂಘ, ಬಾಗಲಕೋಟೆ

ಅಕ್ಕಸಾಲಿಗರು ಅಸಂಘಟಿತ ವಲಯದಲ್ಲಿ ಬರುತ್ತಾರೆ. ಕಾರ್ಮಿಕ ಇಲಾಖೆಯಲ್ಲಿ ಹೆಸರು ನೋಂದಣಿ ಮಾಡಿದರೆ ಅಪಘಾತದಲ್ಲಿ ತೀರಿಕೊಂಡರೆ ₹1 ಲಕ್ಷ, ಗಾಯಗೊಂಡರೆ ₹50 ಸಾವಿರ, ಸಹಜ ಸಾವಿಗೆ ₹10 ಸಾವಿರ ಸಹಾಯಧನ ಸಿಗುತ್ತದೆ.
ರಮೇಶ ಸುಂಬಡ, ಜಿಲ್ಲಾ ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ, ಬಾಗಲಕೋಟೆ ಜಿಲ್ಲೆ

ಹಿಂದೆಲ್ಲ ತಿಂಗಳಿಗೊಮ್ಮೆ ಬೆಲೆ ಏರುಪೇರಾದರೆ ದೊಡ್ಡ ವಿಷಯವಾಗುತ್ತಿತ್ತು. ಈಗ ದಿನದಲ್ಲಿ ಮೂರರಿಂದ ನಾಲ್ಕು ಬಾರಿ ಏರಿಳಿತ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಕೆಲಸ ಒಪ್ಪಿಕೊಳ್ಳಲು ಯಾರಿಗೂ ಭರವಸೆ ಇಲ್ಲ.
ಪ್ರಕಾಶ್ ಆಚಾರ್ ಹಳಿಜಿ, ಕಾರ್ಯದರ್ಶಿ, ದಕ್ಷಿಣ ಕನ್ನಡ ಚಿನ್ನ–ಬೆಳ್ಳಿ ಆಭರಣ ತಯಾರಕರ ಸಂಘ

ಮೇಕಿಂಗ್ ಚಾರ್ಜ್ ನಷ್ಟದ ಭಯ: ಚಿನ್ನದ ಗಟ್ಟಿಯತ್ತ ಗ್ರಾಹಕರು ಆಕರ್ಷಿತರಾಗಲು ಕಾರಣವಿದೆ. ಆಭರಣ ತಯಾರಿಕೆ ವೇಳೆ ಪ್ರತಿ 10 ಗ್ರಾಂಗೆ ಇಂತಿಷ್ಟು ಎಂದು ಮೇಕಿಂಗ್ ಚಾರ್ಜ್ ವಿಧಿಸಲಾಗುತ್ತದೆ. ಚಿನ್ನದ ಬೆಲೆ ಕಮ್ಮಿ ಇದ್ದಾಗ ಪ್ರತಿ 10 ಗ್ರಾಂ ಚಿನ್ನಕ್ಕೆ ₹ 6 ಸಾವಿರದಿಂದ ₹ 7500 ಮೊತ್ತ ಆಗುತ್ತಿತ್ತು. ಈಗ ಆ ಮೇಕಿಂಗ್ ಚಾರ್ಜ್ ಮೊತ್ತವೇ ₹20 ಸಾವಿರದಿಂದ ₹30 ಸಾವಿರ ಆಗುತ್ತಿದೆ. ಇದು ಆಭರಣದಿಂದ ಆಭರಣಕ್ಕೆ ಬದಲಾಗುತ್ತದೆ. ಇದರಿಂದ ಆಭರಣ ಖರೀದಿಸುವವರು ಕಡಿಮೆಯಾಗುತ್ತಿದ್ದಾರೆ.

'ಬೆಳ್ಳಿಯ ಬೆಲೆಯೂ ಹೆಚ್ಚಾಗುತ್ತಿರುವುದರಿಂದ ಕುಂಕುಮ ಹಾಕುವ ಆಭರಣ, ಬೆಳ್ಳಿಯ ಸಮೆ, ಕಾಲ್ಗಡುಗ ಖರೀದಿಸುವ ಬದಲು ಸಭೆ, ಸಮಾರಂಭಗಳಲ್ಲಿ ಹಣವನ್ನೇ ಉಡುಗೊರೆಯಾಗಿ ಕೊಡುತ್ತಿದ್ದಾರೆ. ಬೆಳ್ಳಿ ಆಭರಣಗಳನ್ನು ಉಡುಗೊರೆಯಾಗಿ ಕೊಡುತ್ತಿಲ್ಲ. ಇದು ಖರೀದಿ ಪ್ರಮಾಣ ಕುಸಿತಕ್ಕೆ ಕಾರಣವಾಗಿದೆ' ಎಂದು ಕಲಬುರಗಿ ಜ್ಯುವೆಲ್ಲರಿ ಮಾಲೀಕ ವಜ್ರಕುಮಾರ್ ಟೆಂಗಳಿ.

ಚಿನ್ನದ ಆಭರಣಗಳನ್ನು ಮಾಡುವಾಗ ಅಂಗಡಿಗಳವರು ಪ್ರತಿ 10 ಗ್ರಾಂ ಚಿನ್ನಕ್ಕೆ ಐದು ಗುಂಜಿಯವರೆಗೆ ವೇಸ್ಟೇಜ್ ಎಂದು ಅಕ್ಕಸಾಲಿಗರಿಗೆ ನೀಡುತ್ತಾರೆ. ಅದರಲ್ಲಿ ಆಭರಣಕ್ಕಾಗಿ ಕರಗಿಸಿದಾಗ ಕೈಗೆ ಸಿಗದೇ ಒಂದರಿಂದ ಎರಡು ಗುಂಜಿಯಷ್ಟು ಅಕ್ಕಸಾಲಿಗರಿಗೆ ಉಳಿಯುತ್ತಿತ್ತು. ಈಗ ಕೆಲಸವೇ ಇಲ್ಲದ್ದರಿಂದ ವೇಸ್ಟೇಜ್ ಸಹ ಉಳಿಯುತ್ತಿಲ್ಲ.

ಶೋ ರೂಂಗಳಿಗೂ ಸಂಕಷ್ಟ

ಮದುವೆ ಸೀಸನ್ ಶುರುವಾದ ಕೂಡಲೇ ಗ್ರಾಹಕರು ಭಾರಿ ಸಂಖ್ಯೆಯಲ್ಲಿ ಚಿನ್ನಾಭರಣ ಶೋರೂಮ್‌ಗಳಿಗೆ ಲಗ್ಗೆ ಇಡುತ್ತಿದ್ದರು. ಆದರೆ, ಈಗ ಅವರ ಸಂಖ್ಯೆ ಕುಸಿದಿದೆ. ಅಳೆದು–ತೂಗಿ ಅನಿವಾರ್ಯವಿದ್ದಷ್ಟೇ ಬಂಗಾರ ಖರೀದಿ ನಡೆದಿದೆ. ಶೋರೂಂಗಳ ವೆಚ್ಚ ನಿರ್ವಹಣೆಗೂ ಆದಾಯ ಸಾಲುತ್ತಿಲ್ಲ.

ಬಂಗಾರ, ಬೆಳ್ಳಿ ಆಭರಣ ಮಾಡುತ್ತಿರುವ ಅಕ್ಕಸಾಲಿಗರಷ್ಟೇ ಅಲ್ಲ, ಅವುಗಳನ್ನು ಮಾರಾಟ ಮಾಡಲು ದೊಡ್ಡ, ದೊಡ್ಡ ಶೋ ರೂಂ ಗಳನ್ನು ತೆರೆದ ಅಂಗಡಿಗಳ ಮಾಲೀಕರಿಗೂ ಬೆಲೆ ಏರಿಕೆ ಹೊಡೆತ ನೀಡಿದೆ.

'ಬೆಲೆ ಏರಿಕೆಯಿಂದ ಜನರು ಆಭರಣಗಳಿಗಾಗಿ ಚಿನ್ನ ಖರೀದಿಸುತ್ತಿಲ್ಲ. ಹೂಡಿಕೆ ದೃಷ್ಟಿಯಿಂದ ಖರೀದಿಸುತ್ತಿದ್ದಾರೆ. ಅದನ್ನೂ ಆನ್‌ಲೈನ್ ಮೂಲಕವೇ ಬಂಗಾರ, ಬೆಳ್ಳಿ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ' ಎಂದು ಉದ್ಯಮಿ ಕೆ.ಪಿ. ನಂಜುಂಡಿ ತಿಳಿಸಿದರು.

'ಗ್ರಾಹಕರೇ ಇಲ್ಲದಂತಾಗಿದೆ. ಬೆಲೆ ಇಳಿಯುವ ನಿರೀಕ್ಷೆಯಲ್ಲಿಯೇ ಕಾದು ಕುಳಿತಿದ್ದಾರೆ. ಶೇ 60 ರಷ್ಟು ವ್ಯಾಪಾರ ಕಡಿಮೆಯಾಗಿದೆ. ವರ್ಷದಿಂದ ಕಡಿಮೆಯಾಗುತ್ತಾ ಬಂದಿದ್ದ ವ್ಯಾಪಾರ ನಾಲ್ಕು ತಿಂಗಳಿನಿಂದ ಪೂರ್ತಿ ಕಡಿಮೆಯಾಗಿದೆ' ಎನ್ನುತ್ತಾರೆ ಬಾಗಲಕೋಟೆ ಭಗವಾನದಾಸ ಬಾರ್ಶಿ ಜ್ಯುವೆಲ್ಲರ್ಸ್ ದಿನೇಶ ಬಾರ್ಶಿ.

'ಈಚೆಗೆ ದಿನದಲ್ಲಿ ಮೂರು ಬಾರಿ ಬೆಲೆ ಏರಿಕೆ ಆಗುತ್ತಿದೆ. ಮಧ್ಯಾಹ್ನ ಇದ್ದ ಬೆಲೆ ಸಂಜೆ ಇರುವುದಿಲ್ಲ. ಆಭರಣ ಆರ್ಡರ್ ತೆಗೆದುಕೊಳ್ಳುವಾಗ ಯಾವ ಬೆಲೆ ಹೇಳಬೇಕು ಎಂಬ ಗೊಂದಲ ಕೆಲಸಗಾರರನ್ನು ಕಾಡುತ್ತದೆ. ಈಗ ಬೆಲೆ ಏರಿಳಿತ ಕಾಣುತ್ತಿರುವುದರಿಂದ ಅಂಗಡಿ ನಡೆಸುವುದೇ ಕಷ್ಟವಾಗಿದೆ' ಎಂದು ಮಂಗಳೂರಿನ ಸ್ವರ್ಣೋದ್ಯಮ ಹಿತರಕ್ಷಣಾ ವೇದಿಕೆಯ ಹಳೆಯಂಗಡಿ ವಲಯ ಅಧ್ಯಕ್ಷ ಜಗದೀಶ್ ಪಿ ಹೇಳಿದರು.

ಚಿನ್ನ, ಬೆಳ್ಳಿ ವ್ಯಾಪಾರಸ್ಥರು ಈಗ ರೆಡಿಮೇಡ್ ಒಡವೆಗಳಿಗೆ ಒತ್ತು ನೀಡುತ್ತಿದ್ದಾರೆ. ಅಕ್ಕಸಾಲಿಗರ ಕೈಯಲ್ಲಿ ಮಾಡಿಸುವುದಕ್ಕಿಂತ ಕಡಿಮೆ ವೆಚ್ಚದಲ್ಲಿ ಈ ಒಡವೆಗಳು ಸಿಗುತ್ತಿವೆ. ಸರ್ಕಾರವು ಅಕ್ಕಸಾಲಿಗರಿಗರ ಭದ್ರತೆಗಾಗಿ ಯೋಜನೆ ರೂಪಿಸಬೇಕು ಎಂದು ಬೆಂಗಳೂರಿನ ಶ್ರೀ ವಿಶ್ವಕರ್ಮ ಸೇವಾ ಸಮಿತಿ ಚಿನ್ನ, ಬೆಳ್ಳಿ ಕೆಲಸಗಾರರ ಘಟಕದ ಅಧ್ಯಕ್ಷ ಆರ್. ಮಧುಸೂದನ್ ಮನವಿ ಮಾಡಿದ್ದಾರೆ.

ಬೆಲೆ ಏರಿಳಿತ ಮತ್ತು ಗಟ್ಟಿ ಬಂಗಾರ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಮಾಡುವವರು ಹೆಚ್ಚಾಗುತ್ತಿರುವ ಕಾರಣದಿಂದ ಬಂಗಾರವಾಗಿದ್ದ ಅಕ್ಕಸಾಲಿಕರ ಬದುಕು ಸಂಕಷ್ಟದತ್ತ ತಿರುಗಿದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಸಂತೋಷ ಈ. ಚಿನಗುಡಿ, ವಿಕ್ರಂ ಕಾಂತಿಕೆರೆ, ಪ್ರದೀಪ ಕುಂದಣಗಾರ, ಮೋಹನ್ ಕುಮಾರ ಸಿ, ಮನೋಜಕುಮಾರ್ ಗುದ್ದಿ, ಬಾಲಕೃಷ್ಣ ಪಿ.ಎಚ್

ಮಾಂಗಲ್ಯ ಸರಕ್ಕೆ ಬಂಗಾರದ ತಂತಿ ತಯಾರಿಸಲು ಪಟ್ಟಾ ಹಾಕುವ ಮಷಿನ್ ಕೆಲಸವಿಲ್ಲದೆ ಖಾಲಿಯಾಗಿರುವುದು
ಪ್ರಜಾವಾಣಿ ಚಿತ್ರ– ಸತೀಶ್ ಬಡಿಗೇರ

ಅನಿಶ್ಚಿತತೆ ನಡುವೆ ದಾಖಲೆಯ ಗಳಿಕೆ

• ವಿಜಯ್ ಜೋಷಿ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಯುದ್ಧ, ರಾಜಕೀಯ ಅಸ್ಥಿರತೆಯಂತಹ ಸಮಸ್ಯೆಗಳು ಇದ್ದಾಗ ಹೂಡಿಕೆದಾರರಿಗೆ ಚಿನ್ನ, ಬೆಳ್ಳಿ ಹೆಚ್ಚು ಸುರಕ್ಷಿತವಾಗಿ ಕಾಣುತ್ತವೆ. ಅಂತಹ ಸಂದರ್ಭಗಳಲ್ಲಿ ಅವರು ಷೇರುಗಳಿಗಿಂತ ಹೆಚ್ಚಾಗಿ ಚಿನ್ನ ಮತ್ತು ಬೆಳ್ಳಿಯ ಮೇಲೆ ಹಣ ತೊಡಗಿಸುತ್ತಾರೆ ಎಂಬುದು ತಜ್ಞರ ಮಾತು.

ಅಂಕಿ–ಅಂಶಗಳು ಈ ಮಾತಿಗೆ ಪೂರಕವಾಗಿ ಇವೆ. 2022ರಲ್ಲಿ ಉಕ್ರೇನ್–ರಷ್ಯಾ ಯುದ್ಧ, 2023ರಲ್ಲಿ ಇಸ್ರೇಲ್–ಹಮಾಸ್ ಕದನ, 2024ರಲ್ಲಿ ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಎರಡನೆಯ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾದ ನಂತರದಲ್ಲಿ ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು ತೀವ್ರಗೊಂಡಿವೆ. ಸುಂಕವನ್ನು ಅಸ್ತ್ರವನ್ನಾಗಿಸಿಕೊಂಡ ವ್ಯಾಪಾರ ಸಮರವೂ ಜೋರಾಗಿದೆ.

ಡಿಸೆಂಬರ್ 31ಕ್ಕೆ ಕೊನೆಗೊಂಡ ಕ್ಯಾಲೆಂಡರ್ ವರ್ಷದಲ್ಲಿ ಚಿನ್ನದ ಬೆಲೆಯು ಬೆಂಗಳೂರಿನ ಮಾರುಕಟ್ಟೆಯಲ್ಲಿ ಶೇಕಡ 73.98ರಷ್ಟು ಏರಿಕೆ ದಾಖಲಿಸಿದೆ. ಇದೇ ಅವಧಿಯಲ್ಲಿ ಬೆಳ್ಳಿಯ ಬೆಲೆಯು ಬೆಂಗಳೂರಿನಲ್ಲಿ ಶೇ 170.54ರಷ್ಟು ಏರಿಕೆ ಕಂಡಿದೆ.

2022ರಲ್ಲಿ ಬೆಳ್ಳಿ ಮತ್ತು ಚಿನ್ನ ಕ್ರಮವಾಗಿ ಶೇ 14ರಷ್ಟು ಹಾಗೂ ಶೇ 11ರಷ್ಟು ಲಾಭ ತಂದುಕೊಟ್ಟಿವೆ. ಆ ವರ್ಷದಲ್ಲಿ ಷೇರುಪೇಟೆಯಲ್ಲಿ ಹಾಗೂ ಸುರಕ್ಷಿತವಾದ ಸಾಲಪತ್ರಗಳಲ್ಲಿನ ಹೂಡಿಕೆಯಿಂದ ಸಿಕ್ಕ ಲಾಭ ಕ್ರಮವಾಗಿ ಶೇ 6ರಷ್ಟು ಹಾಗೂ ಶೇ 2ರಷ್ಟು ಮಾತ್ರ.

2024ರಲ್ಲಿ ಕೂಡ ಚಿನ್ನ ಹಾಗೂ ಬೆಳ್ಳಿ ಕ್ರಮವಾಗಿ ಶೇ 31ರಷ್ಟು ಮತ್ತು ಶೇ 25ರಷ್ಟು ಲಾಭ ನೀಡಿವೆ. ಈ ಪ್ರಮಾಣವು ಷೇರುಪೇಟೆ (ನಿಫ್ಟಿ–50 ಸೂಚ್ಯಂಕ) ಹಾಗೂ ಸಾಲಪತ್ರಗಳು (ನಿಫ್ಟಿ ಕಾಂಪೊಸಿಟ್ ಜಿ–ಸೆಕ್ ಸೂಚ್ಯಂಕ) ನೀಡಿದ ಲಾಭದ ಪ್ರಮಾಣಕ್ಕಿಂತ ಹೆಚ್ಚು. 2025ರ ಗಳಿಕೆಯನ್ನು ಬರಹದ ಆರಂಭದಲ್ಲಿಯೇ ನೀಡಲಾಗಿದೆ.

'ಡಾಲರ್ ದುರ್ಬಲ ಆಗುತ್ತಿರುವುದು, ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು ಹಾಗೂ ಸುರಕ್ಷಿತ ಹೂಡಿಕೆಗಳತ್ತ ಮುಖ ಮಾಡಬೇಕು ಎಂಬ ಬಲವಾದ ತುಡಿತ ಚಿನ್ನದ ಮೇಲೆ ಹಣ ತೊಡಗಿಸುವುದು ಜಾಸ್ತಿ ಆಗಿರುವುದಕ್ಕೆ ಕಾರಣ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸರಕುಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ಹರೀಶ್ ವಿ. ಅವರು 'ಪ್ರಜಾವಾಣಿ' ಜೊತೆ ಅಭಿಪ್ರಾಯ ಹಂಚಿಕೊಂಡರು.

ಇದೇ ಬಗೆಯ ಅನಿಸಿಕೆಯನ್ನು ವೆಲ್ತ್ ಕಂಪನಿ ಮ್ಯೂಚುವಲ್ ಫಂಡ್‌ನ ಉಪ ಸಿಇಒ ಪ್ರಸನ್ನ ಪಾಠಕ್ ಅವರೂ ವ್ಯಕ್ತಪಡಿಸಿದರು. 'ಹಣದುಬ್ಬರ ಹೆಚ್ಚಿರುವಾಗ, ಅರ್ಥವ್ಯವಸ್ಥೆಯಲ್ಲಿ ಅನಿಶ್ಚಿತತೆ ಇರುವಾಗ, ಷೇರುಪೇಟೆಯಲ್ಲಿ ಕುಸಿತ ಸಾಮಾನ್ಯವಾಗಿರುವಾಗ ಬೆಳ್ಳಿ ಮತ್ತು ಚಿನ್ನದ ಮೇಲಿನ ಹೂಡಿಕೆಯು ಸ್ಥಿರತೆಯನ್ನು ನೀಡಬಲ್ಲದು ಎಂಬುದನ್ನು ಭಾರತದ ಕುಟುಂಬಗಳು ಅರ್ಥ ಮಾಡಿಕೊಂಡಿವೆ' ಎಂದು ಪಾಠಕ್ ವಿವರಿಸಿದರು.

'ಚಿನ್ನ, ಬೆಳ್ಳಿ ಮೇಲಿನ ಹೂಡಿಕೆಯನ್ನು ರಿಸ್ಕ್‌ಗಳಿಂದ ರಕ್ಷಿಸಿಕೊಳ್ಳಲು ಬಳಸಿಕೊಳ್ಳಲಾಗುತ್ತಿದೆ; ಹೆಚ್ಚು ಬೆಳವಣಿಗೆ ಕಾಣಬಹುದಾದ ಆಸ್ತಿಗಳ ಮೇಲಿನ ಹೂಡಿಕೆಗೆ ಪರ್ಯಾಯವಾಗಿ ಅಲ್ಲ... ಚಿನ್ನ ಮತ್ತು ಬೆಳ್ಳಿಯ ಮೇಲಿನ ಹೂಡಿಕೆಯು ಅಸಲು ಮೊತ್ತವನ್ನು ಕಾಪಾಡಿಕೊಳ್ಳುವ ಸಾಧನವಾಗಿ ಬಳಕೆ ಆಗುತ್ತಿದೆ' ಎಂದು ಪಾಠಕ್ ಅವರು ತಿಳಿಸಿದರು.

ಕೈಗಾರಿಕೆಗಳಿಂದ ಬರುತ್ತಿರುವ ಬೇಡಿಕೆ, ಹೂಡಿಕೆದಾರರು ಇಟಿಎಫ್‌ಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಹಣ ತೊಡಗಿಸುತ್ತಿರುವುದು, ಬೇಡಿಕೆಗೆ ಅನುಗುಣವಾಗಿ ಪೂರೈಕೆ ಇಲ್ಲದಿರುವ ಕಾರಣದಿಂದಾಗಿ ಕಳೆದ ಆರು ತಿಂಗಳ ಅವಧಿಯಲ್ಲಿ ಬೆಳ್ಳಿಯ ಬೆಲೆ ಕೂಡ ತೀವ್ರವಾಗಿ ಹೆಚ್ಚಳ ಕಂಡಿದೆ. ಬೆಳ್ಳಿಯ ಬಳಕೆ ಸೌರವಿದ್ಯುತ್ ಉತ್ಪಾದನೆ ಹಾಗೂ ಇ.ವಿ. ಉದ್ಯಮ ವಲಯದಲ್ಲಿ ಹೆಚ್ಚಾಗಿರುವುದು ಬೆಲೆ ಹೆಚ್ಚಳಕ್ಕೆ ಪೂರಕವಾಗಿವೆ ಎಂದು ಹರೀಶ್ ಅವರು ವಿವರಿಸಿದರು.

ಚಿನ್ನ, ಬೆಳ್ಳಿಯ ಬೆಲೆ ಏರಿಕೆ ಹಾಗೂ ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ನಡುವಿನ ಸಂಬಂಧವನ್ನು ಈಚೆಗೆ ಸಂಸತ್ತಿನಲ್ಲಿ ಮಂಡನೆಯಾಗಿರುವ ಆರ್ಥಿಕ ಸಮೀಕ್ಷೆ ವರದಿಯು ದಾಖಲಿಸಿದೆ.

'ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಮುಂದುವರಿದಿರುವ ಕಾರಣದಿಂದಾಗಿ ಚಿನ್ನ ಹಾಗೂ ಬೆಳ್ಳಿಯ ಬೆಲೆಯು ಹೆಚ್ಚಿನ ಮಟ್ಟದಲ್ಲಿಯೇ ಇರುವ ನಿರೀಕ್ಷೆ ಇದೆ. ವಿಶ್ವ ಮಟ್ಟದಲ್ಲಿ ಬಹುಕಾಲ ಉಳಿಯುವಂತಹ ಶಾಂತಿ ಸ್ಥಾಪನೆ ಆಗದೆ ಇದ್ದರೆ, ವ್ಯಾಪಾರ ಸಮರಕ್ಕೆ ಪರಿಹಾರ ಕಂಡುಕೊಳ್ಳದೆ ಇದ್ದರೆ ಚಿನ್ನ ಮತ್ತು ಬೆಳ್ಳಿಯ ಬೆಲೆಯು ಕಡಿಮೆ ಆಗದು' ಎಂದು ಆರ್ಥಿಕ ಸಮೀಕ್ಷೆ ವರದಿ ಹೇಳಿದೆ.

ಚಿನ್ನ ಮತ್ತು ಬೆಳ್ಳಿಯ ಬೆಲೆಯು ಏರುಹಾದಿಯಲ್ಲಿ ಇದೆ. ಇವುಗಳ ಬೆಲೆ ಏರಿಕೆಯು ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚಾಗಿರುವುದನ್ನು, ಸುರಕ್ಷಿತ ಹೂಡಿಕೆಗಳಿಗೆ ಬೇಡಿಕೆ ಹೆಚ್ಚಾಗಿರುವುದನ್ನು ತೋರಿಸುತ್ತಿದೆ ಎಂದು ಸಮೀಕ್ಷೆ ವರದಿಯು ಉಲ್ಲೇಖಿಸಿದೆ.

ಹೂಡಿಕೆದಾರರು ತಮ್ಮ ಹಣವನ್ನು ವಿನಿಯೋಗ ಮಾಡುವುದರಲ್ಲಿ ರಾಚನಿಕ ಬದಲಾವಣೆ ಆಗುತ್ತಿದೆ. ಮೊದಲ ಬಾರಿಗೆ ದುಡಿಮೆ ಆರಂಭಿಸಿರುವವರು ತಮ್ಮ ಹೂಡಿಕೆ ಹಣದಲ್ಲಿ ಶೇ 5ರಷ್ಟನ್ನು ಚಿನ್ನ, ಬೆಳ್ಳಿ ಮೇಲೆ ತೊಡಗಿಸುತ್ತಿದ್ದಾರೆ. ವೃತ್ತಿಬದುಕಿನ ನಡುವಿನಲ್ಲಿರುವವರು ಶೇ 8–10ರಷ್ಟನ್ನು, ಅತಿಶ್ರೀಮಂತ ಕುಟುಂಬಗಳು ಶೇ 10–15ರಷ್ಟನ್ನು ಇವುಗಳ ಮೇಲೆ ತೊಡಗಿಸುತ್ತಿವೆ ಎಂದು ಪಾಠಕ್ ಮಾಹಿತಿ ನೀಡಿದರು. 'ಇದು ಶಿಸ್ತುಬದ್ಧವಾಗಿ ಮಾಡುತ್ತಿರುವ ಹೂಡಿಕೆ, ಊಹೆಗಳ ಆಧಾರದ ಮೇಲೆ ಮಾಡುತ್ತಿರುವ ಹೂಡಿಕೆ ಅಲ್ಲ' ಎಂದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 8-2-2001

• **ರಕ್ಷಣಾ ವಸ್ತುಗಳ ಉತ್ಪಾದನೆ ಖಾಸಗಿ ಸಂಸ್ಥೆಗಳಿಗೆ ಅವಕಾಶ**

ಬೆಂಗಳೂರು, ಫೆ.7– ಉತ್ತಮ ತಂತ್ರಜ್ಞಾನ ಮತ್ತು ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಭಾರತವು ಅಂತರರಾಷ್ಟ್ರೀಯ ಸಹಭಾಗಿತ್ವದ ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ ವಿಶ್ವದರ್ಜೆಯ ರಕ್ಷಣಾ ವಸ್ತುಗಳನ್ನು ಉತ್ಪಾದಿಸಲು ಕೇಂದ್ರ ಸರ್ಕಾರ ಖಾಸಗಿ ಸಂಸ್ಥೆಗಳಿಗೆ ಮುಕ್ತ ಆಹ್ವಾನ ನೀಡಿತು.

'ಏರೋ ಇಂಡಿಯ–2001' ವೈಮಾನಿಕ ಪ್ರದರ್ಶನವನ್ನು ಉದ್ಘಾಟಿಸಿದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್, 'ತಂತ್ರಜ್ಞಾನ ವರ್ಗಾವಣೆ ಹಾಗೂ ಜಂಟಿ ಸಹಭಾಗಿತ್ವದಲ್ಲಿ ರಕ್ಷಣಾ ಸಾಮಗ್ರಿ ಉತ್ಪಾದಿಸಲು ಖಾಸಗಿ ಸಂಸ್ಥೆಗಳು ಮುಂದೆ ಬರಬೇಕಯ' ಎಂದರು.

75 ವರ್ಷಗಳ ಹಿಂದೆ

ಗುರುವಾರ, 8-2-1951

• **ಕಾಮನ್ವೆಲ್ತ್ ಸಮ್ಮೇಳನದ ಶಾಂತಿ ನೀತಿ ಅನ್ವಯ**

ನವದೆಹಲಿ, ಫೆ.6– ಭಾರತ ಸರ್ಕಾರದ ಮಟ್ಟಿಗೆ ಹೇಳುವುದಾದರೆ ಲಂಡನ್ನಿನಲ್ಲಿ ನಡೆದ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದ ಶಾಂತಿ ಧೋರಣೆಯನ್ನೇ ತಾವು ಪೂರ್ತಿ ಪಾಲಿಸಿಕೊಂಡು ಬರಲು ಪ್ರಯತ್ನಿಸುವುದಾಗಿ ಪ್ರಧಾನಿ ಪಂಡಿತ ನೆಹರೂ ಅವರು ಇಂದು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಇತ್ತೀಚಿಗೆ ನಡೆದ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದ ಬಗ್ಗೆ ಹಾಗೂ ಅಲ್ಲಿ ಚರ್ಚಿತವಾದ ಪ್ರಶ್ನೆಗಳ ಕುರಿತು ಶ್ರೀ ಉಪೇಂದ್ರನಾಥ ಬರ್ಮನ್ ಅವರು ಕೇಳಿದ ಪ್ರಶ್ನೆಗೆ ಉತ್ತರವೀಯುತ್ತ ನೆಹರೂ ಮೇಲ್ಕಂಡಂತೆ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

08 ಫೆಬ್ರುವರಿ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು, ತಿಥಿ: ಮಾಘ ಕೃಷ್ಣ ಸಪ್ತಮಿ ಗಂ. 29-02, ನಕ್ಷತ್ರ: ಸ್ವಾತಿ ಗಂ. 29-03, ಯೋಗ: ಗಂಡ ಗಂ. 24-08, ಕರಣ: ವಿಷ್ಟಿ ಗಂ 15-55 ಮಕರ ಮಾಸದ 25 ನೇ ದಿನ. ಮಳೆ ನಕ್ಷತ್ರ: ಧನಿಷ್ಠ 1 ನೇ ಪಾದ. ರಾಹುಕಾಲ: ಸಾಯಂಕಾಲ 04-30 - 06-00, ಸೂರ್ಯೋದಯ: 06-59, ಸೂರ್ಯಾಸ್ತ: 06-30, ಮುಸ್ಲಿಂ ದಿನಾಂಕ: 19 ಶಬನ್, ಅದೃಷ್ಟ ಸಂಖ್ಯೆ: 10, 3

ಮೇಷ: ಸಹಚರರಿಂದ ಅಥವಾ ಅಧಿಕಾರಿಗಳಿಂದ ನಿಮಗೆ ಅಸಹಕಾರದ ಪರಿಸ್ಥಿತಿ ಎದುರಾಗಬಹುದು. ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಬರಲಿದೆ. ಋಣ ಪರಿಹಾರವಾಗಿ ನೆಮ್ಮದಿ ಮೂಡುವುದು.

ವೃಷಭ: ಜಾಹೀರಾತು ಏಜೆನ್ಸಿಯಲ್ಲಿರುವವರಿಗೆ ಏಳಿಗೆ ಹಾಗೂ ಪ್ರಚಾರ ತರುವ ಸೂಕ್ತ ವಿಚಾರದಲ್ಲಿ ಕೆಲಸ ಮಾಡುವ ಅವಕಾಶ ದೊರೆಯಲಿದೆ. ಆತ್ಮಾಭಿಮಾನಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳಿ.

ಮಿಥುನ: ದುಬಾರಿ ವಸ್ತುಗಳನ್ನು ಖರೀದಿಸುವ ಹಾಗೂ ಅದರ ಅವಶ್ಯಕತೆಯ ಕುರಿತು ನಿಮ್ಮ ಮನೆಯವರೊಂದಿಗೆ ಚರ್ಚಿಸಿ ಬಳಿಕ ಖರೀದಿಸಿ. ದಿನಗೂಲಿ ಕೆಲಸವನ್ನು ಮಾಡುವವರಿಗೆ ಈ ದಿನ ಸ್ವಲ್ಪ ಅಸ್ಥಿರತೆ ಕಾಡಬಹುದು.

ಕರ್ಕಾಟಕ: ಕಲಾವಿದರಿಗೆ ಚಿತ್ರರಂಗದ ಜಗತ್ತಿನಲ್ಲಿ ಉತ್ತಮ ಅವಕಾಶಗಳು ಸಿಗುವುವು. ಸಂಸಾರದಲ್ಲಿ ಬಿರುಕು ಮೂಡದಂತೆ ನೋಡಿಕೊಳ್ಳಿ. ಹಣಕಾಸಿನ ಸಂಸ್ಥೆಗೆ ಪಾಲುದಾರರಾಗುವ ಸಾಧ್ಯತೆ ಇದೆ.

ಸಿಂಹ: ಅಕ್ಕಪಕ್ಕದವರ ಅಥವಾ ಸ್ನೇಹಿತರ ಹೊಗಳಿಕೆಯ ಮಾತುಗಳಿಗೆ ಕಿವಿಗೊಟ್ಟು ಮರುಳಾಗಬೇಡಿ. ಬಂಧುಗಳ ಮಾತು ಮನಸ್ಸನ್ನು ನೋಯಿಸುವುದು. ಅದರಿಂದಾಗಿ ಮನಸ್ಸು ನಿರಾಸಕ್ತಿಯ ಭಾವನೆಯಿಂದ ಇರುವುದು.

ಕನ್ಯಾ: ಸಹೋದರಿಯ ಮದುವೆಯಂತಹ ಸಂದರ್ಭಕ್ಕೆ ಆಪ್ತರೊಬ್ಬರು ನೆರವಿಗೆ ಬರಲಿದ್ದಾರೆ. ಆಸ್ತಿ ಕೊಳ್ಳುವ ವಿಷಯದಲ್ಲಿ ಹೆಂಡತಿಯೊಂದಿಗೆ ಮಾತುಕತೆ ನಡೆಸಿ. ಹಿರಿಯ ಸಹೋದ್ಯೋಗಿಗಳಿಂದ ಬೈಗುಳ ಕೇಳಬೇಕಾಗುವುದು.

ತುಲಾ: ನಿಮ್ಮ ಮನಃಸ್ಥಿತಿಯು ಯಾರೊಂದಿಗೂ ಬೆರೆಯದೆ, ಕೆಲಸ ಕಾರ್ಯಗಳತ್ತಲೇ ಇರುವುದು. ಮಕ್ಕಳ ಭವಿಷ್ಯದ ಕುರಿತಾಗಿ ಆಳವಾದ ಚಿಂತನೆ ನಡೆಸುವಿರಿ. ಪರರಿಗೆ ಸಹಾಯ ಮಾಡುವ ಮನೋಭಾವದಿಂದ ಮುನ್ನಡೆ ಇರುವುದು.

ವೃಶ್ಚಿಕ: ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಪುಣ್ಯದ ಕೆಲಸವೆಂದು ಭಾವಿಸಿ, ಹೊರತಾಗಿ ಪ್ರತಿಫಲವನ್ನು ಅಪೇಕ್ಷಿಸಬೇಡಿ. ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು.

ಧನು: ಸಿಹಿ ವಿಚಾರವನ್ನು, ಅವಕಾಶಗಳನ್ನು ಮತ್ತು ಕಹಿಯ ಸಂಗತಿಯನ್ನು ಮುಕ್ತ ಮನಸ್ಸಿನಿಂದ ಸಮಾನವಾಗಿ ಸ್ವೀಕರಿಸಿ. ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ದೂರಾಗುವುವು.

ಮಕರ: ನಿಮ್ಮ ಅಭಿರುಚಿಗೆ ಹೊಂದುವಂತಹ ಜನರೊಂದಿಗೆ ಒಡನಾಟ ಬೆಳೆಸಿ ನೆಮ್ಮದಿ ಸಿಗುತ್ತದೆ. ಕಾರಣಾಂತರದಿಂದ ಇಂದು ಕೆಲವು ವ್ಯಕ್ತಿಗಳನ್ನು ನಿರ್ಲಕ್ಷಿಸುವಿರಿ. ಚರ್ಮದ ವಸ್ತು ವ್ಯಾಪಾರಿಗಳಿಗೆ ಲಾಭದಾಯಕ ದಿನ.

ಕುಂಭ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ಅದರ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವವು ಇರುವುದು. ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ.

ಮೀನ: ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಕಲಿಯುವಂತಹ ಆಸೆ ಹೊಂದಿದವರಿಗೆ ಶುಭ ಕಾಲ. ಸಗಟು ಧಾನ್ಯ ವರ್ತಕರಿಗೆ ಈ ದಿನ ಲಾಭ ಹೆಚ್ಚಿರುವುದು. ಸೋದರನ ಓದಿಗಾಗಿ ಖರ್ಚು ಮಾಡಬೇಕಾಗುವುದು.

ಪದಬಂಧ 6309

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಗುಳೆ ಹೋಗುವುದು (3)
4.ಮಠದ ಹತ್ತಿರ ಕಾಣಿಸಿದ ಆಮೆ (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6.ಯುದ್ಧಕ್ಕೊಂದು ಪರ್ಯಾಯ ಪದ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
13.ಸಾವು ಈ ರೀತಿ ಬಂದಿದೆ (3)
14.ವಂದರಿ ಇಲ್ಲಿದೆ (3)
15.ನದಿಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಬಿಸಿಲಲ್ಲಿ ಡೊಗರು ಕಾಣಿಸಿತೇ? (2)
2.ಜೀರ್ಣಾಂಗ ಇಲ್ಲಿದೆ (3)
3.ತರ್ಕ ಮಾಡುವ ವ್ಯಾಪಾರಿ (3)
4.ಹಸುವಿನ ಮರಿಯಿದು (2)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ಇದು ಹೊಸದು (2)
9.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
11.ಸೂರ್ಯನ ಕಾವು ಇಲ್ಲಿದೆ (3)
12.ಕೊನೆಗೆ ಜಡ ಬಂದರೆ ಈ ವ್ಯಥೆ! (3)
13.ಮಡಿವಂತನು ಮಾಡಿರುವ ಪಾತಿ (2)
16.ನಲ್ಲಿಯ ಬಳಿ ಕಾಣಿಸುತ್ತಿರುವ ಏಡಿ (2)



6308ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಿತಾಮಹ 3.ಹಸನ್ಮುಖ
5.ರಿಪೇರಿ 6.ಸಂವತ್ಸರ
7.ರಿಯಾಯಿತಿ 9.ತರದೂದು
11.ಸಡಗರ 13.ಚಾಕರ
15.ಜವಾಹಿರಿ 16.ಸದ್ಭಾವನೆ

ಮೇಲಿಂದ ಕೆಳಕ್ಕೆ:
1.ಪಿಕ 2.ಹರಿಕಾರ 3.ಹರಿದಾರಿ
4.ಖಗ 6.ಸಂಗೀತ 8.ತಿಮಿರ
10.ದುರಾಚಾರಿ 11.ಸಮರಸ
12.ಹುಂಜ 14.ಆನೆ

ಸುಡೊಕು 6693

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4		5		9
5			6		9		4	2
	9			7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4

6692 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಖ್ಯ ಕಡತ ಮಂಡಿಸದಂತೆ ಬೆದರಿಕೆ

ವರ್ಗಾವಣೆ ನಂತರವೂ ಬಳ್ಳಾರಿ ವಲಯದ ಆಡಳಿತದಲ್ಲಿ ವರ್ತಿಕಾ ಹಸ್ತಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಳ್ಳಾರಿ ಗಲಭೆ ಪ್ರಕರಣ: ವರ್ಗಾವಣೆಗೊಂಡಿದ್ದ ಅಧಿಕಾರಿ ವರ್ತಿಕಾ
- ವಿಡಿಯೊ, ದಾಖಲೆಗಳು ಬಹಿರಂಗ

ವರ್ಗಾವಣೆ ಪ್ರಕರಣ ಸಿಎಟಿಯಲ್ಲಿದೆ. ನನ್ನ ವೇತನ, ಭತ್ಯೆಗಳ ಕಡತಗಳ ಮಂಡಿಸದಂತೆ ಕರೆ ಮಾಡಿ ಹೇಳಿದ್ದೆ. ಯಾವುದೇ ಕಡತದ ವಿಷಯದಲ್ಲಿ ಹಸ್ತಕ್ಷೇಪ ಮಾಡಿಲ್ಲ
ವರ್ತಿಕಾ ಕಟಿಯಾರ್
ಐಪಿಎಸ್ ಅಧಿಕಾರಿ

ಬಳ್ಳಾರಿ: ಬಳ್ಳಾರಿ ವಲಯ ಪೊಲೀಸ್ ಉಪ ಮಹಾನಿರೀಕ್ಷಕಿಯಾಗಿದ್ದ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್, ಬಳ್ಳಾರಿ ಗಲಭೆ ಪ್ರಕರಣದ ಹಿನ್ನೆಲೆಯಲ್ಲಿ ವರ್ಗಾವಣೆಗೊಂಡ ಬಳಿಕವೂ ಕೆಳಹಂತದ ಅಧಿಕಾರಿಗಳಿಗೆ ಕರೆ ಮಾಡಿ ಕಡತಗಳ ವಿಚಾರದಲ್ಲಿ ಮೌಖಿಕ ಸೂಚನೆ ನೀಡಿರುವುದು ಬಹಿರಂಗವಾಗಿದೆ.

ಇದಕ್ಕೆ ಸಂಬಂಧಿಸಿದ ವಿಡಿಯೊ, ದಾಖಲೆಗಳು ಶನಿವಾರ ಬಿಡುಗಡೆಯಾಗಿವೆ.

ಬಳ್ಳಾರಿ ವಲಯದ ಸಹಾಯಕ ಆಡಳಿತಾಧಿಕಾರಿ ಬಸವರಾಜ್ ಅವರಿಗೆ ಫೆ.4ರಂದು ವಾಟ್ಸ್ಆ್ಯಪ್ ಕರೆ ಮಾಡಿರುವ ವರ್ತಿಕಾ, 'ನನ್ನ ವರ್ಗಾವಣೆ ವಿಚಾರ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಯಲ್ಲಿದೆ (ಸಿಎಟಿ). ಪ್ರಮುಖ ಕಡತಗಳನ್ನು ಈಗಿನ ಅಧಿಕಾರಿಗೆ ನೀಡಬಾರದು. ಹಾಗೇನಾದರೂ ಮಾಡಿದರೆ, ಸಿಎಟಿಯಲ್ಲಿ ತಮ್ಮನ್ನೂ ಪ್ರತಿವಾದಿಯನ್ನಾಗಿ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿರುವುದು ವಿಡಿಯೊದಲ್ಲಿದೆ.

ಪೂರಕವಾಗಿ ಬಸವರಾಜ್ ಅವರು ವರ್ತಿಕಾ ಕಟಿಯಾರ್ ಅವರಿಗೆ ಪತ್ರ ಬರೆದಿದ್ದು, 'ನಿಮ್ಮ ನಿರ್ದೇಶನಗಳು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸುವ ಉದ್ದೇಶ ಹೊಂದಿವೆ. ಮುಂದೆ ಯಾವುದೇ ರೀತಿಯ ಕರೆಗಳು, ಪತ್ರಗಳು, ಯಾರಿಂದಲಾದರೂ ಮೌಖಿಕವಾಗಿ ಸೂಚಿಸುವ ರೀತಿಯಲ್ಲಿ ತಿಳಿ ಹೇಳುವುದು ಬೇಡ' ಎಂದು ಕೋರಿದ್ದಾರೆ.

ಜನವರಿ 1ರ ಗಲಭೆ ಪ್ರಕರಣದ ಬಳಿಕ ಬಳ್ಳಾರಿಯ ಪೊಲೀಸ್ ಇಲಾಖೆಯಲ್ಲಿ ಮಹತ್ತರ ಬದಲಾವಣೆಗಳನ್ನು ಮಾಡಿದ್ದ ರಾಜ್ಯ ಸರ್ಕಾರ ವಲಯ ಡಿಐಜಿಪಿಯಾಗಿದ್ದ ವರ್ತಿಕಾ ಕಟಿಯಾರ್ ಅವರನ್ನು ಜ. 7ರಂದು ವರ್ಗಾವಣೆ ಮಾಡಿತ್ತು. ವರ್ಗಾವಣೆ ಪ್ರಶ್ನಿಸಿ ಸಿಎಟಿಗೆ ಅವರು ಮೇಲ್ಮನವಿ ಸಲ್ಲಿಸಿದ್ದಾರೆ.

ತಮ್ಮನ್ನು ನಿಯೋಜಿಸಿದ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಹುದ್ದೆಗೆ ವರದಿ ಮಾಡಿಕೊಳ್ಳಲು ವರ್ತಿಕಾ ಕೆಲದಿನಗಳ ಮಟ್ಟಿಗೆ ವಿನಾಯಿತಿ ಪಡೆದಿದ್ದಾರೆ ಎನ್ನಲಾಗಿದೆ. ಸದ್ಯ, ಬಳ್ಳಾರಿಯಲ್ಲೇ ವಾಸ್ತವ್ಯ ಹೂಡಿದ್ದಾರೆ.

ಶನಿವಾರ ಮಡಿಕೇರಿಯಲ್ಲಿ ನಡೆದ ಜಾಗೃತಿ ಜಾಥಾದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ

'ಮಾದಕವಸ್ತು ಮುಕ್ತ ಕಾಲೇಜಿಗೆ ಮಾತ್ರ ಆರೋಗ್ಯ ವಿ.ವಿ. ಮಾನ್ಯತೆ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಮಾದಕವಸ್ತು ಮುಕ್ತ ಕ್ಯಾಂಪಸ್' ಎಂದು ಘೋಷಿಸಿಕೊಂಡ ಕಾಲೇಜುಗಳಿಗೆ ಮಾತ್ರವೇ ಮಾನ್ಯತೆ ನೀಡಲು ನಿರ್ಧರಿಸಲಾಗಿದೆ' ಎಂದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಅವರು ಶನಿವಾರ ಇಲ್ಲಿ ತಿಳಿಸಿದರು.

ಇಲ್ಲಿ ನಡೆದ 'ನಶಾ ಮುಕ್ತ ಭಾರತ-ಸ್ವಾಸ್ಥ್ಯ ಭಾರತ', ಅಂಗಾಂಗ ದಾನ ಅಭಿಯಾನದಲ್ಲಿ ಮಾತನಾಡಿ, 'ದೇಶದಲ್ಲಿ ಶೇ 30ರಿಂದ 40ರಷ್ಟು ವಿದ್ಯಾರ್ಥಿಗಳು ಮಾದಕವಸ್ತುಗಳ ವ್ಯಸನಕ್ಕೆ ಒಳಗಾಗಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಕಾಲೇಜುಗಳನ್ನೂ ಮಾದಕವಸ್ತು ಮುಕ್ತವಾಗಿಸಲು ನಿರ್ಧರಿಸಲಾಗಿದೆ' ಎಂದರು.

'ಮಾದಕವಸ್ತುಗಳ ವಿರುದ್ಧ ಕಾರ್ಯಾಚರಣೆಗಾಗಿ ಪ್ರತಿ ಕಾಲೇಜಿನಲ್ಲೂ ಕಾರ್ಯಪಡೆ ರಚಿಸಬೇಕು. ಬಿಗಿಯಾದ ತಪಾಸಣೆ, ಪರೀಕ್ಷೆ ನಡೆಸಬೇಕು. ಶೀಘ್ರ ನಶಾಮುಕ್ತ ಕ್ಯಾಂಪಸ್ ಎಂದು ಘೋಷಿಸಬೇಕು' ಎಂದು ಸೂಚಿಸಿದರು.

'ಮುಂದಿನ ದಿನಗಳಲ್ಲಿ ಪ್ರತಿ ವಿದ್ಯಾರ್ಥಿಯನ್ನೂ ತಪಾಸಣೆಗೆ ಮತ್ತು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಹೀಗಾಗಿ ಎಲ್ಲರೂ ಎಚ್ಚರದಿಂದಿರಬೇಕು. ಮದ್ಯ, ಮಾದಕವಸ್ತು ಚಟದಿಂದ ಮುಕ್ತರಾಗಬೇಕು' ಎಂದರು.

ಪ್ರತಿ ಅಧಿವೇಶನದಲ್ಲೂ ಕೆಲ ಶಾಸಕರಿಂದ ಅಶಿಸ್ತು: ಸ್ಪೀಕರ್

ಪ್ರಜಾವಾಣಿ ವಾರ್ತೆ

ಮಂಗಳೂರು: '224 ಶಾಸಕರಿದ್ದರೂ, ವಿಧಾನಸಭೆಯಲ್ಲಿ ಅಧಿವೇಶನದಲ್ಲಿ ಕೆಲವು ಶಾಸಕರು ಮಾತ್ರ ಅಶಿಸ್ತಿನಿಂದ ವರ್ತಿಸುತ್ತಾರೆ. ಹ್ಯಾಬಿಚುವಲ್ ಒಫೆಂಡರ್ಸ್ ಅಂತಹವರಿಂದಲೇ ಪ್ರತಿಬಾರಿ ತಪ್ಪು ಪುನರಾವರ್ತನೆ ಆಗುತ್ತಿದೆ' ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಇಲ್ಲಿ ಶನಿವಾರ ಹೇಳಿದರು.

ಶಾಸಕ ಶಿವಲಿಂಗೇಗೌಡರು ಸದನದಲ್ಲಿ ಬಳಸಿರುವ ಪದಗಳ ಕುರಿತು ಆಕ್ಷೇಪ ವ್ಯಕ್ತವಾಗಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಸದನವನ್ನು ಶಿಸ್ತಿನಿಂದ ನಡೆಸುವುದು ಸಭಾಧ್ಯಕ್ಷರ ಜವಾಬ್ದಾರಿ ಮಾತ್ರವಲ್ಲ, ಎಲ್ಲ ಸದಸ್ಯರ ಹೊಣೆಗಾರಿಕೆ. ಜನರು ಸಭೆಯ ಕಲಾಪ ವೀಕ್ಷಿಸುತ್ತಾರೆ ಎನ್ನುವ ಅರಿವು ಇರಬೇಕು. ಶಾಸಕರು ತಮ್ಮ ಗೌರವ ಉಳಿಸಿಕೊಳ್ಳಬೇಕು 'ಎಂದರು.

ಸದಸ್ಯರ ನಡೆ ಸರಿಯಿಲ್ಲ –ಸಭಾಪತಿ

ಹುಬ್ಬಳ್ಳಿ: 'ವಿಧಾನ ಪರಿಷತ್ತಿನಲ್ಲಿ ಸದಸ್ಯರ ನಡವಳಿಕೆ ಸರಿ ಇಲ್ಲ. ಹೀಗಾಗಿ, ಮುಂಬರುವ ಅಧಿವೇಶನಗಳಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಎರಡು ಪುಟಗಳ ಪತ್ರ ಬರೆದು, ಸದಸ್ಯರಿಗೆ ತಿಳಿಸಿರುವೆ' ಎಂದು ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ ಶನಿವಾರ ತಿಳಿಸಿದರು.

'ಮುಂದೆ ಹೀಗೆ ಮಾಡದಂತೆ ಎಚ್ಚರಿಕೆ ನೀಡಿರುವೆ. ಪ್ರಶ್ನೆ ಕೇಳುವ ವಿಧಾನ ಬಗ್ಗೆಯೂ ತರಬೇತಿ ನೀಡುವೆ' ಎಂದರು.

54 ನಿಗಮ– ಮಂಡಳಿ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ

ಬೆಂಗಳೂರು: ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 54 ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸಚಿವ ಸ್ಥಾನಮಾನ ನೀಡಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಆಯಾ ಇಲಾಖೆಗೆ ಸಂಬಂಧಿಸಿದಂತೆ ಕಾಯ್ದೆ ಮತ್ತು ನಿಯಮಗಳ ರೀತಿ ತಕ್ಷಣದಿಂದ ಅಧ್ಯಕ್ಷರು ಕಾರ್ಯನಿರ್ವಹಿಸುವಂತೆ ಸೂಚಿಸಿ, ರಾಜ್ಯ ಸ್ಥಾನಮಾನಗಳನ್ನು ಆಡಳಿತ ಇಲಾಖೆಗಳು ಒದಗಿಸಬೇಕೆಂದು ಆದೇಶದಲ್ಲಿ ಸಿಬ್ಬಂದಿ ಮತ್ತು ಸುಧಾರಣಾ ಇಲಾಖೆ ತಿಳಿಸಿದೆ.

ಗೇರು ಅಭಿವೃದ್ಧಿ ನಿಗಮ, ಮೃಗಾಲಯ ಪ್ರಾಧಿಕಾರ, ಜೀವ ವೈವಿಧ್ಯ ಮಂಡಳಿ, ರಾಜ್ಯ ಹಜ್ ಸಮಿತಿ, ಕ್ರಿಶ್ಚಿಯನ್ ಅಭಿವೃದ್ಧಿ ನಿಗಮ, ಒಕ್ಕಲಿಗ ಅಭಿವೃದ್ಧಿ ನಿಗಮ, ಮರಾಠ ಅಭಿವೃದ್ಧಿ ನಿಗಮ, ದೇವರಾಜ ಅರಸು ಅಭಿವೃದ್ಧಿ ನಿಗಮ ಹೀಗೆ ವಿವಿಧ ನಿಗಮಗಳು, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರಿಗೆ ಮುಂದಿನ ಆದೇಶದವರೆಗೆ ಈ ಸೌಲಭ್ಯ ಸಿಗಲಿದೆ.

ನಿಧನ ವಾರ್ತೆ

ಮಾಜಿ ಶಾಸಕ ಬಸ್ರೂರು ಅಪ್ಪಣ್ಣ ಹೆಗ್ಡೆ

ಬಸ್ರೂರು ಅಪ್ಪಣ್ಣ ಹೆಗ್ಡೆ

ಕುಂದಾಪುರ (ಉಡುಪಿ): ಬೈಂದೂರಿನ ಮಾಜಿ ಶಾಸಕ ಬಸ್ರೂರು ಅಪ್ಪಣ್ಣ ಹೆಗ್ಡೆ (91) ಅನಾರೋಗ್ಯದಿಂದ ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಾಮ್‌ಕಿಶನ್ ಹೆಗ್ಡೆ, ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಸೇರಿ ಮೂವರು ಪುತ್ರಿಯರು, ಇಬ್ಬರು ಪುತ್ರರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.

ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಅವರು, 1983 ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಬೈಂದೂರು ಕ್ಷೇತ್ರದ ಶಾಸಕರಾಗಿದ್ದರು. 1989-95ರ ಅವಧಿಯಲ್ಲಿ ವಿಧಾನಪರಿಷತ್ ಸದಸ್ಯರಾಗಿದ್ದರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಆಡಳಿತ ಧರ್ಮದರ್ಶಿ, ಬಸ್ರೂರು ಮಹೋತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಮಾಜಿ ಶಾಸಕ ಮೋತಿ ವೀರಣ್ಣ



ಮೋತಿ ವೀರಣ್ಣ

ದಾವಣಗೆರೆ: ದಾವಣಗೆರೆ ಕ್ಷೇತ್ರದ ಮಾಜಿ ಶಾಸಕ ಮೋತಿ ವೀರಣ್ಣ (90) ಶನಿವಾರ ನಿಧನರಾದರು. ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಚಿತ್ರ ನಿರ್ಮಾಪಕ ಮೋತಿ ರಾಜೇಂದ್ರ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಮುದಹದಡಿ ಗ್ರಾಮದ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ದಾವಣಗೆರೆ ಕ್ಷೇತ್ರದಿಂದ1989ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು.

ಕಾರ್ಮಿಕ ಸಂಹಿತೆ: ರಾಜ್ಯ ಸರ್ಕಾರದ ವಿರುದ್ಧ ಖರ್ಗೆಗೆ ಪತ್ರ

ನವದೆಹಲಿ: ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರವು ಕೇಂದ್ರದ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಗಳನ್ನು ಜಾರಿಗೊಳಿಸಲು ಮುಂದಾಗಿದೆ ಎಂದು ಆರೋಪಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಳಮರಂ ಕರೀಂ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.

ಖರ್ಗೆ ಅವರು ಈ ವಿಚಾರದಲ್ಲಿ ಮಧ್ಯಪ್ರವೇಶಿಸಿ ಸರ್ಕಾರದ ಪ್ರಯತ್ನಕ್ಕೆ ತಡೆ ನೀಡಬೇಕೆಂದೂ ಕೋರಿದ್ದಾರೆ.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರೂಪಿಸಿದ ಜನ ವಿರೋಧಿ ನೀತಿಗಳನ್ನು ವಿರೋಧಿಸುವಲ್ಲಿ ಕಾಂಗ್ರೆಸ್ ಸೇರಿದಂತೆ ಎಲ್ಲಾ ಪ್ರತಿಪಕ್ಷಗಳು ಒಟ್ಟಾಗಿ ದೇಶದ ಕಾರ್ಮಿಕ ವಲಯದ ಪರವಾಗಿ ನಿಂತಿವೆ. ಆದರೆ, ರಾಜ್ಯ ಸರ್ಕಾರವು ಅದೇ ನೀತಿಗಳನ್ನು ಜಾರಿಗೊಳಿಸಲು ಕರಡು ನಿಯಮಗಳನ್ನು ಪ್ರಕಟಿಸಿದೆ. ಈ ನಡೆ ಅತ್ಯಂತ ಕಳವಳಕಾರಿ ಹಾಗೂ ವಿಷಾದಕರ' ಎಂದೂ ಅವರು ಪತ್ರದಲ್ಲಿ ತಿಳಿಸಿ, ಖರ್ಗೆ ಅವರ ಮಧ್ಯಸ್ಥಿಕೆ ಕೋರಿದ್ದಾರೆ.

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553, ಫ್ಯಾಕ್ಸ್:080–22340139, ಇ–ಮೇಲ್: directorayush.eproc@gmail.com
ಸಂಖ್ಯೆ; ಆಯುಷ್/03/ಸಂಗ್ರಹಣಾ/2025–26 ದಿನಾಂಕ: 06.02.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

2024–25ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಉಚಿತವಾಗಿ ವೈದ್ಯಕೀಯ ಉಪಕರಣಗಳು ಮತ್ತು ಪುಸ್ತಕಗಳನ್ನು ಖರೀದಿಸಿ ಸರಬರಾಜು ಮಾಡುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಇ–ಟೆಂಡರ್ ಪ್ರಕ್ರಿಯೆ

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ	06.02.2026 ಸಂಜೆ 5:30 ಗಂಟೆಗೆ
2.	ಇ–ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	16.02.2026ರ ಸಂಜೆ 4:30 ಗಂಟೆಯವರೆಗೆ
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ	17.02.2026ರ ಸಂಜೆ 5:00 ಗಂಟೆಗೆ
4.	ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	19.02.2026ರ ಬೆಳಿಗ್ಗೆ 11:30 ಗಂಟೆಗೆ

ಸಹಿ/– ಲೆಕ್ಕಾಧಿಕಾರಿ/ಅಧ್ಯಕ್ಷರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು–09.
DIPR/CP/RO5504/AAPL/2025-26

ಸಮಗ್ರ ಶಿಕ್ಷಣ–ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,
ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು–01
ಸಂಖ್ಯೆ: SSK/TALP/PAB/1/2025-JDQ/65010 ದಿನಾಂಕ:07.02.2026

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ರಾಜ್ಯದಾದ್ಯಂತ ಇರುವ 3862 ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ, ಹಿರಿಯ ಮಾಧ್ಯಮಿಕ ಮತ್ತು KGBV ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ರೂಂಗಳನ್ನು ಸ್ಥಾಪಿಸುವ ಸಲುವಾಗಿ, ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಪ್ಯಾನ್ ಇಂಡಿಯಾ OEM ಗಳು ಹಾಗೂ OEM ಅಧಿಕೃತ ಡೀಲರ್‌ಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ನಲ್ಲಿ ಸ್ಮಾರ್ಟ್ ಕ್ಲಾಸ್ ರೂಂ ಉಪಕರಣಗಳಾದ Interactive Display Board, UPS-1 KVA Line Interactive with Battery and LED Projector ಗಳ ಸರಬರಾಜು, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ ಹಾಗೂ ತರಬೇತಿ ಕಾರ್ಯಗಳು ಒಳಗೊಂಡಿರುತ್ತವೆ. ಟೆಂಡರ್‌ಗೆ ಸಂಬಂಧಿತ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 09.03.2026 ಸಂಜೆ 5:00 ಗಂಟೆಯವರೆಗೆ.

ಸಹಿ/– ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಡಿವೈಇಎಸ್/ಕ್ರೀ.ವ್ಯ.ಸ/161/2025–26 ದಿನಾಂಕ: 07.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಶ್ರೀ ಕಂಠೀರವ ಕ್ರೀಡಾಸಂಕೀರ್ಣದ ತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ ಇ–ಟೆಂಡರ್ ಮೂಲಕ ಗುತ್ತಿಗೆದಾರರನ್ನು 10 ವರ್ಷದ ಅವಧಿಗೆ ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರ್ ವಿವರ : 1) ಶ್ರೀ ಕಂಠೀರವ ಕ್ರೀಡಾಸಂಕೀರ್ಣದ ತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ ಅಲ್ಪಾವಧಿ ಇ–ಟೆಂಡರ್ ಕರೆಯಲು ಟೆಂಡರ್ ಕುರಿತು. ಟೆಂಡರ್ ಮೊತ್ತ : ರೂ. .12,74,400/–, ಇಎಂಡಿ ಮೊತ್ತ : ರೂ. 32,000/–. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : ದಿ.18.02.2026, ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.02.2026 ಸಂಜೆ 4.30 ಗಂಟೆಗೆ,

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/5523/NR/2025-26

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂರವಾಣಿ : 080–22204098, 22204099 ಇ–ಮೇಲ್ : mdambngm@gmail.com
ಸಂಖ್ಯೆ: ನಿಅಚೌಅನಿ/ಕ್ರಿಯಾ ಯೋಜನೆ/ಸಿಆರ್–01/2025–26 ದಿನಾಂಕ: 07.02.2026

2025–26ನೇ ಸಾಲಿನ ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಪ್ರವರ್ಗ–1ರ 6(a) ಯಿಂದ 6(ak)ವರೆಗಿನ ಸಮುದಾಯದ ಜನರ ಅಭಿವೃದ್ಧಿಗಾಗಿ 2025–26ನೇ ಸಾಲಿನಲ್ಲಿ ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಲ್ಲಿ ಸಹಾಯಧನ ಸೌಲಭ್ಯ ಪಡೆಯಬಯಸುವ ಫಲಾಪೇಕ್ಷಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08.03.2026

ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ EV–ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ ರೂ.3.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು ಉಳಿಕೆ ಮೊತ್ತವನ್ನು ಬ್ಯಾಂಕುಗಳು / ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿರುತ್ತದೆ.

- ಯೋಜನೆಯ ಸೌಲಭ್ಯ ಪಡೆಯಬಯಸುವವರು ಪ್ರವರ್ಗ–1ರ 6(a) ಯಿಂದ 6(ak) ವರೆಗಿನ ಸಮುದಾಯಕ್ಕೆ ಸೇರಿದವರಾಗಿರಬೇಕು.
- ಕುಟುಂಬದ ವಾರ್ಷಿಕ ವರಮಾನ ರೂ. 3.00 ಲಕ್ಷಗಳ ಒಳಗಿರಬೇಕು
- ಅರ್ಜಿದಾರರ ವಯಸ್ಸು 21 ರಿಂದ 45 ವರ್ಷಗಳ ಮಿತಿಯಲ್ಲಿರಬೇಕು.
- ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಸೇವಾಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಸರ್ಕಾರದ ವಿವೇಚನಾ ಕೋಟಾ/ ನಿಗಮದ ಅಧ್ಯಕ್ಷರು/ ನಿರ್ದೇಶಕ ಮಂಡಳಿಯ ವಿವೇಚನಾ ಕೋಟಾದಲ್ಲಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್‌ಲೈನ್‌ನಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕು.
- ಈ ಯೋಜನೆಯಲ್ಲಿ ಸೌಲಭ್ಯ ಪಡೆಯಬಯಸುವ ಅರ್ಹ ಫಲಾಪೇಕ್ಷಿಗಳು ಗ್ರಾಮ ಒನ್/ ಬೆಂಗಳೂರು ಒನ್/ ಕರ್ನಾಟಕ ಒನ್ ನಾಗರೀಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ https://ambigaradevelopment.karnataka.gov.in ಅಥವಾ ನಿಗಮದ ದೂರವಾಣಿ ಸಂಖ್ಯೆ 080–22864099 ಅನ್ನು ಸಂಪರ್ಕಿಸುವುದು ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಶ್ರೀ ಬಾಬುರಾವ ಚಿಂಚನಸೂರ
ಮಾನ್ಯ ಅಧ್ಯಕ್ಷರು

ಸಹಿ/–
ಶ್ರೀ ಅರುಣ್ ಕುಮಾರ್ ಹಡಗಲಿ, ಕೆ.ಜಿ.ಎಸ್.
ವ್ಯವಸ್ಥಾಪಕ ನಿರ್ದೇಶಕರು(ಪ್ರ)

ವಾಸಾಸಂಇ/ಬೆಂ.ನ./ಜಿಎ/5517/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in
ಸಂ:ಆಅ/ಟಿ.ಎನ್/24/2025–26 ದಿನಾಂಕ:04–02–2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು 2ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯುಡಿ / ಪಿಡಬ್ಲ್ಯುಡಿ / ಗುತ್ತಿಗೆದಾರರುಗಳಿಂದ **ಕ್ರಮ ಸಂಖ್ಯೆ. 1 ರಿಂದ 4ರ** ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://kppp.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.
ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು https://kppp.karnataka.gov.in ಇಂದ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **16.02.2026ರಂದು ಸಾಯಂಕಾಲ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: **18.02.2026ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು ದಿನಾಂಕ: **21.02.2026ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ – support@eprochelpdesk.com ಅಥವಾ 8046010000 ಮತ್ತು 8068948777.

ಸಹಿ/–
ಆಸ್ತಿ ಅಧಿಕಾರಿಗಳು
ವಾಸಾಸಂಇ/ವಾಪ್ರ/ಜಿಎ/5520/2025–26

ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
ಹಳೇ ಎಸ್.ಬಿ.ಐ. ಕಟ್ಟಡ, ಹಳೇ ತಹಶೀಲ್ದಾರರ ಕಚೇರಿ ಹತ್ತಿರ,
ಬಾಗಲಕೋಟೆ – 587 101, ದೂರವಾಣಿ : 08354–295719,
ಇ–ಮೇಲ್ : pa196bagalkot@gmail.com
ಸಂಖ್ಯೆ : ಬಾ.ನ.ಪ್ರಾ.ಬಾ./ಯು–3/ಪ.ವಿ.ನ./2025–26
ದಿನಾಂಕ : 05–02–2026

ತಿದ್ದುಪಡಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ **ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ ವ್ಯಾಪ್ತಿಯಲ್ಲಿ ಸನ್ 2025–26 ನೇ ಸಾಲಿಗೆ ನಗರಾಭಿವೃದ್ಧಿ ಪ್ರಾಧಿಕಾರದ ಕೆರೆ ಪುನರುಜ್ಜೀವನ ಹಾಗೂ ಅಭಿವೃದ್ಧಿ ಶುಲ್ಕ ನಿಧಿಯಡಿಯಲ್ಲಿ** ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ / ಅರಣ್ಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ / ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ – 2, 3 & 4 ರಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿರುತ್ತದೆ.

1) BGKUDA/2025-26/OW/WORK_INDENT8 (185.0 Lakhs)
2) BGKUDA/2025-26/OW/WORK_INDENT9 (94.0 Lakhs)
3) BGKUDA/2025-26/OW/WORK_INDENT10 (221.0 Lakhs)
4) BGKUDA/2025-26/OW/WORK_INDENT11 (64.0 Lakhs)
5) BGKUDA/2025-26/OW/WORK_INDENT12 (167.0 Lakhs)
6) BGKUDA/2025-26/OW/WORK_INDENT13 (153.0 Lakhs)
7) BGKUDA/2025-26/OW/WORK_INDENT14 (47.20 Lakhs)
8) BGKUDA/2025-26/OW/WORK_INDENT15 (68.80 Lakhs)

1) Last Date for Submission of Bid through KPPP Portal before : 27-02-2026 at 16.30 hours. 2) Opening of Technical Bid is on or after : 02-03-2026 at 11.30 a.m. 3) Opening of Financial Bid is on or after : 04-03-2026 at 11.30 a.m.

ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ಅಭಿಯಂತರರು,
ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ.

ಸಹಿ/– ಆಯುಕ್ತರು,
ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/573/ಮಣಿಪಾಲ್/2025–26

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 45, 3ನೇ ಮಹಡಿ, ಕೆ.ಎಸ್.ಹೆಚ್.ಡಿ.ಸಿ.ಎಲ್. ಕಾಂಪ್ಲೆಕ್ಸ್,
ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು–01. ಇ–ಮೇಲ್: jddekshdc@gmail.com
CAUVERY
ನಂ.: ಕೆ.ಎಸ್.ಹೆಚ್.ಡಿ.ಸಿ.ಲಿ/ಅಭಿ/ರಾ.ಪ್ರ&ಪ್ರ/1435/2025–26 ದಿನಾಂಕ: 07.02.2026

ಕರ್ನಾಟಕ ರಾಜ್ಯ ಕರಕುಶಲಕರ್ಮಿಗಳ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸುವ ಕುರಿತು

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು 2024–25 ಮತ್ತು 2025–26ನೇ ಸಾಲಿಗೆ ಈ ಕೆಳಗಿನ ಕರಕುಶಲ ಕಲೆಯಲ್ಲಿ ಪರಿಣಿತ ಕರಕುಶಲಕರ್ಮಿಗಳಿಗೆ **"ಕುಶಲಕಲಾ"** ರಾಜ್ಯ ಪ್ರಶಸ್ತಿ ಹಾಗೂ **"ಪ್ರಶಂಸನಾ ಪತ್ರ"** ಪ್ರದಾನ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ಪ್ರಮುಖ ಕರಕುಶಲ ಕಲೆಗಳಾದ ಶ್ರೀಗಂಧದ ಕೆತ್ತನೆ ಕಲೆ, ಮರದ ಕೆತ್ತನೆ ಕಲೆ, ಬೀಟೆಮರದ ಕೆತ್ತನೆ ಕಲೆ, ಮೈಸೂರು ಸಾಂಪ್ರದಾಯಿಕ ಚಿತ್ರಕಲೆ ಮತ್ತು ಗಂಜಿಫಾ ಚಿತ್ರಕಲೆ, ಮೈಸೂರು ಬೀಟೆಮರದ ಕುಂದಣ ಕಲೆ, ಚನ್ನಪಟ್ಟಣದ ಆಟಿಕೆಗಳು & ಗೊಂಬೆಗಳು, ಕಲ್ಲು ಕೆತ್ತನೆ ಕಲೆ, ಬಿದ್ರಿಕಲೆ, ಕಂಚು ಮತ್ತು ಹಿತ್ತಾಳೆ, ಕಿನ್ನಾಳ ಕಲೆಯ ಆಟಿಕೆಗಳು, ಕಸೂತಿ ಕಲೆ/ಲಂಬಾಣಿ, ಜಮಖಾನ ನೇಯ್ಗೆ ಕಲೆ, ಟೆರಾಕೋಟಾ/ಕುಂಬಾರಿಕೆ ಕಲೆ, ಇನ್ನಿತರೆ ಕಲೆಗಳಲ್ಲಿ ನಿರತರಾಗಿರುವ ಕರಕುಶಲಕರ್ಮಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
ರಾಜ್ಯ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಕರಕುಶಲಕರ್ಮಿಯು ಕರ್ನಾಟಕ ರಾಜ್ಯದಲ್ಲಿ ಜನಿಸಿದವರಾಗಿರಬೇಕು. ಅರ್ಜಿದಾರರು ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ವರ್ಷದ ಹಿಂದಿನ ಡಿಸೆಂಬರ್ 31ಕ್ಕೆ ಕನಿಷ್ಠ 30 ವರ್ಷಗಳನ್ನು ಪೂರೈಸಿ, ಕರಕುಶಲ ಕಲೆಯಲ್ಲಿ ಕನಿಷ್ಠ ಹತ್ತು (10) ವರ್ಷಗಳ ಅನುಭವವನ್ನು ಹೊಂದಿರಬೇಕು ಮತ್ತು ಜನನ ಪ್ರಮಾಣ ಪತ್ರ ಅಥವಾ ಘೋಷಣೆ ನಮೂನೆ ಪತ್ರ ಲಗತ್ತಿಸುವುದು.
ಅರ್ಜಿದಾರರು ಅರ್ಜಿಯನ್ನು ಪಡೆಯಲು ಆಯಾ ಪ್ರಾಂತೀಯ ಕಛೇರಿಗಳಾದ ಎಲ್ಲಾ ಯೋಜನಾಧಿಕಾರಿಗಳ ಕಲಾ ಸಂಕೀರ್ಣಗಳಲ್ಲಿ/ಜಿಲ್ಲೆಗಳ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರಿಂದ ಪಡೆದು ಭರ್ತಿಗೊಳಿಸಿದ ಅರ್ಜಿಗೆ ಸದರಿ ಅಧಿಕಾರಿಗಳಿಂದ ಸಹಿ ಪಡೆದು, ಅಂಚೆಯ ಮೂಲಕ ಸ್ಟಾಂಪ್ ಹಚ್ಚಿದ ಸ್ವ–ವಿಳಾಸವುಳ್ಳ ಲಕೋಟೆಯೊಂದಿಗೆ ಅಥವಾ ಖುದ್ದಾಗಿ ಪ್ರಾಂತೀಯ ಕಛೇರಿಗಳಿಗೆ ಕಳುಹಿಸಬಹುದು ಹಾಗೂ ಖುದ್ದಾಗಿ ಕೇಂದ್ರ ಕಛೇರಿಯಲ್ಲಿ ಅರ್ಜಿಗಳನ್ನು ಪಡೆಯಬಹುದು. ಅರ್ಜಿಯನ್ನು ನಿಗಮದ ವೆಬ್‌ಸೈಟ್: http//www.cauverycrafts.com ಮೂಲಕ ಸಹ ಪಡೆಯಬಹುದು.
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: **(1) ಶ್ರೀಗಂಧದ ಕಲಾ ಸಂಕೀರ್ಣ:** ಕೆಳದಿ ರಸ್ತೆ, ಸಾಗರ ತಾಲ್ಲೂಕು, ಸಾಗರ, ಶಿವಮೊಗ್ಗ ಜಿಲ್ಲೆ–577 401. ಮೊಬೈಲ್: 9071529038. **(2) ಶ್ರೀಗಂಧದ ಕಲಾ ಸಂಕೀರ್ಣ:** ಕೊರ್ಲಕಟ್ಟಾ ರಸ್ತೆ, ಚಿಪಗಿ ಅಂಚೆ, ಸಿರ್ಸಿ, ಉತ್ತರ ಕನ್ನಡ ಜಿಲ್ಲೆ–581 401. ಮೊಬೈಲ್: 9071529038. **(3) ಶ್ರೀಗಂಧದ ಕಲಾ ಸಂಕೀರ್ಣ:** ಶ್ರೀಗಂಧದ ನಗರ, ಮರೂರು ರಸ್ತೆ, ಸೊರಬ–577429. ಮೊಬೈಲ್: 9071529038. **(4) ಶ್ರೀಗಂಧದ ಕಲಾ ಸಂಕೀರ್ಣ:** ಸಿದ್ದನಭಾವಿ, ಮರೂರು ರಸ್ತೆ, ಕುಮಟಾ–581343. ಮೊಬೈಲ್: 9071529038. **(5) ಬಹುಕಲಾ ಸಂಕೀರ್ಣ:** ಕರಕುಶಲ ನಗರ, ಮೇಟಗಳ್ಳಿ, ಮೈಸೂರು–570 016, ಮೊಬೈಲ್: 9071529037. **(6) ಬಿದರಿ ಕಲಾ ಸಂಕೀರ್ಣ:** ಮೈಲೂರು ರಸ್ತೆ, ಬೀದರ್–585403. ಮೊಬೈಲ್: 9071529036. **(7) ಅರಗು ಬಣ್ಣದ ಕಲಾ ಸಂಕೀರ್ಣ:** ಕಲಾ ನಗರ, ತಟ್ಟೆಕೆರೆ ರಸ್ತೆ, ಚನ್ನಪಟ್ಟಣ–571 501, ಮೊಬೈಲ್: 9071529033. **(8) ಗ್ರಾಮೀಣ ಮಾರುಕಟ್ಟೆ ಸೇವಾ ಕೇಂದ್ರ:** ಗವಿಮಠ, ನವಲಗುಂದ್–582208, ಮೊಬೈಲ್: 9071529024. **(9) ಬಹುಕಲಾ ಸಂಕೀರ್ಣ:** ಕೇಂದ್ರ ಕಛೇರಿ, ಬೆಂಗಳೂರು–560 001. ಮೊಬೈಲ್: 9071529027. **(10) ಕಿನ್ನಾಳ ಖರೀದಿ ಮತ್ತು ವಿನ್ಯಾಸ ಕೇಂದ್ರ:** ಕೊಪ್ಪಳ ಜಿಲ್ಲೆ, ಕೊಪ್ಪಳ–583230, ಮೊಬೈಲ್: 9071529024. **(11) ಕಲ್ಲು ಕೆತ್ತನೆಯ ಕಲಾ ಸಂಕೀರ್ಣ,** ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಶಿವಾರಪಟ್ಟಣ–563130, ಮೊಬೈಲ್: 9071529027.
ಭರ್ತಿ ಮಾಡಿದ ಅರ್ಜಿಯನ್ನು ಪ್ರಶಸ್ತಿಗೆ ಇಡಲಾಗುವ ಶ್ರೇಷ್ಠ ಕಲಾಕೃತಿಯ ಫೋಟೋ ಹಾಗೂ ದಾಖಲಾತಿಗಳೊಂದಿಗೆ ಮೇಲ್ಕಂಡ ಪ್ರಾಂತೀಯ ಕಛೇರಿಗಳಲ್ಲಿ **ದಿನಾಂಕ: 10.03.2026 ರೊಳಗಾಗಿ** ಸಲ್ಲಿಸುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ಇ–ಮೇಲ್ : mdveerashaivalingayathagok2021@gmail.com ದೂರವಾಣಿ : 080–22865522
ಸಂಖ್ಯೆ: ಕ.ವಿ.ಲಿ.ಅ.ನಿ./ಸಿ–2/ಸಿಆರ್–02/2025–26 ದಿನಾಂಕ: 07.02.2026

2025–26 ನೇ ಸಾಲಿನ ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ವೀರಶೈವ–ಲಿಂಗಾಯತ ಜಾತಿ ಹಾಗೂ ಉಪಜಾತಿಗೆ ಸೇರಿದ ಸಮುದಾಯದ ಜನರ (ಪ್ರವರ್ಗ–IIIಬಿ) ಅಭಿವೃದ್ಧಿಗಾಗಿ 2025–26 ನೇ ಸಾಲಿನಲ್ಲಿ ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಲ್ಲಿ ಸಹಾಯಧನ ಸೌಲಭ್ಯ ಪಡೆಯಬಯಸುವ ಫಲಾಪೇಕ್ಷಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.03.2026

ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ EV–ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ ರೂ. 3.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು ಉಳಿಕೆ ಮೊತ್ತವನ್ನು ಬ್ಯಾಂಕುಗಳ/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿರುತ್ತದೆ.

- ಯೋಜನೆಯ ಸೌಲಭ್ಯ ಪಡೆಬಯಸುವವರು ವೀರಶೈವ–ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿರಬೇಕು.
- ಕುಟುಂಬದ ವಾರ್ಷಿಕ ವರಮಾನ ರೂ.3.00 ಲಕ್ಷಗಳ ಒಳಗಿರಬೇಕು
- ಅರ್ಜಿದಾರರ ವಯಸ್ಸು 21 ರಿಂದ 45 ವರ್ಷಗಳ ಮಿತಿಯಲ್ಲಿರಬೇಕು.
- ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಸೇವಾಸಿಂಧು ತಂತ್ರಾಂಶದಲ್ಲಿ ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಈ ಯೋಜನೆಯಲ್ಲಿ ಮಾನ್ಯ ಶಾಸಕರ, ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.
- ಸರ್ಕಾರದ ವಿವೇಚನಾ ಕೋಟಾ/ ನಿಗಮದ ಅಧ್ಯಕ್ಷರು/ ನಿರ್ದೇಶಕ ಮಂಡಳಿಯ ವಿವೇಚನಾ ಕೋಟಾದಲ್ಲಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್‌ಲೈನ್‌ನಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕು.
- ಈ ಯೋಜನೆಯಲ್ಲಿ ಸೌಲಭ್ಯ ಪಡೆಯಬಯಸುವ ವೀರಶೈವ–ಲಿಂಗಾಯತ ಅರ್ಹ ಫಲಾಪೇಕ್ಷಿಗಳು ಗ್ರಾಮ ಒನ್/ ಬೆಂಗಳೂರು ಒನ್/ ಕರ್ನಾಟಕ ಒನ್ ನಾಗರೀಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ https://kvldcl.karnataka.gov.in ಅಥವಾ ನಿಗಮದ ದೂರವಾಣಿ ಸಂಖ್ಯೆ 080 22865522 ಅನ್ನು ಸಂಪರ್ಕಿಸುವುದು ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಶ್ರೀ ವಿಜಯಾನಂದ ಎಸ್. ಕಾಶಪ್ಪನವರ
ಮಾನ್ಯ ಅಧ್ಯಕ್ಷರು

ಸಹಿ/–
ಶ್ರೀ ಅರುಣ್ ಕುಮಾರ್ ಹಡಗಲಿ, ಕೆ.ಜಿ.ಎಸ್.(ಹಿ.ಶ್ರೇಣಿ)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ./ಜಿಎ/5516/2025–26

‘ಎಂಎಸ್‌ಐಎಲ್ ಚಿಟ್ಸ್ ಸುಭದ್ರ’

ಹೊಸ ತಂತ್ರಾಂಶ, ಮೊಬೈಲ್ ಆ್ಯಪ್ ಬಿಡುಗಡೆಗೊಳಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವ ಕಾರಣ, ಇದರ ಚಿಟ್ ಫಂಡ್‌ನಲ್ಲಿ ಜನರು ಹೂಡಿಕೆ ಮಾಡುವ ಹಣ ಸುಭದ್ರವಾಗಿರುತ್ತದೆ ಎಂಬ ಗ್ಯಾರಂಟಿ ಇದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎಂಎಸ್‌ಐಎಲ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಎಂಎಸ್‌ಐಎಲ್ ಚಿಟ್ಸ್’ ಹೊಸ ತಂತ್ರಾಂಶ ಹಾಗೂ ಮೊಬೈಲ್ ಆ್ಯಪ್ ಅನ್ನು ಅವರು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ‘ಹೂಡಿಕೆ ಹಣ ಸುರಕ್ಷಿತವಾಗಿರುವುದು ಅತ್ಯಂತ ಅಗತ್ಯವಾಗಿದ್ದು, ಎಂಎಸ್‌ಐಎಲ್ ಈ ಭರವಸೆ ನೀಡುತ್ತದೆ. ತಮ್ಮ ಹೂಡಿಕೆಯ ಕೇವಲ ಶೇ 5ರಷ್ಟು ಲಾಭ ಪಡೆಯುವ ಸಂಸ್ಥೆಯು ಜನರ ಆರ್ಥಿಕ ಭದ್ರತೆಗೆ ನೆರವಾಗಿದೆ’ ಎಂದರು.

‘ಎಂಎಸ್‌ಐಎಲ್ ಹಲವು ದಶಕಗಳಿಂದ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. 2005ರಲ್ಲಿ ಚಿಟ್ ಫಂಡ್ ಆರಂಭವಾಗಿದೆ. ಉಳಿತಾಯದ ಸಂಸ್ಕೃತಿ ಅತ್ಯವಶ್ಯವಾಗಿದ್ದು, ಅಗತ್ಯ ಸಂದರ್ಭದಲ್ಲಿ ಉಳಿತಾಯದ ಹಣ ನೆರವಿಗೆ ಬರುತ್ತದೆ. ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮಿ, ಗೃಹಲಕ್ಷ್ಮಿ, ಯುವನಿಧಿ, ಅನ್ನಭಾಗ್ಯದಿಂದ ಉಳಿತಾಯವಾಗುವ ಹಣವನ್ನು ಜನರು, ವಿಶೇಷವಾಗಿ ಮಹಿಳೆಯರು ಈ ಚಿಟ್ ಫಂಡ್‌ನಲ್ಲಿ ಹೂಡಿಕೆ ಮಾಡಬೇಕು’ ಎಂದು ಸಲಹೆ ನೀಡಿದರು.

₹10 ಸಾವಿರ ಕೋಟಿಗೆ ಏರಿಸುವ ಗುರಿ: ‘ಕೇರಳ ರಾಜ್ಯದಲ್ಲಿ ಚಿಟ್ ಫಂಡ್ ಕ್ಷೇತ್ರದಲ್ಲಿ ₹ 47 ಸಾವಿರ ಕೋಟಿ ವಹಿವಾಟು ನಡೆಯುತ್ತದೆ. ಕರ್ನಾಟಕದಲ್ಲಿ ಕೇವಲ ₹ 500 ಕೋಟಿ ವ್ಯವಹಾರ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಈ ಮೊತ್ತವನ್ನು ₹ 10 ಸಾವಿರ ಕೋಟಿಗೆ ಹೆಚ್ಚಿಸುವ ಗುರಿಯನ್ನು ಎಂಎಸ್‌ಐಎಲ್ ಹೊಂದಿದೆ. ಶಿಕ್ಷಣ, ಆರೋಗ್ಯ, ಮದುವೆ, ಮನೆ ಹೀಗೆ ಜನರು ತಮ್ಮ ಅಗತ್ಯಗಳಿಗಾಗಿ ಹೂಡಿಕೆ ಮಾಡುವ ಉಳಿತಾಯದ ಮೊತ್ತ ಸುರಕ್ಷಿತವಾಗಿರುವ ವಿಶ್ವಾಸವಿದೆ’ ಎಂದರು.

‘ವಿಷನ್-2030’ ನೀಲನಕ್ಷೆ ಸಿದ್ಧ: ‘ಎಂಎಸ್‌ಐಎಲ್ 2024-25ರಲ್ಲಿ ₹3,882 ಕೋಟಿ ವಹಿವಾಟು ನಡೆಸಿ, ₹122 ಕೋಟಿಗಿಂತಲೂ ಹೆಚ್ಚು ಲಾಭ ದಾಖಲಿಸಿದೆ. ಸಂಸ್ಥೆಯ ಬಲವರ್ಧನೆಗೆ ‘ವಿಷನ್-2030’ ಎನ್ನುವ ನೀಲನಕ್ಷೆ ಸಿದ್ಧಪಡಿಸಲಾಗಿದೆ’ ಎಂದು ಸಂಸ್ಥೆಯ ಅಧ್ಯಕ್ಷ ಪುಟ್ಟರಂಗ ಶೆಟ್ಟಿ ತಿಳಿಸಿದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಇದ್ದರು.

‘ಎಂಎಸ್‌ಐಎಲ್ ಚಿಟ್ಸ್’ ಹೊಸ ತಂತ್ರಾಂಶ ಹಾಗೂ ಮೊಬೈಲ್ ಆ್ಯಪ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಎಂಎಸ್‌ಐಎಲ್ ಅಧ್ಯಕ್ಷ ಪುಟ್ಟರಂಗಶೆಟ್ಟಿ, ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪಾಲ್ಗೊಂಡಿದ್ದರು–ಪ್ರಜಾವಾಣಿ ಚಿತ್ರ

‘ಎಂಎಸ್‌ಐಎಲ್ ಚಿಟ್ಸ್’ನ ವಿಶೇಷಗಳು

- ಸುಗಮ, ಪಾರದರ್ಶಕ ವ್ಯವಹಾರಕ್ಕೆ ತಂತ್ರಾಂಶ, ಮೊಬೈಲ್ ಆ್ಯಪ್ ಅಭಿವೃದ್ಧಿ
- ಕಂತನ್ನು ಯುಪಿಐ, ವೆಬ್‌ಸೈಟ್ ಅಥವಾ ಆನ್‌ಲೈನ್ ಪಾವತಿಗೆ ಅವಕಾಶ
- ಆನ್‌ಲೈನ್ ಮೂಲಕ ಬಿಡ್‌ನಲ್ಲಿ ಭಾಗವಹಿಸಬಹುದು
- ಸರ್ಕಾರಿ ನೌಕರರ ಹೂಡಿಕೆಗೆ ಆದ್ಯತೆ
- ಸ್ವಸಹಾಯ ಸಂಘಗಳ ಮಹಿಳೆಯರಿಗೆ ವಿಶೇಷ ಉಳಿತಾಯ ಸ್ಕೀಮ್
- ಸ್ವಸಹಾಯ ಸಂಘಗಳ ಸಖಿಯರು ಏಜೆಂಟರಾಗಿ ನೇಮಕ
- ಹೋಟೆಲ್, ಕಿರಾಣಿ ಅಂಗಡಿಗಳೂ ಏಜೆಂಟ್ ರೀತಿ ಕಾರ್ಯನಿರ್ವಹಿಸಲು ವ್ಯವಸ್ಥೆ

‘ಎಂಎಸ್‌ಐಎಲ್ ಸ್ಟೋರ್’: ಚಿಂತನೆ

‘ಸರ್ಕಾರಿ ನೌಕರರಿಗೆ ಎಲ್ಲ ವಸ್ತುಗಳು ಸಬ್ಸಿಡಿ ದರದಲ್ಲಿ ಸಿಗುವಂತೆ ಮಾಡಲು ಮಿಲಿಟರಿ ಕ್ಯಾಂಟೀನ್ ಮಾದರಿಯಲ್ಲಿ ಎಂಎಸ್‌ಐಎಲ್ ಸ್ಟೋರ್ ತೆರೆಯುವ ಚಿಂತನೆ ಇದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

‘ಎಂಎಸ್‌ಐಎಲ್ ಸ್ಟೋರ್ ತೆರೆಯುವ ಕುರಿತಂತೆ ಸಾಧಕ ಬಾಧಕಗಳನ್ನು ಅಧ್ಯಯನ ಮಾಡಲಾಗುತ್ತಿದೆ. ಇದರಿಂದ 20 ಲಕ್ಷ ಕುಟುಂಬಗಳಿಗೆ ಅನುಕೂಲ ಆಗಲಿದೆ’ ಎಂದರು.

‘ಎಂಎಸ್‌ಐಎಲ್ ಈಗ 27 ಶಾಖೆಗಳನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಿಗೂ ವಿಸ್ತರಿಸಲಾಗುವುದು. ಚಿಟ್ ಫಂಡ್ ಕೆಲಸಗಳಿಗೆ ಸಂಸ್ಥೆಯು ಏಜೆಂಟರನ್ನು ನೇಮಿಸಲಿದ್ದು, ಇದರಿಂದ 10 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸಿಗಲಿದೆ. ಮನೆ ಮನೆಗೂ ಎಂಎಸ್‌ಐಎಲ್ ಚಿಟ್ ತಲುಪಿಸಲಾಗುವುದು’ ಎಂದರು.

ಚಿಟಿಕೆ ಸುದ್ದಿ

ವಿದ್ಯುತ್ ತಂತಿ ಸ್ಪರ್ಶಿಸಿ ಹೆಣ್ಣಾನೆ ಸಾವು

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ದೊಡ್ಡ ಹರವೆಯಲ್ಲಿ ಆಹಾರ ಅರಸಿ ಬಂದಿದ್ದ 15 ವರ್ಷದ ಹೆಣ್ಣಾನೆ, ಜಮೀನಿಗೆ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಶುಕ್ರವಾರ ರಾತ್ರಿ ಮೃತಪಟ್ಟಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳ ಪರಿಶೀಲಿಸಿದರು. ಜಮೀನು ಮಾಲೀಕ ಬೈಲುಕುಪ್ಪೆ ಮಖ್ತರ್, ಜಮೀನು ಗುತ್ತಿಗೆಗೆ ಪಡೆದಿದ್ದ ದೊಡ್ಡಹರವೆ ಗ್ರಾಮದ ಶಿವಣ್ಣ ವಿರುದ್ಧ ಬೈಲುಕುಪ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯಮಟ್ಟದ ಭಜನಾ ಸ್ಪರ್ಧೆ ನಾಳೆಯಿಂದ

ಹೊಸದುರ್ಗ (ಚಿತ್ರದುರ್ಗ): ‘ತಾಲ್ಲೂಕಿನ ಭಗೀರಥ ಗುರುಪೀಠದಲ್ಲಿ 27ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಫೆ.9 ಹಾಗೂ 10ರಂದು ರಾಜ್ಯಮಟ್ಟದ ಭಜನಾ ಸ್ಪರ್ಧೆ ಏರ್ಪಡಿಸಲಾಗಿದೆ’ ಎಂದು ಪೀಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ತಿಳಿಸಿದರು.

‘ಭಕ್ತಿಗೀತೆಗಳು, ದಾಸರ ಪದಗಳು, ಸೋಬಾನೆ ಪದಗಳಿಗೆ ಅವಕಾಶ ಕಲ್ಪಿಸಲಾಗಿದೆ. ₹ 300 ಪ್ರವೇಶ ಶುಲ್ಕವಿದ್ದು, ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಪ್ರಥಮ ಬಹುಮಾನ ₹ 1 ಲಕ್ಷ, ದ್ವಿತೀಯ ₹ 80,000, ತೃತೀಯ ₹ 70,000 ಹಾಗೂ ಸಮಾಧಾನಕರ ಬಹುಮಾನ ₹ 9,000 ನೀಡಲಾಗುವುದು. ಉತ್ತಮ ಗಾಯಕ, ಹಾರ್ಮೋನಿಯಂ ವಾದಕ, ತಬಲ, ತಾಳ, ಧಮಡಿ, ಡಗ್ಗಾ ವಾದಕರ ಪೈಕಿ ತಲಾ ಇಬ್ಬರಿಗೆ ತಲಾ ₹ 3,000 ಬಹುಮಾನ ನೀಡಲಾಗುವುದು’ ಎಂದರು.

ಮಾಹಿತಿಗಾಗಿ ಆರ್. ಲಕ್ಷ್ಮಯ್ಯ: 9980197415, ಶಾಮಾನಂದ ಪೂಜಾರ್: 9880169881, ಪಿ.ಕೆ ತಿಪ್ಪೇಶ್: 9448338986 ಅವರನ್ನ ಸಂಪರ್ಕಿಸಬಹುದು.

‘ಅಸತ್ಯದಿಂದ ಕೂಡಿದ ಬಿಜೆಪಿ ಜಾಹೀರಾತು’

ದಾವಣಗೆರೆ: ‘ವಿಬಿ– ಜಿ ರಾಮ್ ಜಿ ಕಾಯ್ದೆ ಬಗ್ಗೆ ಕಾಂಗ್ರೆಸ್ ನೀಡಿದ್ದ ಜಾಹೀರಾತಿನಲ್ಲಿ ಸತ್ಯದ ಸಂದೇಶವಿದೆ. ಬಿಜೆಪಿ ನೀಡಿದ ಜಾಹೀರಾತು ಅಸತ್ಯದಿಂದ ಕೂಡಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಎಚ್. ಗೋಪಗೊಂಡನ ಹಳ್ಳಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಬಿ– ಜಿ ರಾಮ್ ಜಿ ಕಾಯ್ದೆಯನ್ನು ಸಮರ್ಥಿಸಿಕೊಳ್ಳಲು ರಾಜ್ಯ ಬಿಜೆಪಿ ಶಾಸಕರಿಗೆ ಸದನದಲ್ಲಿ ಅವಕಾಶ ಇತ್ತು. ಆದರೂ ಅವರು ಸಭಾತ್ಯಾಗ ಮಾಡಿದ್ದು ಯಾಕೆ’ ಎಂದು ಪ್ರಶ್ನಿಸಿದರು.

‘ರಾಜ್ಯದಲ್ಲಿ ಆಪರೇಷನ್ ಕಮಲ ಶುರು ಮಾಡಿದ್ದೇ ಬಿಜೆಪಿ. ಬಿಜೆಪಿಯವರ ಪ್ರವೃತ್ತಿ ನಮಗೆ ಬೇಕಾಗಿಲ್ಲ. ವಿಪಕ್ಷದಲ್ಲಿ ಸಮರ್ಥ ನಾಯಕರೇ ಇಲ್ಲ. ಆದರೂ, ಅವರು ಕಾಂಗ್ರೆಸ್ ಬಗ್ಗೆ ಮಾತನಾಡುತ್ತಿದ್ದಾರೆ’ ಎಂದರು.

‘ಉಡ್ತಾ ಪಂಜಾಬ್’ ಆಗಲು ಬಿಡೆವು’

ಮೈಸೂರು: ‘ಕರ್ನಾಟಕ ‘ಉಡ್ತಾ ಪಂಜಾಬ್’ ಆಗಲು ಬಿಡುವುದಿಲ್ಲ. ಡ್ರಗ್ಸ್ ವಿಚಾರದಲ್ಲಿ ರಾಜ್ಯ ಸರ್ಕಾರ ಈಗಾಗಲೇ ಕಠಿಣಕ್ರಮ ಕೈಗೊಳ್ಳುತ್ತಿದೆ’ ಎಂದು ಗೃಹ ಸಚಿವ ಡಾ. ಡಾ.ಜಿ.ಪರಮೇಶ್ವರ ಹೇಳಿದರು.

ಶನಿವಾರ ಇಲ್ಲಿನ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿ, ‘ಡ್ರಗ್ಸ್ ವಿರುದ್ಧ ಸರ್ಕಾರ ಈಗಾಗಲೇ ಸಮರ ಸಾರಿದ್ದು, ಕೈಗೊಂಡಿರುವ ಕ್ರಮಗಳ ಕುರಿತು ಬಹಿರಂಗವಾಗಿ ಹೇಳಲಾಗದು’ ಎಂದರು.

‘ಮಹಾರಾಷ್ಟ್ರ, ಗುಜರಾತ್‌ನಲ್ಲಿ ಡ್ರಗ್ಸ್ ಉತ್ಪಾದನಾ ಘಟಕಗಳು ಪತ್ತೆಯಾಗಿವೆ. ಆದರೆ ಮೈಸೂರಿನಲ್ಲಿ ಯಾವುದೇ ಡ್ರಗ್ಸ್ ಸಿಕ್ಕಿಲ್ಲ. ಎನ್‌ಸಿಬಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಮಾಹಿತಿಯಲ್ಲಿ ಡ್ರಗ್ಸ್ ಸಿಕ್ಕಿಲ್ಲ ಎಂದಿದೆ. ಆದರೆ ಪತ್ರಿಕಾ ಹೇಳಿಕೆಯಲ್ಲಿ, ಮೈಸೂರಿನಲ್ಲಿ ₹10 ಕೋಟಿ ಡ್ರಗ್ಸ್ ಸಿಕ್ಕಿದೆ ಎಂದು ಹೇಳಿದೆ. ದಾಳಿ ನಡೆಯುವಾಗ ನಮ್ಮ ಅಧಿಕಾರಿಗಳೂ ಜೊತೆಗಿದ್ದರು. ಯಾಕೆ ಈ ರೀತಿ ದ್ವಂದ್ವ ಹೇಳಿಕೆ ನೀಡಿದೆಯೋ ಗೊತ್ತಿಲ್ಲ’ ಎಂದರು.

ಜಿ. ಪರಮೇಶ್ವರ

‘ಮುನ್ನೆಚ್ಚರಿಕೆ ಕ್ರಮವಾಗಿ, ರಾಜ್ಯದ ಪ್ರತಿ ಕೆಮಿಕಲ್ ಕಾರ್ಖಾನೆಯನ್ನು 15 ದಿನಕ್ಕೊಮ್ಮೆ ತಪಾಸಣೆಗೆ ಸೂಚಿಸಿದ್ದೇನೆ. ಮಾದಕವಸ್ತು ಸಿಕ್ಕರೆ ಸ್ಥಳೀಯ ಠಾಣೆಯ ಪೊಲೀಸರೇ ಹೊಣೆ’ ಎಂದು ಎಚ್ಚರಿಸಿದರು.

ಅಕ್ರಮವಾಸಿಗಳ ವಿರುದ್ಧ ಕ್ರಮ: ‘ಬಾಂಗ್ಲಾದೇಶಿಯರು ಸೇರಿ ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರ ಪತ್ತೆಗೆ ಸೂಚಿಸಲಾಗಿದೆ. ಮನೆ, ಕಾಫಿ ತೋಟ, ಕಟ್ಟಡ ಸೇರಿ ಎಲ್ಲ ಕಡೆ ಪರಿಶೀಲನೆ ನಡೆಯಲಿದೆ’ ಎಂದರು.

ಸುದ್ದಿ 2 ನಿಮಿಷ

‘600 ಹೆಚ್ಚುವರಿ ಎಂಬಿಬಿಎಸ್ ಸೀಟು, 3 ಹೊಸ ಕಾಲೇಜು’

ಯಾದಗಿರಿ: ‘ರಾಜ್ಯದಲ್ಲಿ 600 ಎಂಬಿಬಿಎಸ್ ಸೀಟು ಹೆಚ್ಚಳ ಹಾಗೂ 3 ಹೊಸ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಾಗಲಕೋಟೆ, ರಾಮನಗರ ಮತ್ತು ಕನಕಪುರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಯ ಪ್ರಸ್ತಾವ ಮಾಡಲಾಗಿದೆ’ ಎಂದು ತಿಳಿಸಿದರು.



‘ಆಗಸ್ಟ್ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ 400 ಹಾಸಿಗೆಗಳ ಸಾಮರ್ಥ್ಯದ ಜಯದೇವ ಆಸ್ಪತ್ರೆ ಉದ್ಘಾಟಿಸಲಾಗುವುದು’ ಎಂದು ತಿಳಿಸಿದರು.

‘ಐದು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ, ಟ್ರಾಮಾ ಸೆಂಟರ್ ಹಾಗೂ ಕ್ಯಾನ್ಸರ್ ಆಸ್ಪತ್ರೆಗಳು ಸ್ಥಾಪಿಸುವ ಗುರಿಯೂ ಇದೆ’ ಎಂದು ಸಚಿವರು ಹೇಳಿದರು.

ವ್ಯಾಪಕ ಪರಿಸರ ಮಾಲಿನ್ಯ: 24ರಂದು ಕೊಪ್ಪಳ ಬಂದ್

ಕೊಪ್ಪಳ: ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಜಿಲ್ಲಾ ಕೇಂದ್ರದ ಸಮೀಪದ ಕಾರ್ಖಾನೆಗಳನ್ನು ಹತೋಟಿಗೆ ತರಬೇಕು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಫೆ. 24ರಂದು ಕೊಪ್ಪಳ ಬಂದ್ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ 100 ದಿನಗಳಿಂದ ಇಲ್ಲಿ ಧರಣಿ ನಡೆಯುತ್ತಿದೆ.

ಧರಣಿಯ 100ನೇ ದಿನದ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ಜಂಟಿ ಕ್ರಿಯಾ ವೇದಿಕೆಯ ಪ್ರಮುಖರು ‘ಕೊಪ್ಪಳ ಬಂದ್’ ವಿಷಯ ಪ್ರಕಟಿಸಿದರು.

ಜಂಟಿ ಕ್ರಿಯಾ ವೇದಿಕೆಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಅವರು, ‘2025ರಲ್ಲಿ ಕೊಪ್ಪಳದ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಕೊಪ್ಪಳ ಬಂದ್ ಮಾಡಲಾಗಿತ್ತು. ಈ ಬಾರಿಯೂ ಬಂದ್ ಮಾಡಿ ನಮ್ಮ ಹೋರಾಟ ಗಟ್ಟಿಗೊಳಿಸುತ್ತೇವೆ’ ಎಂದು ತಿಳಿಸಿದರು.

ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಮಾತನಾಡಿ, ‘ಕೊಪ್ಪಳ ಸಮೀಪದ ಗ್ರಾಮಗಳಲ್ಲಿ ಒಂದೇ ಕಡೆ ನೂರಾರು ಕಾರ್ಖಾನೆಗಳು ಕೇಂದ್ರೀಕೃತವಾಗಿರುವುದರಿಂದ ಜನ ಉತ್ತಮ ಭೂಮಿ, ಗಾಳಿಗೆ ಪರದಾಡುವಂತಾಗಿದೆ. ಸರ್ಕಾರ ತ್ವರಿತವಾಗಿ ಜನ ಸಮಸ್ಯೆ ಪರಿಹರಿಸಬೇಕು. ಇಲ್ಲವಾದರೆ ಜನರೇ ಮುಂದಿನ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಬೇಕು’ ಎಂದು ಕರೆ ನೀಡಿದರು.

ಪಟ..ಪಟ...

ಪ್ರಜಾವಾಣಿ ಚಿತ್ರ: **ಗೋವಿಂದರಾಜ ಜವಳಿ**

ಹುಬ್ಬಳ್ಳಿಯಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ಮಟ್ಟದ ಗಾಳಿಪಟ ಉತ್ಸವದಲ್ಲಿ ತರಹೇವಾರಿ ಗಾಳಿಪಟಗಳು ಆಗಸದಲ್ಲಿ ಹಾರಾಡಿದವು

ಜೈಲಿನಲ್ಲಿದ್ದ ಶಂಕಿತ ಉಗ್ರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಫೋಟಕ ವಸ್ತುಗಳ ಸಂಗ್ರಹ ಹಾಗೂ ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯಗಳನ್ನು ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಶಂಕಿತ ಉಗ್ರ ಸಾದಿಕ್ ಪಾಷಾ ಅನಾರೋಗ್ಯದಿಂದ ಶುಕ್ರವಾರ ರಾತ್ರಿ ಮೃತಪಟ್ಟಿದ್ದಾನೆ.

ಸಾದಿಕ್ ಪಾಷಾ

ಕಡಿಮೆ ರಕ್ತದ ಒತ್ತಡ ಹಾಗೂ ಸಕ್ಕರೆ ಕಾಯಿಲೆಯಿಂದ ಸಾದಿಕ್ ಪಾಷಾ ಬಳಲುತ್ತಿದ್ದ. ಆರಂಭದಲ್ಲಿ ಅವರಿಗೆ ಕಾರಾಗೃಹದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಮೂರು ದಿನಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಶುಕ್ರವಾರ ರಾತ್ರಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದರು.

2013ರಲ್ಲಿ ತಮಿಳುನಾಡಿನಲ್ಲಿ ಹಿಂದೂ ಮುಖಂಡ ಸುರೇಶ್ ಕುಮಾರ್ ಎಂಬುವವರ ಹತ್ಯೆ ಪ್ರಕರಣದಲ್ಲಿ ಸಾದಿಕ್ ಪಾಷಾ ನನ್ನು ಬಂಧಿಸಲಾಗಿತ್ತು. ಕೆಲವು ವರ್ಷ ಜೈಲಿನಲ್ಲಿದ್ದು, ನಂತರ ಬಿಡುಗಡೆ ಆಗಿದ್ದರು ಎಂದು ಪೊಲೀಸರು ಹೇಳಿದರು.

ಸಾದಿಕ್ ಪಾಷಾ ಸುದ್ದಗುಂಟೆ ಪಾಳ್ಯದ ಗುರಪ್ಪನಪಾಳ್ಯದ ಮನೆಯಲ್ಲಿ ನೆಲಸಿದ್ದ. ಐಸಿಸ್ ಉಗ್ರ ಸಂಘಟನೆಯ ಮುಖಂಡರ ಜತೆಗೆ ಸೇರಿಕೊಂಡು ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದರು ಎಂಬ ಆರೋಪ ಆತನ ಮೇಲಿತ್ತು. ಸಿಸಿಬಿ ಮತ್ತು ಮಡಿವಾಳ ಉಪ ವಿಭಾಗದ ಅಂದಿನ ಎಸಿಪಿ ಸುಧೀರ್ ಹೆಗ್ಡೆ ನೇತೃತ್ವದ ತಂಡವು 2020ರಲ್ಲಿ ಸುಮಾರು ಏಳು ಮಂದಿಯನ್ನು ಬಂಧಿಸಿತ್ತು.

ಹಸ್ತಾಂತರ: ಶುರುವಾಯ್ತು ಮಾತಿನ ಸಮರ

ಸಿದ್ದರಾಮಯ್ಯಗಿಂತ ಯತೀಂದ್ರ ಮೇಲೆ

ಎರಡನೇ ಪುಟದಿಂದ...

ಬೆಳಿಗ್ಗೆ ಮಂಗಳೂರಿನಲ್ಲಿ ಮಾತನಾಡಿದ್ದ ಶಿವಕುಮಾರ್, ‘ನಾನು ಮುಖ್ಯಮಂತ್ರಿ ಆಗಬೇಕು ಎಂಬ ಕನಸು ಜನರಿಗೂ ಇದೆ, ಶಾಸಕರಿಗೂ ಇದೆ, ನಿಮಗೂ (ಮಾಧ್ಯಮ) ಇದೆ. ಪಕ್ಷ ಏನು ಹೇಳುತ್ತದೆಯೋ ಅದನ್ನು ಕೇಳಬೇಕು’ ಎಂದರು. ಬಜೆಟ್ ಬಳಿಕ ಅಧಿಕಾರ ಹಂಚಿಕೆ ಆಗುವುದೇ ಎಂಬ ಪ್ರಶ್ನೆಗೆ, ‘ಸಮಯವೇ ಉತ್ತರ ನೀಡಲಿದೆ’ ಎಂದರು.

‘ಮೌನವೇ ಸೂಚನೆ’

ಎರಡನೇ ಪುಟದಿಂದ...

‘ಸಿದ್ದರಾಮಯ್ಯ ಮುಖ್ಯಮಂತ್ರಿ ಎಂದು ಹೈಕಮಾಂಡ್ ಘೋಷಿಸಿತ್ತು. ನಂತರ ಅವರ ಬದಲಾವಣೆ ಬಗ್ಗೆ ಎಲ್ಲಿಯೂ ಮಾತನಾಡಿಲ್ಲ. ವರಿಷ್ಠರು ಅಗತ್ಯ ಇದ್ದಾಗ ಮಾತನಾಡುತ್ತಾರೆ. ಅವರ ತೀರ್ಮಾನವೇ ಅಂತಿಮ’ ಎಂದು ಹೇಳಿದರು.

ಡಿಕೆಶಿ ನಿಲುವಿಗೆ ಸೇಠ್ ಸಹಮತ

ಮೈಸೂರು: ‘ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ’ ಎಂಬ ಯತೀಂದ್ರ ಹೇಳಿಕೆ ಬಗ್ಗೆ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ. ಅವರ ನಿಲುವೇ ನನ್ನ ನಿಲುವು’ ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು.

‘ಅಧಿಕಾರ ಯಾರಿಗೂ ಶಾಶ್ವತವಲ್ಲ. ವರಿಷ್ಠರ ತೀರ್ಮಾನ ಬರುವವರೆಗೂ ನಾವು ಮಾತನಾಡುವುದು ಸರಿಯಲ್ಲ. ಜನವರಿಯಲ್ಲಿ ಸಂಪುಟ ವಿಸ್ತರಣೆ ಎಂದು ಹೇಳಿದ್ದರು. ಆದರೆ, ಯಾವ ಜನವರಿ ಎಂದು ಹೇಳಿಲ್ಲ’ ಎಂದರು.

ಇಲಾಖೆಗಳಲ್ಲಿ ಯತೀಂದ್ರ ಅವರ ಹಸ್ತಕ್ಷೇಪ ಕುರಿತು ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ ಅವರು, ‘ಕೆಲವು ಅಧಿಕಾರಿಗಳು ಶಂಖದಿಂದ ಬಂದರೆ ಮಾತ್ರ ತೀರ್ಥ ಎಂದುಕೊಂಡಿದ್ದಾರೆ. ನಾವು ಕೂಡ ಶಂಖ ಊದುವ ಕೆಲಸ ಮಾಡಲಿದ್ದೇವೆ. ಸೂಕ್ತ ಸನ್ನಿವೇಶ ಬಂದಾಗ ಎಲ್ಲವೂ ಬಹಿರಂಗವಾಗಲಿದೆ’ ಎಂದರು.

ನಾಯಕತ್ವ ಬದಲಾವಣೆ ಕುರಿತಂತೆ ಆಗಾಗ ಕೇಳಿ ಬರುತ್ತಿರುವ ವದಂತಿ ಕೇವಲ ಊಹಾಪೋಹ. ಅವೆಲ್ಲ ಅವರವರ ವೈಯಕ್ತಿಕ ಹೇಳಿಕೆಗಳು. ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ

ಸಲೀಂ ಅಹಮದ್, ಸರ್ಕಾರಿ ಮುಖ್ಯ ಸಚೇತಕ, ವಿಧಾನ ಪರಿಷತ್ತು

ಯತೀಂದ್ರ ನೀಡುತ್ತಿರುವ ಹೇಳಿಕೆಗಳು ಅವರ ವಂಶಪಾರಂಪರ್ಯ ಅಧಿಕಾರದ ಪ್ರತೀಕ. ಮುಂದೆ ಕಾಂಗ್ರೆಸ್‌ನವರು ರಸ್ತೆಗಳಲ್ಲಿ ಹೊಡೆದಾಡುವ ಸ್ಥಿತಿ ಬರುತ್ತದೆ. ಇದು ಅದರ ಮುನ್ಸೂಚನೆ

ವಿ.ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ಡಿಕೆಶಿ ಕೇಳಿದರೆ ಪ್ರಾಣ ಕೊಡುತ್ತೇವೆ: ಶಿವಗಂಗಾ

ದಾವಣಗೆರೆ: ‘ಶಿವಕುಮಾರ್ ಅವರಿಗೆ ಪಕ್ಷದ ಎಲ್ಲ ಶಾಸಕರ ಬೆಂಬಲ ಇದೆ. ಅವರು ಏನೇ ಹೇಳಿದರೂ ಮಾಡಲು ನಾನೂ ಸೇರಿದಂತೆ 40ರಿಂದ 50 ಯುವ ಶಾಸಕರು ಸಿದ್ಧರಿದ್ದೇವೆ. ಪ್ರಾಣ ಕೇಳಿದರೂ ಕೊಡುತ್ತೇವೆ’ ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜು ಹೇಳಿದರು.

‘ಎರಡೂವರೆ ವರ್ಷದ ಬಳಿಕ ಅಧಿಕಾರ ಹಸ್ತಾಂತರಿಸುವುದಕ್ಕೆ ಸಂಬಂಧಿಸಿ ಆಗಿರುವ ಒಪ್ಪಂದದ ಬಗ್ಗೆ ಹೈಕಮಾಂಡ್ ಅಥವಾ ಸಿದ್ದರಾಮಯ್ಯ ಸ್ಪಷ್ಟಪಡಿಸಬೇಕು. ಹಾಗಾದಾಗ ಯಾರೂ ಆ ಬಗ್ಗೆ ಮಾತನಾಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಅಧಿಕಾರ ಹಸ್ತಾಂತರದ ವಿಷಯದಲ್ಲಿ ನನ್ನ ಒಂದು ಸಹಮತ ಇದೆ. ನಮ್ಮ ಹೈಕಮಾಂಡ್ ದೆಹಲಿಯಲ್ಲಿದೆ. ಯತೀಂದ್ರ ಅವರು ತಮ್ಮ ಹೈಕಮಾಂಡ್ ಯಾರು ಎಂಬುದನ್ನು ಸ್ಪಷ್ಟಪಡಿಸಲಿ’ ಎಂದು ಆಗ್ರಹಿಸಿದರು.

‘ಯತೀಂದ್ರ ಸಿದ್ದರಾಮಯ್ಯ ಪಕ್ಷಕ್ಕೆ ಧಕ್ಕೆ ತರುವ ಹೇಳಿಕೆಗಳನ್ನೇ ನೀಡುತ್ತಿದ್ದಾರೆ. ಮುಖ್ಯಮಂತ್ರಿಯ ಪುತ್ರ ಎಂಬ ಕಾರಣಕ್ಕೆ ಏನೇನೋ ಹೇಳಬಾರದು. ಹೈಕಮಾಂಡ್ ಸುಮ್ಮನೆ ಕುಳಿತಿಲ್ಲ, ಎಲ್ಲವನ್ನೂ ಗಮನಿಸುತ್ತಿದೆ. ನಾನಂತೂ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿ ಎಂದು ಉಪವಾಸ ವ್ರತವನ್ನೂ ಮಾಡುತ್ತಿದ್ದೇನೆ’ ಎಂದರು.

ಶೇ 40 ಕಮಿಷನ್ ಆರೋಪ ಮಾಡಿದಾಗ ದಾಖಲೆ ನೀಡಿದ್ದರೆ –ಎಚ್‌.ಡಿ.ಕೆ ಪ್ರಶ್ನೆ

ಅಬಕಾರಿ ಲಂಚಕ್ಕಿಂತ ದಾಖಲೆ ಬೇಕೆ?

ಪ್ರಜಾವಾಣಿ ವಾರ್ತೆ

ಕೋಲಾರ: ‘ಅಬಕಾರಿ ಇಲಾಖೆಯಲ್ಲಿ ದುಡ್ಡು ತೆಗೆದುಕೊಂಡಿರುವುದಕ್ಕೆ ಈಗ ದಾಖಲೆ ಇದೆ. ₹25 ಲಕ್ಷ ತೆಗೆದು ಕೊಂಡು ಸಿಕ್ಕಿಬಿದ್ದಿದ್ದಾರೆ, ಮಂತ್ರಿ ಹೆಸರೂ ಬಂದಿದೆ. ಇದಕ್ಕಿಂತ ದಾಖಲೇ ಬೇಕೆ’ ಎಂದು ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಕುಮಾರಸ್ವಾಮಿ

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಏನೇ ಆರೋಪ ಮಾಡಿದರೂ ದಾಖಲೆ ಕೊಡಿ ಎಂದು ಕಾಂಗ್ರೆಸ್ ಸರ್ಕಾರದವರು ಕೇಳುತ್ತಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಶೇ 40 ಕಮಿಷನ್ ಎಂದು ಆರೋಪಿಸಿದಾಗ ಯಾವ ದಾಖಲೆ ಕೊಟ್ಟಿದ್ದರು?’ ಎಂದು ಹರಿಹಾಯ್ದರು.

‘ಹೊಸದಾಗಿ 500ಕ್ಕೂ ಅಧಿಕ ಮದ್ಯದಂಗಡಿ ಹರಾಜು ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದ ದಿನವೇ ಇದು ದುಡ್ಡು ಹೊಡೆಯುವ ಕಾರ್ಯಕ್ರಮ ಎಂಬುದಾಗಿ ನಾನು ಹೇಳಿದ್ದೆ’ ಎಂದರು.

‘ಈ ಸರ್ಕಾರದ ಮಂತ್ರಿಗಳು ಎಷ್ಟು ಕೆರೆ ನುಂಗಿದ್ದಾರೆ? ಯಾರು ಭೂಮಿ ಲಪಟಾಯಿಸಿದ್ದಾರೆ ಎಂಬುದಕ್ಕೆ ಟನ್‌ಗಟ್ಟಲೆ ದಾಖಲೆ ಕೊಡಬಲ್ಲೆ. ಅದು ಉಪಯೋಗಕ್ಕೆ ಬರಲ್ಲ. ಹಿಂದೆ ಹೋರಾಟ ನಡೆಸಿ ಹಲವಾರು ದಾಖಲೆ ಕೊಟ್ಟಿದ್ದೆ. ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗಲಿಲ್ಲ ಎಂಬ ಬೇಸರವಿದೆ ಎಂದರು.

‘ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಶ್ರೀನಿವಾಸಪುರದಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಳ್ಳದಿದ್ದರೆ ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳಿದ್ದರೆ ಏಕೆ ಹೆದರಬೇಕು? ನಾನು ನೋಟಿಸ್ ಕೊಡಿಸಿದ್ದೇನೆ ಎಂದು ಏಕೆ ದೂರುತ್ತಿದ್ದಾರೆ?’ ಎಂದು ಹರಿಹಾಯ್ದರು.

‘ಬಿಡದಿಯಲ್ಲಿ ನಾನು ಬೆವರು ಸುರಿಸಿ ಭೂಮಿ ಖರೀದಿಸಿದ್ದೇನೆ. ಅದಕ್ಕೂ ಎಸ್‌ಐಟಿ ರಚಿಸಿ ಹಿಂಸೆ ಕೊಟ್ಟರು. ಇವರ ರೀತಿ ಹಗಲು ದರೋಡೆ ಮಾಡಿ ನಾನು ಜಮೀನು ಖರೀದಿಸಿದ್ದು ಅಲ್ಲ’ ಎಂದರು.

‘ರಾಜ್ಯದ ಯಾವುದೇ ಸಚಿವರು ನನ್ನನ್ನು ಅಭಿವೃದ್ಧಿ ಕೆಲಸದ ಸಂಬಂಧ ಭೇಟಿ ಮಾಡಿ ಚರ್ಚಿಸಿಲ್ಲ. ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಭೇಟಿಯಾಗಿ ಅವರ ರಾಜ್ಯದ ಬೇಡಿಕೆಗಳ ಮನವಿ ಕೊಟ್ಟು ಹೋಗುತ್ತಿದ್ದಾರೆ. ಆದರೆ, ಇವರು ಆ ಪದ್ಧತಿಯನ್ನೇ ಇಟ್ಟುಕೊಂಡಿಲ್ಲ’ ಎಂದು ಟೀಕಾ ಪ್ರಹಾರ ನಡೆಸಿದರು.

‘ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕೃಷ್ಣಾ ನದಿ ನೀರು ತರುವ ಬಗ್ಗೆ ಶೀಘ್ರದಲ್ಲಿಯೇ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ’ ಎಂದು ಹೇಳಿದರು.

‘ಸೀಟು ಹಂಚಿಕೆ ಮಾತುಕತೆ ನಡೆದಿಲ್ಲ’

‘ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಸಂಬಂಧ ಸ್ಥಳೀಯವಾಗಿ ಯಾರೇ ಚರ್ಚೆ ಮಾಡಿದರೂ ಅದು ಅಂತಿಮ ಅಲ್ಲ. ಮಂಡ್ಯ, ಹಾಸನ ಸೇರಿದಂತೆ ರಾಜ್ಯದ ಯಾವುದೇ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಸೀಟು ಕುರಿತು ಮಾತುಕತೆ ಆಗಿಲ್ಲ. ಚುನಾವಣೆ ಬಂದಾಗ ಹೈಕಮಾಂಡ್ ಮಟ್ಟದಲ್ಲಿ ಬಿಜೆಪಿಯೊಂದಿಗೆ ಮಾತುಕತೆ ಮೂಲಕ ತೀರ್ಮಾನ ಕೈಗೊಳ್ಳುತ್ತೇವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧೆ ಸಂಬಂಧ ಎಚ್‌.ಡಿ.ದೇವೇಗೌಡರ ಮಾತಿನ ಅರ್ಥವೇ ಬೇರೆ. ಭ್ರಷ್ಟ ರಾಜ್ಯ ಸರ್ಕಾರ ತೆಗೆದು ಹಾಕುವುದು ನಮ್ಮ ಮೊದಲ ಆದ್ಯತೆ ಆಗಿದೆ. ಜಿಲ್ಲಾ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆ ಚುನಾವಣೆ ಗೆಲ್ಲುವತ್ತ ಹರಿಸುತ್ತಿದ್ದೇವೆ’ ಎಂದು ಕುಮಾರಸ್ವಾಮಿ ಹೇಳಿದರು.

ವಿವರಣೆ ನೀಡಿ: ಪಿಸಿಬಿಗೆ ಸೂಚನೆ

ಒಂದನೇ ಪುಟದಿಂದ...

ಕ್ರೀಡೆಯ ಹಿತಾಸಕ್ತಿಗೆ ತಕ್ಕ ಪರಿಹಾರ ತೆಗೆದುಕೊಳ್ಳುವ ಪ್ರಯತ್ನದಲ್ಲಿದೆ.

ಐಸಿಸಿಯು ಪಿಸಿಬಿಗೆ ಸರಣಿ ಪ್ರಶ್ನೆಗಳನ್ನು ಕಳುಹಿಸಿದೆ. ಪರ್ಯಾಯಗಳನ್ನು ಅನ್ವೇಷಿಸಲು ಅಥವಾ ಭಾಗವಹಿಸದಿರುವುದನ್ನು ಆಯ್ಕೆ ಮಾಡುವ ಮೊದಲು ವಿನಾಯಿತಿಗಳನ್ನು ಪಡೆಯಲು ಯಾವ ಪ್ರಯತ್ನಗಳನ್ನು ಮಾಡಿದೆ ಎಂಬುದನ್ನು ಪ್ರದರ್ಶಿಸಲು ಪಿಸಿಬಿಯನ್ನು ಕೇಳಿದೆ. ಭಾರತದ ಎದುರಿನ ಪಂದ್ಯದಿಂದ ಹಿಂದೆ ಸರಿಯಲು ಅಗತ್ಯವಾದ ಪುರಾವೆಗಳನ್ನು ನೀಡಬೇಕು ಎಂದೂ ಐಸಿಸಿ ಕೇಳಿದೆ.

ಮೊಬೈಲ್ ಕಳವು: ಫ್ಲಿಪ್‌ಕಾರ್ಟ್ ಸಿಬ್ಬಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಹಾವೇರಿ: ಬೆಂಗಳೂರಿನಿಂದ ಧಾರವಾಡಕ್ಕೆ ಲಾರಿಯಲ್ಲಿ ಸಾಗಿಸುತ್ತಿದ್ದ ಫ್ಲಿಪ್‌ಕಾರ್ಟ್ ಕಂಪನಿಗೆ ಸೇರಿದ ₹24.91 ಲಕ್ಷ ಮೌಲ್ಯದ ಮೊಬೈಲ್‌ಗಳ ಕಳವು ಪ್ರಕರಣದ ಸಂಬಂಧ ರಾಣೆಬೆನ್ನೂರು ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಫ್ಲಿಪ್‌ಕಾರ್ಟ್ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

‘ಜಿಲ್ಲೆಯ ಕಾಕೋಳ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಫೆ. 1ರಂದು ಹೊರಟಿದ್ದ ಲಾರಿಯ ಬಾಗಿಲಿನ ಬೀಗವನ್ನು ಸಿನಿಮೀಯ ರೀತಿಯಲ್ಲಿ ತೆರೆದು, ಮೊಬೈಲ್‌ಗಳು ಹಾಗೂ ಇತರೆ ಬೆಲೆಬಾಳುವ ವಸ್ತುಗಳಿದ್ದ 6 ಬಾಕ್ಸ್‌ಗಳನ್ನು ಕಳವು ಮಾಡಲಾಗಿದೆ’ ಎಂದು ಲಾರಿ ಚಾಲಕ ಮಲಿಕಜಾನ್ ಮುಲ್ಲಾ ಅವರು ಠಾಣೆಗೆ ದೂರು ನೀಡಿದ್ದಾರೆ.

‘ಕಳವು ಬಗ್ಗೆ ಚಾಲಕ ದೂರು ನೀಡಿದ್ದು, ವಸ್ತುಗಳ ಬಗ್ಗೆ ಫ್ಲಿಪ್‌ಕಾರ್ಟ್ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗುತ್ತಿದೆ. ಯಾವ ವಸ್ತುಗಳು ಕಳುವಾಗಿವೆ? ಮೊಬೈಲ್‌ಗಳ ಐಎಂಇಐ ಸಂಖ್ಯೆ ಏನು ಎಂಬ ಮಾಹಿತಿ ಕಲೆ ಹಾಕುತ್ತಿದ್ದೇವೆ. ಐಎಂಇಐ ಸಿಕ್ಕರೆ, ಮೊಬೈಲ್‌ಗಳ ಸುಳಿವು ಸಿಗುತ್ತದೆ’ ಎಂದು ಪೊಲೀಸರು ಹೇಳಿದರು.

‘ಸರಕು ಸಾಗಣೆ ವಾಹನಗಳಲ್ಲಿ ಸುರಕ್ಷತೆಗಾಗಿ ಸಿ.ಸಿ.ಟಿ.ವಿ ಕ್ಯಾಮೆರಾವನ್ನು ಲಾರಿಯಲ್ಲಿ ಅಳವಡಿಸಿಲ್ಲ. ರಾಷ್ಟ್ರೀಯ ಹೆದ್ದಾರಿಯ ಹಲವು ಕಡೆ ಲಾರಿ ನಿಂತಿತ್ತು. ಆದರೆ, ಕಾಕೋಳ ಬಳಿಯೇ ಬಾಗಿಲು ತೆರೆದಿರುವುದಾಗಿ ಕಂಪನಿಯ ತಾಂತ್ರಿಕ ವಿಭಾಗ ತಿಳಿಸಿದೆ. ಸತ್ಯಾಸತ್ಯತೆ ಪತ್ತೆಗೆ ತನಿಖೆ ನಡೆಸಿದ್ದೇವೆ’ ಎಂದರು.

ಗೃಹಲಕ್ಷ್ಮಿಗೆ ಜೀವಿತ ಪ್ರಮಾಣಪತ್ರ ಸಿ.ಎಸ್‌ಗೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹ ಲಕ್ಷ್ಮಿ’ ಯೋಜನೆಯ ಫಲಾನುಭವಿಗಳು ಜೀವಿತ ಪ್ರಮಾಣಪತ್ರ ನೀಡುವುದನ್ನು ಕಡ್ಡಾಯಗೊಳಿಸುವ ಬಗ್ಗೆ ಪರಿಶೀಲಿಸಿ, ತಕ್ಷಣ ಕ್ರಮ ವಹಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ದಿನೇಶ್ ಗೂಳಿಗೌಡ

ಈ ವಿಚಾರವಾಗಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ರಾಜ್ಯ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ ಗೂಳಿಗೌಡ ಮನವಿ ಸಲ್ಲಿಸಿದ್ದರು.

ಮನವಿಯಲ್ಲಿ ಏನಿತ್ತು: ‘ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ₹ 2 ಸಾವಿರ ಪಾವತಿಸಲಾಗುತ್ತಿದ್ದು, 1,24,12,543 ಅರ್ಹ ಫಲಾನುಭವಿಗಳಿಗೆ ಈವರೆಗೂ ಸುಮಾರು ₹ 57,300 ಕೋಟಿ ಪಾವತಿಸಲಾಗಿದೆ. ಆದರೆ, ಕೆಲವು ಕಡೆ ಮರಣ ಹೊಂದಿರುವ ಫಲಾನುಭವಿಗಳ ಹೆಸರಿನಲ್ಲಿ ಈ ಯೋಜನೆಯಡಿ ಹಣ ಪಾವತಿ ಆಗುತ್ತಿದೆ. ಅದನ್ನು ತಡೆಗಟ್ಟಬೇಕಿದೆ. ಆ ಮೂಲಕ, ಸರ್ಕಾರವು ಪಾವತಿಸುವ ಮೊತ್ತವು ಸದ್ವಿನಿಯೋಗವಾಗಲು ಹಾಗೂ ಅರ್ಹ ಫಲಾನುಭವಿಗಳಿಗೆ ವಿತರಿಸಲು ಕ್ರಮ ವಹಿಸಬೇಕು’ ಎಂದು ದಿನೇಶ ಗೂಳಿಗೌಡ ಮನವಿ ಮಾಡಿದ್ದರು.

‘ನಿವೃತ್ತ ಸರ್ಕಾರಿ ನೌಕರರಿಗೆ ಪಾವತಿಸುವ ಪಿಂಚಣಿ ಮೊತ್ತವನ್ನು ಪಡೆಯಲು ಅವರು ಪ್ರತಿವರ್ಷ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ತಮ್ಮ ಜೀವಿತ ಪ್ರಮಾಣಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಅದೇ ಮಾದರಿಯನ್ನು ಗೃಹಲಕ್ಷ್ಮಿಗೂ ಅನ್ವಯಿಸಬೇಕು’ ಎಂದೂ ಕೋರಿದ್ದರು.

ಇಬ್ಬರು ಎಎಸ್‌ಐ, ಕಾನ್‌ಸ್ಟೆಬಲ್‌ಗಳು ಅಮಾನತು

ಯಾದಗಿರಿ: ಅಕ್ರಮವಾಗಿ ಮರಳು ಸಾಗಣೆಗೆ ಬಳಸುತ್ತಿದ್ದ ವಾಹನಗಳನ್ನು ಬಿಟ್ಟು ಕಳುಹಿಸಿದ ಆರೋಪದಡಿ ಸುರಪುರ ಠಾಣೆಯ ಇಬ್ಬರು ಎಎಸ್‌ಐ ಸೇರಿ ನಾಲ್ವರನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುರಪುರ ವಿಭಾಗದ ಡಿವೈಎಸ್‌ಪಿ ಅವರು ನೀಡಿದ್ದ ವರದಿ ಆಧರಿಸಿ ಎಎಸ್‌ಐಗಳಾದ ನಿಂಗಪ್ಪ, ಬಲರಾಮ, ಕಾನ್‌ಸ್ಟೆಬಲ್‌ಗಳಾದ ತಾಯಣ್ಣ ಮತ್ತು ಲಕ್ಷ್ಮಣ ಅವರನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿವೆ.

ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಆರು ಟಿಪ್ಪರ್‌ಗಳನ್ನು ದೇವಿಕೇರಾ ಕ್ರಾಸ್ ಸಮೀಪ ತಡೆಯದೆ ಬಿಟ್ಟು ಕಳುಹಿಸಿರುವುದು ಇಲಾಖೆ ವಿಚಾರಣೆಯಲ್ಲಿ ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಹೇಳಿವೆ.

ವಶಕ್ಕೆ ಪಡೆದಿರುವ ವಾಹನಗಳ ನೋಂದಣಿ ರದ್ದತಿಗಾಗಿ ಯಾದಗಿರಿ ಹಾಗೂ ಕಲಬುರಗಿ ಆರ್‌ಟಿಒ ಕಚೇರಿಗೆ ಪತ್ರ ಬರೆಯಲಾಗಿದೆ. ಈಗಾಗಲೇ 3-4 ವಾಹನಗಳ ನೋಂದಣಿ ರದ್ದಾಗಿದೆ ಎಂದು ತಿಳಿಸಿವೆ.

ಗಂಡಸರಿಗೆ ಜಾಗ ಸಿಕ್ತಿಲ್ಲ – ‘ಶಕ್ತಿ’ ಯೋಜನೆ ಕುರಿತು ದೇಶಪಾಂಡೆ ಅಪಸ್ವರ

‘ಬಸ್‌ನಲ್ಲಿ ಮಹಿಳೆಯರೇ ಹೆಚ್ಚು ಇರುತ್ತಾರೆ..’

ಪ್ರಜಾವಾಣಿ ವಾರ್ತೆ

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): ‘ಸಿದ್ದರಾಮಯ್ಯ ಶಕ್ತಿ ಯೋಜನೆ ಜಾರಿಗೆ ತಂದಿದ್ದರಿಂದ ಮಹಿಳೆಯರೇ ಬಸ್‌ನಲ್ಲಿ ಹೆಚ್ಚು ಇರುತ್ತಾರೆ. ಗಂಡು ಮಕ್ಕಳಿಗೆ ಬಸ್‌ನಲ್ಲಿ ಜಾಗ ಸಿಗದಂತಾಗಿದೆ’ ಎಂದು ಕಾಂಗ್ರೆಸ್ ಪಕ್ಷದ ಶಾಸಕ ಆರ್. ವಿ.ದೇಶಪಾಂಡೆ ಶನಿವಾರ ಹೇಳಿದರು.

ಇಲ್ಲಿ ದಾಂಡೇಲಿ–ಅಳ್ನಾವರ ಡೆಮು ರೈಲಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು, ‘ಶಕ್ತಿ ಯೋಜನೆ’ ವಿರುದ್ಧ ಬಿಜೆಪಿ ನಾಯಕರ ಎದುರೇ ಅಪಸ್ವರ ಎತ್ತಿದ್ದಾರೆ.

ದೇಶಪಾಂಡೆ ಅವರ ಮಾತನ್ನು ಭಾಷಣದ ಮಧ್ಯೆ ಪ್ರಸ್ತಾಪಿಸಿದ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರೂ, ‘ಶಕ್ತಿ ಯೋಜನೆ ಬಗ್ಗೆ ಕಾಂಗ್ರೆಸ್ ನಾಯಕರೇ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ’ ಎಂದರು.

‘ಇದರಿಂದ ರಾಜ್ಯ ಎಂತಹ ಅನಾಹುತಕ್ಕೆ ಸಿಲುಕಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಸೋಮಣ್ಣ ಅವರು ಪ್ರತಿಕ್ರಿಯಿಸಿದರು.

‘ಅಳ್ನಾವರದಿಂದ ಬೆಳಗಾವಿ, ಹುಬ್ಬಳ್ಳಿಗೆ ರೈಲು ಸಂಪರ್ಕ ಕಲ್ಪಿಸಿದರೆ ದಾಂಡೇಲಿ ಭಾಗದ ಜನರಿಗೆ ಅನುಕೂಲ ಆಗಲಿದೆ. ರೈಲು ಸಂಪರ್ಕ ಹೆಚ್ಚಿದರೆ ಹೆಚ್ಚು ಪ್ರಯಾಣಿಕರಿಗೆ ಅನುಕೂಲವಾಗುತ್ತದೆ’ ಎಂದರು.

‘ಸಚಿವ ವಿ.ಸೋಮಣ್ಣ ಪ್ರಯತ್ನದ ಫಲವಾಗಿ ದಾಂಡೇಲಿ–ಅಳ್ನಾವರ ರೈಲು ಪುನರಾರಂಭವಾಗಿದೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಒಳ್ಳೆಯ ಕೆಲಸ ಮಾಡಿದಾಗ ಪ್ರತಿಪಕ್ಷದವರಿದ್ದರೂ ಹೊಗಳುತ್ತೇನೆ. ದ್ವೇಷ ಮಾಡುವ ಗುಣ ಬೆಳೆಸಿಕೊಂಡಿಲ್ಲ. ಈ ಕಾರಣದಿಂದಲೇ 9 ಬಾರಿ ಶಾಸಕನಾಗಿದ್ದೇನೆ’ ಎಂದರು.

‘ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ ಶೀಘ್ರ ಅನುಮತಿ’

‘ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣಕ್ಕೆ ₹17 ಸಾವಿರ ಕೋಟಿ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗೆ ಶೀಘ್ರವೇ ಅನುಮತಿ ಸಿಗಲಿದೆ. ಅಳ್ನಾವರ-ದಾಂಡೇಲಿ ರೈಲನ್ನು ಹುಬ್ಬಳ್ಳಿವರೆಗೆ ವಿಸ್ತರಿಸಲಾಗುವುದು’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ದಾಂಡೇಲಿ ರೈಲು ನಿಲ್ದಾಣದಲ್ಲಿ ಅಳ್ನಾವರ–ದಾಂಡೇಲಿ (26 ಕಿ.ಮೀ) ಪ್ರಯಾಣಿಕರ ರೈಲು ಮರು ಸಂಚಾರಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

ದಾಂಡೇಲಿ– ಅಳ್ನಾವರ ರೈಲು ಮರು ಸಂಚಾರಕ್ಕೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಆರ್‌.ವಿ.ದೇಶಪಾಂಡೆ, ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು

ನಕ್ಸಲ್ ನಾಯಕ ಪ್ರಭಾಕರ್ ಹತ್ಯೆ

ಮಹಾರಾಷ್ಟ್ರದ ಗಡಚಿರೋಲಿಯಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಗಡಚಿರೋಲಿಯಲ್ಲಿ ನಡೆದ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ನಕ್ಸಲ್ ನಾಯಕ ಪ್ರಭಾಕರ್ ರಾವ್ ಅಲಿಯಾಸ್ ಲೋಕೇಟಿ ಚಂದರ್ ರಾವ್ ಸೇರಿ ಐವರು ಮಂದಿಯನ್ನು ಹತ್ಯೆಗೈಯಲಾಗಿದೆ.

ಪ್ರಭಾಕರ್ ಸಿಪಿಐ ಸಂಘಟನೆಯ ಅತ್ಯುನ್ನತ ಶ್ರೇಣಿಯ ನಾಯಕರಲ್ಲಿ ಒಬ್ಬನಾಗಿದ್ದ. ತೆಲಂಗಾಣದ ಕಾಮರೆಡ್ಡಿ ಜಿಲ್ಲೆಯ 'ಇಸ್ಲೋಜಿವಾಡಿ' ಗ್ರಾಮದ ಪ್ರಭಾಕರ್‌ನನ್ನು ರವಿ, ಸ್ವಾಮಿ, ಚಂದರ್, ರಾವ್ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು.

ಪ್ರಭಾಕರ್ ಸುಳಿವು ನೀಡಿದವರಿಗೆ ₹25 ಸಾವಿರ ಬಹುಮಾನ ಘೋಷಿಸಲಾಗಿತ್ತು. 73 ಎನ್‌ಕೌಂಟರ್, 13 ಕೊಲೆ ಮತ್ತು 21 ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ.

ಖಚಿತ ಮಾಹಿತಿ ಮೇರೆಗೆ ಫೆಬ್ರುವರಿ 4ರಂದು ಮಹಾರಾಷ್ಟ್ರ–ಛತ್ತೀಸಗಢದ ಗಡಿಯಲ್ಲಿನ ಅಬುಜಮಾಡ್ ಅರಣ್ಯದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಈ ವೇಳೆ ಪೊಲೀಸರ ಮೇಲೆ ನಕ್ಸಲರು ಹಠಾತ್ ದಾಳಿ ನಡೆಸಿದ್ದರು. ಪ್ರತಿದಾಳಿ ನಡೆಸಿದ ಪೊಲೀಸರು ನಕ್ಸಲರ ಎರಡು ಶಿಬಿರಗಳನ್ನು ನಾಶಗೊಳಿಸಿ, ಅವರಿಗೆ ಸಂಬಂಧಿಸಿದ ವಸ್ತುಗಳನ್ನು ವಶಕ್ಕೆ ಪಡೆದಿದ್ದರು.

ಪ್ರತಿಕೂಲ ಹವಾಮಾನದಿಂದಾಗಿ ನಕ್ಸಲರನ್ನು ಆ ದಿನ ಪತ್ತೆ ಮಾಡಲು ಸಾಧ್ಯವಾಗಿರಲಿಲ್ಲ. ಮರುದಿನ ಕಾರ್ಯಾಚರಣೆಯನ್ನು ಮುಂದುವರಿಸಲಾಗಿತ್ತು. ಈ ವೇಳೆ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರ ಮೃತದೇಹಗಳು ಪತ್ತೆಯಾಗಿದ್ದವು. ಜೊತೆಗೆ ಸ್ಥಳದಲ್ಲಿದ್ದ ಎಕೆ–47 ಸೇರಿದಂತೆ ಬಂದೂಕುಗಳನ್ನು ವಶಕ್ಕೆ ಪಡೆಯಲಾಗಿತ್ತು.

ಫೆ.6ರಂದು ನಡೆದ ಕಾರ್ಯಾಚರಣೆಯಲ್ಲಿ ಮತ್ತೆ ನಾಲ್ವರು ನಕ್ಸಲರ ಮೃತದೇಹ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸಗಢ: 51 ನಕ್ಸಲರ ಶರಣಾಗತಿ

ಬಿಜಾಪುರ/ಸುಕ್ಮಾ(ಛತ್ತೀಸಗಢ): ಛತ್ತೀಸಗಢದ ಬಸ್ತರ್ ವಿಭಾಗದ ಎರಡು ಜಿಲ್ಲೆಗಳಲ್ಲಿ ಶನಿವಾರ 51 ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶರಣಾದ ನಕ್ಸಲರಿಗೆ ಒಟ್ಟು ₹1.61 ಕೋಟಿ ನೆರವು ನೀಡಲಾಗಿದೆ.

ಶರಣಾದವರಲ್ಲಿ 34 ಮಹಿಳೆಯರು ಇದ್ದಾರೆ. ಬಸ್ತರ್ ಜಿಲ್ಲೆಯ ಕೇಂದ್ರ ಕಚೇರಿಯಿರುವ ಜಗದಲ್‌ಪುರದಲ್ಲಿ 'ಬಸ್ತರ್ ಪಾಂಡಮ್ 2026 ಉತ್ಸವ' ಉದ್ಘಾಟನೆ ಸಂಬಂಧ ರಾಷ್ಟ್ರಪತಿ ದ್ರೌಪದಿ ಮುರ್ಮು ಮೂರು ದಿನಗಳ ಪ್ರವಾಸಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿದ್ದು, ಇದೇ ಸಂದರ್ಭದಲ್ಲಿ ಈ ಶರಣಾಗತಿ ನಡೆದಿದೆ.

ಬಸ್ತರ್ ವಲಯದ ಐಜಿಪಿ ಸುಂದರರಾಜ್ ಪಟ್ಟಲಿಂಗ, 'ಬಿಜಾಪುರ ಜಿಲ್ಲೆಯಲ್ಲಿ 20 ಮಹಿಳೆಯರು ಸೇರಿದಂತೆ 30 ಕಾರ್ಯಕರ್ತರು ಶರಣಾಗಿದ್ದಾರೆ. ನೆರೆಯ ಸುಕ್ಮಾ ಜಿಲ್ಲೆಯಲ್ಲಿ 14 ಮಹಿಳೆಯರು ಸೇರಿ 21 ಮಂದಿ ಶರಣಾಗಿದ್ದಾರೆ.

ಶಸ್ತ್ರಾಸ್ತ್ರ ವಶ

ಗರಿಯಾಬಂದ್ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಗರಿಯಾಬಂದ್ ಜಿಲ್ಲೆಯ ಗುಡ್ಡಗಾಡು ಪ್ರದೇಶಗಳಲ್ಲಿನ ಆರು ಸ್ಥಳಗಳಿಂದ ನಕ್ಸಲರು ಸಂಗ್ರಹಿಸಿಟ್ಟಿದ್ದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಸ್ಫೋಟಕಗಳು ಮತ್ತು ಶಸ್ತ್ರಾಸ್ತ್ರಗಳ ತಯಾರಿಕೆಗೆ ಬಳಸುವ ಉಪಕರಣಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಭದ್ರತಾಪಡೆಗಳು 36 ಗಂಟೆ ಗಳಿಂದ ನಡೆಸಿದ ಕಾರ್ಯಾಚರಣೆಯಲ್ಲಿ ಒಡಿಶಾದ ಪಕ್ಕದ ಮೈನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿ ಭಾಲುಡಿಗ್ಗಿ,ಮೆಟಲ್ ಪರ್ವತ ಶ್ರೇಣಿಗಳಲ್ಲಿ ನಕ್ಸಲರ ಅಡಗುತಾಣ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

₹100 ಕೋಟಿ ವಂಚನೆ ಪತ್ತೆ

ಎರಡನೇ ಮುಖಪುಟದಿಂದ...

ಇದುವರೆಗೂ ನಡೆದ ತನಿಖೆಯಲ್ಲಿ ಈ 'ಮ್ಯೂಲ್ ಅಕೌಂಟ್'ಗಳ ಮೂಲಕ ಅಂದಾಜು ₹100 ಕೋಟಿಗೂ ಹೆಚ್ಚು ವಂಚನೆ ನಡೆದಿರುವುದು ಗೊತ್ತಾಗಿದೆ. ಇನ್ನೂ ಒಂದುವಾರ ವಿಶೇಷ ಕಾರ್ಯಾಚರಣೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಕ್ಯೂ–ಆರ್ ಕೋಡ್ ಸಹ ಜಪ್ತಿ: 'ಇದುವರೆಗೂ ನಡೆದ ಕಾರ್ಯಾಚರಣೆಯಲ್ಲಿ ಬಂಧಿತರಿಂದ ವಿವಿಧ ಬ್ಯಾಂಕ್‌ನ 18 ಪಾಸ್‌ಬುಕ್‌ಗಳು, 25 ಎಟಿಎಂ ಕಾರ್ಡ್, ಐದು ಚೆಕ್‌ಬುಕ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪ್ರಣವ್ ಮೊಹಂತಿ ಮಾಹಿತಿ ನೀಡಿದರು.

'ಆಮಾಯಕರನ್ನು ಗುರಿಯಾಗಿಸಿ, ಅವರಿಂದ ಆಧಾರ್ ಕಾರ್ಡ್ ಸೇರಿ ಅಗತ್ಯ ದಾಖಲೆ ಪಡೆದು ಬ್ಯಾಂಕ್ ಖಾತೆ ತೆರೆಯಲಾಗುತ್ತದೆ. ಆ ಖಾತೆಗಳಿಗೆ ವಂಚನೆ ಹಣವನ್ನು ವರ್ಗಾವಣೆ ಮಾಡಲಾಗುತ್ತದೆ. ಹಣದ ಆಸೆಗೆ ಬೇರೆಯವರಿಗೂ ಬ್ಯಾಂಕ್ ವಿವರ ನೀಡಲಾಗುತ್ತದೆ. ದಾಖಲೆ ನೀಡಿದರೆ ದುರುಪಯೋಗ ಆಗುವ ಸಾಧ್ಯತೆಯೂ ಇರುತ್ತದೆ' ಎಂದು ಎಚ್ಚರಿಸಿದರು.

'2021ರಿಂದ ಈಚೆಗೆ ರಾಜ್ಯದಲ್ಲಿ ಸೈಬರ್ ಪ್ರಕರಣಗಳು ಹೆಚ್ಚಾಗಿವೆ. ಸೈಬರ್ ಅಪರಾಧ ಪ್ರಕರಣಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ ಬ್ಯಾಂಕ್ ಅಧಿಕಾರಿಗಳ ಸಭೆಯನ್ನೂ ನಡೆಸಲಾಗಿದೆ' ಎಂದು ಅವರು ಹೇಳಿದರು.

ರಾಜ್ಯದಲ್ಲೂ 'ಕೆ4ಸಿ' ಆರಂಭ

'ಸೈಬರ್ ಅಪರಾಧ ತಡೆಗಟ್ಟಲು ಹಾಗೂ ಸೈಬರ್ ವಂಚಕರ ಪತ್ತೆಗೆ ಕೇಂದ್ರ ಸರ್ಕಾರ ಸ್ಥಾಪಿಸಿರುವ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ (i4ಸಿ) ಮಾದರಿಯಲ್ಲಿಯೇ ರಾಜ್ಯದಲ್ಲೂ 'ಕರ್ನಾಟಕ ಸೈಬರ್ ಅಪರಾಧ ಸಮನ್ವಯ ಕೇಂದ್ರ (ಕೆ4ಸಿ) ಸ್ಥಾಪಿಸಲಾಗುತ್ತಿದೆ' ಎಂದು ಡಿಜಿಪಿ ಪ್ರಣವ್ ಮೊಹಂತಿ ಹೇಳಿದರು.

> ಬಂಧಿತರ ಅಪರಾಧ ಹಿನ್ನೆಲೆ ಪರಿಶೀಲನೆ ನಡೆಸಲಾಗುತ್ತಿದೆ. ಬ್ಯಾಂಕ್ ಅಧಿಕಾರಿಗಳು ಶಾಮೀಲು ಕಂಡುಬಂದರೆ, ಅವರ ವಿರುದ್ಧವೂ ಕ್ರಮ ಜರುಗಿಸಲಾಗುವುದು
>
> **ಪ್ರಣವ್ ಮೊಹಂತಿ,** ಡಿಜಿಪಿ, ಸೈಬರ್ ಕಮಾಂಡ್ ಘಟಕ

'ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚುವಿಕೆಯಲ್ಲಿ ನೈಪುಣ್ಯ ಇರುವ ಅಧಿಕಾರಿಗಳನ್ನು ಈ ಕೇಂದ್ರಕ್ಕೆ ನೇಮಿಸಲಾಗುವುದು. ಜತೆಗೆ, ಅಗತ್ಯ ತರಬೇತಿ ಸಹ ನೀಡಲಾಗುವುದು' ಎಂದು ಹೇಳಿದರು.

'ಸೈಬರ್ ವಂಚನೆಗಳಿಗೆ ಸಂಬಂಧಿಸಿದ ಪ್ರಕರಣಗಳು ಸೆನ್ ಹಾಗೂ ಸಿಐಡಿಯ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ಸೈಬರ್ ಅಪರಾಧವನ್ನು ಸಂಘಟಿತ ಮತ್ತು ಸಮಗ್ರ ರೀತಿಯಲ್ಲಿ ನಿಭಾಯಿಸಲು ಕರ್ನಾಟಕ ಸೈಬರ್ ಅಪರಾಧ ಸಮನ್ವಯ ಕೇಂದ್ರ ಸ್ಥಾಪನೆ ಅವಶ್ಯವಾಗಿದೆ.

ದೊಡ್ಡ ಮೊತ್ತದ ವಂಚನೆ ನಡೆದಾಗ, ಸರ್ಕಾರಿ ಇಲಾಖೆಗಳ ವೆಬ್‌ಸೈಟ್ ಹ್ಯಾಕ್ ಸೇರಿದಂತೆ ಇತರೆ ಗಂಭೀರ ಪ್ರಕರಣಗಳ ತನಿಖೆಯನ್ನು 'ಕೆ4ಸಿ' ಮೂಲಕವೇ ನಡೆಸಲು ಚಿಂತನೆ ನಡೆಸಲಾಗಿದೆ' ಎಂದು ಹೇಳಿದರು.

ಸರ್ಕಾರಿ ಜಾಗದಲ್ಲಿದ್ದ ಮಸೀದಿ ನೆಲಸಮ

ಬರೇಲಿ (ಪಿಟಿಐ): ಜಿಲ್ಲೆಯ ಪಿಪರಿಯಾ ಗ್ರಾಮದ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮಸೀದಿಯನ್ನು ಜಿಲ್ಲಾಡಳಿತ ಶನಿವಾರ ನೆಲಸಮ ಗೊಳಿಸಿದೆ.

ಕಂದಾಯ ದಾಖಲೆಯಲ್ಲಿ ಬಂಜರು ಸರ್ಕಾರಿ ಜಮೀನು ಎಂದು ನಮೂದಾಗಿರುವ ಜಾಗದಲ್ಲಿ ಮಸೀದಿ ನಿರ್ಮಿಸಲಾಗಿತ್ತು ಎಂದು ಬರೇಲಿ ಸದರ್ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಪ್ರಮೋದ್ ಕುಮಾರ್ ತಿಳಿಸಿದ್ದಾರೆ. 18 ವರ್ಷದ ಕಾನೂನು ಹೋರಾಟದ ನಂತರ ಸಿವಿಲ್ ನ್ಯಾಯಾಲಯದ ಆದೇಶದ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ. ಬುಲ್ಡೋಜರ್ ಬಳಸಿ ಅಕ್ರಮ ಕಟ್ಟಡವನ್ನು ನೆಲಸಮ ಗೊಳಿಸುವ ಮೂಲಕ 300 ಚದರ ಗಜಗಳಷ್ಟು ಸರ್ಕಾರಿ ಭೂಮಿಯನ್ನು ಅತಿಕ್ರಮಣದಿಂದ ಮುಕ್ತಗೊಳಿಸಲಾಯಿತು. ಅತಿಕ್ರಮಣ ಮಾಡಿಕೊಂಡ ದ್ದವರಿಗೆ ದಂಡ ವಿಧಿಸಲಾಗಿದೆ ಎಂದು ಎಸ್‌ಡಿಎಂ ಹೇಳಿದ್ದಾರೆ. 'ಮಸೀದಿ–ಎ–ಅಲಾ ಹಜರತ್ ಸುಮಾರು 50 ವರ್ಷ ಹಳೆಯದು. ಮುನ್ಸೂಚನೆ ನೀಡದೆ ಕೆಡವಲಾಗಿದೆ' ಎಂದು ಗ್ರಾಮದ ಮೊಹಮ್ಮದ್ ಉಮರ್ ದೂರಿದ್ದಾರೆ.

ಚುನಾವಣೆ: ಕ್ಷೇತ್ರ ಹುಡುಕಾಟದಲ್ಲಿ ವಿಜಯ್

ಪ್ರಜಾವಾಣಿ ವಾರ್ತೆ

ಚೆನ್ನೈ (ಪಿಟಿಐ): ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ, ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಅವರಿಗೆ ಸ್ಪರ್ಧಿಸಲು ಯಾವ ಕ್ಷೇತ್ರವನ್ನು ಆಯ್ಕೆ ಮಾಡಬೇಕು ಎಂಬುದರ ಕುರಿತು ಪಕ್ಷದ ನಾಯಕರು ಯೋಚಿಸುತ್ತಿದ್ದಾರೆ.

ಚೆನ್ನೈನ16 ವಿಧಾನಸಭೆ ಕ್ಷೇತ್ರಗಳಲ್ಲಿ ಒಂದು ಅಥವಾ ತಮಿಳು ನಾಡಿನ ಮಧ್ಯಭಾಗದ ಕ್ಷೇತ್ರವೊಂದರಿಂದ ವಿಜಯ್ ಅವರು ಸ್ಪರ್ಧಿಸುತ್ತಾರೆ ಎಂದು ಟಿವಿಕೆ ಮೂಲಗಳು ತಿಳಿಸಿವೆ.

ತಮಿಳುನಾಡಿನ ವಿರುಗಂಬಕ್ಕಂ, ಚೆನ್ನೈನ ವೇಲಾಚೆರಿ,ವಿಲ್ಲುಪುರಂ ಜಿಲ್ಲೆಯ ವಿಕ್ರವಂಡಿ, ವೇದಾರಣ್ಯಂ ಹಾಗೂ ನಾಗಪತ್ತಿನಂ ಸೇರಿದಂತೆ ಹಲವು

ನಟ ವಿಜಯ್

ಕ್ಷೇತ್ರಗಳನ್ನು ಸ್ಪರ್ಧೆಗೆ ಪರಿಗಣಿಸಲಾಗಿದೆ. ಶೀಘ್ರವೇ ಕ್ಷೇತ್ರವನ್ನು ಆಯ್ಕೆ ಮಾಡಿ, ಸಾರ್ವಜನಿಕವಾಗಿ ಘೋಷಣೆ ಮಾಡಲಾಗುವುದು.

'ವಿ' ಅಕ್ಷರಗಳಿಂದ ಪ್ರಾರಂಭವಾಗುವ ಕ್ಷೇತ್ರವು 'ವಿಜಯ್' ಹಾಗೂ 'ವಿಕ್ಟರಿ'ಯನ್ನು ಸಂಕೇತಿಸುತ್ತದೆ. ಇದು ಚೊಚ್ಚಲ ಚುನಾವಣೆಯ ಗೆಲುವನ್ನು ಸೂಚಿಸುತ್ತದೆ. ವಿಜಯ್ ಅವರ ಜೋತಿಷಿಗಳು, 'ವಿ' ಅಕ್ಷರದಿಂದ ಪ್ರಾರಂಭವಾಗುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದ್ದಾರೆ ಎನ್ನಲಾಗಿದೆ. ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ತಮಿಳುನಾಡು ವಿಧಾನ ಸಭೆಗೆ ಚುನಾವಣೆ ನಡೆಯಲಿದೆ.

ಮುಂಬೈ: ಮೇಯರ್ ಬಿಜೆಪಿ ಸಿದ್ಧತೆ

ಮುಂಬೈ (ಪಿಟಿಐ): 25 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಬಿಜೆಪಿಯು ಮುಂಬೈನಲ್ಲಿ ತನ್ನ ಮೇಯರ್ ನೇಮಿಸಲು ಮುಂದಾಗಿದೆ. ಪಕ್ಷದ ಕಾರ್ಪೊರೇಟರ್ ರಿತು ತಾವ್ಡೆ ಅವರು ಶನಿವಾರ ಚುನಾವಣೆಗೆ ನಾಮಪತ್ರ ಸಲ್ಲಿಸಿದರು.

ಮಹಾಯುತಿಯಲ್ಲಿ ಬಿಜೆಪಿಯ ಮಿತ್ರಪಕ್ಷವಾದ ಶಿವಸೇನಾ, ಉಪ ಮೇಯರ್ ಹುದ್ದೆಗೆ ತನ್ನ ಅಭ್ಯರ್ಥಿಯನ್ನಾಗಿಸಂಜಯ್ ಘಾಡಿ ಹೆಸರನ್ನು ಘೋಷಿಸಿದೆ.

ಸಚಿವ ಮಂಗಲ್ ಪ್ರಭಾತ್ ಲೋಢಾ, ಮುಂಬೈ ಬಿಜೆಪಿ ಘಟಕದ ಮುಖ್ಯಸ್ಥ ಅಮಿತ್ ಸತಮ್, ಶಿವಸೇನಾ ಮಾಜಿ ಸಂಸದ ರಾಹುಲ್ ಶೇವಾಲೆ ಮತ್ತು ಮಹಾಯುತಿಯ ಇತರ ನಾಯಕರ ಸಮ್ಮುಖದಲ್ಲಿ ತಾವ್ಡೆ ಮತ್ತು ಘಾಡಿ ಅವರು ಪುರಸಭೆ ಕಾರ್ಯದರ್ಶಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ಮೇಯರ್ ಸ್ಥಾನಕ್ಕೆ ಫೆಬ್ರುವರಿ 11ರಂದು ಚುನಾವಣೆ ನಡೆಯಲಿದ್ದು, ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನವೂ ಅದೇ ಆಗಿದೆ.

ಆರ್‌ಎಸ್‌ಎಸ್ ಯಾರ ವಿರುದ್ಧವೂ ಇಲ್ಲ: ಭಾಗವತ್

ಮುಂಬೈ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಯಾರ ವಿರುದ್ಧವೂ ಇಲ್ಲ. ಅದು ಅಧಿಕಾರವನ್ನೂ ಬಯಸುವುದಿಲ್ಲ. ಸಮಾಜವನ್ನು ಒಗ್ಗೂಡಿಸುವುದು ಸಂಘದ ಉದ್ದೇಶವಾಗಿದೆ ಎಂದು ಅದರ ಮುಖ್ಯಸ್ಥ ಮೋಹನ್ ಭಾಗವತ್ ಅವರು ಶನಿವಾರ ಹೇಳಿದರು.

'100 ವರ್ಷಗಳ ಸಂಘ ಪಯಣ: ಹೊಸ ಪರ್ವ' ಶೀರ್ಷಿಕೆಯಡಿ 2 ದಿನಗಳ ಉಪನ್ಯಾಸ ಕಾರ್ಯಕ್ರಮವು ಶನಿವಾರ ಆರಂಭವಾಯಿತು. ಈ ವೇಳೆ ಭಾಗವತ್ ಮಾತನಾಡಿದರು.

'ಆರ್‌ಎಸ್‌ಎಸ್‌ನಿಂದಾಗಿ ನರೇಂದ್ರ ಮೋದಿ ಪ್ರಧಾನಿಯಾಗಿದ್ದಾರೆ ಎಂದು ಅನೇಕರು ನಂಬಿದ್ದಾರೆ. ವಾಸ್ತವದಲ್ಲಿ ಮೋದಿ ರಾಜಕೀಯ ಪಕ್ಷವೊಂದನ್ನು ಮುನ್ನಡೆಸುತ್ತಾರೆ. ರಾಜಕೀಯ ಪಕ್ಷವು ಪ್ರತ್ಯೇಕ ಘಟಕವಾಗಿದ್ದು, ಅದು ಆರ್‌ಎಸ್‌ಎಸ್‌ನ ಅಂಗವಲ್ಲ' ಎಂದು ಸ್ಪಷ್ಟನೆ ನೀಡಿದರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2025–26/5977 ದಿನಾಂಕ: 06/02/2026

ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ಧತಿಯಲ್ಲಿ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1. ಅಫಜಲಪೂರ ತಾಲೂಕಿನ 1 ಕಾಮಗಾರಿ ಇಂಡೆಂಟ್ ಸಂಖ್ಯೆ (1) 24246 2. ಚಿತ್ತಾಪೂರ ತಾಲೂಕಿನ 2 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 24239 (2) 24240, 3. ಜೇವರ್ಗಿ ತಾಲೂಕಿನ 1 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 24264, 4. ಕಲಬುರಗಿ ತಾಲೂಕಿನ 1 ಕಾಮಗಾರಿಗಳ ಇಂಡೆಂಟ್ ಸಂಖ್ಯೆ: (1) 24237 **ಒಟ್ಟು 5 ಕಾಮಗಾರಿಗಳು,** 2) ಲೆಕ್ಕ ಶೀರ್ಷಿಕೆ: ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ. 54,24,744.97, ಗರಿಷ್ಠ ರೂ. 87,80,824.80,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **07.02.2026 ರಿಂದ 19.02.2026 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ 7) ಇ.ಎಂ.ಡಿ.: ಕನಿಷ್ಠ ರೂ. 1,08,500.00, ಗರಿಷ್ಠ ರೂ. 1,76,000.00, 8) ಟೆಂಡರ ಸಲ್ಲಿಸುವ ದಿನಾಂಕ: **07.02.2026 ರಿಂದ 19.02.2026 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.02.2026 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ : **21.02.2026 ಬೆಳಿಗ್ಗೆ 11:00 ಗಂಟೆ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1056/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ನೋಂದಾಯಿತ ಕಛೇರಿ : ನಗರಾಭಿವೃದ್ಧಿ ಭವನ, ನಂ. 22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ. ಬಸ್ ಡಿಪ್ಪೊ ಹತ್ತಿರ, ಬೆಂಗಳೂರು–560038. ದೂರವಾಣಿ: (080) 25196124
ಫ್ಯಾಕ್ಸ್ : 080–25196110, ಇಮೇಲ್: info@kuidfc.com ವೆಬ್‌ಸೈಟ್ : www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಅಡಳಿತ/ಯುಐಬಿ/ HVAC-CAMC/2025–26 ದಿನಾಂಕ :07.02.2026

ಅಲ್ಪಾವಧಿ ಇ– ಟೆಂಡರ್ ಪ್ರಕಟಣೆ

ಕೆಯುಐಡಿಎಫ್.ಸಿ ಸಂಸ್ಥೆಯು ಈ ಕೆಳಕಂಡ ಸೇವೆಯನ್ನು ಒದಗಿಸಲು ಅರ್ಹ ಗುತ್ತಿಗೆದಾರ ರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

Sl. No	Name of Work	Earnest Money Deposit in Rs
1.	Providing Comprehensive AMC of HVAC (Heat Ventilation and Air – Conditioning) System for 3 years at Nagarabhivruddhi Bhavana KUIDFC.	50,000/-

1) ಟೆಂಡರ್ ಆಹ್ವಾನಿಸಿರುವ ದಿನಾಂಕ : 07.02.2026. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ : 12.02.2026 ಸಮಯ : 11.00 ಪೂರ್ವಾಹ್ನ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 23.02.2026ಸಮಯ : 5.30 ಅಪರಾಹ್ನ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : 25.02.2026 ಸಮಯ: 11.00 ಪೂರ್ವಾಹ್ನ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ : 03.03.2026 ಸಮಯ : 11.00 ಪೂರ್ವಾಹ್ನ. ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ಆಡಳಿತ)
ಕೆಯುಐಡಿಎಫ್‌ಸಿ, ಬೆಂಗಳೂರು

DIPR/CP/5530/Zen/2025-26

ಕರ್ನಾಟಕ ಗೃಹ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನಂ. 52, ಬಿ.ಎಸ್.ಆರ್. ಲೇಔಟ್, ಕೋನಸಂದ್ರ, ಜಿಗಣಿ, ಸೂರ್ಯನಗರ 4ನೇ ಹಂತ, ಬೆಂಗಳೂರು–560105.
ಇಮೇಲ್: khbsnrph4@gmail.com ದೂ: 080–24482702

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಕರ್ನಾಟಕದಲ್ಲಿ ಸ್ಥಾಪಿತ) ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಕೋನಸಂದ್ರ ಗ್ರಾಮದ ಸರ್ವೆ ನಂ. 29/1ಎ ಮತ್ತು ಇತರೆ, ಬೊಮ್ಮಂಡಹಳ್ಳಿ ಗ್ರಾಮದ ಸರ್ವೆ ನಂ. 41/1 ಮತ್ತು ಇತರೆ, ಕಾಡುಜಕ್ಕನಹಳ್ಳಿ ಗ್ರಾಮದ ಸರ್ವೆ ನಂ. 1/1 ಮತ್ತು ಇತರೆ, ಇಂಡ್ಲವಾಡಿ ಗ್ರಾಮದ ಸರ್ವೆ ನಂ. 9/1 ಮತ್ತು ಇತರೆ ಹಾಗೂ ಬಗ್ಗನದೊಡ್ಡಿ ಗ್ರಾಮದ ಸರ್ವೆ ನಂ. 1, 2/1 ಮತ್ತು ಇತರೆ ಜಮೀನುಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ/ ಅಭಿವೃದ್ಧಿಪಡಿಸಬೇಕಾಗಿರುವ **ಸೂರ್ಯನಗರ 4ನೇ ಹಂತ, ಸ್ವಾಮಿ ವಿವೇಕಾನಂದ ಬಡಾವಣೆ (ಪ್ರಧಾನ ಮಂತ್ರಿ ಟೌನ್‌ಶಿಪ್) ವಸತಿ ಯೋಜನೆಗೆ ದಿನಾಂಕ: 27.01.2026ರಂದು ಕಡತ ಸಂಖ್ಯೆ: SEIAA 126 CON 2025 ಮತ್ತು ಪರಿಸರ ಅನುಮತಿ ಗುರುತಿನ ಸಂಖ್ಯೆ: EC25B3812KA5496641N** ರಲ್ಲಿ Environmental Clearance [Modification in the existing Environmental Clearance and Expansion of Development of Sites and Service] ಪತ್ರವನ್ನು ನೀಡಿರುತ್ತದೆ. ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದಿಂದ ನೀಡಿರುವ Environmental Clearance ಪತ್ರವು ವೆಬ್‌ಸೈಟ್ **https://parivesh.nic.in** ಇಲ್ಲಿ ಲಭ್ಯವಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಕಗೃಮಂ, ಸೂರ್ಯನಗರ 4ನೇ ಹಂತ, ಬೆಂಗಳೂರು

DIPR/CP/YC/5343/2025-26

ಪುರಸಭೆ ಕಾರ್ಯಾಲಯ ಚಿಕ್ಕೋಡಿ

ಕ್ರ.ಸಂ:ಪುಸಚಿ:ಲೋಇ:ಸಿಎಮ್ಐಡಿಪಿ:2025–26 ದಿನಾಂಕ:–07.02.2026.

("ಕೆಪಿಪಿ ಪೋರ್ಟಲ್") ಟೆಂಡರ ಪ್ರಕಟಣೆ 2ನೇ ಕರೆ
(Notice inviting tender through KPP Portal)

ಚಿಕ್ಕೋಡಿ ಪುರಸಭೆಗೆ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಮ್ಐಡಿಪಿ) ಅನುದಾನದಲ್ಲಿ ಅಭಿವೃಧಿ ಕಾಮಗಾರಿಗಳನ್ನು ಕೈಕೊಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರ ರಿಂದ ಐಟಂವಾರು ಶೀಲ ಬಂದ ಟೆಂಡರಗಳನ್ನು KW-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ 1, ವಿವರಗಳು 1) ಇಂಡೆಂಟ್ ಸಂಖ್ಯೆ :54049/ಕಾಲ–2 ರೂ. 54.00 ಲಕ್ಷ (Others), ಈ ಮೇಲೆ ತಿಳಿಸಿದ ಕಾಮಗಾರಿಗಳ ಕಾಲಮಿತಿ 3 ತಿಂಗಳು.
ಅ.ನಂ:1:ಖಾಲಿ ಟೆಂಡರಗಳನ್ನು On line ಮುಖಾಂತರ ಡೌನಲೋಡ ಮಾಡುವ ದಿನಾಂಕ:07.02.2026, ಅ.ನಂ:2:ಭರ್ತಿ ಮಾಡಿದ ಟೆಂಡರಗಳನ್ನು On line ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: 14.02.2026 @ 4.00 PM, ಅ.ನಂ:3:Technical Bidನ್ನು ತೆರೆಯುವ ದಿನಾಂಕ:16.02.2026 @ 4.00 PM, ಅ.ನಂ:4:Financial Bidನ್ನು ತೆರೆಯುವ ದಿನಾಂಕ:17.02.2026 @ 11.00 AM, ಅ.ನಂ:5:Number of days to extend: 2 ದಿನಗಳು.

ಮೇಲ್ಕಾಣಿಸಿದ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ಈ–ಪ್ರೋಕ್ಯೂರಮೆಂಟ ವೇಬ ಸೈಟ www.eproc.karnataka.gov.in ನಲ್ಲಿ ಅಥವಾ ಪುರಸಭೆ ವೇಬ ಸೈಟ www.chikkoditown.mrc.gov.in ರಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಮುಖ್ಯಾಧಿಕಾರಿ
ಪುರಸಭೆ, ಚಿಕ್ಕೋಡಿ

DIPR/BGM/RO-NO-1790/KSMCA/2025-26

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ, 9ನೇ ಮಹಡಿ, ಸಾರ್ವಜನಿಕ ಬಹುಉಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾಅ/ಶಾಂನ/ಟೆಂಡರ್/19/2025–26 ದಿನಾಂಕ: 07–02–2026

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಟೆಂಡರ್) (ಜಿಓಕೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಶಾಂತಿನಗರ ವಿಭಾಗ), ಬೆಂಕೇನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿ / ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನೋಂದಣಿ ಹೊಂದಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–4)

ಕ್ರ. ಸಂ.	ಕೆಲಸದ ಹೆಸರು
1	ಶಾಂತಿನಗರ ಮತಕ್ಷೇತ್ರದಲ್ಲಿ "ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ" (ಸಿಎಂಐಡಿಪಿ) 2025–26 ನೇ ಸಾಲಿನ ಅನುದಾನದ ಅಡಿಯಲ್ಲಿ ಶಾಂತಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ. 117 (ಹೊಸ ವಾರ್ಡ್ ಸಂಖ್ಯೆ. 166, ಶಾಂತಿನಗರ) ರಲ್ಲಿ ಶಾಲಾ ಕಟ್ಟಡ ನಿರ್ಮಾಣ ಮತ್ತು ಶಾಲಾ ಕಟ್ಟಡದ ಸುಧಾರಣೆಗಳ ಕಾಮಗಾರಿ ಹಾಗೂ ಸ್ಟೇನ್‌ಲೆಸ್ ಸ್ಟೀಲ್ (ಎಸ್‌ಎಸ್) ನಾಮಫಲಕವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. **(ಜಿ.ಓ. ಸಂಖ್ಯೆ 9 ಮತ್ತು 10) (ಪ್ಯಾಕೇಜ್–4) – (2ನೇ ಕರೆ) – ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 15,00,000.00**

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **09–02–2026 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **19–02–2026 ರಂದು 15.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಕೇಂದ್ರ ವಲಯ–1, ಬೆಂಕೇನಪಾ, 18ನೇ ಮಹಡಿ, ಸಾರ್ವಜನಿಕ ಬಹುಉಪಯೋಗಿ ಕಟ್ಟಡ, ಬೆಂಗಳೂರು – 560001 ಇಲ್ಲಿ ನಡೆಯುವುದು.** 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **24–02–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **25–02–2026 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬೆಂಕೇನಪಾ.

ಕರ್ನಾಟಕ ಸರ್ಕಾರ

ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.

ಸಂ.ಚಿಜಿಆ/ಹೆಚ್.ಎಂ.ಎಸ್(1)&(2)/40A/2025–26 ದಿನಾಂಕ:06–02–2026

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವ DRUGS – TABLET, INJECTIONS, MISCELLENIUOS, X-RAY, SUTURES & PERISHABLES ಗಳನ್ನು ಸರಬರಾಜು ಪಡೆಯಲು ಮೂಲ ಉತ್ಪಾದಕ ಸಂಸ್ಥೆ / ಅಂಗೀಕೃತ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ 'ಪ್ರಕಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳವರು ಭಾಗವಹಿಸಬಹುದು ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್‌ನ್ನು ಸಂಪರ್ಕಿಸಬಹುದು.

(1) Tender reference No: CGH/HMS(1)&(2)/40A/2025-26 Dated:-06-02-2026 IND-2179 **(2)** Amount put to tender Rs. 2,00,00,000/- (Rupees Two Crores Only) **(3)** EMD amount Rs. 3,00,000-00 (Rs. three lakhs) **(4)** Availability of tender document 06-02-2026 To 09-03-2026 before 04:30 PM, IST upload all documents is compulsory else will be disqualified. **(5)** Last date and time for receipt bid document 09-03-2026 before 04:30 PM all documents must be attested by the agency **(6)** Time, date and place of opening of tender (Technical Bid): 12-03-2026 at 11:00AM Chigateri District Hospital, Davangere **(7)** Date of Submission of Samples Will be intimated Technically responsive bidders. **(8)** Time, date and place of opening of tender (Financial Bid): After Completion of technical bid process **(9)** Address for communication: Chigateri District Hospital, Davangere PH- 9538097843

ವಾಸಾಇ/ದಾವಣಗೆರೆ/723/ಕೆಎಸ್‌ಎಂಸಿಎ/2025–26

ಸಹಿ/– ಅಧೀಕ್ಷಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246 ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ತಾಂ.ಶಾ/ಕ್ರೀಯೋ/260/2025–26 ದಿನಾಂಕ: 06–02–2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರು ಈ ಕೆಳಗೆ ತಿಳಿಸಿರುವ ಕೆಲಸಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ	ಟೆಂಡರಿಗೆ ಇಟ್ಟ ಮೊತ್ತ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಕೋರಮಂಗಲ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿರುವ ಬಾಸ್ಕೆಟ್ ಬಾಲ್ ಅಂಕಣಕ್ಕೆ ಟೆನ್ಸೈಲ್ ಮೆಂಬ್ರೇನ್ ಛಾವಣಿ ಅಳವಡಿಸುವ ಕಾಮಗಾರಿ.	ರೂ. 121.78 ಲಕ್ಷಗಳು	ರೂ. 2,00,000/-
2	ಕೊಡಗು ಜಿಲ್ಲೆ ಪೊನ್ನಂಪೇಟೆ ಕ್ರೀಡಾಂಗಣದಲ್ಲಿ ಹಾಕಿ ಟರ್ಫ್ ದುರಸ್ತಿ ಕಾಮಗಾರಿ.	ರೂ. 261.41 ಲಕ್ಷಗಳು	ರೂ. 3,92,115/-

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: ಕ್ರ.ಸಂ. 1 ಕ್ಕೆ **20–02–2026 ರಂದು ಸಮಯ: 16.30 ಗಂಟೆವರೆಗೆ ಮತ್ತು ಕ್ರ.ಸಂ. 2 ಕ್ಕೆ 02–03–2026 ರಂದು ಸಮಯ: 16.00 ಗಂಟೆವರೆಗೆ.** 2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: **ಕ್ರ.ಸಂ. 1 ಕ್ಕೆ 21–02–2026 ರಂದು ಸಮಯ: 17.00 ಗಂಟೆಗೆ ಮತ್ತು ಕ್ರ.ಸಂ. 2 ಕ್ಕೆ 03–03–2026 ರಂದು ಸಮಯ: 16.31 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/5510/ಅಡ್ವರ್ಟೋರ್/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–5/ಟೆಂಡರ್ ಪ್ರಕಟಣೆ ಸಂ.30/2025–26 ದಿನಾಂಕ: 07.02.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ 4702-ಆಧುನೀಕರಣ ಮತ್ತು ಅಣೆಕಟ್ಟು ಮತ್ತು ಪಿಕಪ್ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-4 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯುಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕುಗಳಲ್ಲಿ ಹರಿಯುವ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಎಲ್.ಎಲ್.ಸಿ. ನಿರ್ಮಾಣ ಕಾಮಗಾರಿ, ಗೌರಮ್ಮನ ಕೆರೆಯ ಕೋಡಿಯಿಂದ ಭರ್ಗಾವತಿ ಕೆರೆ ಸೇರುವ ಹಳ್ಳಕ್ಕೆ ತಿರುಮಲೆ ಬಳಿ ಡ್ರೈನ್ ನಿರ್ಮಾಣ ಕಾಮಗಾರಿಗಳನ್ನೊಳಗೊಂಡಂತೆ **ಒಟ್ಟು 2 ಕಾಮಗಾರಿಗಳು.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.240.59 (ಕನಿಷ್ಠ) & ರೂ.401.62 (ಗರಿಷ್ಠ)**
ಇಎಂಡಿ: **ರೂ.3,60,900.00 (ಕನಿಷ್ಠ) & ರೂ.6,02.500.00 (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 11 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **07.02.2026 ಸಂಜೆ 16.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **09.03.2026 ಸಂಜೆ 15.00** ಗಂಟೆಯವರೆಗೆ. (3) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **18.02.2026 ಸಂಜೆ 15.00** ಗಂಟೆಗೆ, (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09.03.2026 ಸಂಜೆ 16.30** ಗಂಟೆಯವರೆಗೆ, (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **11.03.2026 ಬೆಳಗ್ಗೆ 11.30** ಗಂಟೆಗೆ, (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/5515/ಶಿರಡಿ ಸಾಯಿ/2025–26

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿಆ.ಶಾ:/ಟೆಂಡರ್:ಸಿಆರ್:2025–26 ದಿನಾಂಕ:04–02–2026

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೂರ್ಣಾವಧಿ ಮರು ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿತ್ರದುರ್ಗ ನಗರ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎನ್.ಆರ್.ವಿ (ABC and ARV) ಮಾಡುವುದು. ಅಂದಾಜು ಮೊತ್ತ ರೂ.33.00 ಲಕ್ಷಗಳು ನಗರಸಭೆ ಸಾಮಾನ್ಯ ನಿಧಿ ಅನುದಾನದಲ್ಲಿ ಅನುಮೋದನೆಯಾಗಿದ್ದು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಎನ್.ಜಿ.ಓ/ಸಂಸ್ಥೆ ಏಜೆನ್ಸಿಯವರಿಂದ ಹಾಗೂ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ."ಟೆಂಡರ್‌ದಾರರು ಪಬ್ಲಿಕ್ ಪ್ರಕ್ಯೂರ್‌ಮೆಂಟ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪಲೋಡ್ ಮಾಡತಕ್ಕದ್ದು" ವಿವರ ಈ ಕೆಳಕಂಡಂತೆ ಇರುತ್ತದೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಆರೋಗ್ಯ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಭೆಯ ಅಂತರ್ ಜಾಲ www.chitradurgacity.mrc.gov.in ನಲ್ಲಿ ಪಡೆಯಬಹುದಾಗಿದೆ.

DMA/2025-26/SE6826/call-3

(1) ಖಾಲಿ ಟೆಂಡರ್ ಫಾರಂಗಳಿಗೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ಭರ್ತಿ ಮಾಡಿ ಸಲ್ಲಿಸುವಕೊನೆಯ ದಿನಾಂಕ: 19–02–2026ರ 5.00 ಸಂಜೆ ಗಂಟೆವರೆಗೆ
(2) ತಾಂತ್ರಿಕ ಟೆಂಡರ್‌ನ್ನು ತೆರೆಯುವ ದಿ: 20–02–2026ರ ಸಂಜೆ 5.00 ಗಂಟೆಗೆ
(3) ಆರ್ಥಿಕ ಟೆಂಡರ್‌ನ್ನು ತೆರೆಯುವ ದಿ: 21–02–2026ರ ಸಂಜೆ 5.30 ಗಂಟೆಗೆ
(4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ

DIPR/CTA/KSMCA/649/2025-26

ಸಹಿ/–ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

ನಗರಸಭಾ ಕಾರ್ಯಾಲಯ, ಭದ್ರಾವತಿ

Phone: 08282-266356 Fax : 08282-266356
Email: ka.bhadravathi.cmc@gmail.com,
Web: www.bhadravathicity.gov.in

ನಂ.ನಸಭ/ಆ.ವಿ/ಮ್ಯಾ.ಪ/ಟೆಂಡರ್/ಸಿಆರ್–01/2025–26 ದಿನಾಂಕ:06/02/2026

ಮರು ಟೆಂಡರ್ /ಟೆಂಡರ್ ಪಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025–26ನೇ ಸಾಲಿನ ನಗರಸಭಾ ನಿಧಿಯಲ್ಲಿ ಆರೋಗ್ಯ ವಿಭಾಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮ್ಯಾನ್ ಪವರ್ ಏಜೆನ್ಸಿ ಮೂಲಕ 20 ಜನ ಲೋಡರ್ಸ್, 06 ಜನ ಒಣತ್ಯಾಜ್ಯ ಬೇರ್ಪಡಿಸುವ ಸಹಾಯಕರನ್ನು, 02 ಜನ ರಾತ್ರಿ ಕಾವಲುಗಾರರನ್ನು, 52 ಜನ ಡ್ರೈವರ್ಸ್‌ಗಳನ್ನು, 38 ಜನ ಕ್ಲೀನರ್ಸ್/ಸಹಾಯಕರಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಸೆನೆನಿ 2024 ದಿನಾಂಕ:20.05.2024 ರಂತೆ ಹೊರಗುತ್ತಿಗೆ ಆಧಾರದ ಮೇಲೆ ಮೀಸಲಾತಿ ಅಳವಡಿಸಿ ಸರಬರಾಜು ಮಾಡಲು, ಹಾಗೂ ಭದ್ರಾವತಿ ನಗರಸಭೆ ಅಧ್ಯಕ್ಷರು, ಪೌರಾಯುಕ್ತರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ರವರಿಗೆ ದೈನಂದಿನ ಆಡಳಿತಾತ್ಮಕ ಮತ್ತು ಬಾಹ್ಯ ಕಾರ್ಯಗಳ ವೀಕ್ಷಣೆಯ ಸಲುವಾಗಿ 2023 ರ ನಂತರ ತಯಾರಿಸಲ್ಪಟ್ಟ 4+1 ಆಸನಗಳುಳ್ಳ ಸಾರಿಗೆ ವಾಹನ (Luxury Taxi) ವನ್ನು ಮಾಹೆಯಾನ ಬಾಡಿಗೆ ಆಧಾರದ ಮೇರೆಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ ಮತ್ತು Karnataka Standard Tender Document KC-5 ಪ್ರಕಾರ ಈ ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರುಟೆಂಡರ್/ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತಿವುಳ್ಳ ಅರ್ಹ ಅಧಿಕೃತ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.
–: **ಟೆಂಡರ್ ಷೆಡ್ಯೂಲ್** :– **1.** ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ:09/02/2026 ರಿಂದ 15/02/2026 ರ ಸಂಜೆ 4.00 ಗಂಟೆಯವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದು. **2.** ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ:15/02/2026 ಅಪರಾಹ್ನ 4.30 ಗಂಟೆವರೆಗೆ. **3.** ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: 16/02/2026 (ಪೂರ್ವಾಹ್ನ 11.00 ಗಂಟೆಯ ನಂತರ) ಆನ್‌ಲೈನ್ ಮೂಲಕ, ಸದರಿ ದಿನಾಂಕ ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು. **4.** ಟೆಂಡರ್ ಆಫ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಇ–ಪೋರ್ಟಲ್ ಸಹಾಯಕ ದೂರವಾಣಿ 080–22485867 080–25501216 ಇವರನ್ನು ಸಂಪರ್ಕಿಬಹುದು. ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಭದ್ರಾವತಿ/ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ನಗರಸಭೆ ಭದ್ರಾವತಿ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಪೌರಾಯುಕ್ತರು, ನಗರಸಭೆ, ಭದ್ರಾವತಿ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/49/02/1794

ಭಾರತ, ರೈತರ ಹಿತ ಕಾಯಲಾಗಿದೆ: ಗೋಯಲ್

44 ಬಿಲಿಯನ್ ಡಾಲರ್‌ನಷ್ಟು ಮೌಲ್ಯದ ಸರಕು ಶೂನ್ಯ ಸುಂಕದಲ್ಲಿ ಅಮೆರಿಕಕ್ಕೆ

ನವದೆಹಲಿ (ಪಿಟಿಐ): ಭಾರತ– ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರದ ಚೌಕಟ್ಟಿನಲ್ಲಿ ಭಾರತವು ಕೃಷಿ, ಡೇರಿ ಉತ್ಪನ್ನಗಳನ್ನು ಪೂರ್ಣವಾಗಿ ರಕ್ಷಿಸುವ ಮೂಲಕ ಭಾರತದ ಹಿತವನ್ನು ಕಾಯ್ದುಕೊಂಡಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದರು.

ಹಾಲು, ಚೀಸ್, ಮೆಕ್ಕೆಜೋಳ, ಗೋಧಿ, ಅಕ್ಕಿ, ಸೋಯಾ, ಕೋಳಿ, ಎಥೆನಾಲ್ (ಇಂಧನ), ತಂಬಾಕು, ಕೆಲ ತರಕಾರಿಗಳು ಮತ್ತು ಮಾಂಸವನ್ನು ಸಂಪೂರ್ಣವಾಗಿ ರಕ್ಷಿಸಲಾಗಿದೆ. ಒಪ್ಪಂದದ ಅಡಿಯಲ್ಲಿ, ಈ ಸರಕುಗಳ ಮೇಲೆ ಅಮರಿಕಕ್ಕೆ ಯಾವುದೇ ಸುಂಕ ರಿಯಾಯಿತಿ ನೀಡಲಾಗಿಲ್ಲ ಎಂದು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈ ಮೂಲಕ ರೈತರ ಹಿತಾಸಕ್ತಿಗಳನ್ನು ಕಾಪಾಡುವ ಮತ್ತು ಗ್ರಾಮೀಣ ಜೀವನೋಪಾಯವನ್ನು ಸಂರಕ್ಷಿಸುವ ಭಾರತದ ಬದ್ಧತೆಯನ್ನು ಈ ಒಪ್ಪಂದ ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು.

'ಭಾರತೀಯ ಕೈಗಾರಿಕೆಗಳಿಗೆ, ತಂತ್ರಜ್ಞಾನ ಅಭಿವೃದ್ಧಿಪಡಿಸುವವರಿಗೆ, ಕಾರ್ಮಿಕರಿಗೆ ವ್ಯಾಪಕ ರಫ್ತು ಅವಕಾಶಗಳ ಬಾಗಿಲನ್ನು ಈ ಒಪ್ಪಂದ ತೆರೆಯುತ್ತದೆ. ಇದೇ ವೇಳೆ ಭಾರತವು ಅತ್ಯಂತ ಸೂಕ್ಷ್ಮ ಆಹಾರ ವಲಯವನ್ನು ರಕ್ಷಿಸುವ ಸುಂಕ ರಚನೆ ಮಾಡಿಕೊಂಡಿದೆ' ಎಂದು ಅವರು ಪ್ರತಿಪಾದಿಸಿದರು.

ಈ ಒಪ್ಪಂದವೇ ಅಲ್ಲದೆ, ಇತರ ದೇಶಗಳ ಜತೆಗೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿಯೂ (ಎಫ್‌ಟಿಎ) ಭಾರತವು ಕೃಷಿ ಮತ್ತು ಡೇರಿ ಉತ್ಪನ್ನಗಳ ಮೇಲೆ ಯಾವುದೇ ಆಮದು ಸುಂಕ ರಿಯಾಯಿತಿಗಳನ್ನು ನೀಡಿಲ್ಲ. ಇತ್ತೀಚೆಗೆ ಐರೋಪ್ಯ ಒಕ್ಕೂಟ (ಇ.ಯು), ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳ ಜತೆಗೆ ಮಾಡಿಕೊಂಡ ಎಫ್‌ಟಿಎಗಳನ್ನು ಅಂತಿಮಗೊಳಿಸಲಾಗಿದ್ದು, ಕೃಷಿ, ಡೇರಿ ಉತ್ಪನ್ನಗಳನ್ನು ರಕ್ಷಿಸಲಾಗಿದೆ ಎಂದು ಅವರು ವಿವರಿಸಿದರು.

ಶೂನ್ಯ ಸುಂಕದಲ್ಲಿ...: ಈ ಒಪ್ಪಂದದ ಮೊದಲ ಹಂತದ ಅಡಿಯಲ್ಲಿ ಭಾರತದಿಂದ ಸುಮಾರು 44 ಬಿಲಿಯನ್ ಡಾಲರ್‌ನಷ್ಟು ಮೌಲ್ಯದ ರಫ್ತುಗಳು ಶೂನ್ಯ ಸುಂಕದಲ್ಲಿ ಅಮೆರಿಕ ಪ್ರವೇಶಿಸಲಿವೆ ಎಂದು ಅವರು ಹೇಳಿದರು.

ಸುಮಾರು 30 ಬಿಲಿಯನ್ ಡಾಲರ್ ಮೌಲ್ಯದ ಭಾರತೀಯ ಸರಕುಗಳು ಶೇ 18ರಷ್ಟು ಸುಂಕವನ್ನು ಆಕರ್ಷಿಸುತ್ತವೆ. 12 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳ ಮೇಲಿನ ಸುಂಕದಲ್ಲಿ ಯಾವುದೇ ಬದಲಾವಣೆ ಇಲ್ಲ (ಉಕ್ಕು, ತಾಮ್ರ, ಕೆಲ ಆಟೊಮೊಬೈಲ್ ಭಾಗಗಳು) ಎಂದು ಅವರು ತಿಳಿಸಿದರು.

ದ್ವಿಪಕ್ಷೀಯ ವ್ಯಾಪಾರ-ವಹಿವಾಟು

2021–25ರ ಅವಧಿಯಲ್ಲಿ ಭಾರತದ ಅತಿದೊಡ್ಡ ವ್ಯಾಪಾರದ ಪಾಲುದಾರ ದೇಶ ಅಮೆರಿಕ. ಭಾರತದ ಒಟ್ಟು ರಫ್ತಿನಲ್ಲಿ ಅಮೆರಿಕದ ಪಾಲು ಶೇ 18 ಮತ್ತು ಆಮದಿನಲ್ಲಿ ಶೇ 6.22.

ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು 2024–25ರಲ್ಲಿ 186 ಬಿಲಿಯನ್ ಡಾಲರ್‌ಗೆ (86.5 ಬಿಲಿಯನ್ ಡಾಲರ್ ರಫ್ತು ಮತ್ತು 45.3 ಬಿಲಿಯನ್ ಡಾಲರ್ ಆಮದು) ತಲುಪಿತ್ತು.

2024ರಲ್ಲಿ ಅಮೆರಿಕವು ಭಾರತಕ್ಕೆ 1.6 ಬಿಲಿಯನ್ ಡಾಲರ್‌ನಷ್ಟು ಕೃಷಿ ಉತ್ಪನ್ನಗಳನ್ನು ರಫ್ತು ಮಾಡಿದೆ. ಇದರಲ್ಲಿ ಬಾದಾಮಿ (868 ಮಿಲಿಯನ್ ಡಾಲರ್), ಪಿಸ್ತಾ (121 ಮಿಲಿಯನ್ ಡಾಲರ್), ಸೇಬು (21 ಮಿಲಿಯನ್ ಡಾಲರ್), ಎಥೆನಾಲ್ (266 ಮಿಲಿಯನ್ ಡಾಲರ್) ಸೇರಿವೆ.

ಭಾರತವು ಮುಂದಿನ ನಾಲ್ಕು ವರ್ಷಗಳಲ್ಲಿ ಕೃಷಿ, ಸಾಗರ ಉತ್ಪನ್ನಗಳು, ಆಹಾರ, ಪಾನೀಯ ಸಂಯೋಜನೆ ರಫ್ತನ್ನು 100 ಬಿಲಿಯನ್ ಡಾಲರ್‌ಗೆ ತಲುಪಿಸುವ ಗುರಿಯನ್ನು ಹೊಂದಿದೆ. ಈ ಪೈಕಿ ಚಹಾ, ಕಾಫಿ, ಅಕ್ಕಿ, ಕೆಲ ಧಾನ್ಯಗಳು, ಮಸಾಲೆ ಪದಾರ್ಥಗಳು, ಗೋಡಂಬಿ, ಊಟದ ಎಣ್ಣೆ, ಎಣ್ಣೆ ಬೀಜಗಳು, ಹಣ್ಣುಗಳು, ತರಕಾರಿಗಳು ಭಾರತದ ಪ್ರಮುಖ ರಫ್ತುಗಳು.

ಐಷಾರಾಮಿ ದ್ವಿಚಕ್ರ ವಾಹನಗಳಿಗೆ ಶೂನ್ಯ ಸುಂಕ

ಮಧ್ಯಂತರ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಅಮೆರಿಕದ 800–1,600 ಸಿಸಿ ಮತ್ತು ಅದಕ್ಕಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯ ಹೊಂದಿರುವ ಐಷಾರಾಮಿ ದ್ವಿಚಕ್ರ ವಾಹನಗಳು ಶೂನ್ಯ ಸುಂಕದೊಂದಿಗೆ ಭಾರತದ ಮಾರುಕಟ್ಟೆ ಪ್ರವೇಶಿಸಲಿವೆ.

ಈ ಒಪ್ಪಂದದಿಂದ ಅಮೆರಿಕದ ಪ್ರಮುಖ ವಾಹನ ತಯಾರಿಕಾ ಕಂಪನಿ ಹಾರ್ಲೆ ಡೇವಿಡ್‌ಸನ್‌ಂತಹ ಕಂಪನಿಗಳಿಗೆ ಪ್ರಯೋಜನ ಆಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವರ್ಷ ಕೇಂದ್ರ ಸರ್ಕಾರವು 1,600 ಸಿಸಿ ಎಂಜಿನ್ ಸಾಮರ್ಥ್ಯದವರೆಗಿನ ದ್ವಿಚಕ್ರ ವಾಹನಗಳ ಮೇಲಿನ ಆಮದು ಸುಂಕವನ್ನು ಶೇ 50ರಿಂದ ಶೇ 40ಕ್ಕೆ ಇಳಿಸಿತ್ತು. 1,600 ಸಿಸಿಗಿಂತ ಹೆಚ್ಚಿನ ಸಾಮರ್ಥ್ಯ ಹೊಂದಿರುವ ದ್ವಿಚಕ್ರ ವಾಹನಗಳ ಮೇಲಿನ ಸುಂಕವನ್ನು ಶೇ 50ರಿಂದ ಶೇ 30ಕ್ಕೆ ಇಳಿಸಿತ್ತು.

ಭಾರತ ಮತ್ತು ಅಮೆರಿಕದ ಒಪ್ಪಂದ ಜಾರಿಗೆ ಬಂದ ದಿನ ಈ ಸುಂಕ ರದ್ದತಿ ಜಾರಿ ಆಗಲಿದೆ ಎಂದು ತಿಳಿಸಿದ್ದಾರೆ.

ಭಾರತವು, ಉನ್ನತ ದರ್ಜೆಯ ಪ್ರೀಮಿಯಂ ದ್ವಿಚಕ್ರ ವಾಹನಗಳಿಗೆ ಸಣ್ಣ ಮಾರುಕಟ್ಟೆಯಾಗಿದ್ದು, ಈ ಪೈಕಿ ಅಮೆರಿಕದ ಪಾಲು ತೀರಾ ಕಡಿಮೆ.

ಒಪ್ಪಂದದ ಅಡಿಯಲ್ಲಿ ಭಾರತವು, ಅಮೆರಿಕದ ಕಾರುಗಳ ಆಮದಿನ ಮೇಲೆ ಸಹ ಸುಂಕ ಇಳಿಕೆ ಮಾಡಿದೆ. 2,500 ಸಿಸಿ ಮತ್ತು ಅದಕ್ಕಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯದ ಡೀಸೆಲ್ ವಾಹನಗಳು ಮತ್ತು 3 ಸಾವಿರ ಸಿಸಿ ಹಾಗೂ ಅದಕ್ಕಿಂತ ಹೆಚ್ಚಿನ ಸಿಸಿ ಹೊಂದಿರುವ ಪೆಟ್ರೋಲ್ ವಾಹನಗಳ ಮೇಲೆ ಸುಂಕ ರಿಯಾಯಿತಿ ನೀಡಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಎಸ್‌ಬಿಐಗೆ ₹21,317 ಕೋಟಿ ಲಾಭ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ₹21,317 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹18,853 ಕೋಟಿ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 13ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶನಿವಾರ ತಿಳಿಸಿದೆ.

ಬ್ಯಾಂಕ್‌ನ ಬಡ್ಡಿ ವರಮಾನದಲ್ಲಿ ಶೇ 9ರಷ್ಟು ಹೆಚ್ಚಾಗಿದ್ದು, ₹45,190 ಕೋಟಿಯಾಗಿದೆ. ಒಟ್ಟು ವರಮಾನವು ₹1.28 ಲಕ್ಷ ಕೋಟಿಯಿಂದ ₹1.40 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ವೆಚ್ಚವು ₹1.04 ಲಕ್ಷ ಕೋಟಿಯಿಂದ ₹1.08 ಲಕ್ಷ ಕೋಟಿಗೆ ಏರಿಕೆಯಾಗಿದೆ.

ವಸೂಲಾಗದ ಸಾಲದ ಪ್ರಮಾಣ ಶೇ 1.73ರಿಂದ ಶೇ 1.57ಕ್ಕೆ ಇಳಿದಿದೆ. ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 14.04ರಷ್ಟಾಗಿದೆ ಎಂದು ತಿಳಿಸಿದೆ.

ಗುಡ್‌ನೆಸ್‌ನಲ್ಲಿ ಷೇರು ಖರೀದಿಸಿದ ಆರ್‌ಸಿಪಿಎಲ್

ಬೆಂಗಳೂರು / ನವದೆಹಲಿ: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಎಫ್‌ಎಂಸಿಜಿ ಅಂಗಸಂಸ್ಥೆಯಾದ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ (ಆರ್‌ಸಿಪಿಎಲ್) ಆಸ್ಟ್ರೇಲಿಯಾದ ಪಾನೀಯ ಕಂಪನಿ ಗುಡ್‌ನೆಸ್ ಗ್ರೂಪ್ ಗ್ಲೋಬಲ್ (ಜಿಸಿಸಿ) ಪ್ರೈವೆಟ್ ಲಿಮಿಟೆಡ್‌ನ ಬಹುಪಾಲನ್ನು ಖರೀದಿಸಿದೆ.

ಈ ಒಪ್ಪಂದವು ಗುಡ್‌ನೆಸ್‌ನ ಪಾನೀಯ ಕಂಪನಿ 'ಬೆಟರ್ ಫಾರ್ ಯು' ಸ್ವಾಧೀನವನ್ನೂ ಸಹ ಒಳಗೊಂಡಿದೆ. ಈ ಒಪ್ಪಂದವು ಆರ್‌ಸಿಪಿಎಲ್, ಆಸ್ಟ್ರೇಲಿಯಾ ಮಾರುಕಟ್ಟೆಗೆ ಪ್ರವೇಶಿಸಲು ಮತ್ತು ಸಾಗರೋತ್ತರ ಮಾರುಕಟ್ಟೆಯಲ್ಲಿ ತನ್ನ ವಹಿವಾಟನ್ನು ವಿಸ್ತರಿಸಲು ಅನುಕೂಲ ಮಾಡಿಕೊಡಲಿದೆ.

ಈ ಪಾಲುದಾರಿಕೆಯ ಮೂಲಕ ಆರ್‌ಸಿಪಿಎಲ್, ಗುಡ್‌ನೆಸ್ ಗ್ರೂಪ್‌ನ ಪ್ರಮುಖ ಪಾನೀಯ ಬ್ರ್ಯಾಂಡ್‌ಗಳನ್ನು ಭಾರತ ಸೇರಿದಂತೆ ಹೊಸ ಮಾರುಕಟ್ಟೆಗಳಲ್ಲಿ ಲಭ್ಯವಾಗುವಂತೆ ಮಾಡಲು ಸಹಾಯ ಮಾಡುತ್ತದೆ ಎಂದು ಜಂಟಿ ಹೇಳಿಕೆ ತಿಳಿಸಿದೆ.

ಸ್ವಾಧೀನದ ಪಾಲು ಮತ್ತು ಹಣಕಾಸಿನ ವಿವರಗಳನ್ನು ಕಂಪನಿಯು ಬಹಿರಂಗಪಡಿಸಿಲ್ಲ.

'ಈ ಪಾಲುದಾರಿಕೆಯು ಆರ್‌ಸಿಪಿಎಲ್ ಅನ್ನು ಜಾಗತಿಕ ಎಫ್‌ಎಂಸಿಜಿ ಕಂಪನಿಯಾಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ನೆಕ್ಸ್ಬಾ ಮತ್ತು ಪೇಸ್‌ನಂತಹ ಆರೋಗ್ಯ ಪಾನೀಯ ಬ್ರ್ಯಾಂಡ್‌ಗಳು ನಮ್ಮ ಪೋರ್ಟ್‌ಫೋಲಿಯೊವನ್ನು ಸದೃಢಗೊಳಿಸಲಿವೆ. ಜಾಗತಿಕ ಗುಣಮಟ್ಟದ ಉತ್ಪನ್ನಗಳನ್ನು ಪ್ರತಿಯೊಬ್ಬ ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ತಲುಪಿಸುವುದು ನಮ್ಮ ಗುರಿಯಾಗಿದೆ' ಎಂದು ಆರ್‌ಸಿಪಿಎಲ್ ನಿರ್ದೇಶಕ ಟಿ.ಕೃಷ್ಣಕುಮಾರ್ ಹೇಳಿದ್ದಾರೆ.

ಟಾಟಾ ಸ್ಟೀಲ್‌ಗೆ ₹2,730 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಟಾಟಾ ಸ್ಟೀಲ್ ಕಂಪನಿಯು ₹2,730 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹295 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಹಲವು ಪಟ್ಟು ಹೆಚ್ಚಳವಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ಒಟ್ಟು ವರಮಾನವು ₹53,869 ಕೋಟಿಯಿಂದ ₹57,503 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

'ಭಾರತದಿಂದ ಲಸಿಕೆ ಪೂರೈಕೆ ಸ್ಥಗಿತ: ಪಾಕ್ ಆರ್ಥಿಕತೆ ಮೇಲೆ ಪರಿಣಾಮ'

ಕರಾಚಿ (ಪಿಟಿಐ): 'ಕಳೆದ ವರ್ಷ ಮೇನಲ್ಲಿ ನಡೆದ ಸೇನಾ ಸಂಘರ್ಷದ ನಂತರ ಭಾರತದಿಂದ ಕಡಿಮೆ ವೆಚ್ಚದ ಲಸಿಕೆಗಳ ಪೂರೈಕೆ ಸ್ಥಗಿತಗೊಂಡಿದೆ. ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರಿದೆ' ಎಂದು ಪಾಕಿಸ್ತಾನ ಆರೋಗ್ಯ ಸಚಿವ ಮುಸ್ತಫಾ ಕಮಾಲ್ ಶನಿವಾರ ತಿಳಿಸಿದ್ದಾರೆ.

ವಿಶ್ವದ ಬಡ ರಾಷ್ಟ್ರಗಳ ಮಕ್ಕಳಿಗೆ ಲಸಿಕೆಗಳನ್ನು ಒದಗಿಸಲು ಶ್ರಮಿಸುತ್ತಿರುವ ಸಾರ್ವಜನಿಕ–ಖಾಸಗಿ ಪಾಲುದಾರಿಕೆಯ ಗ್ಲೋಬಲ್ ಅಲಯನ್ಸ್ ಫಾರ್ ವ್ಯಾಕ್ಸಿನ್ಸ್ ಆ್ಯಂಡ್ ಇಮ್ಯುನೈಸೇಶನ್ (ಜಿಎವಿಐ) ಕಾರ್ಯಕ್ರಮದ ಮೂಲಕ ಪಾಕಿಸ್ತಾನಕ್ಕೆ ಭಾರತದ ಲಸಿಕೆಗಳನ್ನು ಪೂರೈಕೆ ಮಾಡಲಾಗುತ್ತಿದೆ.

'ಪಾಕಿಸ್ತಾನವು ವಾರ್ಷಿಕ ಸುಮಾರು 400 ಮಿಲಿಯನ್ ಡಾಲರ್ (ಸುಮಾರು ₹3,623 ಕೋಟಿ) ವೆಚ್ಚದ ಲಸಿಕೆಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಇದರ ಶೇ 49ರಷ್ಟು ವೆಚ್ಚವನ್ನು ಜಿಎವಿಐ ಮೂಲಕ ಕಾರ್ಯನಿರ್ವಹಿಸುವ ಅಂತರರಾಷ್ಟ್ರೀಯ ಸಂಸ್ಥೆಗಳು ಭರಿಸುತ್ತವೆ. ಉಳಿದ ವೆಚ್ಚವನ್ನು ಪಾಕಿಸ್ತಾನ ಭರಿಸುತ್ತದೆ' ಎಂದು ಕಮಾಲ್ ಹೇಳಿದ್ದಾರೆ.

'ನಾವು ಸ್ಥಳೀಯವಾಗಿ ಲಸಿಕೆಗಳ ಉತ್ಪಾದನೆ ಪ್ರಾರಂಭಿಸಿದ್ದರೆ, ಇವುಗಳ ಆಮದಿಗಾಗಿ 2031ರ ವೇಳೆಗೆ ವಾರ್ಷಿಕ 1.2 ಬಿಲಿಯನ್ ಡಾಲರ್ (ಸುಮಾರು ₹10,869 ಕೋಟಿ) ವೆಚ್ಚ ಮಾಡಬೇಕಾಗುತ್ತದೆ. ಲಸಿಕೆಗಳ ಪೂರೈಕೆಗಾಗಿ ಸಿಗುತ್ತಿರುವ ಅಂತರರಾಷ್ಟ್ರೀಯ ಬೆಂಬಲವು 2031ರ ವೇಳೆಗೆ ಕೊನೆಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

'ಜಿಎವಿಐ ಸಂಸ್ಥೆಯು ಭಾರತದ ಔಷಧ ಕಂಪನಿಗಳು ತಯಾರಿಸಿದ ಕಡಿಮೆ ವೆಚ್ಚದ ಮತ್ತು ಉತ್ತಮ ಗುಣಮಟ್ಟದ ಲಸಿಕೆಗಳನ್ನು ಪಡೆಯಲು ಪಾಕಿಸ್ತಾನಕ್ಕೆ ಅವಕಾಶ ಮಾಡಿಕೊಟ್ಟಿದೆ. ಉಭಯ ದೇಶಗಳ ನಡುವಿನ ಉದ್ವಿಗ್ನತೆ ಹೊರತಾಗಿಯೂ ಇದು ಸಾಧ್ಯವಾಗಿದೆ. ಕೋವಿಡ್–19 ಸಂದರ್ಭದಲ್ಲಿ ಕೋವ್ಯಾಕ್ಸ್ ಸೌಲಭ್ಯದ ಅಡಿಯಲ್ಲಿ ಭಾರತದಿಂದ ಲಕ್ಷಾಂತರ ಕೋವಿಡ್ ಲಸಿಕೆಗಳನ್ನು ಪಡೆಯಲು ಜಿಎವಿಐ ಸಹಾಯ ಮಾಡಿದೆ' ಎಂದು ತಿಳಿಸಿದ್ದಾರೆ.

ಪಾಕಿಸ್ತಾನ ಸರ್ಕಾರವು ಸದ್ಯ 13 ವಿಧದ ಲಸಿಕೆಗಳನ್ನು ನಾಗರಿಕರಿಗೆ ಉಚಿತವಾಗಿ ನೀಡುತ್ತಿದೆ. ಆದರೆ, ಇವು ಸ್ಥಳೀಯವಾಗಿ ಉತ್ಪಾದನೆಯಾಗುತ್ತಿಲ್ಲ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬದ್ಧತೆಗೆ ಮೋದಿ ಮೆಚ್ಚುಗೆ

ಜಾಗತಿಕ ಪ್ರಗತಿಗೆ ಉತ್ತೇಜನ: ಪ್ರಧಾನಿ

ನವದೆಹಲಿ (ಎಎಫ್‌ಪಿ): 'ಭಾರತ–ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದವು ಜಾಗತಿಕ ಬೆಳವಣಿಗೆಯನ್ನು ಹೆಚ್ಚಿಸುವುದರ ಜತೆಗೆ ಉಭಯ ದೇಶಗಳ ಆರ್ಥಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಅಭಿಪ್ರಾಯಪಟ್ಟಿದ್ದಾರೆ.

'ಇದು ಭಾರತ ಮತ್ತು ಅಮೆರಿಕಕ್ಕೆ ಒಳ್ಳೆಯ ಸುದ್ದಿ. ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವೈಯಕ್ತಿಕ ಬದ್ಧತೆಯನ್ನು ಇದು ಪ್ರತಿಬಿಂಬಿಸುತ್ತದೆ' ಎಂದು ಅವರು 'ಎಕ್ಸ್'ನಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಈ ಒಪ್ಪಂದವು ಎರಡೂ ದೇಶಗಳ ನಡುವಿನ ಬಾಂಧವ್ಯ, ನಂಬಿಕೆ ಮತ್ತು ಚೈತನ್ಯವನ್ನು ವೃದ್ಧಿಸುತ್ತದೆ' ಎಂದಿದ್ದಾರೆ.

'ಒಪ್ಪಂದದ ಚೌಕಟ್ಟು ವಿಶ್ವಾಸಾರ್ಹ ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ. ಮೇಕ್ ಇನ್ ಇಂಡಿಯಾ ಕ್ರಮದಡಿ ಭಾರತೀಯ ರೈತರು, ಉದ್ಯಮಿಗಳು, ಮೀನುಗಾರರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ' ಎಂದು ಹೇಳಿದ್ದಾರೆ.

ಮೋದಿ ಅವರು ತಮ್ಮ ಹೇಳಿಕೆಯಲ್ಲಿ ಎಲ್ಲೂ ರಷ್ಯಾದ ತೈಲವನ್ನು ಉಲ್ಲೇಖಿಸಿಲ್ಲ.

> **ವಿಶ್ವದ ಅತಿದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಭಾರತಕ್ಕೆ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ರೈತರು ಮತ್ತು ಉತ್ಪಾದಕರ ಪ್ರವೇಶವನ್ನು ವಿಸ್ತರಿಸುತ್ತಿದ್ದಾರೆ**
> **ಜೇಮ್ಸನ್ ಗ್ರೀರ್,** ಅಮೆರಿಕ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಸಂಸ್ಥೆಯ ರಾಯಭಾರಿ

> **ಸುಂಕ ವಿನಾಯಿತಿಗಳು ಮತ್ತು ವಿಶಾಲ ಮಾರುಕಟ್ಟೆ ಪ್ರವೇಶವು ಭಾರತದ ಜವಳಿ, ಉಡುಪು ಕ್ಷೇತ್ರಕ್ಕೆ ಜಾಗತಿಕ ಸ್ಪರ್ಧಾತ್ಮಕತೆಯ ಬಲವನ್ನು ಹೆಚ್ಚಿಸುತ್ತದೆ**
> **ಎ. ಶಕ್ತಿವೇಲ್,** ಉಡುಪು ರಫ್ತು ಉತ್ತೇಜಕ ಮಂಡಳಿ ಅಧ್ಯಕ್ಷ

ಒಪ್ಪಂದಕ್ಕೆ ಕಾಂಗ್ರೆಸ್ ಟೀಕೆ

ಭಾರತ–ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದದ ಚೌಕಟ್ಟಿನ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಕಟುವಾಗಿ ಟೀಕಿಸಿದೆ.

ಭಾರತವು ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತದೆಯೋ ಇಲ್ಲವೋ ಎಂಬುದನ್ನು ಅಮೆರಿಕ ಮೇಲ್ವಿಚಾರಣೆ ಮಾಡುತ್ತದೆ ಎಂದು ಶ್ವೇತಭವನ ಬಿಡುಗಡೆ ಮಾಡಿರುವ ಹೇಳಿಕೆಯನ್ನು ಉಲ್ಲೇಖಿಸಿ, 'ನಾಮ್ ನರೇಂದರ್, ಕಾಮ್ ಸರೆಂಡರ್' ಎಂದು ವ್ಯಂಗ್ಯವಾಡಿದೆ.

'ಉಭಯ ದೇಶಗಳ ಜಂಟಿ ಹೇಳಿಕೆಯು ಹೆಚ್ಚಿನ ವಿವರಗಳಿಂದ ಕೂಡಿಲ್ಲ. ಬಿಡುಗಡೆ ಆಗಿರುವ ಪ್ರಕಟಣೆ ಪ್ರಕಾರ, ಭಾರತ ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಒಂದು ವೇಳೆ ಖರೀದಿಸಲು ಮುಂದಾದರೆ ಅಮೆರಿಕ ಪುನಃ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸಬಹುದು ಎಂದು ಘೋಷಿಸಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಭಾರತೀಯರ ರೈತರ ವೆಚ್ಚದಲ್ಲಿ ಅಮೆರಿಕದ ರೈತರಿಗೆ ಅನುಕೂಲ ಮಾಡಿಕೊಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಈ ಒಪ್ಪಂದದ ಪರಿಣಾಮ ಭಾರತವು ಅಮೆರಿಕದಿಂದ ಖರೀದಿಸಲಿರುವ ಸರಕುಗಳು ಮೂರು ಪಟ್ಟು ಹೆಚ್ಚಲಿವೆ. ಪ್ರತಿಯಾಗಿ ಭಾರತವು ಅಮೆರಿಕಕ್ಕೆ ರಫ್ತು ಮಾಡುವ ಐ.ಟಿ ಮತ್ತು ಇತರ ಸೇವೆಗಳ ಮೇಲಿನ ಅನಿಶ್ಚಿತತೆ ಮುಂದುವರಿಯುತ್ತದೆ. ಭಾರತದ ಸರಕುಗಳು ಅಮೆರಿಕದಲ್ಲಿ ಮೊದಲಿಗಿಂತ ಹೆಚ್ಚಿನ ಸುಂಕಗಳನ್ನು ಎದುರಿಸಬೇಕಾಗುತ್ತದೆ' ಎಂದು ರಮೇಶ್ ಹೇಳಿದ್ದಾರೆ.

'ಮೋದಿ– ಟ್ರಂಪ್ ಗೆಳೆತನ, ಅಪ್ಪುಗೆಗಳು, ಫೋಟೊ ಪ್ರದರ್ಶನಗಳು ಭಾರತಕ್ಕೆ ಅನುಕೂಲ ಮಾಡಿಕೊಟ್ಟಿಲ್ಲ' ಎಂದು ಅವರು ಜರಿದಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Mangaluru

FOR SALE at MANGALORE Independent house 5 cents land 2000 sq ft building Durgamahal Mannagudda to Bokkapatna Church Main Road 2.25 Crores negotiable Full payment by Demand Draft only:E-mail: propinmang@gmail.com

ಉದ್ಯೋಗಾವಕಾಶ

Engg/ Production Technical

SMITHS & FOUNDERS (INDIA) LTD invites applications
Role: MARKETING ENGINEER, Bengaluru
Qualification: DIPLOMA- Mechanical/Metallurgy
Experience: 2 - 3 years
Preference: Kannada knowledge
Contact: cosec@smithsandfoundersindia.com

General

ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳುವ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಹಾಗೂ ಸಂಬಳ ಕೊಡುತ್ತೇವೆ. 9845734040, 9845034040, 9187552740.

ವೈವಾಹಿಕ

Brides Wanted

Bride Required Others

ವಧು ಬೇಕಾಗಿದೆ

33 ವರ್ಷದ ಬಿಎಫ್ಎ ವಿದ್ಯಾರ್ಹತೆಯುಳ್ಳ ಫೈನ್ ಆರ್ಟ್ಸ್ ಮಾಸ್ಟರ್ & ಫ್ರೀಲಾನ್ಸರ್ ಆಗಿ ಕೆಲಸ ಮಾಡುತ್ತಿರುವ, 5.4" ಎತ್ತರವಿರುವ ಲಿಂಗಾಯಿತ ವರನಿಗೆ ಯಾವುದೇ ಜಾತಿ ಅಭ್ಯಂತರವಿಲ್ಲದ ವಧು ಬೇಕಾಗಿದೆ. ಸಂಬಳ 25,000/-. ಬೆಂಗಳೂರಿನ ವಿಜಯನಗರದಲ್ಲಿ ಸ್ವಂತ ಮನೆಯಿದ್ದು 90,000/– ಬಾಡಿಗೆ ಬರುತ್ತದೆ.
ಸಂಪರ್ಕಿಸಿ 9448074071 / 9535978512

ಪ್ರವಾಸ

Travel

04.05.2026 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 21.03.2026 04.04.2026 ಭೂತಾನ್ 8 ದಿನಗಳು. 27.04.2026 ಶ್ರೀಲಂಕಾ 7 ದಿನಗಳು. 23.03.2026 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.04.2026 ಅಸ್ಸಾಂ,ಮೇಘಾಲಯ 9 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

23.3.2026 ದೆಹಲಿ, ಅಮೃತ್ ಸರ್. ವೈಷ್ಣೋದೇವಿ, ಹರಿದ್ವಾರ, ಅಯೋಧ್ಯೆ,ಕಾಶಿ, ಗಯಾ 13-4-2026 ಅಸ್ಸಾಂ, ಮೇಘಾಲಯ, ಅರುಣಾಚಲಪ್ರದೇಶ್ 26.4.2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಪಾಕ್: ಆತ್ಮಾಹುತಿ ಬಾಂಬ್ ದಾಳಿ– ಮೂವರ ಬಂಧನ

ಇಸ್ಲಾಮಾಬಾದ್/ಪೇಶಾವರ (ಪಿಟಿಐ): ಇಸ್ಲಾಮಾಬಾದ್‌ನ ಶಿಯಾ ಮಸೀದಿಯಲ್ಲಿ ಸಂಭವಿಸಿದ ಆತ್ಮಾಹುತಿ ಬಾಂಬ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಮಹಿಳೆ ಸೇರಿ ಮೂವರನ್ನು ಪಾಕಿಸ್ತಾನ ಪೊಲೀಸರು ಬಂಧಿಸಿದ್ದಾರೆ.

ಅಲ್ಲದೇ, ಈ ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ 36ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಖದೀಜತ್ ಉಲ್ ಕುಬ್ರಾ' ಮಸೀದಿಯಲ್ಲಿ ಆತ್ಮಾಹುತಿ ಬಾಂಬರ್ ತನ್ನನ್ನು ಸ್ಫೋಟಿಸಿಕೊಂಡ ಪರಿಣಾಮ ಶುಕ್ರವಾರ ಕನಿಷ್ಠ 31 ಜನರು ಮೃತಪಟ್ಟು, 169 ಮಂದಿ ಗಾಯಗೊಂಡಿದ್ದರು.

ಆತ್ಮಾಹುತಿ ಬಾಂಬರ್‌ನ ಇಬ್ಬರು ಸಹೋದರರು ಮತ್ತು ಮಹಿಳೆಯೊಬ್ಬರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಳಿ ಹೊಣೆ ಹೊತ್ತ ಐಎಸ್: ಇಸ್ಲಾಮಿಕ್ ಸ್ಟೇಟ್ ಗ್ರೂಪ್ (ಐಎಸ್) ಈ ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ.

ರಷ್ಯಾ: ಭಾರತೀಯ ವಿದ್ಯಾರ್ಥಿ ಸೇರಿ 8 ಮಂದಿಗೆ ಇರಿತ

ಮಾಸ್ಕೊ (ಪಿಟಿಐ): ರಷ್ಯಾದ ಬಶ್ಕೋರ್ತೋಸ್ತಾನ ಪ್ರಾಂತ್ಯದ ಉಫಾದಲ್ಲಿರುವ ವೈದ್ಯಕೀಯ ವಿಶ್ವವಿದ್ಯಾಲಯದ ಹಾಸ್ಟೆಲ್‌ನ ಸಭಾಂಗಣಕ್ಕೆ ನುಗ್ಗಿದ ಬಾಲಕ, ಒಬ್ಬ ಭಾರತೀಯ ವಿದ್ಯಾರ್ಥಿ ಸೇರಿ 8 ಜನರಿಗೆ ಚೂರಿಯಿಂದ ಇರಿದ ಘಟನೆ ಶನಿವಾರ ನಡೆದಿದೆ.

ಗಾಯಗೊಂಡವರಲ್ಲಿ ಇಬ್ಬರು ಪೊಲೀಸರು ಕೂಡ ಸೇರಿದ್ದು, ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ದಾಳಿ ಮಾಡಿರುವ 15 ವರ್ಷದ ಬಾಲಕ ತಾನೂ ಇರಿದುಕೊಂಡಿದ್ದು, ಆತನ ಸ್ಥಿತಿ ಗಂಭೀರವಾಗಿದೆ. ಆತನನ್ನು ಮಕ್ಕಳ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಕ್ವಾಲ್ಕಾಮ್ ಟೆಕ್ನಾಲಜೀಸ್‌ನಲ್ಲಿ ಐ.ಟಿ ಸಚಿವ ಅಶ್ವಿನಿ ವೈಷ್ಣವ್

ಉದ್ಯಮಗಳಿಗೆ ಇನ್ನು ಎಐ ಅವಲಂಬನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಗಳು ಇಲ್ಲಿವರೆಗೆ ತಂತ್ರಾಂಶವನ್ನು (ಸಾಫ್ಟ್‌ವೇರ್) ಅವಲಂಬಿಸಿದ್ದವು. ಇನ್ನು ಮುಂದೆ ಕೃತಕ ಬುದ್ಧಿಮತ್ತೆಯನ್ನು (ಎಐ) ಅವಲಂಬಿಸಿರಲಿವೆ. ಅದಕ್ಕೆ ಪೂರಕವಾಗಿ ನ್ಯಾನೊ ಚಿಪ್ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಕ್ವಾಲ್ಕಾಮ್ ಟೆಕ್ನಾಲಜೀಸ್ ಅಭಿವೃದ್ಧಿಪಡಿಸಿದ 2ಎನ್‌ಎಂ ಸೆಮಿಕಂಡಕ್ಟರ್ ವಿನ್ಯಾಸದ ನ್ಯಾನೊ ಚಿಪ್ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಈ ಅತಿ ಸಣ್ಣ ಚಿಪ್‌ನೊಳಗೆ ಇಡೀ ಮಹಾಭಾರತ, ರಾಮಾಯಣ ಎಲ್ಲ ಪುರಾಣಗಳನ್ನು ತೋರಿಸುವಷ್ಟು ಸಾಮರ್ಥ್ಯವನ್ನು ಹೊಂದಿದೆ. ಸೆಮಿಕಂಡಕ್ಟರ್ ತಂತ್ರಜ್ಞಾನಗಳನ್ನು ಭವಿಷ್ಯಕ್ಕಾಗಿ ಹೇಗೆ ವಿನ್ಯಾಸಗೊಳಿಸಲಾಗುತ್ತಿದೆ ಎನ್ನುವುದನ್ನು ಕೇಂದ್ರ ಸರ್ಕಾರ ನೋಡುತ್ತಿದೆ. 28 ನ್ಯಾನೊ ಚಿಪ್‌ಗಳನ್ನು ಸಿದ್ಧಪಡಿಸಿದೆ. ಏಳು ನ್ಯಾನೊಚಿಪ್‌ಗಳು ತಯಾರಾಗುತ್ತಿವೆ ಎಂದು ವಿವರಿಸಿದರು.

ಕ್ವಾಲ್ಕಾಮ್‌ನ ಎಂಜಿನಿಯರಿಂಗ್ ಸಾಮರ್ಥ್ಯ, ಆಳವಾದ ವಿನ್ಯಾಸದ ಸಾಮರ್ಥ್ಯಗಳು ಮತ್ತು ಭಾರತಕ್ಕೆ ದೀರ್ಘಾವಧಿ ಬದ್ಧತೆ ಪರಿಣಾಮಕಾರಿಯಾಗಿರುವುದು ಅದರ ಕಾರ್ಯಗಳಿಂದ ಗೊತ್ತಾಗಿದೆ ಎಂದರು.

ಎಲೆಕ್ಟ್ರಾನಿಕ್ಸ್ ಆ್ಯಂಡ್ ಐಟಿ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮತ್ತು ಇಂಡಿಯಾ ಸೆಮಿಕಂಡಕ್ಟರ್ ಮಿಷನ್ ಸಿಇಒ ಅಮಿತೇಶ್ ಕುಮಾರ್ ಸಿನ್ಹಾ ಮಾತನಾಡಿ, 'ಭಾರತದ ಸೆಮಿಕಂಡಕ್ಟರ್ ಬೆಳವಣಿಗೆಯ ಧ್ಯೇಯವು ಸದೃಢವಾಗಿ ಮುನ್ನಡೆಯುತ್ತಿದೆ. ಅದಕ್ಕೆ ಡಿಸೈನ್ ಇಕೊಸಿಸ್ಟಂ ಮತ್ತು ಸುಸ್ಥಿರವಾದ ಉದ್ಯಮದ ಭಾಗವಹಿಸುವಿಕೆಯ ಬೆಂಬಲ ದೊರೆತಿದೆ' ಎಂದು ವಿವರಿಸಿದರು.

ಕ್ವಾಲ್ಕಾಮ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಹಿರಿಯ ಉಪಾಧ್ಯಕ್ಷ ಶ್ರೀನಿ ಮದ್ದಾಲಿ ಮಾತನಾಡಿ, 'ಜಾಗತಿಕ ಪ್ರೋಗ್ರಾಮ್ ಮತ್ತು ಆರ್ಕಿಟೆಕ್ಚರ್ ತಂಡಗಳೊಂದಿಗೆ ಕೆಲಸ ಮಾಡಲು ಅತ್ಯುತ್ತಮ ಪ್ರತಿಭೆ ಬೇಕು. ಭಾರತದ ಎಂಜಿನಿಯರ್‌ಗಳು ಸತತವಾಗಿ ಜಾಗತಿಕ ಗುಣಮಟ್ಟವನ್ನು ಪೂರೈಸುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದರು. ಕ್ವಾಲ್ಕಾಮ್ ಎಂಜಿನಿಯರಿಂಗ್ ಹಿರಿಯ ಉಪಾಧ್ಯಕ್ಷ ಶಶಿ ರೆಡ್ಡಿ, ಉಪಾಧ್ಯಕ್ಷ ಮಹೇಶ್ ಮೂರ್ತಿ ಇದ್ದರು.



> **ಭಾರತದ ಡಿಸೈನ್ ಇಕೊಸಿಸ್ಟಮ್‌ಗಳು ಜಾಗತಿಕವಾಗಿ ಸ್ಪರ್ಧಾತ್ಮಕ ಸೆಮಿಕಂಡಕ್ಟರ್ ಉದ್ಯಮ ನಿರ್ಮಿಸುವ ನಮ್ಮ ಧ್ಯೇಯಕ್ಕೆ ಪೂರಕವಾಗಿವೆ**
> **ಅಶ್ವಿನಿ ವೈಷ್ಣವ್,** ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1735 (1750)
ಸೋಯಾ (ರಿಫೈನ್ಡ್)	₹1405 (1405)
ಸೂರ್ಯಕಾಂತಿ (ರಿಫೈನ್ಡ್)	₹1615 (1615)
ಪಾಮೋಲಿನ್	₹1325 (1325)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹562
	12 ಕ್ಕೆ	₹80
ಮೈಸೂರು:	100 ಕ್ಕೆ	₹560

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹541-776
ದ್ವಿತಳಿ (ಬಿ.ವಿ)	₹296-948

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹198
ಗುಡ್ ಲಾಟ್	₹186

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23850
ಎಸಿ	₹12750
ಆರ್‌ಪಿ	₹18000
ಆರ್‌ಸಿ	₹10125

ಮುಂಬೈ ಧಾರಣೆ (ಶೇಂಗಾ)

07-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1745 (1750)
ಒಂದು ವಾರದ ಡೆಲಿವರಿ	1740 (1745)
ಪಾಮ್ ವಾರದ ಡೆಲಿವರಿ	1323 (1323)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1520)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,000 (1,53,000)
ಬೆಳ್ಳಿ ಕೆ.ಜಿಗೆ	2,55,000 (2,48,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹30100-30100
ವಿಜಯಪುರ	₹8400-13136

ತಪ್ಪು ಮಾಡಿಲ್ಲ: ಟ್ರಂಪ್ ಹೇಳಿಕೆ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಮತ್ತು ಪತ್ನಿ ಮಿಷೆಲ್ ಒಬಾಮ ಅವರ ವಿರುದ್ಧ ಜನಾಂಗೀಯ ನಿಂದನೆಯ ವಿಡಿಯೊವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದರು. ಸಾರ್ವಜನಿಕ ವಲಯದಲ್ಲಿ ತೀವ್ರ ಟೀಕೆ ಕಂಡುಬಂದ ಬಳಿಕ ಅದನ್ನು ತೆಗೆದು ಹಾಕಿರುವ ಅವರು, ಈ ವಿಚಾರವಾಗಿ ಕ್ಷಮೆ ಯಾಚಿಸುವುದಿಲ್ಲ ಎಂದು ಹೇಳಿದ್ದಾರೆ.

'ದಿ ಲಯನ್ ಸ್ಲೀಪ್ಸ್ ಟುನೈಟ್' ಹೆಸರಿನ 62 ಸೆಕೆಂಡುಗಳ ವಿಡಿಯೊದಲ್ಲಿ, ಕೋತಿಯ ದೇಹಕ್ಕೆ ಒಬಾಮ ದಂಪತಿ ಮುಖದ ಚಿತ್ರವನ್ನು ಅಂಟಿಸಲಾಗಿತ್ತು. 2020ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಪಿತೂರಿ ಸಿದ್ಧಾಂತ ಪ್ರಚಾರ ಮಾಡಿದ್ದರು ಎಂದು ಶೀರ್ಷಿಕೆ ನೀಡಿದ್ದರು. ಇದು ಅಮೆರಿಕದ ಕಪ್ಪು ಜನಾಂಗದ ಕುರಿತು ಟ್ರಂಪ್ ಅವರು ಪ್ರಕಟಿಸಿದ ಹೊಸ ಆಕ್ಷೇಪಾರ್ಹ ಪೋಸ್ಟ್ ಎನ್ನಲಾಗುತ್ತಿದ್ದು, ತೀವ್ರ ಆಕ್ರೋಶಕ್ಕೆ ಗುರಿಯಾಗಿದೆ.

ಈ ಕುರಿತು ಏರ್‌ಫೋರ್ಸ್ ಒನ್ ವಿಮಾನದಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ನಾನು ವಿಡಿಯೊದ ಮೊದಲಾರ್ಧವನ್ನು ವೀಕ್ಷಿಸಿದ್ದೇನೆ. ಜಾರ್ಜಿಯಾದ ಕೆಲವೆಡೆಗಳಲ್ಲಿ ನಡೆದ ಮತದಾನದ ವಂಚನೆ ಕುರಿತಾಗಿ ಮೊದಲಾರ್ಧ ಒಳಗೊಂಡಿತ್ತು, ನಾನು ಪೂರ್ತಿ ನೋಡಿಲ್ಲ' ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

'ಈ ಲಿಂಕ್ ಅನ್ನು ಬೇರೆಯವರು ಪೋಸ್ಟ್ ಮಾಡಿದ್ದಾರೆ. ಅವರೇ ಅದನ್ನು ಪರಿಶೀಲಿಸುತ್ತಾರೆ. ಈ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ' ಎಂದು ಸಮರ್ಥಿಸಿಕೊಂಡರು.

ದಾಳಿ ಮಾಡಿದರೆ ಪ್ರತ್ಯುತ್ತರ: ಇರಾನ್

ಕೈರೊ (ರಾಯಿಟರ್ಸ್): 'ತನ್ನ ನೆಲದ ಮೇಲೆ ಅಮೆರಿಕವು ದಾಳಿ ನಡೆಸಿದರೆ, ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲಾಗುವುದು' ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಎಚ್ಚರಿಕೆ ನೀಡಿದ್ದಾರೆ.

'ಒಮಾನ್‌ನಲ್ಲಿ ಶುಕ್ರವಾರ ನಡೆದ ಸಕಾರಾತ್ಮಕ ಚರ್ಚೆಗಳ ನಂತರ, ಅಣ್ವಸ್ತ್ರ ಕುರಿತು ಪರೋಕ್ಷವಾಗಿ ಮಾತುಕತೆ ನಡೆಸಲು 'ಇರಾನ್ ಹಾಗೂ ಅಮೆರಿಕ ಸಮ್ಮತಿ ಸೂಚಿಸಿವೆ' ಎಂದು ಕತಾರ್‌ನ 'ಅಲ್ ಜಜೀರಾ' ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಮುಂದಿನ ಹಂತದ ಮಾತುಕತೆಯ ಕುರಿತಂತೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವಾರದಲ್ಲೇ ಮಾತುಕತೆ ನಡೆಯಲಿದೆ ಎಂದು ತಿಳಿಸಿದ್ದಾರೆ. ಆದಷ್ಟು ಬೇಗ ಮಾತುಕತೆ ಆರಂಭವಾಗಲಿದೆ ಎಂಬ ವಿಶ್ವಾಸವನ್ನು ಉಭಯ ದೇಶಗಳು ಹೊಂದಿವೆ' ಎಂದು ಹೇಳಿದ್ದಾರೆ.

ಕ್ವಾಲಾಲಂಪುರದಲ್ಲಿ ಶನಿವಾರ ಭಾರತೀಯ ಸಮುದಾಯದವರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಪರಸ್ಪರ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

ಭಾರತ ವಿಶ್ವಾಸಾರ್ಹ ಪಾಲುದಾರ: ಮೋದಿ

ಒಂದನೇ ಪುಟದಿಂದ...

ಅಲ್ಲಿ ಇಬ್ಬರಿಗೂ ಅಭೂತಪೂರ್ವ ಸ್ವಾಗತ ದೊರೆಯಿತು. 'ಭಾರತ್ ಮಾತಾ ಕಿ ಜೈ', 'ಮೋದಿ, ಮೋದಿ' ಎಂಬ ಘೋಷಣೆಗಳ ನಡುವೆ ವೇದಿಕೆಗೆ ಬಂದರು.

800ಕ್ಕೂ ಹೆಚ್ಚು ಕಲಾವಿದರು ಭರತನಾಟ್ಯ, ಕಥಕ್, ಕಥಕ್ಕಳಿ, ಕೂಚಿಪುಡಿ, ಯಕ್ಷಗಾನ, ಲಾವಣಿ ಮತ್ತು ಒಡಿಸಿ ಸೇರಿದಂತೆ ಭಾರತೀಯ ಶಾಸ್ತ್ರೀಯ ಮತ್ತು ಜನಪದ ನೃತ್ಯಗಳನ್ನು ಪ್ರದರ್ಶಿಸಿದರು.

ಇದೇ ವೇಳೆ, ಭಾರತೀಯ ನೃತ್ಯ ಪ್ರದರ್ಶನವೊಂದರಲ್ಲಿ ಅತಿ ಹೆಚ್ಚು ಕಲಾವಿದರು ಭಾಗವಹಿಸಿದ್ದಕ್ಕಾಗಿ, ಆ ಪ್ರದರ್ಶನವು 'ಮಲೇಷಿಯನ್ ಬುಕ್ ಆಫ್ ರೆಕಾರ್ಡ್ಸ್' ಸೇರಿದೆ ಎಂದು ಘೋಷಿಸಲಾಯಿತು.

> **ದೊಡ್ಡ ಸಂಖ್ಯೆಯಲ್ಲಿ ನೆಲಸಿರುವ ಭಾರತೀಯರು ಮಲೇಷ್ಯಾ-ಭಾರತ ನಡುವಿನ ಬಾಂಧವ್ಯಕ್ಕೆ ಸೇತುವೆಯಾಗಿದ್ದಾರೆ. ಭಾಷೆ, ಪರಂಪರೆ ಸೇರಿ ಹಲವು ವಿಚಾರಗಳು ಉಭಯ ದೇಶಗಳನ್ನು ಬೆಸೆದಿವೆ**
> **ನರೇಂದ್ರ ಮೋದಿ** ಪ್ರಧಾನಿ

> **ರಾಜತಾಂತ್ರಿಕ ಸಂಬಂಧ, ವ್ಯಾಪಾರ ಒಪ್ಪಂದಗಳಿಗೂ ಮೊದಲೇ ಭಾರತ ಮತ್ತು ಮಲೇಷ್ಯಾ ನಡುವೆ ಪ್ರಾಚೀನ ಕಾಲದಿಂದಲೂ ಉತ್ತಮ ಬಾಂಧವ್ಯ ಇದೆ**
> **ಅನ್ವರ್ ಇಬ್ರಾಹಿಂ,** ಮಲೇಷ್ಯಾ ಪ್ರಧಾನಿ

ಆಕಾಶ್ ಅರ್ಧಶತಕ; ಮುಂಬೈ ದಿಟ್ಟ ಹೋರಾಟ

ರಣಜಿ ಕ್ವಾರ್ಟರ್‌ಫೈನಲ್: ಮಯಂಕ್ 92 ರನ್

• ಕರ್ನಾಟಕ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಮಯಂಕ್ ಅಗರವಾಲ್

ಮುಂಬೈ: ಮಯಂಕ್ ಅಗರವಾಲ್ ಕೇವಲ ಎಂಟು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರೂ, ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟದ ಪಂದ್ಯದಲ್ಲಿ 53 ರನ್ ಮುನ್ನಡೆ ಸಾಧಿಸಲು ನೆರವಾದರು. ಆದರೆ ಆತಿಥೇಯ ಮುಂಬೈ ಎರಡನೇ ಇನಿಂಗ್ಸ್‌ನಲ್ಲಿ ದಿಟ್ಟ ಮರುಹೋರಾಟ ಮಾಡಿತು.

ಆಕಾಶ್ ಆನಂದ್ (ಬ್ಯಾಟಿಂಗ್ 53; 130ಎ) ಮತ್ತು ಮುಷೀರ್ ಖಾನ್ (ಬ್ಯಾಟಿಂಗ್ 49; 105ಎ) ಅವರ ತಾಳ್ಮೆಭರಿತ ಬ್ಯಾಟಿಂಗ್‌ನಿಂದಾಗಿ ಎರಡನೇ ದಿನದಾಟದ ಮುಕ್ತಾಯಕ್ಕೆ 52 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 189 ರನ್ ಗಳಿಸಿದೆ. ಅದರೊಂದಿಗೆ ಒಟ್ಟು 136 ರನ್‌ಗಳ ಮುನ್ನಡೆ ಸಾಧಿಸಿದೆ. 300ಕ್ಕಿಂತ ಹೆಚ್ಚು ರನ್‌ಗಳ ಗುರಿ ನೀಡಿದರೆ ಕರ್ನಾಟಕ ತಂಡಕ್ಕೆ ಈ ಪಿಚ್‌ನಲ್ಲಿ ಕಠಿಣ ಸವಾಲಾಗಬಹುದು.

ಶುಕ್ರವಾರ ಮೊದಲ ಇನಿಂಗ್ಸ್‌ನಲ್ಲಿ ಮುಂಬೈ ತಂಡವು 120 ರನ್‌ಗಳಿಗೆ ತತ್ತರಿಸಿತ್ತು. ಅದಕ್ಕುತ್ತರವಾಗಿ ಕರ್ನಾಟಕವು 47.1 ಓವರ್‌ಗಳಲ್ಲಿ 173 ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ಶನಿವಾರ ಎರಡನೇ ಇನಿಂಗ್ಸ್ ಆರಂಭಿಸಿದ ಮುಂಬೈ ಗೆಲುವು ಸಾಧಿಸುವ ಛಲದೊಂದಿಗೆ ಆಡಿತು.

ಅದಕ್ಕೆ ತಕ್ಕಂತೆ ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ (36; 43ಎ) ಮತ್ತು ಅಖಿಲ್ ಹೇರ್ವಾಡ್ಕರ್ (33; 35ಎ) ಅವರು ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಆದರೆ 13ನೇ ಓವರ್‌ನಲ್ಲಿ ಡೀಪ್ ಪೊಸಿಷನ್‌ನಿಂದ ಫೀಲ್ಡರ್ ವಿದ್ವತ್ ಕಾವೇರಪ್ಪ ಮಾಡಿದ ನೇರ ಥ್ರೋಗೆ ಅಖಿಲ್ ಹೇರ್ವಾಡ್ಕರ್ ರನ್‌ಔಟ್ ಆದರು.

ನಂತರದ ಓವರ್ ಬೌಲಿಂಗ್ ಮಾಡಿದ ಶ್ರೇಯಸ್ ಗೋಪಾಲ್ ಅವರ ಎಸೆತವನ್ನು ಆಡುವ ಯತ್ನದಲ್ಲಿ ಜೈಸ್ವಾಲ್ ಅವರು ವಿಕೆಟ್‌ಕೀಪರ್ ಕೃತಿಕ್ ಕೃಷ್ಣಗೆ ಕ್ಯಾಚ್ ಆದರು.

ಈ ಹೊತ್ತಿನಲ್ಲಿ ಜೊತೆಗೂಡಿದ ಆಕಾಶ್ ಮತ್ತು ಖಾನ್ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲ 112 ರನ್ ಸೇರಿಸಿದರು.

ಶತಕ ತಪ್ಪಿಸಿಕೊಂಡ ಮಯಂಕ್: ಮೊದಲ ದಿನದಾಟದ ಅಂತ್ಯಕ್ಕೆ ಕರ್ನಾಟಕ ತಂಡವು 26 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಮಯಂಕ್ ಮತ್ತು ಕರುಣ್ ಎರಡನೇ ದಿನ ಬೆಳಿಗ್ಗೆ ಆಟ ಮುಂದುವರಿಸಿದರು.

ಆದರೆ ಕರುಣ್ ಸೇರಿದಂತೆ ಏಳು ಬ್ಯಾಟರ್‌ಗಳು ಒಂದಂಕಿಗೇ ಔಟಾದರು. ಅದರಲ್ಲಿ ಆರ್. ಸ್ಮರಣ್, ಶ್ರೇಯಸ್ ಮತ್ತು ಪ್ರಸಿದ್ಧ ಅವರು ಖಾತೆಯನ್ನೇ ತೆರೆಯಲಿಲ್ಲ. ಇದರ ನಡುವೆಯೂ ಮಯಂಕ್ ಮಾತ್ರ ಏಕಾಗ್ರತೆಯಿಂದ ಆಡಿದರು. ಆದರೆ ಶತಕದ ಸನಿಹ ಇದ್ದ ಮಯಂಕ್ ಅವರು ತುಷಾರ್ ದೇಶಪಾಂಡೆ ಎಸೆತದಲ್ಲಿ ಸಿದ್ಧೇಶ್ ಲಾಡ್ ಪಡೆದ ಕ್ಯಾಚ್‌ಗೆ ನಿರ್ಗಮಿಸಬೇಕಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 48.1 ಓವರ್‌ಗಳಲ್ಲಿ 120. ಕರ್ನಾಟಕ: 47.1 ಓವರ್‌ಗಳಲ್ಲಿ 173 (ಮಯಂಕ್ ಅಗರವಾಲ್ 92, ಮೋಹಿತ್ ಅವಸ್ಥಿ 27ಕ್ಕೆ4, ತುಷಾರ್ ದೇಶಪಾಂಡೆ 33ಕ್ಕೆ4); ಎರಡನೇ ಇನಿಂಗ್ಸ್: ಮುಂಬೈ 52 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 189 (ಯಶಸ್ವಿ ಜೈಸ್ವಾಲ್ 36, ಅಖಿಲ್ ಹೇರ್ವಾಡ್ಕರ್ 33, ಆಕಾಶ್ ಆನಂದ್ ಬ್ಯಾಟಿಂಗ್ 53, ಮುಷೀರ್ ಖಾನ್ ಬ್ಯಾಟಿಂಗ್ 49, ಶ್ರೇಯಸ್ ಗೋಪಾಲ್ 35ಕ್ಕೆ1)

ಜಮ್ಮು ಕಾಶ್ಮೀರ ತಂಡಕ್ಕೆ ಮುನ್ನಡೆ

ಇಂದೋರ್ (ಪಿಟಿಐ): ಏಳು ವಿಕೆಟ್ ಕಬಳಿಸಿದ ಅಕೀಬ್ ನಬಿ ಅವರ ಬೌಲಿಂಗ್‌ನಿಂದಾಗಿ ಜಮ್ಮು ಕಾಶ್ಮೀರ ತಂಡವು ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಮಧ್ಯಪ್ರದೇಶ ಎದುರು ಮೊದಲ ಇನಿಂಗ್ಸ್‌ನಲ್ಲಿ 42 ರನ್ ಮುನ್ನಡೆ ಗಳಿಸಿತು.

ಕಾಶ್ಮೀರ ತಂಡವು ಮೊದಲ ಇನಿಂಗ್ಸ್‌ನಲ್ಲಿ 192 ರನ್ ಗಳಿಸಿತ್ತು. ಶನಿವಾರ ಎರಡನೇ ದಿನದಾಟದಲ್ಲಿ ಮಧ್ಯಪ್ರದೇಶ ತಂಡವನ್ನು 152 ರನ್‌ಗಳಿಗೆ ಕಟ್ಟಿಹಾಕಿತು. ಎರಡನೇ ಇನಿಂಗ್ಸ್ ಆರಂಭಿರುವ ತಂಡವು ದಿನದಾಟದ ಅಂತ್ಯಕ್ಕೆ 26 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 84 ರನ್ ಗಳಿಸಿತು. ಒಟ್ಟು 126 ರನ್ ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು–ಕಾಶ್ಮೀರ: 67 ಓವರ್‌ಗಳಲ್ಲಿ 194. ಮಧ್ಯಪ್ರದೇಶ: 53.4 ಓವರ್‌ಗಳಲ್ಲಿ 152 (ಯಶ್ ದುಬೆ 58, ವೆಂಕಟೇಶ್ ಅಯ್ಯರ್ 22, ಅಕೀಬ್ ನಬಿ 40ಕ್ಕೆ7, ಸುನಿಲ್ ಕುಮಾರ್ 47ಕ್ಕೆ3) ಎರಡನೇ ಇನಿಂಗ್ಸ್: ಜಮ್ಮು–ಕಾಶ್ಮೀರ: 26 ಓವರ್‌ಗಳಲ್ಲಿ 5ಕ್ಕೆ84 (ಅಬ್ದುಲ್ ಸಮದ್ 32, ಶುಭಂ ಖಜುರಿಯಾ 13, ಪಾರಸ್ ಡೋಗ್ರಾ 17, ಕುಲದೀಪ್ ಸೇನ್ 25ಕ್ಕೆ2, ವೆಂಕಟೇಶ್ ಅಯ್ಯರ್ 10ಕ್ಕೆ2)

ಕಲ್ಯಾಣಿ: ಮೊದಲ ಇನಿಂಗ್ಸ್: ಆಂಧ್ರ: 88.4 ಓವರ್‌ಗಳಲ್ಲಿ 295. ಬಂಗಾಳ: 63 ಓವರ್‌ಗಳಲ್ಲಿ 5ಕ್ಕೆ199 (ಸುದೀಪ್ ಕುಮಾರ್ ಘರಮಿ ಬ್ಯಾಟಿಂಗ್ 112, ಸೂರಜ್ ಜೈಸ್ವಾಲ್ 20, ಸುಮಂತ್ ಗುಪ್ತಾ ಬ್ಯಾಟಿಂಗ್ 22)

ಜಮ್ಶೆಡ್‌ಪುರ: ಜಾರ್ಖಂಡ್: 85 ಓವರ್‌ಗಳಲ್ಲಿ 235. ಉತ್ತರಾಖಂಡ: 87 ಓವರ್‌ಗಳಲ್ಲಿ 5ಕ್ಕೆ282 (ಅವನೀಶ್ ಸುಧಾ 64, ಕುನಾಲ್ ಚಾಂಡೆಲಾ 68, ಜೆ.ಸುಚಿತ್ ಬ್ಯಾಟಿಂಗ್ 60, ಸೌರಭ್ ರಾವತ್ 32, ಶಾಶ್ವತ್ ಡಂಗ್ವಾಲ್ ಬ್ಯಾಟಿಂಗ್ 14)

ಡೇವಿಸ್ ಕಪ್ ಕ್ವಾಲಿಫೈಯರ್ಸ್: ನಗಾಲ್‌ಗೆ ನಿರಾಸೆ

ದಕ್ಷಿಣೇಶ್ವರ್ ಸುರೇಶ್‌ಗೆ ಜಯ

ಪ್ರಜಾವಾಣಿ ವಾರ್ತೆ

ಡೇವಿಸ್ ಕಪ್ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ದಕ್ಷಿಣೇಶ್ವರ ಸುರೇಶ್ ನೆದರ್ಲೆಂಡ್ಸ್‌ನ ಜೆಸ್ಪರ್ ಡಿ ಜಾಂಗ್ ವಿರುದ್ಧ ಬ್ಯಾಕ್‌ಹ್ಯಾಂಡ್ ಹೊಡೆತವಾಡಿದ್ದು ಹೀಗೆ... ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು (ಪಿಟಿಐ): ಸಂದರ್ಭೋಚಿತವಾಗಿ ಆಡಿದ ಯುವ ತಾರೆ ದಕ್ಷಿಣೇಶ್ವರ ಸುರೇಶ್ ಅವರು ಎರಡನೇ ಸಿಂಗಲ್ಸ್‌ನಲ್ಲಿ ನೆದರ್ಲೆಂಡ್ಸ್‌ನ ಅಗ್ರ ಆಟಗಾರ ಜೆಸ್ಪರ್ ಡಿ ಜಾಂಗ್ ಅವರನ್ನು ಸೋಲಿಸಿದರು. ಇದರೊಂದಿಗೆ ಭಾರತ ತಂಡ ಶನಿವಾರ ಆರಂಭವಾದ ಡೇವಿಸ್ ಕಪ್ ಟೆನಿಸ್ ಕ್ವಾಲಿಫೈಯರ್ಸ್ ಸುತ್ತಿನಲ್ಲಿ 1–1 ಸಮ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಭರ್ಜರಿ ಸರ್ವ್‌ಗಳನ್ನು ಮಾಡುವ ಇಬ್ಬರು ಆಟಗಾರರ ಸೆಣಸಾಟದಲ್ಲಿ ವಿಶ್ವ ಕ್ರಮಾಂಕದಲ್ಲಿ 465ನೇ ಸ್ಥಾನದಲ್ಲಿರುವ ದಕ್ಷಿಣೇಶ್ವರ್ 6–4, 7–5 ರಿಂದ 88ನೇ ಕ್ರಮಾಂಕದ ಡಚ್ ಆಟಗಾರರನ್ನು ಸೋಲಿಸಿದರು. ಆ ಮೂಲಕ ಡೇವಿಸ್ ಕಪ್ ತಂಡದಲ್ಲಿ ಭರವಸೆಯ ಆಟಗಾರನಾಗಿ ಅವರು ವರ್ಚಸ್ಸು ವೃದ್ಧಿಸಿಕೊಂಡರು.

2025ರಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ ಪಂದ್ಯದಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಆಟಗಾರರನ್ನು ಹಿಮ್ಮೆಟ್ಟಿಸಿ ಭಾರತ ಗೆಲುವು ಸಾಧಿಸುವಲ್ಲೂ ಅವರು ಪ್ರಮುಖ ಪಾತ್ರವಹಿಸಿದ್ದರು.

ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಮುಖಾಮುಖಿಯ ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಅಗ್ರ ಆಟಗಾರ ಸುಮಿತ್ ನಾಗಲ್ ಅವರು ಕಳಪೆ ಆಟದಿಂದ ಚೇತರಿಸಿಕೊಂಡರೂ ಅಂತಿಮವಾಗಿ 0–6, 6–4, 3–6 ರಿಂದ ನೆದರ್ಲೆಂಡ್ಸ್‌ನ ಗಯ್ ಡಿ ಆಡೆನ್ ಅವರಿಗೆ ಮಣಿಯಬೇಕಾಯಿತು. ಪಂದ್ಯ 2 ಗಂಟೆ 28 ನಿಮಿಷ ನಡೆಯಿತು.

ನೆದರ್ಲೆಂಡ್ಸ್ 1–0 ಮುನ್ನಡೆ ಪಡೆಯುತ್ತಿದ್ದಂತೆ ಭಾರತ ಒತ್ತಡಕ್ಕೆ ಒಳಗಾಯಿತು. ಆದರೆ ಹೊನಲು ಬೆಳಕಿನಡಿ ದಕ್ಷಿಣೇಶ್ವರ್ ಅವರು ಪಂದ್ಯ ಗೆಲ್ಲುವ ಮೂಲಕ ಮುಖಾಮುಖಿಗೆ ಜೀವಂತಿಕೆ ತಂದುಕೊಟ್ಟರು.

ಭಾನುವಾರ ನಡೆಯುವ ಡಬಲ್ಸ್ ಪಂದ್ಯದಲ್ಲಿ ಯುಕಿ ಭಾಂಬ್ರಿ– ಎನ್. ಶ್ರೀರಾಮ್ ಬಾಲಾಜಿ ಜೋಡಿ, ಸ್ಯಾಂಡರ್ ಅರೆಂಡ್ಸ್– ಡೇವಿಡ್ ಪೆಲ್ ಜೋಡಿಯನ್ನು ಎದುರಿಸಲಿದೆ. ಡಬಲ್ಸ್ ಪಂದ್ಯದ ನಂತರ ರಿವರ್ಸ್ ಸಿಂಗಲ್ಸ್ ಪಂದ್ಯಗಳು ನಡೆಯಲಿವೆ.

ಈ ಮುಖಾಮುಖಿಯ ವಿಜೇತರು, ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಕ್ವಾಲಿಫೈಯರ್ಸ್ ಎರಡನೇ ಸುತ್ತಿಗೆ ಮುನ್ನಡೆಯಲಿದ್ದಾರೆ. ಸೋತ ತಂಡ ವಿಶ್ವ ಗುಂಪು 1ರಲ್ಲಿ ಆಡಬೇಕಾಗುತ್ತದೆ.

ತುಷಾರ್, ಮಾನಸಿ ಮುಡಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಪ್ರಶಸ್ತಿ ವಿಜೇತರು: (ಎಡದಿಂದ) ಹಿಂದಿನ ಸಾಲು– ತುಷಾರ್ ಸುವೀರ್, ಪವನ್ ಎಸ್., ಪುನೀತ್ ಎಸ್., ನಿತಿನ್ ಕುಮಾರ್, ಶಂಕರ್‌ಪ್ರಸಾದ್ ಹಾಗೂ ಕಮಲ್ ಕೃಷ್ಣನ್; ಮುಂದಿನ ಸಾಲು– ಅಮೃತಾ ಪಿ., ಲಿಖಿತಾ ಶ್ರೀವಾಸ್ತವ, ಅದಿತಿ ಭಟ್, ಶ್ರಾವಣಿ ವಾಳೇಕರ್, ಶ್ರುತಿ ಎಂ. ಹಾಗೂ ಮಾನಸಿ ಸಿಂಗ್ ಪ್ರಜಾವಾಣಿ ಚಿತ್ರ

ಬೆಂಗಳೂರು: ಕರ್ನಾಟಕದ ತುಷಾರ್ ಸುವೀರ್ ಹಾಗೂ ಉತ್ತರ ಪ್ರದೇಶದ ಮಾನಸಿ ಸಿಂಗ್ ಅವರು ಶನಿವಾರ ಮುಕ್ತಾಯಗೊಂಡ ಅಖಿಲ ಭಾರತ ಸೀನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಎಂಟನೇ ಶ್ರೇಯಾಂಕ ಪಡೆದಿದ್ದ ತುಷಾರ್, ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ 21–12, 21–12 ರಿಂದ ಮಧ್ಯಪ್ರದೇಶದ ಆಲಾಪ್ ಮಿಶ್ರಾ ವಿರುದ್ಧ ನಿರಾಯಾಸವಾಗಿ ಗೆದ್ದರು.

ಪುರುಷರ ಡಬಲ್ಸ್‌ನಲ್ಲಿಯೂ ಆತಿಥೇಯ ಆಟಗಾರರು ಪಾರಮ್ಯ ಮೆರೆದರು. ಪವನ್ ಎಸ್. ಹಾಗೂ ಪುನೀತ್ ಎಸ್. ಅವರು 21–16, 21–13ರಿಂದ ಕೇರಳದ ಕಮಲ್ ಕೃಷ್ಣನ್ ಎಸ್.– ಶಂಕರ್‌ಪ್ರಸಾದ್ ಉದಯಕುಮಾರ್ ಜೋಡಿಯನ್ನು ಮಣಿಸಿ, ಚಾಂಪಿಯನ್ ಆದರು.

ಅಗ್ರ ಶ್ರೇಯಾಂಕದ ಆಟಗಾರ್ತಿ ಮಾನಸಿ ಅವರು ರೋಚಕವಾಗಿದ್ದ ಮಹಿಳೆಯರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ 21–16, 16–21, 21–10ರಿಂದ ಮಹಾರಾಷ್ಟ್ರದ ಶ್ರುತಿ ಎಂ. ಎದುರು ಜಯ ಸಾಧಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಅದಿತಿ ಭಟ್ (ಉತ್ತರಾಖಂಡ)– ಶ್ರಾವಣಿ ವಾಳೇಕರ್ (ಮಹಾರಾಷ್ಟ್ರ) ಜೋಡಿಯು 21–9, 21–13ರಿಂದ ಅಮೃತಾ ಪಿ. (ಕರ್ನಾಟಕ) ಹಾಗೂ ಲಿಖಿತ ಶ್ರೀವಾಸ್ತವ (ದೆಹಲಿ) ಅವರನ್ನು ಮಣಿಸಿ, ಪ್ರಶಸ್ತಿ ಎತ್ತಿಹಿಡಿಯಿತು.

ಆರ್‌ಸಿಬಿ ಖರೀದಿ: ಬಿಡ್ ರೇಸ್‌ನಲ್ಲಿ ಸೇರಿದ ಮ್ಯಾಂಚೆಸ್ಟರ್ ಯುನೈಟೆಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿ ಖರೀದಿಸಲು ಸೀರಂ ಇನ್‌ಸ್ಟಿಟ್ಯೂಟ್‌ನ ಅದಾರ್ ಪೂನಾವಾಲಾ ಇತ್ತೀಚೆಗೆ ಬಿಡ್ ಸಲ್ಲಿಸಿ ಪೈಪೋಟಿಗೆ ಕಾವು ಏರಿಸಿದ್ದರು. ಮ್ಯಾಂಚೆಸ್ಟರ್ ಯುನೈಟೆಡ್‌ನ ಸಹ ಮಾಲೀಕತ್ವ ಹೊಂದಿರುವ ಗ್ಲೇಝರ್ಸ್, ಲಸಿಕೆ ಉದ್ಯಮಿಗಿಂತ ಹೆಚ್ಚಿನ ಮೊತ್ತದ ಬಿಡ್ ಸಲ್ಲಿಸಿದೆ ಎಂದು ವರದಿಗಳು ತಿಳಿಸಿವೆ.

ಇಂಗ್ಲೆಂಡ್ ಮೂಲದ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳ ಪ್ರಕಾರ ಗ್ಲೇಝರ್ಸ್ ಕಂಪನಿಯು ಸುಮಾರು ₹16,300 ಕೋಟಿ ಮೊತ್ತಕ್ಕೆ ಬೆಂಗಳೂರು ಮೂಲದ ಫ್ರಾಂಚೈಸಿಯ ಖರೀದಿಗೆ ಮುಂದಾಗಿದೆ. ಇದು ಪೂನಾವಾಲಾ ಅವರು ಬಿಡ್‌ನಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚು.

ಗುರುವಾರವಷ್ಟೇ ಸ್ಮೃತಿ ಮಂದಾನ ನೇತೃತ್ವದ ಆರ್‌ಸಿಬಿ ತಂಡವು, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಚಾಂಪಿಯನ್ ಆಗಿತ್ತು. ಆ ಮೂಲಕ ಐಪಿಎಲ್, ಡಬ್ಲ್ಯುಪಿಎಲ್ ಎರಡರಲ್ಲೂ ಆರ್‌ಸಿಬಿ ಏಕಕಾಲದಲ್ಲಿ ಚಾಂಪಿಯನ್ ಆಗಿದೆ.

2021ರಲ್ಲಿ ಗುಜರಾತ್ ಟೈಟನ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳ ಮಾಲೀಕತ್ವಕ್ಕೆ ನಡೆದ ಬಿಡ್ ಸಮರದಲ್ಲಿ ಗ್ಲೇಝರ್ಸ್ ಹಿನ್ನಡೆ ಕಂಡಿತ್ತು. ಈ ಬಾರಿ ತಂಡವೊಂದರ ಮಾಲೀಕತ್ವಕ್ಕೆ ಗಂಭೀರ ಪ್ರಯತ್ನ ನಡೆಸಿದೆ.

ಆರ್‌ಸಿಬಿಯ ಐಪಿಎಲ್ ಮತ್ತು ಡಬ್ಲ್ಯುಪಿಎಲ್ ತಂಡಗಳ ಒಡೆತನ ಹೊಂದಿರುವ ರಾಯಲ್ ಚಾಲೆಂಜರ್ಸ್‌ನ ಒಡೆತನ ಹೊಂದಿರುವ ಡಿಯಾಜಿಯೊ, ಫ್ರಾಂಚೈಸಿಯ ಮೌಲ್ಯವನ್ನು ಸುಮಾರು 18,115 ಕೋಟಿ ಎಂದು ಅಂದಾಜು ಮಾಡಿದೆ. ಬಿಡ್‌ಗಳ ಮೌಲ್ಯಮಾಪನ ನಡೆಸಿ ಮಾರ್ಚ್ 31ರೊಳಗೆ ವರದಿ ಸಲ್ಲಿಸಲು ಲಂಡನ್ ಮೂಲದ ಸಲಹಾ ಸಂಸ್ಥೆಯನ್ನು ನೇಮಕ ಮಾಡಿಕೊಂಡಿದೆ.

ಏಷ್ಯನ್ ಜೂನಿಯರ್ ದಾಖಲೆ ಮುರಿದ ಶಾಂಭವಿ

ಇಳವೆನಿಲ್‌ಗೆ ಏರ್ ರೈಫಲ್ ಚಿನ್ನ

ಪದಕದೊಂದಿಗೆ ಮಿಸಾಕಿ ನೊಬೊಟಾ, ಇಳವೆನಿಲ್ ವಳರಿವನ್ ಹಾಗೂ ಮೇಘನಾ ಸಜ್ಜನರ್ ಎನ್‌ಆರ್‌ಎಐ ಚಿತ್ರ

ನವದೆಹಲಿ (ಪಿಟಿಐ): ಒಲಿಂಪಿಯನ್ ಇಳವೆನಿಲ್ ವಳರಿವನ್ ಅವರು ಜಪಾನ್‌ನ ಮಿಸಾಕಿ ನೊಬೊಟಾ ಅವರ ಪ್ರಬಲ ಸವಾಲನ್ನು ಎದುರಿಸಿ, ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀ. ಏರ್ ರೈಫಲ್ ಚಿನ್ನ ಗೆದ್ದರು. ಮೇಘನಾ ಸಜ್ಜನರ್ ಅವರು ಕಂಚಿನ ಪದಕ ಗೆದ್ದುಕೊಂಡರು.

ಕರ್ಣಿಸಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಇಳವೆನಿಲ್, ಆರ್ಯಾ ಬೋರ್ಸೆ ಮತ್ತು ಮೇಘನಾ ಸಜ್ಜನರ್ ಅವರಿದ್ದ ತಂಡವು ಟೀಮ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು.

ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಶಾಂಭವಿ ಕ್ಷೀರಸಾಗರ್ ಅವರು 253.7 ಸ್ಕೋರ್‌ನೊಡನೆ ಏಷ್ಯನ್ ಜೂನಿಯರ್ ಫೈನಲ್ಸ್ ದಾಖಲೆ ಮುರಿದರು. ಭಾರತದ ಮೂರೂ ಪದಕಗಳನ್ನು ಬಾಚಿಕೊಂಡಿತು. ಮಾನ್ಯತಾ ಸಿಂಗ್ (249.7) ಮತ್ತು ಅನೀಶಾ ಶರ್ಮಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು. ಶಾಂಭವಿ ಅವರು 2024ರಲ್ಲಿ ಇಶಾ ನಿಲ್ ತಕ್ಸಾಲೆ (253.1) ಜಕಾರ್ತಾ ಕೂಟದಲ್ಲಿ ಸ್ಥಾಪಿಸಿದ್ದ ದಾಖಲೆ ಮುರಿದರು.

ಶಾಂಭವಿ, ಅನೀಶಾ, ಸಾಂದ್ರತಾ ರಾಯ್ ಅವರಿದ್ದ ಭಾರತ ತಂಡವು ಟೀಮ್ ವಿಭಾಗದಲ್ಲೂ ಚಿನ್ನ ಗೆದ್ದುಕೊಂಡಿತು. ಕಜಾಕಸ್ತಾನ ಎರಡನೇ ಸ್ಥಾನ ಪಡೆಯಿತು. ಇಳೆವನಿಲ್ 252 ಸ್ಕೋರ್ ದಾಖಲಿಸಿದರೆ, ಜಪಾನ್‌ನ ಮಿಸಾಕಿ (251.5) ಸ್ವಲ್ಪದರಲ್ಲೇ ಎರಡನೇ ಸ್ಥಾನಕ್ಕೆ ಸರಿಯಬೇಕಾಯಿತು. ಮೇಘನಾ 229.5 ಸ್ಕೋರ್ ದಾಖಲಿಸಿದರು.

ಪಿಸ್ತೂಲ್ ವಿಭಾಗದ 50 ಮೀ. ಸ್ಪರ್ಧೆಯಲ್ಲಿ ಮೂರೂ ಪದಕಗಳು ಭಾರತದ ಪಾಲಾದವು. ಸೌರಭ್ ಚೌಧರಿ ಚಿನ್ನ ಗೆದ್ದರೆ, ಕಮಲಜೀತ್ ಚೌಧರಿ ಮತ್ತು ಹಾಲಿ ವಿಶ್ವ ಚಾಂಪಿಯನ್ ರವಿಂದರ್ ಸಿಂಗ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು. ಜೂನಿಯರ್ ವಿಭಾಗದಲ್ಲಿ ಯೋಗೇಶ್ ಕುಮಾರ್ ಚಿನ್ನ ಗೆದ್ದರು.

ಲೋಕಸಭೆಯಲ್ಲಿ ಪ್ರಧಾನಿ ಭಾಷಣಕ್ಕೆ ಬಂದಾಗ ಘಟನೆ: ಸಚಿವ ಕಿರಣ್ ರಿಜಿಜು ಆರೋಪ

‘ಸ್ಪೀಕರ್ ಕೊಠಡಿಗೆ ನುಗ್ಗಿದ ಸಂಸದರು’

ಕಿರಣ್ ರಿಜಿಜು

ಪಟ್ನಾ (ಪಿಟಿಐ): ‘ಬಜೆಟ್ ಅಧಿವೇಶನದ ವೇಳೆ ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಷಣ ಮಾಡಲು ಆಗಮಿಸುತ್ತಿದ್ದ ವೇಳೆ ಅಸಹ್ಯಕರವಾಗಿ ನಿಂದಿಸಿದ ವಿರೋಧ ಪಕ್ಷದ 40ರಿಂದ 50 ಮಂದಿ ಸಂಸದರು ನಂತರ ಸ್ಪೀಕರ್ ಓಂ ಬಿರ್ಲಾ ಅವರ ಕೊಠಡಿಗೂ ನುಗ್ಗಿದರು’ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆರೋಪಿಸಿದ್ದಾರೆ.

ಪಟ್ನಾದ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಿರೋಧ ಪಕ್ಷದ ಸಂಸದರು ಸಮಸ್ಯೆ ಸೃಷ್ಟಿಸಲು ಸಿದ್ಧರಾಗಿದ್ದರು. ಸದನಕ್ಕೆ ಬಾರದಿರುವುದು ಸೂಕ್ತ ನಿರ್ಧಾರವೆಂದು ಪ್ರಧಾನಿ ಅವರಿಗೂ ತಿಳಿಸಿದೆವು. ಸ್ಪೀಕರ್ ಕೊಠಡಿಯಲ್ಲಿ ಈ ನಿರ್ಧಾರ ತೆಗೆದುಕೊಂಡ ವೇಳೆ ನಾನು ಅವರ ಕಚೇರಿಯಲ್ಲಿಯೇ ಇದ್ದೆ’ ಎಂದು ಹೇಳಿದ್ದಾರೆ.

ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಮೇಲೆ ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಮಾತನಾಡಲಿಲ್ಲವೇಕೆ ಎಂಬ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದು, ಪೂರ್ಣ ಬೆಂಬಲವನ್ನು ಹೊಂದಿದ್ದೇವೆ. ನಾವು ಯಾರಿಗೂ ಹೆದರುವುದಿಲ್ಲ. ಮಾರ್ಷಲ್‌ಗಳನ್ನು ಬಳಸಿಕೊಂಡು, ಸದನವನ್ನು ಸುಗಮವಾಗಿ ನಡೆಸುವ ಸಾಮರ್ಥ್ಯ ಹೊಂದಿದ್ದೆವು. ಆದರೆ, ಆ ರೀತಿ ಮಾಡಲು ನಾವು ಸಿದ್ಧರಿರಲಿಲ್ಲ. ಹೀಗಾಗಿ ಸಮಸ್ಯೆಗೆ ವಿವೇಚನೆ ಬಳಸಿ ಪರಿಹಾರ ಕಂಡುಕೊಂಡೆವು’ ಎಂದು ವಿವರಿಸಿದ್ದಾರೆ.

‘ಈ ಕಾರಣದಿಂದಲೇ ಪ್ರಧಾನಿ ಅವರು ಲೋಕಸಭೆಗೆ ಗೈರಾದರು. ರಾಜ್ಯಸಭೆಯಲ್ಲಿ ಅವರು ಸುದೀರ್ಘವಾಗಿ ಮಾತನಾಡಿದರು. ಸರ್ಕಾರವು ಅಗತ್ಯ ಬೆಂಬಲ ಹೊಂದಿದ್ದು, ವಂದನಾ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಿದ್ದೇವೆ’ ಎಂದು ರಿಜಿಜು ಈ ವೇಳೆ ಉಲ್ಲೇಖಿಸಿದರು.

ಸುದ್ದಿಯಲ್ಲಿರಲು ವಾಕ್ಚಾತುರ್ಯ ಬಳಕೆ: ‘ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸದಾ ಸುದ್ದಿಯಲ್ಲಿರಲು ತಮ್ಮ ವಾಕ್ಚಾತುರ್ಯ ಬಳಸುತ್ತಿದ್ದಾರೆ. ಇದು ಯಾವುದೇ ಪರಿಣಾಮ ಬೀರುವುದಿಲ್ಲ ಎಂಬುದನ್ನು ಸಾಬೀತುಪಡಿಸಿದೆ’ ಎಂದು ರಿಜಿಜು ಆರೋಪಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ದೇಶವು ಸಾಕಷ್ಟು ಅಭಿವೃದ್ಧಿ ಕಂಡಿದೆ. ಜನರು ಕಾಂಗ್ರೆಸ್ ಮೇಲೆ ಎಂದಿಗೂ ಭರವಸೆ ಇಡಲು ಸಾಧ್ಯವಿಲ್ಲ. 60 ವರ್ಷಗಳ ಆಡಳಿತದಲ್ಲಿ ದೇಶವನ್ನು ಅವರು ಸಾಕಷ್ಟು ದುರ್ಬಲಗೊಳಿಸಿದ್ದಾರೆ’ ಎಂದು ಹೇಳಿದ್ದಾರೆ.

ಸದನದ ಘನತೆ ಕಾಪಾಡಿ: ಓಂ ಬಿರ್ಲಾ

ಓಂ ಬಿರ್ಲಾ ಅವರನ್ನು ಬಿಹಾರ ವಿಧಾನಸಭೆ ಅಧ್ಯಕ್ಷ ಪ್ರೇಮ್ ಕುಮಾರ್ ಗೌರವಿಸಿದರು – ಪಿಟಿಐ ಚಿತ್ರ

ಚರ್ಚೆ ಮತ್ತು ಸಂವಾದ ಪ್ರಜಾಪ್ರಭುತ್ವದ ಭಾಗ. ಯಾವುದೇ ಹಂತದಲ್ಲೇ ಆಗಲಿ ಸದನದ ಘನತೆಯನ್ನು ಕಾಪಾಡಿಕೊಳ್ಳಬೇಕು ಎಂದು ಲೋಕಸಭೆ ಅಧ್ಯಕ್ಷ ಓಂ ಬಿರ್ಲಾ ಅವರು ಶುಕ್ರವಾರ ಅಭಿಪ್ರಾಯಪಟ್ಟಿದ್ದಾರೆ.

ಬಿಹಾರ ವಿಧಾನಸಭೆಯ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಕಾಗದರಹಿತ ಶಾಸಕಾಂಗ ಪ್ರಕ್ರಿಯೆಗಳ ರಾಷ್ಟ್ರೀಯ ‘ಇ-ವಿಧಾನ್’ ಆ್ಯಪ್‌ಗೆ (ನೇವಾ) ಚಾಲನೆ ನೀಡಿ ಅವರು ಮಾತನಾಡಿದರು.

‘ಜವಾಬ್ದಾರಿಯುತ ಜನಪ್ರತಿನಿಧಿ ಬಲಿಷ್ಠ ಪ್ರಜಾಪ್ರಭುತ್ವದ ಅಡಿಪಾಯ ಇದ್ದಂತೆ. ಶಾಸನಸಭೆಗಳ ಕಾರ್ಯವಿಧಾನದ ನಿಯಮಗಳನ್ನು ಅವರು ಅರಿತುಕೊಳ್ಳಬೇಕಿದೆ’ ಎಂದು ಹೇಳಿದರು.

‘ಶಾಸನಸಭೆಗಳ ಸಭ್ಯತೆ ಕುಸಿಯುತ್ತಿರುವುದನ್ನು ಪ್ರಸ್ತುತ ದಿನಮಾನದಲ್ಲಿ ಕಾಣುತ್ತಿದ್ದೇವೆ. ಚರ್ಚೆ ಮತ್ತು ಸಂವಾದದ ಮೂಲಕ ಅಭಿಪ್ರಾಯ ಮಂಡಿಸುವ ಬದಲು ಘೋಷಣೆ ಕೂಗುವುದು, ಅಡ್ಡಿಪಡಿಸುವುದು, ಸಭಾಧ್ಯಕ್ಷರ ಪೀಠದ ಮುಂದಿನ ಭಾಗದತ್ತ ನುಗ್ಗುವುದು ಸರಿಯಲ್ಲ. ಇಂತಹ ನಡವಳಿಕೆ ನಿಲ್ಲಿಸಬೇಕು’ ಎಂದು ಓಂ ಬಿರ್ಲಾ ಮನವಿ ಮಾಡಿದರು.

ನಿತೀಶ್, ತೇಜಸ್ವಿ ಗೈರು: ರಾಜ್ಯಸಭೆ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಮುಖ್ಯಮಂತ್ರಿ ನಿತೀಶ್ ಕುಮಾರ್, ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಗೈರಾಗಿದ್ದರು.

‘ಯಾವುದೇ ಪಂಥ ಕಟ್ಟದ ಜಿಎಸ್ಸೆಸ್’

ಪ್ರಜಾವಾಣಿ ವಾರ್ತೆ

ಎಚ್.ಎಸ್. ಶಿವಪ್ರಕಾಶ್, ಕೃಷ್ಣಮೂರ್ತಿ ಹನೂರು ಹಾಗೂ ವಿನಯಾ ಒಕ್ಕುಂದ ಅವರಿಗೆ ‘ಡಾ.ಜಿಎಸ್ಸೆಸ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಜಿ.ಎಸ್. ಶಿವರುದ್ರಪ್ಪ ಅವರ ಪುತ್ರಿ ಜಿ.ಎಸ್. ಜಯಂತಿ, ಎಸ್. ನಟರಾಜ ಬೂದಾಳು, ಬಸವರಾಜ ಕಲ್ಗುಡಿ, ಕೆ.ಮರುಳಸಿದ್ದಪ್ಪ, ಮೋಹನ್ ಕುಮಾರ್ ಕೊಂಡಜ್ಜಿ, ಕೆ.ವಿ. ನಾರಾಯಣ, ವೂಡೇ ಪಿ. ಕೃಷ್ಣ, ಎಂ.ಎಸ್. ಆಶಾದೇವಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದ ಜಿ.ಎಸ್. ಶಿವರುದ್ರಪ್ಪ ಅವರು ಯಾವುದೇ ಪಂಥ ಕಟ್ಟದ ಪರಿಣಾಮ, ಅವರ ಬಳಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಸ್ವತಂತ್ರ ಯೋಚನಾ ಲಹರಿಯೊಂದಿಗೆ ಭಿನ್ನ ಮಾರ್ಗ ಅನುಸರಿಸಿದರು’ ಎಂದು ವಿಮರ್ಶಕ ಕೆ.ವಿ. ನಾರಾಯಣ ಅಭಿಪ್ರಾಯಪಟ್ಟರು.

ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ, ರಾಷ್ಟ್ರಕವಿ ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಳಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿ.ಎಸ್. ಶಿವರುದ್ರಪ್ಪ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಕವಿ ಎಚ್.ಎಸ್. ಶಿವಪ್ರಕಾಶ್, ವಿಮರ್ಶಕ ಕೃಷ್ಣಮೂರ್ತಿ ಹನೂರು ಹಾಗೂ ಲೇಖಕಿ ವಿನಯಾ ಒಕ್ಕುಂದ ಅವರಿಗೆ ‘ಡಾ.ಜಿಎಸ್ಸೆಸ್ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ಶಿವರುದ್ರಪ್ಪ ಅವರು ವೈಯಕ್ತಿಕ ಸಾಧನೆಯ ಜತೆಗೆ, ಕವಿ ಮತ್ತು ವಿಮರ್ಶಕರಾಗಿ ಕನ್ನಡ ಅಧ್ಯಯನ ಕೇಂದ್ರವು ಸಾಂಸ್ಕೃತಿಕವಾಗಿ ಬೆಳೆಯಲು ದಾರಿ ಮಾಡಿಕೊಟ್ಟರು. ಯಾವ ಕನ್ನಡ ಪ್ರಾಧ್ಯಾಪಕರು ಅವರ ರೀತಿ ಕೆಲಸ ಮಾಡಿಲ್ಲ. ಅವರ ವಿದ್ಯಾರ್ಥಿಯಾಗಿದ್ದ ನನಗೆ, ಮುಂದೆ ಅವರೊಂದಿಗೆ ಕೆಲಸ ಮಾಡುವ ಅವಕಾಶ ದೊರೆಯಿತು. ಅಕಾಡೆಮಿಕ್ ಮತ್ತು ವೈಯಕ್ತಿಕ ಬದುಕಿನಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು’ ಎಂದು ಸ್ಮರಿಸಿಕೊಂಡರು.

ವಿಮರ್ಶಕ ಬಸವರಾಜ ಕಲ್ಗುಡಿ, ‘ಜಿಎಸ್ಸೆಸ್ ಅವರು ಪಾಶ್ಚಿಮಾತ್ಯ ವಿಮರ್ಶೆಯ ಅನೇಕ ಕಲ್ಪನೆಯನ್ನು ಕನ್ನಡಕ್ಕೆ ಪರಿಚಯಿಸಿದರು. ದಕ್ಷಿಣದಲ್ಲಿ ಕುವೆಂಪು ಅವರ ಪ್ರಭಾವದಿಂದ ತಪ್ಪಿಸಿಕೊಂಡು, ಭಿನ್ನ ಮಾರ್ಗ ಅನುಸರಿಸಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಮರ್ಶಕಿ ಎಂ.ಎಸ್. ಆಶಾದೇವಿ ಅವರು ಅಭಿನಂದನಾ ನುಡಿಗಳನ್ನಾಡಿದರು. ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅವರು ರಚಿಸಿದ ‘ನಮ್ಮ ಮೇಷ್ಟ್ರು ಜಿಎಸ್ಸೆಸ್’ ಪುಸ್ತಕವನ್ನು ಇದೇ ವೇಳೆ ಜನಾರ್ಪಣೆ ಮಾಡಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ ಅಧ್ಯಕ್ಷ ಮೋಹನ್ ಕುಮಾರ್ ಕೊಂಡಜ್ಜಿ, ನಿವೃತ್ತ ಪ್ರಾಧ್ಯಾಪಕ ನಟರಾಜ ಬೂದಾಳು ಉಪಸ್ಥಿತರಿದ್ದರು.

‘ಪಪ್ಪು ಯಾದವ್ ಬಂಧನ ಸೇಡಿನ ಕೃತ್ಯ’

ನವದೆಹಲಿ (ಪಿಟಿಐ): ಬಿಹಾರ ಸಂಸದ ಪಪ್ಪು ಯಾದವ್ ಅವರ ಬಂಧನವು ರಾಜಕೀಯ ಸೇಡಿನ ಕೃತ್ಯವಾಗಿದ್ದು, ಸರ್ಕಾರದಿಂದ ಉತ್ತರದಾಯಿತ್ವ ಬಯಸುವ ಪ್ರತಿಯೊಂದು ಧ್ವನಿಯನ್ನು ಬೆದರಿಸುವ ಮತ್ತು ಅಡಗಿಸುವ ಉದ್ದೇಶದ್ದಾಗಿದೆ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಪಪ್ಪು ನ್ಯಾಯಾಂಗ ವಶಕ್ಕೆ: ಸಂಸದ ಪಪ್ಪು ಯಾದವ್ ಅವರನ್ನು ಪಟ್ನಾ ನ್ಯಾಯಾಲಯವು ಎರಡು ದಿನಗಳ ಅವಧಿಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿತು.

ಚಿರತೆಗೆ ಎಂಆರ್‌ಐ ಸ್ಕ್ಯಾನಿಂಗ್!

ಎರಡನೇ ಪುಟದಿಂದ...

ಚಿರತೆಯ ಆರೋಗ್ಯ ಸ್ಥಿರವಾಗಿದ್ದು, ಹುಲಿ- ಸಿಂಹಧಾಮದ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದು ವರಿಸಲಿದ್ದೇವೆ’ ಎಂದು ಅವರು ಮಾಹಿತಿ ನೀಡಿದರು.

‘ಚಿರತೆಗೆ ಎಂಆರ್‌ಐ ಸ್ಕ್ಯಾನ್ ಮಾಡಲು ಬೇರೆ ಆಸ್ಪತ್ರೆಯವರು ಒಪ್ಪಲಿಲ್ಲ. ಕೊನೆಗೆ ನಂಜಪ್ಪ ಆಸ್ಪತ್ರೆ ಯವರನ್ನು ಸಂಪರ್ಕಿಸಿದೆವು. ಸ್ಕ್ಯಾನ್ ಮಾಡಿದ್ದಕ್ಕೆ ಆಸ್ಪತ್ರೆಯ ಮುಖ್ಯಸ್ಥರು ಶುಲ್ಕ ಕೂಡ ನಿರಾಕರಿಸಿದರು’ ಎಂದು ಹುಲಿ-ಸಿಂಹ ಧಾಮದ ಸಿಬ್ಬಂದಿಯೊಬ್ಬರು ತಿಳಿಸಿದರು.

ಮುಕೇಶ್ ಅಂಬಾನಿ ಅವರ ಪುತ್ರನ ಒಡೆತನದ ಖಾಸಗಿ ಮೃಗಾಲಯದಲ್ಲಿ ಪ್ರಾಣಿಗಳಿಗೆ ಎಂಆರ್‌ಐ ಸ್ಕ್ಯಾನಿಂಗ್‌ನಂತಹ ಅತ್ಯಾಧುನಿಕ ಸೌಲಭ್ಯಗಳಿವೆ. ‘ಭದ್ರ’ ಚಿರತೆಯು ಮನುಷ್ಯರ ಚಿಕಿತ್ಸೆಗಾಗಿ ಇರುವ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್‌ಗೆ ಒಳಗಾದ ಮೊದಲ ವನ್ಯಜೀವಿ ಎಂದು ಅವರು ಹೇಳಿದರು.

> **ಚಿರತೆಯ ಎಂಆರ್‌ಐ ಸ್ಕ್ಯಾನಿಂಗ್‌ಗೆ ಮೃಗಾಲಯದ ವೈದ್ಯರು ಕೇಳುತ್ತಿದ್ದಂತೆಯೇ ಒಪ್ಪಿಕೊಂಡೆವು. ತಡರಾತ್ರಿ ಸುರಕ್ಷಿತ ಅವಧಿಯಾಗಿದ್ದರಿಂದ ರೋಗಿಗಳಿಗೂ ಗೊತ್ತಾಗಲಿಲ್ಲ**
>
> **ಡಾ.ಅವಿನಾಶ್**
>
> ಮುಖ್ಯಸ್ಥರು, ನಂಜಪ್ಪ ಆಸ್ಪತ್ರೆ

ರಾಜಕೀಯ ಪ್ರೇರಿತ ದೂರು: ಸೋನಿಯಾ

ನವದೆಹಲಿ (ಪಿಟಿಐ): ಭಾರತೀಯ ಪೌರತ್ವ ಪಡೆಯುವ ಮೂರು ವರ್ಷಗಳ ಮುನ್ನವೇ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿತ್ತು ಎಂಬ ದೂರು ರಾಜಕೀಯ ಪ್ರೇರಿತವಾದುದು ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ದೆಹಲಿ ನ್ಯಾಯಾಲಯಕ್ಕೆ ಶನಿವಾರ ಹೇಳಿಕೆ ಸಲ್ಲಿಸಿದ್ದಾರೆ.

ಈ ಆರೋಪದ ಬಗ್ಗೆ ತನಿಖೆ ನಡೆಸಲು ನಿರಾಕರಿಸಿದ ಮ್ಯಾಜಿಸ್ಟ್ರೇಟ್ ಆದೇಶವನ್ನು ಪ್ರಶ್ನಿಸಿ 2025ರ ಸೆ.11ರಂದು ಸಲ್ಲಿಸಲಾಗಿದ್ದ ಪರಿಷ್ಕರಣಾ ಅರ್ಜಿಯ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಧೀಶ ವಿಶಾಲ್ ಗೊಗನೆ ಅವರ ಮುಂದೆ ಈ ಹೇಳಿಕೆ ಸಲ್ಲಿಸಲಾಗಿದೆ.

ಸೋನಿಯಾ ಗಾಂಧಿ ಅವರ ಪರ ವಕೀಲರ ತಂಡವು ಹೇಳಿಕೆ ಸಲ್ಲಿಸಿದ ಬಳಿಕ, ಫೆ.21ರಂದು ಮುಂದಿನ ವಿಚಾರಣೆ ನಡೆಸುವುದಾಗಿ ನ್ಯಾಯಾಲಯವು ಪ್ರಕಟಿಸಿತು.

ಅಂಬೇಡ್ಕರ್ ವಾದವನ್ನು ಜೀವಂತವಾಗಿರಿಸಬೇಕು: ಸಚಿವ ಎಚ್.ಸಿ. ಮಹದೇವಪ್ಪ

‘ಕೋಮುವಾದ, ಜಾತೀಯತೆ ದೇಶಕ್ಕೆ ಮಾರಕ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಕೋಮುವಾದ ಸಂವಿಧಾನಕ್ಕೆ ಮಾರಕ’
- ‘ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು’

ಶೋಷಿತ ಸಮುದಾಯಗಳ ವಿಮೋಚನಾ ದಿನ ಮತ್ತು ರಮಾಬಾಯಿ ಅಂಬೇಡ್ಕರ್ ಅವರ 128ನೇ ವರ್ಷದ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ (ಎಡದಿಂದ) ಮಾವಳ್ಳಿ ಶಂಕರ್, ಶೀಲಾ ಪವಾರ್, ಕಾಂತಾ ಬಾಯಿ, ಇಂದಿರಾ ಕೃಷ್ಣಪ್ಪ ಮತ್ತು ಪಲ್ಲವಿ ಜಿ. ಅವರು ರಮಾಬಾಯಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸಮಾಜದಲ್ಲಿ ತಾಂಡವವಾಡುತ್ತಿರುವ ಕೋಮುವಾದ, ಜಾತೀಯತೆ ಹಾಗೂ ಮತೀಯವಾದವನ್ನು ಅಂಬೇಡ್ಕರ್ ವಾದ ಎಂಬ ಹೋರಾಟದ ಮೂಲಕ ಹಿಮ್ಮೆಟ್ಟಿಸಬೇಕು’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ರಮಾಬಾಯಿ ಅಂಬೇಡ್ಕರ್ ಅವರ 128ನೇ ಜನ್ಮದಿನದ ಅಂಗವಾಗಿ ಕರ್ನಾಟಕ ದಲಿತ ಮಹಿಳಾ ಒಕ್ಕೂಟ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಶನಿವಾರ ಆಯೋಜಿಸಿದ್ದ ಶೋಷಿತ ಸಮುದಾಯಗಳ ವಿಮೋಚನಾ ದಿನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿರುವ ಬಹುತ್ವ ಸಮುದಾಯಗಳ ಹಿತರಕ್ಷಣೆಯನ್ನು ಬಯಸಿದ್ದ ರಮಾಬಾಯಿ ಅಂಬೇಡ್ಕರ್ ಅವರಂತಹ ಸಮಾಜಕ್ಕೆ ಸೇರಿದ ನಾವೆಲ್ಲರೂ ಒಗ್ಗಟ್ಟಾಗಿರಬೇಕು. ರಮಾಬಾಯಿ ಅವರ ಆದರ್ಶಗಳನ್ನು ಮನೆ–ಮನೆಗೂ ತಲುಪಿಸುವ ಕೆಲಸ ಮಾಡಬೇಕು’ ಎಂದು ಕರೆ ನೀಡಿದರು.

ಜನರ ಬದುಕನ್ನು ಹಸನಾಗಿಸುವಲ್ಲಿ ಬಹುದೊಡ್ಡ ಪಾತ್ರ ವಹಿಸಿದ ದೇಶದ ಸಂವಿಧಾನ ಮತ್ತು ಇಲ್ಲಿನ ಶೋಷಿತರ ಬದುಕಿನ ಏಳಿಗೆಗಾಗಿ ಡಾ.ಬಿ.ಆರ್. ಅಂಬೇಡ್ಕರ್ ಮಾಡಿದ ಅಧ್ಯಯನ ಹಾಗೂ ಪ್ರಯತ್ನಗಳ ಹಿಂದೆ ರಮಾಬಾಯಿ ಅವರು ಇದ್ದರು’ ಎಂದು ಸ್ಮರಿಸಿದರು.

ರಾಜಸ್ಥಾನದ ಹೈಕೋರ್ಟ್ ಆವರಣದಲ್ಲಿರುವ ಮನು ಪ್ರತಿಮೆಗೆ ಮಸಿ ಬಳಿದಿದ್ದ ಮಹಾರಾಷ್ಟ್ರದ ಕಾಂತಾಬಾಯಿ ಹಾಗೂ ಶೀಲಾ ಪವಾರ್ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ, ಎಸ್‌ಸಿ ಎಸ್‌ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಉಪಸ್ಥಿತರಿದ್ದರು.

ರಾಹುಲ್ ವಿರುದ್ಧ ಬಿಟ್ಟೂ ವಾಗ್ದಾಳಿ

ಚಂಡೀಗಡ (ಪಿಟಿಐ): ತಮ್ಮನ್ನು ‘ದೇಶದ್ರೋಹಿ’ ಎಂದು ಟೀಕಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ರೈಲ್ವೆ ಖಾತೆಯ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟೂ ಅವರು ವಾಗ್ದಾಳಿ ಮುಂದುವರಿಸಿದ್ದಾರೆ.

‘ರಾಹುಲ್ ಗಾಂಧಿ ಅವರು ಬುಧವಾರ ಸಂಸತ್ತಿನ ಮಕರ ದ್ವಾರದ ಮೆಟ್ಟಿಲುಗಳ ಬಳಿ ನನ್ನತ್ತ ಕೈ ತೋರಿಸಿ, ಕೋಪದಿಂದ ಧಾವಿಸಿ ಬಂದರು. ಅವರ ಒಂದು ತೋಳನ್ನು ಕಾಂಗ್ರೆಸ್ ಮುಖಂಡ ಕೆ.ಸಿ. ವೇಣುಗೋಪಾಲ್, ಮತ್ತೊಂದು ತೋಳನ್ನು ಗುರುದಾಸಪುರ ಸಂಸದ ಸುಖಜಿಂದರ್ ರಾಂಧವ ಹಿಡಿದುಕೊಂಡಿದ್ದರು. ‘ಅವರ ಉದ್ದೇಶ ಏನಿತ್ತೋ, ದೇವರಿಗೆ ಮಾತ್ರ ಗೊತ್ತು’ ಎಂದರು. ‘ದೇಶದ್ರೋಹಿ’ ಹೇಳಿಕೆಯ ಮೂಲಕ ರಾಹುಲ್ ತಮ್ಮ ಗೌರವವನ್ನು ಕಡಿಮೆ ಮಾಡಿಕೊಂಡಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಬಿಟ್ಟೂ, ‘ರಾಜಕೀಯದಲ್ಲಿ ನಾವು ಸಿದ್ಧಾಂತದ ಬಗ್ಗೆ ಮಾತನಾಡುತ್ತೇವೆ, ಆದರೆ, ವೈಯಕ್ತಿಕ ದಾಳಿ ಮಾಡುವುದಿಲ್ಲ’ ಎಂದರು.

ಚಿ: ನಾರಾಯಣ ನಾಯಕ್

ನಾರಾಯಣ ಮೇಷ್ಟ್ರ ಸ್ಕಾಲರ್‌ಶಿಪ್ ಯಾತ್ರೆ

ಅವಕಾಶ ವಂಚಿತ ಮಕ್ಕಳ ಪಾಲಿಗೆ ನಾರಾಯಣ ಮೇಷ್ಟ್ರು ಹೊಸ ಬೆಳಕು. ಬೆಳಿಗ್ಗೆಯಿಂದ ರಾತ್ರಿಯವರೆಗೂ ಬಡ ವಿದ್ಯಾರ್ಥಿಗಳ ಹಿತಕ್ಕಾಗಿಯೇ ಈ ಅಜ್ಜ ಕೆಲಸ ಮಾಡುತ್ತಾರೆ. ಇವರಿಂದ ಉಪಕೃತರಾದವರ ಸಂಖ್ಯೆ ಸಾವಿರಾರು. ಇಂತಹ ಉದಾತ್ತ ವ್ಯಕ್ತಿತ್ವ ಹೊಂದಿರುವ ಇವರ ನಿಸ್ವಾರ್ಥ ಸೇವೆಯ ಕಥನವಿದು.

• ಗಣೇಶ ಚಂದನಶಿವ

ಎಂಬತ್ತೂರು ವರ್ಷದ ನಾರಾಯಣ ಮೇಷ್ಟ್ರು ಮನೆ ಮುಂದೆ ನಿಂತಿದ್ದ ಬೈಕ್ ಅನ್ನು ಬಟ್ಟೆಯಿಂದ ಸ್ವಚ್ಛ ಮಾಡಿದರು. ಕೊರಳಿಗೆ ಬ್ಯಾಗ್ ಏರಿಸಿಕೊಂಡರು. ತಲೆಗೆ ಹೆಲ್ಮೆಟ್ ಧರಿಸಿ ಬೈಕ್ ಸ್ಟಾರ್ಟ್ ಮಾಡಿದರು. ಇವರ ಬೈಕ್ ಹೋಗಿ ನಿಂತದ್ದು ಕೊಯಿಲ ಸರ್ಕಾರಿ ಪ್ರೌಢಶಾಲೆ ಮುಂದೆ.

ಈ ಅಜ್ಜ ಬರುತ್ತಿದ್ದಂತೆಯೇ ಅಲ್ಲಿಯ ಶಿಕ್ಷಕರು ಅಕ್ಕರೆಯಿಂದ ಸ್ವಾಗತಿಸಿದರು. 'ಸ್ವಲ್ಪ ಹೊತ್ತು ಮಕ್ಕಳೊಂದಿಗೆ ಸಂವಾದ ನಡೆಸಲು ಅವಕಾಶ ಕೊಡುತ್ತೀರಾ' ಎಂಬ ವಿನಮ್ರ ಮನವಿಗೆ, 'ಅದಕ್ಕೇನಂತೆ ಸರ್, ಬನ್ನಿ...' ಎನ್ನುತ್ತ ತರಗತಿ ಕೊಠಡಿಗೆ ಕರೆದೊಯ್ದರು.

'ಈ ಸರ್ ಬಗ್ಗೆ ನಿಮ್ಮಲ್ಲಿ ಯಾರಿಗಾದರೂ ಗೊತ್ತಿಲ್ಲದಿದ್ದರೆ ಹೇಳಿ, ಪರಿಚಯಿಸುತ್ತೇನೆ' ಎಂದರು ಶಿಕ್ಷಕಿ. 'ನಾರಾಯಣ ಮೇಷ್ಟ್ರು...ನಾರಾಯಣ ಮೇಷ್ಟ್ರು...' ಎಂಬ ಏಕಕಂಠದ ಉತ್ತರ ವಿದ್ಯಾರ್ಥಿಗಳಿಂದ ಹೊರಹೊಮ್ಮಿತು. ತರಗತಿ ಕೊಠಡಿ ಪ್ರವೇಶಿಸಿದ ನಾರಾಯಣ ಮೇಷ್ಟ್ರು, ಮೆಟ್ರಿಕ್ ಪೂರ್ವ–ಮೆಟ್ರಿಕ್ ನಂತರದ ವ್ಯಾಸಂಗಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಾಗೂ ಖಾಸಗಿ ಸಂಸ್ಥೆಗಳಿಂದ ಸಿಗುವ ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿ ನೀಡಲು ಆರಂಭಿಸಿದರು. ಯಾರೆಲ್ಲ ಅರ್ಹರು, ಯಾವೆಲ್ಲ ದಾಖಲೆಗಳು ಬೇಕು ಎಂಬುದನ್ನು ಮನದಟ್ಟು ಮಾಡಿದರು. ಬಳಿಕ ಎಲ್ಲರಿಗೂ ವಂದಿಸಿ, ಖುಷಿಯಿಂದ ಹೊರಟರು.

ಬೈಕ್ ಏರಿ ಅವರು ಅಲ್ಲಿಂದ ಸಾಗಿದ್ದು ಸಿದ್ಧಕಟ್ಟೆ ಚರ್ಚ್‌ನ ಅಂಗನವಾಡಿ ಕೇಂದ್ರಕ್ಕೆ. 'ನಮಸ್ತೇ.. ನಮಸ್ತೇ...' ಎಂಬ ಸ್ವಾಗತ ಪುಟಾಣಿಗಳಿಂದ ದೊರೆಯಿತು. ಆ ಮಕ್ಕಳೊಂದಿಗೆ ಮಕ್ಕಳಾಗಿ ಸ್ವಲ್ಪ ಹೊತ್ತು ಕಳೆದ ಈ ಮೇಷ್ಟ್ರು, ತಮ್ಮ ಕೊರಳಲ್ಲಿದ್ದ ಬ್ಯಾಗ್‌ನಿಂದ ಪಾಪಿನ್ಸ್ ತೆಗೆದು ಮಕ್ಕಳ ಕೈಗಿತ್ತರು. 'ನಿಮ್ಮ ಟೀಚರ್ ಒಂದು ತೆಗೆದು ನಿಮ್ಮ ಬಾಯಿಗೆ ಹಾಕುತ್ತಾರೆ, ಉಳಿದದ್ದನ್ನು ಮನೆಗೆ ಒಯ್ದು ಅಮ್ಮನಿಂದ ತೆಗೆಸಿಕೊಂಡು ತಿನ್ನಿ' ಎಂದು ಮಕ್ಕಳಿಗೆ ಪ್ರೀತಿಯಿಂದ ಹೇಳಿದರು. ಅದಕ್ಕೆ ತಲೆಯಾಡಿಸಿ ಸಮ್ಮತಿ ಸೂಚಿಸಿದ ಮಕ್ಕಳು, ಸಾಲಾಗಿ ಅಂಗನವಾಡಿ ಶಿಕ್ಷಕಿ ಬಳಿ ಬಂದು ಪಾಪಿನ್ಸ್ ಮೆಲ್ಲುತ್ತ ಸಂಭ್ರಮಿಸಲಾರಂಭಿಸಿದರು. ನಾರಾಯಣ ಮೇಷ್ಟ್ರು ಅಲ್ಲಿಂದ ನಿರ್ಗಮಿಸಿದರು. ಮುಂದಿನ ಪಯಣವೂ ಶಿಕ್ಷಣ ದೇಗುಲಕ್ಕೆ...

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ಸಿದ್ಧಕಟ್ಟೆ ಬಳಿಯ ಕರ್ಪೆಯ ಕೆ. ನಾರಾಯಣ ನಾಯಕ್ ಅವರ ದಿನಚರಿ ಸದಾ ಲವಲವಿಕೆಯಿಂದ ಕೂಡಿರುತ್ತದೆ. ಬೆಳಿಗ್ಗೆ ಮನೆಯಿಂದ ಹೊರಟರೆ ವಾಪಸ್ಸಾಗುವುದು ರಾತ್ರಿಯೇ. ಇಡೀ ದಿನ ಸಮಾಜದ ಒಳಿತಿಗಾಗಿಯೇ ಮೀಸಲು.

ಸ್ವಂತ ಹಣ ಖರ್ಚು ಮಾಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುತ್ತಾರೆ. ವಿದ್ಯಾರ್ಥಿ ವೇತನದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುತ್ತಾರೆ. ಮೊದಲು ಅರ್ಜಿಯನ್ನು ತಾವೇ ಭರ್ತಿ ಮಾಡಿ ಸಲ್ಲಿಸುತ್ತಿದ್ದರು. ಈಗ ಎಲ್ಲವೂ ಆನ್‌ಲೈನ್ ಆಗಿದ್ದರಿಂದ ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದಾರೆ.

ಇವರು ಆರಂಭದಲ್ಲಿ ಪ್ರಾಥಮಿಕ, ನಂತರ ಪ್ರೌಢ ಶಾಲಾ ಶಿಕ್ಷಕ–ಪ್ರಭಾರಿ ಮುಖ್ಯಶಿಕ್ಷಕರಾಗಿದ್ದರು. ಸ್ಕೂಲ್ ಇನ್‌ಸ್ಪೆಕ್ಟರ್ ಆಗಿ ನಿವೃತ್ತರಾಗಿದ್ದಾರೆ. ನಿವೃತ್ತಿಯ ಜೀವನವನ್ನು ಸಮಾಜ ಸೇವೆಗೆ ಮೀಸಲಿಟ್ಟಿದ್ದಾರೆ. ತಮ್ಮ ಪಿಂಚಣಿಯಲ್ಲಿ ಅರ್ಧದಷ್ಟು ಹಣವನ್ನು ಬಡಮಕ್ಕಳು–ಅಶಕ್ತರಿಗೆ ವಿನಿಯೋಗಿಸುತ್ತಾರೆ.

> “ಸುಮಾರು 50 ವರ್ಷಗಳ ಹಿಂದಿನ ಮಾತು. ನಾರಾಯಣ ನಾಯಕ್ ಅವರು ಕೋಡಪದವು ಶಾಲೆಯಲ್ಲಿ ಶಿಕ್ಷಕರಾಗಿದ್ದ ವೇಳೆ, ಸ್ವಂತ ಆಸಕ್ತಿಯಿಂದ ವಯಸ್ಕರಿಗೆ ರಾತ್ರಿ ಶಾಲೆ ನಡೆಸುತ್ತಿದ್ದರು. ಅಲ್ಲಿಗೆ ಬರುವವರಿಗೆ ಸ್ವತಃ ಉಪ್ಪಿಟ್ಟು ತಯಾರಿಸಿ ನೀಡುತ್ತಿದ್ದರು. ಅವರು ಮಾಡುತ್ತಿರುವ ಕೆಲಸ ಅದ್ಭುತ
>
> **ಶ್ರೀಪ್ರಕಾಶ್ ಕುಕ್ಕಿಲ, ನಿವೃತ್ತ ಯೋಧ**

ಮನೆಯಲ್ಲಿ ಆತಿಥ್ಯ

ಪ್ರಭಾರ ಮುಖ್ಯ ಶಿಕ್ಷಕರಾಗಿದ್ದಾಗ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅವರ ಶಾಲೆ ಜಿಲ್ಲೆಗೆ ಅಗ್ರಸ್ಥಾನದಲ್ಲಿ ಇರುತ್ತಿತ್ತು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ತಮ್ಮ ಮನೆಗೆ ಕರೆತಂದು ಒಂದು ದಿನ ಅವರನ್ನು ಮನೆಯಲ್ಲಿ ಇಟ್ಟುಕೊಂಡು ಆತಿಥ್ಯ ನೀಡುತ್ತಿದ್ದರು.

'ಆ ಕಾಲದಲ್ಲಿ ಮನೆಗಳಲ್ಲಿ ಟಿವಿ ಸಹ ಇರುತ್ತಿರಲಿಲ್ಲ. ಬಾಡಿಗೆ ಟಿವಿ–ವಿಸಿಆರ್ ತಂದು, ಸಿನಿಮಾ ತೋರಿಸುತ್ತಿದ್ದೆ. ಹೀಗೆ ಮನೆಗೆ ಬಂದಿದ್ದ ಒಂದು ಹುಡುಗಿ ಬಿದ್ದು ಕೈಮುರಿದುಕೊಂಡಳು. ಚಿಕಿತ್ಸೆ ಕೊಡಿಸುವ ಜೊತೆಗೆ ಆಕೆಗೆ ಪಿಯುಸಿ, ಡಿ.ಎಡ್ ಓದಿಸಿದೆ. ಆಕೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿದ್ದಾಳೆ. ಆಕೆಯ ಮಗ ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್ ಓದುತ್ತಿದ್ದಾನೆ. ಆಕೆಗೆ ನೌಕರಿ ಸಿಕ್ಕ ಬಳಿಕ ಹಣ ಮರಳಿಸಲು ಬಂದಿದ್ದಳು. ಆದರೆ, ನಾನು ತೆಗೆದುಕೊಳ್ಳಲಿಲ್ಲ' ಎಂದು ಮೇಷ್ಟ್ರು ಹೇಳಿದರು.

ವಿದ್ಯಾರ್ಥಿ ವೇತನಗಳ ಬಗ್ಗೆ ನಿಮ್ಮಲ್ಲಿ ಯಾರಿಗಾದ್ರೂ ಮಾಹಿತಿ ಇದ್ಯಾ?... ಚಿತ್ರಗಳು: ಫಕ್ರುದ್ದೀನ್ ಎಚ್

'ವಿದ್ಯಾರ್ಥಿ ವೇತನದ ಮಾಹಿತಿ ನೀಡಲು ಕಾಲೇಜುಗಳಿಗೆ ತೆರಳಿದ್ದಾಗ ಅಲ್ಲಿಯ ಮಕ್ಕಳ ಪಾಲಕರ ಬಗ್ಗೆ ತಿಳಿದುಕೊಂಡೆ. 400ಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರಿಗೆ ಕಾರ್ಮಿಕ ಕಲ್ಯಾಣ ಮಂಡಳಿಯ ಗುರುತಿನ ಚೀಟಿ ಮಾಡಿಸಿ ಕೊಟ್ಟಿದ್ದೇನೆ. ಅರ್ಹರು ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ನೆರವಾಗುತ್ತಿದ್ದೇನೆ. ಇದಕ್ಕೆ ಯಾರಿಂದಲೂ ಚಿಕ್ಕಾಸು ಪಡೆಯುವುದಿಲ್ಲ' ಎನ್ನುವುದು ಇವರ ಮಾತು.

ಸಾಮಾನ್ಯವಾಗಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ನವೆಂಬರ್ ವೇಳೆಗೆ ಕೊನೆಗೊಳ್ಳುತ್ತದೆ. ಆ ನಂತರ ಇವರ ಸವಾರಿ ಅಂಗನವಾಡಿ ಮಕ್ಕಳ ಬಳಿಗೆ ಹೊರಡುತ್ತದೆ. ಅಂಗನವಾಡಿಗಳಿಗೆ ಭೇಟಿಕೊಟ್ಟು ಮಕ್ಕಳಿಗೆ ಸಿಹಿ ವಿತರಣೆ ಮಾಡುತ್ತಾರೆ.

ಪ್ರಶಸ್ತಿ ಮೊತ್ತದ ಜೊತೆಗೆ...

ಯಾವುದೇ ಪ್ರಶಸ್ತಿಗೆ ಅರ್ಜಿ ಹಾಕುವುದಿಲ್ಲ. ಆದರೂ, ಈವರೆಗೆ 140 ಪ್ರಶಸ್ತಿ–ಪುರಸ್ಕಾರ ಬಂದಿವೆ. ಈ ವರ್ಷದ ಕೊಪ್ಪಳ ಗವಿಸಿದ್ಧೇಶ್ವರ ಜಾತ್ರೆಗೆ ಆಹ್ವಾನಿಸಿ, ಇವರನ್ನು ಗೌರವಿಸಲಾಗಿದೆ. ಹೀಗೆ ಪ್ರಶಸ್ತಿ–ಸನ್ಮಾನದ ಸಂದರ್ಭದಲ್ಲಿ ತಮಗೆ ದೊರೆಯುವ ಹಣಕ್ಕೆ ಅಷ್ಟೇ ಮೊತ್ತ ಸೇರಿಸಿ ಬಡಮಕ್ಕಳಿಗೆ ವಿನಿಯೋಗಿಸುವುದು ಇವರ ಇನ್ನೊಂದು ವಿಶೇಷತೆ.

ನಿಮ್ಮ ಸೇವಾ ಮನೋಭಾವನೆಗೆ ಪ್ರೇರಣೆ ಹೇಗೆ ದೊರೆಯಿತು ಎಂದು ಕೇಳಿದರೆ, 'ತಂದೆ ಬಡ ರೈತರಾಗಿದ್ದರು. ನಾನು ಐದನೇ ತರಗತಿ ಮುಗಿಯುತ್ತಿದ್ದಂತೆಯೇ ಓದು ನಿಲ್ಲಿಸುವಂತೆ ತಡೆದರು. ನಾನು ತುಂಟ ಇದ್ದೆ. ಎಲ್ಲಿಯಾದರೂ ಪೆಟ್ಟು ತಿಂದಾನು ಎಂಬ ಕಾಳಜಿ ಅವರಿಗೆ. ಮಹಾತ್ಮ ಗಾಂಧಿಯ ಉಪವಾಸ ಸತ್ಯಾಗ್ರಹದ ಬಗ್ಗೆ ತಿಳಿದಿದ್ದ ನಾನು ಊಟ ಬಿಟ್ಟು ಕೂತೆ. ತಂದೆ ಮಣಿದರು. ಶಾಲೆಗೆ ಕಳಿಸಿದರು. ನಾಲ್ಕು ಕಿಲೋಮೀಟರ್ ದೂರ ನಡೆದೇ ಶಾಲೆಗೆ ಹೋಗಬೇಕು. ಎಂಟನೇ ತರಗತಿವರೆಗೆ ಅಲ್ಲಿಗೆ ಹೋದೆ. ನಮ್ಮೂರಿನಿಂದ ಹೈಸ್ಕೂಲ್ ದೂರ ಇತ್ತು. ಮತ್ತೆ ತಂದೆ ಶಾಲೆ ಬೇಡ ಎಂದರು. ಅವರನ್ನು ಒಪ್ಪಿಸಿ ನಿತ್ಯ ಸುಮಾರು ಹದಿನಾರು ಕಿಲೋಮೀಟರ್ ಬರಿಗಾಲಲ್ಲಿ ನಡೆದು ಎಸ್‌ಎಸ್‌ಎಲ್‌ಸಿ ಮುಗಿಸಿದೆ. ಕಂದಾಯ ಇಲಾಖೆಯ ಗ್ರಾಮ ಸಹಾಯಕ ನೌಕರಿ ಸಿಗುತ್ತಿತ್ತು. ಅದು ಬೇಡ ಎಂದು ಒಂದು ವರ್ಷದ ಡಿ.ಎಡ್ ಮಾಡಿ ಸರ್ಕಾರಿ ಶಿಕ್ಷಕನಾದೆ. ಇಪ್ಪತ್ತನೇ ವಯಸ್ಸಿಗೆ ಸರ್ಕಾರಿ ನೌಕರಿ ಸಿಕ್ಕಿತು. ಆ ನಂತರ ಬಾಹ್ಯ ವಿದ್ಯಾರ್ಥಿಯಾಗಿ ಸ್ನಾತಕೋತ್ತರ ಕೋರ್ಸ್‌ವರೆಗೆ ಓದಿದೆ. ಹಣದ ಕೊರತೆಯಿಂದಾಗಿ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ನಿವೃತ್ತಿಯ ನಂತರ ಈ ಸೇವೆಯಲ್ಲಿ ತೊಡಗಿದ್ದೇನೆ. ಅಷ್ಟಕ್ಕೂ ಸರ್ಕಾರ ನನಗೆ ಕೊಡುವ ಪಿಂಚಣಿ ಜನರ ತೆರಿಗೆಯ ಹಣದಿಂದಲೇ ಅಲ್ಲವೇ? ನನಗೆ ಹನ್ನೆರಡು ಎಕರೆ ತೋಟ ಇದೆ. ನನ್ನ ಮೂವರು ಮಕ್ಕಳು ಬದುಕು ಕಟ್ಟಿಕೊಂಡಿದ್ದಾರೆ. ಐವರು ಮೊಮ್ಮಕ್ಕಳಿದ್ದು, ನನ್ನ ಪಿಂಚಣಿಯ ಅರ್ಧ ಹಣ ಅವರಿಗಾಗಿ ಕೂಡಿಡುತ್ತಿದ್ದೇನೆ. ಉಳಿದ ಅರ್ಧ ಬಡಮಕ್ಕಳಿಗೆ ಮೀಸಲು'.

ಮಂಗಳೂರು ಬಾವುಟಗುಡ್ಡೆಯ ಧೃತಿ ಫೌಂಡೇಷನ್ ಹಾಗೂ ಬಂಟ್ವಾಳ ತಾಲ್ಲೂಕಿನ ಮಕ್ಕಳಿಗೆ ಶೈಕ್ಷಣಿಕ ನೆರವು ನೀಡುವ ಸುಪ್ರಜಿತ್ ಫೌಂಡೇಷನ್‌ಗಳು ಇವೆ. ಈ ಎರಡೂ ಫೌಂಡೇಷನ್‌ಗಳಿಗೆ ಬರುವ ಅರ್ಜಿಗಳ ನೈಜತೆ ಪರಿಶೀಲಿಸಲು ಆ ವಿದ್ಯಾರ್ಥಿಗಳ ಮನೆಗೆ ಈ ಮೇಷ್ಟ್ರು ಭೇಟಿ ನೀಡುತ್ತಾರೆ. ವರ್ಷಕ್ಕೆ 150 ಮನೆಗಳಿಗೆ ಭೇಟಿ ನೀಡಬೇಕಾಗುತ್ತದೆ. ಹೀಗೆ ಒಂದು ಮನೆಗೆ ಹೋದಾಗ ಅಲ್ಲಿ ಕಂಡಿದ್ದು ಕಡುಬಡತನ, ತಂದೆ ಕುಡುಕ. ಅಲ್ಲಿದ್ದ ವೃದ್ಧೆ ಹೊದ್ದುಕೊಂಡಿದ್ದ ಹೊದಿಕೆ ಸಹ ಸುಸ್ಥಿತಿಯಲ್ಲಿ ಇರಲಿಲ್ಲ. ಹೊದಿಕೆ ಖರೀದಿಸಿ ಅವರಿಗೆ ಕೊಟ್ಟರು. ಇಂತಹ ವೃದ್ಧರಿಗೆ ನೆರವಾಗಲು ಪ್ರತಿ ವರ್ಷವೂ ನೂರು ಬೆಡ್‌ಶೀಟ್ ಖರೀದಿಸಿ, ಅವರು ಹೋಗುವ ಮನೆಗಳಲ್ಲಿ ಅವಶ್ಯಕತೆ ಇರುವವರಿಗೆ ಕೊಡುತ್ತಾರೆ. ಮಕ್ಕಳಿಗೆ ಪೆನ್, ಚಾಕೊಲೇಟ್ ಕೊಡುತ್ತಾರೆ. ಕಳೆದ ವರ್ಷ ಜವಳಿ ಅಂಗಡಿಯವರು ತಮ್ಮಲ್ಲಿದ್ದ 88 ಶರ್ಟ್‌ಗಳನ್ನು ಉಚಿತವಾಗಿ ಕೊಟ್ಟಿದ್ದರು. ಅವುಗಳನ್ನು ಇವರು ಹಂಚಿದರು. ಹೆಚ್ಚಿನ ನೆರವಿನ ಅಗತ್ಯವಿದ್ದರೆ ಒಂದಿಷ್ಟು ಜನ ದಾನಿಗಳು ಇದ್ದು, ಅವರ ಗಮನಕ್ಕೆ ತರುತ್ತಾರೆ. ಅವರು ಉದಾರ ನೆರವು ನೀಡುತ್ತಾರೆ. ಕೆಲಸ ಮಾಡಿದ ಐದು ಶಾಲೆಗಳಿಗೆ ತಲಾ ₹25 ಸಾವಿರ ಕೊಟ್ಟಿದ್ದಾರೆ. ಪತ್ರಕರ್ತರ ಸಂಘದವರು ಸನ್ಮಾನಿಸಿ ₹10ಸಾವಿರ ಕೊಟ್ಟಿದ್ದರು. ಅದಕ್ಕೆ ₹90 ಸಾವಿರ ಸೇರಿಸಿ ದತ್ತಿನಿಧಿ ಸ್ಥಾಪಿಸಿದ್ದಾರೆ.

'ನಾರಾಯಣ ಮೇಷ್ಟ್ರು ಅವರ ಪರಿಶ್ರಮದಿಂದ ಬಡ, ಹಿಂದುಳಿದ, ದಲಿತ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ' ಎಂದು ಉಡುಪಿ ಜಿಲ್ಲೆಯ ಬಾರ್ಕೂರು ಶ್ರೀಮತಿ ರುಕ್ಮಿಣಿ ಶೆಡ್ತಿ ಸ್ಮಾರಕ ನ್ಯಾಷನಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲ ಭಾಸ್ಕರ್ ಶೆಟ್ಟಿ ಹೇಳುತ್ತಾರೆ.

12ನೇ ಪುಟಕ್ಕೆ...

ಭುವನೇಶ್ವರಿ

ವಲಸೆ ಹಕ್ಕಿಗಳ ಸಬಲೀಕರಣ ಭುವನೇಶ್ವರಿ ಪಣ

• ಪವನ್ ಕುಮಾರ್ ಎಚ್.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಬಬಲಾದ ಗ್ರಾಮದ ಭುವನೇಶ್ವರಿ ಕಾಂಬ್ಳೆ ಅವರು ಚಿಕ್ಕವರಿದ್ದಾಗ ನೆರೆಹೊರೆಯವರು ಪ್ರತೀ ಬಾರಿ ಹೊಟ್ಟೆಪಾಡಿಗಾಗಿ ಗಂಟುಮೂಟೆ ಕಟ್ಟಿಕೊಂಡು ದೊಡ್ಡ ನಗರಗಳಿಗೆ ವಲಸೆ ಹೋಗುವುದನ್ನು ಅಚ್ಚರಿ ಮತ್ತು ಆಸೆಗಣ್ಣಿನಿಂದ ನೋಡುತ್ತಿದ್ದರು.

ಸಾಮಾನ್ಯವಾಗಿ ಭುವನೇಶ್ವರಿ ಅವರ ನೆರೆಹೊರೆಯವರು ಪ್ರತಿ ವರ್ಷ ಆರು ತಿಂಗಳಿಗೊಮ್ಮೆ ಕಬ್ಬಿನಗದ್ದೆ, ಇಟ್ಟಿಗೆಗೂಡು ಮತ್ತು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಕಾರ್ಮಿಕರಾಗಿ ದುಡಿಯುವ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದರು.

ಅವರಂತೆ ನಾವೂ ಕೆಲಸ ಹುಡುಕಿಕೊಂಡು ವಲಸೆ ಹೋಗೋಣ ಎಂದು ಭುವನೇಶ್ವರಿ ತಮ್ಮ ತಂದೆಗೆ ದುಂಬಾಲು ಬೀಳುತ್ತಿದ್ದರು. ಅಲ್ಲಿಂದ ಅಲ್ಪಸ್ವಲ್ಪ ಕಾಸು ಸಂಪಾದಿಸಿ ಹೊಸ ಬಟ್ಟೆ ತರಬಹುದು ಎಂಬುದು ಬಾಲಕಿ ಭುವನೇಶ್ವರಿ ಅವರ ಆಸೆಯಾಗಿತ್ತು.

ತಂದೆ ಕಲ್ಲಪ್ಪ ಹರಿಜನ (ಇತ್ತೀಚೆಗೆ ಮೃತಪಟ್ಟಿದ್ದಾರೆ) ಅವರಾಗಲೀ ಅಥವಾ ತಾಯಿ ಬಾಯಜಾ ಬಾಯಿ ಭುವನೇಶ್ವರಿ ಅವರ ಒತ್ತಾಯಕ್ಕೆ ಯಾವತ್ತೂ ಕಿವಿಗೊಡಲೇ ಇಲ್ಲ. ಆದರೆ ಒಂದು ಸಂದರ್ಭದಲ್ಲಿ ಭುವನೇಶ್ವರಿ ಅವರ ತಾಯಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ದ್ರಾಕ್ಷಿ ತೋಟಗಳಿಗೆ ವಲಸೆ ಕಾರ್ಮಿಕರಾಗಿ ಕೆಲಸಕ್ಕೆ ಹೋಗಿದ್ದರು. ಬಳಿಕ ಅದರ ಪರಿಣಾಮಗಳ ಬಗ್ಗೆ ಭುವನೇಶ್ವರಿ ಅವರಿಗೆ ಅರಿವಾಯಿತು.

ಇಂಥ ಆರಂಭಿಕ ಅನುಭವಗಳು ಅವರ ಭವಿಷ್ಯದ ಆಯ್ಕೆಗಳನ್ನು ರೂಪಿಸಿದವು. ಬಳಿಕ ಅವರು ತಾಲ್ಲೂಕಿನ 15 ಸ್ವಸಹಾಯ ಗುಂಪುಗಳ ಒಕ್ಕೂಟ 'ಒಡಲಧ್ವನಿ ಮಹಿಳಾ ಒಕ್ಕೂಟ' ಸ್ಥಾಪಿಸಿದರು. ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಮತ್ತು ಮುಂದಿನ ಪೀಳಿಗೆಗಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯಲ್ಲಿ ಅಗತ್ಯ ಬದಲಾವಣೆ ತರುವ ಉದ್ದೇಶದಿಂದ ಒಕ್ಕೂಟ ಸ್ಥಾಪಿಸಿದರು.

ಪ್ರಸ್ತುತ ಒಕ್ಕೂಟದ 400 ಮಹಿಳೆಯರು ತಮ್ಮ ಗ್ರಾಮದಲ್ಲಿಯೇ ಜೀವನೋಪಾಯ ಕಂಡುಕೊಂಡಿದ್ದಾರೆ. ಅವರ ಕುಟುಂಬಸ್ಥರು ಕೆಲಸ ಹುಡುಕಿಕೊಂಡು ವಲಸೆ ಹೋಗುವುದನ್ನು ನಿಲ್ಲಿಸಿದ್ದಾರೆ. ಅವರು ಪಶುಸಂಗೋಪನೆ ನಡೆಸುತ್ತಾರೆ, ಸಾವಯವ ಪದ್ಧತಿಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ, ಮನೆಯಲ್ಲಿಯೇ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ.

'ವಲಸೆಯು ಮಹಿಳೆಯರ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುತ್ತದೆ. ಮಹಿಳೆಯರ ವಲಸೆಯನ್ನು ತಡೆದರೆ ಅವರ ಕುಟುಂಬವೇ ಅಭಿವೃದ್ಧಿಯಾಗುತ್ತದೆ' ಎನ್ನುತ್ತಾರೆ ಭುವನೇಶ್ವರಿ.

'ಏಳು ಜನರಿದ್ದ ನಮ್ಮ ಕುಟುಂಬಕ್ಕೆ ದಿನಕ್ಕೆ ಒಂದು ಹೊತ್ತಿನ ಊಟಕ್ಕೂ ಕಷ್ಟವಿತ್ತು. ಇದ್ದ ಸ್ವಲ್ಪ ಜಮೀನಿನಲ್ಲಿ ಋತುಮಾನಕ್ಕೆ ಅನುಗುಣವಾಗಿ ಬೆಳೆಗಳನ್ನು ಬೆಳೆಯುತ್ತಿದ್ದೆವು. ತಂದೆ ಅರಣ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ತಿಂಗಳಿಗೆ ₹2,000 ವೇತನ ಸಿಗುತ್ತಿತ್ತು' ಎಂದು 33 ವರ್ಷದ ಭುವನೇಶ್ವರಿ ಬಾಲ್ಯದ ಜೀವನವನ್ನು ವಿವರಿಸುತ್ತಾರೆ.

ಕುಟುಂಬದ ಆರ್ಥಿಕ ಬಿಕ್ಕಟ್ಟು ಓದಿನ ಮೇಲೆ ಅವರಿಗಿದ್ದ ಆಸಕ್ತಿಯನ್ನು ಕುಗ್ಗಿಸಲಿಲ್ಲ. 2013–14ರಲ್ಲಿ ₹2,500 ಶುಲ್ಕ ಪಾವತಿಸಲು ಸಾಧ್ಯವಾಗದೆ ಅರ್ಥಶಾಸ್ತ್ರ ಓದುವ ಕನಸನ್ನು ತ್ಯಾಗ ಮಾಡಿದರು. ನಂತರ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಮಹಿಳಾ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿದ್ದ ಎಂ.ಬಿ.ದಿಲ್‌ಷಾದ್ ಅವರು ಭುವನೇಶ್ವರಿ ಅವರ ಓದಿನ ಖರ್ಚನ್ನು ನೋಡಿಕೊಂಡರು.

11ನೇ ಪುಟಕ್ಕೆ...

ನೀವೂ ವಲಸೆ ಹೋಗುತ್ತಿದ್ರಾ?

ಇತಿಹಾಸ ಮರುಸೃಷ್ಟಿಸಿದ ವೀರಭೂಮಿ

1831ರ ಜನವರಿ 26ಕ್ಕೆ ಸಂಗೊಳ್ಳಿ ರಾಯಣ್ಣ ಹಾಗೂ ಅವನ ಆರು ಮಂದಿ ಕಲಿಗಳನ್ನು ಗಲ್ಲಿಗೇರಿಸಲಾಯಿತು. ಉಳಿದ ಆರು ಮಂದಿಗೆ ಕರಿ ನೀರಿನ ಶಿಕ್ಷೆ (ಕಾಲಾಪಾನಿ) ನೀಡಿ ಅಂಡಮಾನ್ ಕತ್ತಲಕೂಪಕ್ಕೆ ತಳ್ಳಲಾಯಿತು. ಆ ಘಟನೆ ನಡೆದು 195 ವರ್ಷ ಕಳೆದಿದೆ. ಮಹಾನ್ ಕ್ರಾಂತಿವೀರರು ಕೊನೆಯುಸಿರೆಳೆದಿಲ್ಲ; ಈಗಲೂ ಇಲ್ಲಿ ಉಸಿರಾಡುತ್ತಿದ್ದಾರೆ.

• ಸಂತೋಷ ಈ. ಚಿನಗುಡಿ

ರಾಯಣ್ಣ ವೀಕ್ಷಣಾ ಗೋಪುರ
ಚಿತ್ರಗಳು: ಏಕನಾಥ ಅಗಸಿಮನಿ

ನಿಜ.

ನಂದಗಡದ 'ವೀರಭೂಮಿ' ಒಳಹೊಕ್ಕರೆ ಸಾಕು; ಶೌರ್ಯಭಾವ ಆವರಿಸಿಕೊಳ್ಳುತ್ತದೆ. ಒಂದೆರಡು ಹೆಜ್ಜೆ ಸಾಗುತ್ತಲೇ ವೀರಾವೇಶದಿಂದ ಆರ್ಭಟಿಸುವ ಸಂಗೊಳ್ಳಿ ರಾಯಣ್ಣ ಎದುರಾಗುತ್ತಾನೆ. ಇನ್ನೂರು ವರ್ಷಗಳ ಹಿಂದೆ ಘಟಿಸಿಹೋದ ಘಟನೆಗಳು ಇಲ್ಲಿ ಜೀವ ಪಡೆಯುತ್ತವೆ. ರಾಯಣ್ಣ ಹುಟ್ಟಿದ ಮನೆ, ಆಟವಾಡಿದ ಅಂಗಳ, ಬೆಳೆದುನಿಂತ ಕಿತ್ತೂರು, ಯುದ್ಧ ಕಲಿತ ರಣಾಂಗಣ, ಬ್ರಿಟಿಷರ ಹುಟ್ಟಡಗಿಸಲು ಝಳಪಿಸಿದ ಖಡ್ಗ, ಅಡಗುದಾಣ, ಗಲ್ಲಿಗೇರಿಸಿದ ಮರ, ಬ್ರಿಟಿಷ್ ಸರ್ಕಾರಿ ಕಟ್ಟಡಗಳ ಧ್ವಂಸ, ಲೂಟಿ... ಅಬ್ಬಾ! ಈ ಕೋಟೆಯೊಳಗಿನ ಪ್ರತಿ ಹೆಜ್ಜೆಯೂ ಮೈನವಿರು–ಮನನವಿರು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಐತಿಹಾಸಿಕ ನಂದಗಡ ಗ್ರಾಮ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಅವರ ಆರು ಸಂಗಾತಿಗಳನ್ನು ಗಲ್ಲಿಗೇರಿಸಿದ ಜಾಗ. ಏಳೂ ಕ್ರಾಂತಿಕಾರಿಗಳನ್ನು ಏಕಕಾಲಕ್ಕೆ ಬಯಲಲ್ಲಿ ಹೆತ್ತವರ ಸಮ್ಮುಖದಲ್ಲೇ ಆಲದಮರಕ್ಕೆ ನೇಣಿಗೆ ಹಾಕಿದ ಸ್ಥಳ. ಈಗಲೂ ಆ ಆಲದಮರ ಹಾಗೇ ಇತಿಹಾಸಕ್ಕೆ ಕನ್ನಡಿಯಾಗಿ ನಿಂತಿದೆ.

ಈಗ ರಾಜ್ಯ ಸರ್ಕಾರ ಇದನ್ನು ವಸ್ತುಸಂಗ್ರಹಾಲಯವಾಗಿ ಅಭಿವೃದ್ಧಿಪಡಿಸಿದೆ. ಹತ್ತು ಎಕರೆ ಜಾಗವನ್ನು ಬಳಸಿಕೊಂಡು ಚರಿತ್ರೆಯನ್ನು ಮರುಸೃಷ್ಟಿಸಿ, 'ವೀರಭೂಮಿ' ಎಂದು ಕರೆದಿದೆ. ಈ ಸ್ಥಳವನ್ನು ಜಾಗತಿಕ ಮಟ್ಟದ ಪ್ರವಾಸಿ ತಾಣ ಮಾಡಬೇಕೆಂಬ ಆಶಯದತ್ತ ಹೆಜ್ಜೆ ಇಡಲಾಗಿದೆ.

ರಾಯಣ್ಣ ಪುಟ್ಟ ಕಂದಮ್ಮನಾಗಿ ಆಟವಾಡಿದ ತೊಟ್ಟಿಲಿನಿಂದ ಹಿಡಿದು ಹೂಂಕರಿಸುತ್ತ ನೇಣಿಗೆ ಕೊರಳೊಡ್ಡಿದ ಮರದವರೆಗೆ ಎಲ್ಲವೂ ಇಲ್ಲಿವೆ.

ಏನೇನಿದೆ ಒಳಗೆ?

ರಾಣಿ ಚನ್ನಮ್ಮನ ಬಲಗೈ ಬಂಟ, ಮಹಾನ್ ಸೇನಾನಿ ಸಂಗೊಳ್ಳಿ ರಾಯಣ್ಣನ ಚರಿತ್ರೆಯನ್ನು ಮೂರ್ತರೂಪದಲ್ಲಿ ಕಟ್ಟಿಕೊಡಲಾಗಿದೆ. ಗುಡ್ಡಗಾಡನ್ನು ಇದ್ದ ಹಾಗೇ ಉಳಿಸಿಕೊಂಡು ಸುತ್ತಲೂ ಪಾರಂಪರಿಕ ಶೈಲಿಯ ಕಟ್ಟಡಗಳನ್ನು ಕಟ್ಟಲಾಗಿದೆ. ಇದರಿಂದ ಈ ಪ್ರದೇಶದ ನೋಟ ವಾಸ್ತವಕ್ಕೆ ತುಂಬ ಹತ್ತಿರವಾಗಿದೆ ಎಂಬುದು ಗೋಚರಿಸುತ್ತದೆ. ತ್ರಿಡಿ ದೃಶ್ಯಾವಳಿ, ಧ್ವನಿ–ಬೆಳಕಿನ ವೈಭವ, ಎಸ್ಕಲೇಟ್ ವ್ಯವಸ್ಥೆ, ಹವಾನಿಯಂತ್ರಿತ ಥಿಯೇಟರ್ ಸೇರಿದಂತೆ ಇತಿಹಾಸಕ್ಕೆ ಆಧುನಿಕ ಸ್ಪರ್ಶ ನೀಡಲಾಗಿದೆ.

ಒಂದು ನಿರ್ದಿಷ್ಟ ಸ್ಥಳದಿಂದ ಯುದ್ಧ ಸಾರುತ್ತೇವೆ ಎಂದು ವೈರಿಗಳಿಗೆ ಸಂದೇಶ ತಲುಪಿಸಿ ಬೇರೊಂದು ಕಡೆಯಿಂದ ಯುದ್ಧ ಮಾಡುವುದು, ಅಡಗುದಾಣಗಳ ಬಗ್ಗೆ ಮಾಹಿತಿ ನೀಡಿ ಅಲ್ಲಿಗೆ ವೈರಿಗಳು ಬರುವಂತೆ ಮಾಡಿ ಅವರನ್ನು ಮುಗಿಸುವುದು, ಊರ ಜನರನ್ನೇ ಬೇಹುಗಾರರನ್ನಾಗಿ ಮಾಡಿಕೊಳ್ಳುವುದು ಇಂಥ ತಂತ್ರಗಳನ್ನೇ 'ಕೂಟಯುದ್ಧ' (ಗೆರಿಲ್ಲಾ ವಾರ್) ಎನ್ನುತ್ತಾರೆ. ರಾಯಣ್ಣನ 'ಕೂಟಯುದ್ಧ'ದ ಮಾದರಿಗಳು ಇಲ್ಲಿ ಸ್ಪಷ್ಟ ಮಾಹಿತಿ ನೀಡುತ್ತವೆ.

ಕಿತ್ತೂರು ಸಂಸ್ಥಾನದ ಮರುಸ್ಥಾಪನೆಗೆ ಊರೂರು ಅಲೆಯುವುದು, ಗುಹೆಗಳಲ್ಲಿ ಸಭೆಗಳನ್ನು ಮಾಡುವುದು, ಅರಣ್ಯವಾಸಿಗಳನ್ನು ಸೇರಿಸಿಕೊಳ್ಳುವುದು ಮುಂತಾದವುಗಳ ಪ್ರತಿಮೆಗಳು ಸುಂದರವಾಗಿವೆ.

ಯುದ್ಧ ತರಬೇತಿ, ಶಸ್ತ್ರಗಳ ತಯಾರಿಕೆ, ಅಡಗುದಾಣಗಳ ಹುಡುಕಾಟ, ಸೈನಿಕರ ಊಟಕ್ಕೆ ಜನರ ಸಹಕಾರ, ವೇಷಭೂಷಣ, ಆಶ್ರಯ ನೀಡಿದ ಹಂಡಿಬಡಗನಾಥ ಮಠ, ರಾಯಣ್ಣನನ್ನು ಬಂಧಿಸಿದ ಡೋರಿ ಹಳ್ಳ... ಒಂದಕ್ಕಿಂತ ಒಂದು ಸಹಜವಾಗಿ ಮೂಡಿಬಂದಿವೆ.

ರಾಯಣ್ಣನ ಬಂಧನದ ನಂತರ ವಿಚಾರಣೆ ನಡೆಸಿದ ಧಾರವಾಡದ ಕಲೆಕ್ಟರ್ ಕಚೇರಿ ಕಟ್ಟಡ, ಸಂಪಗಾವಿಯ ಆಗಿನ ಅಮಲ್ದಾರ್ (ಈಗಿನ ತಹಶೀಲ್ದಾರ್) ಕಚೇರಿ, ರಾಯಣ್ಣನ ತಾಯಿಗೆ ಸುಂಕದಕಲ್ಲು ಹೇರಿ ಶಿಕ್ಷೆ ನೀಡಿದ ಕುಲಕರ್ಣಿಯ ಮನೆ, ಮನೆಯೊಳಗೆ ನಡೆದ ಘಟನಾವಳಿಗಳ ರೂಪಕ, ಯುದ್ಧಕ್ಕೆ ನೆರವು ನೀಡಿದ ಸುರಪುರದ ಅರಸರ ಅರಮನೆ, ಸೈನಿಕರಿಗೆ ಬೆಂಬಲವಾಗಿ ನಿಂತವರ ಮನೆಗಳು, ಆ ಕಾಲದ ಹಳ್ಳಿಗಳ ಮಾದರಿಗಳು, ಗುಹೆಗಳು, ಹಳ್ಳಗಳು... ಹೀಗೆ ಪ್ರತಿಯೊಂದನ್ನೂ ಯಥಾವತ್ ಮರು ನಿರ್ಮಾಣ ಮಾಡಿದ್ದು, ಇವುಗಳು ಮನ ಸೆಳೆಯುತ್ತವೆ.

11ನೇ ಪುಟಕ್ಕೆ...

ಯುದ್ಧ ತಂತ್ರದಲ್ಲಿ ನಿರತ ರಾಯಣ್ಣ ಹಾಗೂ ಸಂಗಾತಿಗಳು

ಅಪರೂಪದ ವಿನ್ಯಾಸ

ಅಹಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನಲ್ಲಿ ತರಬೇತಿ ಪಡೆದ ಸೂರ್ಯಪ್ರಕಾಶ್ 'ವೀರಭೂಮಿ'ಗೆ ರೂಪ ನೀಡಿದವರು. ಈ ತರಬೇತಿ ಪಡೆದವರು ದೇಶದಲ್ಲಿ ವಿರಳ. ಹೀಗಾಗಿ, ಬಯಲು ಪ್ರದರ್ಶನಾಲಯ ನಿರ್ಮಿಸುವಲ್ಲಿ ಅವರ ಹೆಸರು ಮುಂಚೂಣಿಯಲ್ಲಿರುತ್ತದೆ.

'ಸಂಶೋಧಕ ಪ್ರೊ. ಜ್ಯೋತಿ ಹೊಸೂರು ಹಾಗೂ ಇತಿಹಾಸಕಾರ ಬಸವರಾಜ ಕಮತ ಅವರ ಸಲಹೆಯಂತೆ, ನಂದಗಡದಲ್ಲಿ ಇತಿಹಾಸಕ್ಕೆ ಚ್ಯುತಿ ಬಾರದಂತೆ ಪ್ರದರ್ಶನಾಲಯ ನಿರ್ಮಿಸಿದ್ದೇವೆ. ಕಟ್ಟಡಗಳ ಆಕೃತಿ, ಮನುಷ್ಯರ ಆಕೃತಿ ಸೇರಿದಂತೆ ಎಲ್ಲವನ್ನೂ ನೈಜತೆಗೆ ತಕ್ಕಂತೆ ಮಾಡಿದ್ದೇವೆ. ಇದರಿಂದ ಪ್ರವಾಸಿಗರಿಗೆ ಸಹಜ ಇತಿಹಾಸ ಅನುಭವಕ್ಕೆ ಬರುತ್ತದೆ' ಎನ್ನುತ್ತಾರೆ ಅವರು.

ರಾಯಣ್ಣನ ಜತೆಗೆ ಗಲ್ಲಿಗೇರಿದವರು

ಬಸ್ತವಾಡದ ಬಾಳನಾಯಕ, ಹಣಬರಟ್ಟಿಯ ಬಸಲಿಂಗಪ್ಪ, ಬೆಳವಡಿಯ ಕರಿಬಸಪ್ಪ, ಹೊಗರ್ತಿಯ ಭೀಮಾ ಜಿಡ್ಡೀಮನಿ, ಕೆಂಚಪ್ಪ ರುದ್ರಪ್ಪ ಪಾಟೀಲ ಸಂಗಟಿಕೊಪ್ಪದಗೌಡ, ಸುತಗಟ್ಟಿಯ ಅಪ್ಪೋಜಿ ನಾಯಕ

ಕರಿನೀರಿನ ಶಿಕ್ಷೆಗೆ ಗುರಿಯಾದವರು: ಬೆಳವಡಿಯ ರುದ್ರನಾಯಕ, ನೀಲನಾಯಕ, ಬೆಳವಡಿಯ ಯಲ್ಲಾನಾಯಕ, ತಿಗಡೊಳ್ಳಿಯ ಅಪ್ಪೋಣಿ, ಮಜ್ಜಿಗಡಾದ ರಾಣೋಜಿಕೊಂಡ, ತೋಪಿನಕಟ್ಟೆ ಕೊನೇರಿ, ಕೊಡಚವಾಡ ನೇಮಣ್ಣ

ಸಮಾಜವಾದಿ ಸಂತನ ಕೊಟ್ಟೂರು ತೇರು

• ಚಿತ್ರ-ಲೇಖನ: ಉಜ್ಜಿನಿ ರುದ್ರಪ್ಪ

ಕೊಟ್ಟೂರು ತೇರಿಗೆ ಹೊರಟ ಯಾತ್ರಿಗಳು

ಸಮಾಜದಲ್ಲಿನ ಮೌಢ್ಯ, ಅಸಮಾನತೆ ತೊಡೆದು ಹಾಕಿ ಸಮಸಮಾಜದ ನಿರ್ಮಾಣಕ್ಕಾಗಿ ಹದಿನಾರನೇ ಶತಮಾನದಲ್ಲಿ ಶ್ರಮಿಸಿದ ಮಧ್ಯ ಕರ್ನಾಟಕದ ಕೂಲಹಳ್ಳಿ, ಹರಪನಹಳ್ಳಿ, ಅರಸೀಕೆರೆ, ನಾಯಕನಹಟ್ಟಿ ಮತ್ತು ಕೊಟ್ಟೂರಿನಲ್ಲಿ ನೆಲೆಸಿದ್ದ ಐವರು ಶರಣರಲ್ಲಿ ಕೊಟ್ಟೂರಿನ ಕೊಟ್ಟೂರೇಶ್ವರ ಪ್ರಮುಖರು. ನಾಲ್ಕು ಪುರಾತನ ದೇವಾಲಯಗಳಲ್ಲಿ ನೆಲೆಸಿರುವ ಕೊಟ್ಟೂರೇಶ್ವರನಿಗೆ ಹಿರೇಮಠ, ಗಚ್ಚಿನಮಠ, ತೊಟ್ಟಿಲ ಮಠ ಮತ್ತು ಮೂರು ಕಲ್ಮಠಗಳಲ್ಲಿ ನಿತ್ಯವೂ ಪೂಜೆ. ಗಚ್ಚಿನ ಮಠದ ದೇವಾಲಯದಲ್ಲಿ ಕೊಟ್ಟೂರೇಶ್ವರ ಸ್ವಾಮಿಯ ಜೀವಂತ ಸಮಾಧಿ ಇದೆ. ಒಂದೊಂದು ದೇವಾಲಯದ ಶಿಲ್ಪ ಸೌಂದರ್ಯವೂ ಕಣ್ಮನ ಸೆಳೆಯುತ್ತದೆ.

ವಿಜಯನಗರ ಜಿಲ್ಲೆಯ ಕೊಟ್ಟೂರಿನ ಶ್ರೀ ಕೊಟ್ಟೂರು ಬಸವೇಶ್ವರ ರಥೋತ್ಸವ, ಕರ್ನಾಟಕದ ಪ್ರಮುಖ ರಥೋತ್ಸವಗಳಲ್ಲೊಂದು. ಎಲ್ಲ ಸಮುದಾಯಗಳ ಆರಾಧ್ಯ ದೈವ ಎನಿಸಿರುವ ಕೊಟ್ಟೂರು ಬಸವೇಶ್ವರನಿಗೆ ರಾಜ್ಯ ಮಾತ್ರವಲ್ಲದೆ, ದೇಶ-ವಿದೇಶಗಳಲ್ಲೂ ಭಕ್ತರಿದ್ದಾರೆ. ಪಾದಯಾತ್ರೆ ಮೂಲಕವೇ ಸಾಗಿಬಂದು ರಥೋತ್ಸವದಲ್ಲಿ ಪಾಲ್ಗೊಳ್ಳುವುದು ಇಲ್ಲಿನ ಭಕ್ತರ ವಿಶೇಷ.

ಮೂಲಾ ನಕ್ಷತ್ರದಲ್ಲಿ ರಥೋತ್ಸವ

ಇದೇ ಫೆಬ್ರುವರಿ 12ರಂದು ರಥೋತ್ಸವ ನಡೆಯಲಿದೆ. ಹಬ್ಬ, ರಥೋತ್ಸವ, ಶುಭ ಸಮಾರಂಭಗಳು ಶುಭ ಗಳಿಗೆಯಲ್ಲಿ ನಡೆಯುವುದು ವಿಶೇಷ. ಆದರೆ, ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಅಶುಭ ನಕ್ಷತ್ರ ಎಂದೇ ಪರಿಗಣಿಸ-ಲಾಗುವ ಮೂಲಾ ನಕ್ಷತ್ರ ಕೂಡಿದ ಸಮಯದಲ್ಲಿ ಜರುಗುತ್ತದೆ. ಸಮಾಜದಲ್ಲಿ ಮೌಢ್ಯವನ್ನು ತೊಡೆದು ಹಾಕಲು ಕೊಟ್ಟೂರೇಶ್ವರರು ಕಂಡುಕೊಂಡ ಮಾರ್ಗವಿದು.

ಮಾದಿಗರ ಹರಳಯ್ಯ ಸಮುದಾಯದ ಮಹಿಳೆಯರು ಆರತಿ ಬೆಳಗಿದ ಮೇಲೆಯೇ ರಥ ಹೊರಡುವುದು ಸಂಪ್ರದಾಯ. ರಥೋತ್ಸವಕ್ಕೂ ಒಂದು ದಿನ ಮೊದಲೇ ದಶದಿಕ್ಕುಗಳಿಂದ ಸಾಗಿಬರುವ ಪಾದಯಾತ್ರಿಗಳು ಕೊಟ್ಟೂರಿನಲ್ಲಿ ಕೂಡುತ್ತಾರೆ. ಅಬಾಲ ವೃದ್ಧರಾದಿಯಾಗಿ ಜಾತಿಬೇಧಗಳ ಹಂಗಿಲ್ಲದೆ ಎಲ್ಲ ವರ್ಗಗಳ ಲಕ್ಷಾಂತರ ಭಕ್ತರು ಸಂಜೆ ತೇರು ಎಳೆಯುತ್ತಾರೆ.

ಗದಗ, ಮುಂಡರಗಿ, ಹೊಸಪೇಟೆ, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಚಿತ್ರದುರ್ಗ, ಬಳ್ಳಾರಿ, ಮೊಳಕಾಲ್ಮುರು ಸೇರಿದಂತೆ ಮಧ್ಯ ಕರ್ನಾಟಕದ ಹಲವು ಸ್ಥಳಗಳಿಂದ ಇಲ್ಲಿಗೆ ಭಕ್ತರು ಬರುತ್ತಾರೆ. ಅವರು ತಮ್ಮ ನಡಿಗೆಗೆ ಅನುಕೂಲಾಗುವಂತೆ ನಾಲ್ಕೈದು ದಿನಗಳ ಮೊದಲೇ ಊರು ಬಿಡುತ್ತಾರೆ. ಬೆಳಗಿನ ಇಳಿ ಬಿಸಿಲು ಮತ್ತು ಸಂಜೆಯ ತಂಪು ಸಮಯದಲ್ಲಿ ನಡೆದು, ಮಾರ್ಗ ಮಧ್ಯದ ಹಳ್ಳಿಗಳಲ್ಲಿ ತಂಗುತ್ತಾರೆ. ರಸ್ತೆಗಳ ಇಕ್ಕೆಲಗಳಲ್ಲಿ ಪಾದಯಾತ್ರಿಗಳ ಸೇವೆಗೆ ಆಯಾ ಗ್ರಾಮಸ್ಥರು ಸಿದ್ಧರಾಗಿ ನಿಂತಿರುತ್ತಾರೆ. ಇವರೆಲ್ಲರಿಗೂ ಊರವರು ಸ್ವಯಂಪ್ರೇರಣೆಯಿಂದ ಉಚಿತವಾಗಿ ಊಟ, ತಿಂಡಿ, ಎಳನೀರು, ಕಲ್ಲಂಗಡಿ, ಶರಬತ್ತು, ಮಜ್ಜಿಗೆ ಸೇರಿದಂತೆ ತರೇವಾರಿ ತಿಂಡಿ, ತಿನಿಸುಗಳ, ಪಾನೀಯಗಳ ಮುಖಾಂತರ ಅವರ ಚೈತನ್ಯಕ್ಕೆ ಪುಷ್ಟಿ ತುಂಬುತ್ತಾರೆ. ಸುಸ್ತಾದವರಿಗೆ ಮತ್ತು ಆರೋಗ್ಯದಲ್ಲಿ ಏರುಪೇರಾದವರಿಗೆ ವೈದ್ಯರು ಟೆಂಟ್‌ಗಳಲ್ಲಿ, ಆಂಬುಲೆನ್ಸ್‌ಗಳಲ್ಲಿ ಕಾದು ನಿಂತು ಉಪಚರಿಸು-ತ್ತಾರೆ. ಇದಕ್ಕಾಗಿ ತಾತ್ಕಾಲಿಕ ಔಷಧಿ ಅಂಗಡಿಗಳೂ ಇರುತ್ತವೆ. ಅಲ್ಲಲ್ಲಿ ಕಾಲುಗಳಿಗೆ ಮಸಾಜ್ ಮಾಡುವವರೂ ಸಿಗುತ್ತಾರೆ.

ರಥೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಕೊಟ್ಟೂರಿನ ಸ್ಥಳೀಯರ ಸೇವೆ ಲಭ್ಯವಿ-ರುತ್ತದೆ. ಪರಿಚಯವಿರಲಿ, ಇಲ್ಲದಿರಲಿ, ಯಾರ ಮನೆಗೆ ಹೋದರೂ ಬಂಧುಗಳಂತೆ ಸತ್ಕರಿಸುತ್ತಾರೆ. ಸ್ನೇಹಿತರಂತೆ ಆದರಿಸುತ್ತಾರೆ. ಮನೆಗೆ ಬಂದವರನ್ನು ಯಾವ ಜಾತಿ ಎಂದು ಯಾರೂ ಕೇಳುವುದಿಲ್ಲ. ಜಾತ್ರೆಗೆ ಬಂದವರೆಲ್ಲರೂ ನಮ್ಮವರೇ ಎಂದು ಉಪಚರಿಸುವ ಮೂಲಕ ಅವರಲ್ಲಿ ಕೊಟ್ಟೂರೇಶ್ವರ ಸ್ವಾಮಿಯನ್ನೇ ಕಾಣುವ ಮನೋಧರ್ಮ ಅವರ ಭಕ್ತಿಯ ಪರಾಕಾಷ್ಠೆಗೆ ದ್ಯೋತಕ.

ಕೊಟ್ಟೂರೇಶ್ವರ ಸ್ವಾಮಿಯ ಮಹಿಮೆ ಮೆಚ್ಚಿ ಅಕ್ಬರ್ ಬಾದ ಷಾ ದಾನವಾಗಿ ನೀಡಿದ್ದ ಮಣಿಮಂಚ ಇಂದಿಗೂ ಗಚ್ಚಿನ ಮಠದಲ್ಲಿದೆ. ಪೀರಲ ಹಬ್ಬದ ಕೊನೆ ದಿನ ಪೀರಲು ದೇವರ ಮೇಳಗಳು ಕೊಟ್ಟೂರೇಶ್ವರ ದೇವಾಲಯಕ್ಕೆ ಆಗಮಿಸುತ್ತವೆ. ಅರ್ಚಕರು ಪೂಜೆ ಸಲ್ಲಿಸಿದ ನಂತರ ಮುಂದೆ ಸಾಗುತ್ತವೆ. ಕೊಟ್ಟೂರೇಶನ ಅನ್ಯ ಧರ್ಮೀಯ ಭಕ್ತರಲ್ಲಿ ಅನೇಕ ಮುಸ್ಲಿಮರೂ ಇದ್ದಾರೆ.

ಸಾಹಿತ್ಯದಲ್ಲಿ ಕೊಟ್ಟೂರೇಶ್ವರ

ಮಲ್ಲಣಾರ್ಯರರ ವೀರಶೈವಾಮೃತ ಮಹಾಪುರಾಣ, ಚನ್ನಬಸವ ಪುರಾಣ, ಚಿಕ್ಕನಂಜೇಶನ ಗುರುರಾಜ ಚರಿತ್ರೆ, ಬಸವಲಿಂ-ಗಪ್ಪನ ಶ್ರೀ ಗುರು ಕೊಟ್ಟೂರು ಬಸವೇಶ್ವರ ಚರಿತ್ರೆ, ನೂರೆಂಟು ವಿರಕ್ತರ ಕಾವ್ಯ, ಸಜ್ಜೆಯ ಸಿದ್ಧಲಿಂ-ಗೇಶ್ವರರ ಮಳೆರಾಜ ಚರಿತ್ರೆ, ಚನ್ನಬಸವ ದೇವರ ಎಮ್ಮೆ ಬಸವನ ಕಾಲ, ವಿರೂಪಾಕ್ಷ ಪಂಡಿತರ ಚನ್ನಬಸವ ಪುರಾಣ, ಯೋಗ ರತ್ನಾಕರರ ಷಟ್‌ಸ್ಥಲ ತಿಲಕ, ವೈ.ನಾಗೇಶ ಶಾಸ್ತ್ರಿಯವರ ಬಾಲಬಸವರು ಹಾಡುಗಳಲ್ಲಿ ಗೋಣಿ ಬಸವೇಶ್ವರ ಕಾವ್ಯ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಸಂಸ್ಕೃತ ಕೃತಿ ಗುರುರಾಜ ಚರಿತ್ರೆ. ಈ ಎಲ್ಲಾ ಕಾವ್ಯ ಮತ್ತು ಪುರಾಣಗಳಲ್ಲಿ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ವರ್ಣನೆ, ಚರಿತ್ರೆ, ತತ್ವ ಸಿದ್ಧಾಂತದ ಉಲ್ಲೇಖವಿದೆ.

ಜನಪದ ಕಾವ್ಯದಲ್ಲಿಯೂ ಕೊಟ್ಟೂರೇಶ್ವರ ಸ್ವಾಮಿಯ ಮಹಿಮೆ, ಪವಾಡಗಳ ಉಲ್ಲೇಖವಿದೆ. ಜನರಲ್ಲಿ ಜಾಗೃತಿ ಮೂಡಿಸುವ ಜನಪದ ಹಾಡುಗಳು ಕೊಟ್ಟೂರು ಹಾಗೂ ಸುತ್ತಮುತ್ತಲ ಹಳ್ಳಿಗರ ಬಾಯಿಯಲ್ಲಿ ನಿತ್ಯ ಸುಪ್ರಭಾತದಂತೆ ನಲಿದಾಡುತ್ತವೆ. ಕೋಲಾಟದ ವೇಳೆ ಪುರುಷರು, ಮದುವೆ ಶುಭ ಕಾರ್ಯ ಮತ್ತು ಹೊಲ ಗದ್ದೆಗಳಲ್ಲಿ ಮಹಿಳೆಯರು ಸುಶ್ರಾವ್ಯವಾಗಿ ಹಾಡುವುದನ್ನು ಕೇಳುವುದೇ ಬಲು ಸೊಗಸು. ರಾತ್ರಿ ಹಗಲೂ ಹಾಡುವವರೂ ಅಲ್ಲಲ್ಲಿ ಇದ್ದಾರೆ. ❖

ರಥದ ಮೇಲೆ ರಾಷ್ಟ್ರಧ್ವಜ!

ಅದು ಸ್ವಾತಂತ್ರ್ಯ ಹೋರಾಟದ ದಿನಗಳು. ಆಗೆಲ್ಲ ಹೋರಾಟಗಾರರು ಕೊಟ್ಟೂರೇಶ್ವರ ಸ್ವಾಮಿ ರಥವನ್ನು ಇನ್ನೇನು ಎಳೆಯುತ್ತಾರೆ ಎನ್ನುವಾಗ, ಬ್ರಿಟಿಷ್ ಪೊಲೀಸರ ಕಣ್ತಪ್ಪಿಸಿ, ರಥವೇರಿ ಕಳಸಕ್ಕೆ ರಾಷ್ಟ್ರಧ್ವಜ ಕಟ್ಟಿ ಮಹಾತ್ಮ ಗಾಂಧಿ ಮತ್ತು ಸುಭಾಷ್‌ಚಂದ್ರ ಬೋಸ್ ಅವರಿಗೆ ಜೈ ಎಂದು ಘೋಷಣೆ ಕೂಗುತ್ತಿದ್ದರು! ಈ ಘೋಷಣೆಗೆ ನೆರೆದ ಸಹಸ್ರಾರು ಭಕ್ತರ ಸಮೂಹ ಮುಗಿಲು ಮುಟ್ಟುವಂತೆ ದನಿಗೂಡಿಸುತ್ತಿತ್ತು. ರಥ ಸಾಗುವ ಮಾರ್ಗದುದ್ದಕ್ಕೂ ಈ ಘೋಷಣೆಗಳು ಮೊಳಗುತ್ತಲೇ ಇರುತ್ತಿದ್ದವು. ರಥ ಸ್ವಸ್ಥಾನಕ್ಕೆ ಬಂದು ನಿಂತಾಗ, ಧ್ವಜ ಕಟ್ಟಿದ ಸ್ವಾತಂತ್ರ್ಯ ಸೇನಾನಿಗಳು ಬ್ರಿಟಿಷರ ಕಣ್ತಪ್ಪಿಸಿ ರಥದಿಂದ ಇಳಿದು ಭಕ್ತರ ನಡುವೆ ಕಣ್ಮರೆ-ಯಾಗುತ್ತಿದ್ದರು. ನಂತರ ಬ್ರಿಟಿಷ್ ಪೊಲೀಸರು ರಥವೇರಿ ರಾಷ್ಟ್ರಧ್ವಜ ಕೆಳಗಿಳಿಸುತ್ತಿದ್ದರು.

ಸ್ವಾತಂತ್ರ್ಯ ಹೋರಾಟಗಾರರು ಭಕ್ತರಲ್ಲಿ ಸ್ವಾತಂತ್ರ್ಯ ಪ್ರೇಮ ಮತ್ತು ಹೋರಾಟದ ಕಿಚ್ಚನ್ನು ಉತ್ತೇಜಿಸಲು ಮತ್ತು ಬೆಂಬಲಿಸಲು ಕಂಡುಕೊಡು ಚಾಕಚಕ್ಯತೆಯ ಮಾರ್ಗವಿದು. ಈ ವಿಷಯ ಮಹಾತ್ಮ ಗಾಂಧಿಯವರಿಗೂ ತಲುಪಿತು. ಅವರು ತಮ್ಮ ಸಂಪಾದಕತ್ವದ ಹರಿಜನ ಪತ್ರಿಕೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಧೈರ್ಯ, ಬುದ್ಧಿವಂತಿಕೆ ಮೆಚ್ಚಿ ಲೇಖನ ಪ್ರಕಟಿಸಿದ್ದರು. ಇದು ಇಲ್ಲಿನ ಸ್ವಾತಂತ್ರ್ಯ ಹೋರಾಟದ ಪುಟಗಳಲ್ಲಿ ದಾಖಲಾಗಿದೆ.

ತಿರುಕಯಾನ ಸಾರ್ಥಕ ರಂಗ ಪಯಣ

• ಕೆ.ಪಿ.ಎಂ.ಗಣೇಶಯ್ಯ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದಲ್ಲಿ ಇತ್ತೀಚೆಗೆ ನಡೆದ 'ತಿರುಕರಂಗ ನಾಟಕೋತ್ಸವ'ವು ರಂಗಾಸಕ್ತರ ಗಮನ ಸೆಳೆಯಿತು. ಈ ಉತ್ಸವದಲ್ಲಿ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮೀಜಿಯ ಜೀವನಾಧಾರಿತ 'ತಿರುಕಯಾನ' ನಾಟಕ ಪ್ರದರ್ಶನಗೊಂಡಿತು. ಈ ನಾಟಕವು ಮಲ್ಲಾಡಿಹಳ್ಳಿ ಸ್ವಾಮೀಜಿಯ ಅಕ್ಷರ ಮತ್ತು ಆರೋಗ್ಯ ದಾಸೋಹ ಬದುಕಿನ ಸಾರ್ಥಕ ದರ್ಶನವಾಗಿತ್ತು.

ಡಾ.ಜಿ.ಎನ್.ಮಲ್ಲಿಕಾರ್ಜುನಪ್ಪ ಅವರು ರಚಿಸಿರುವ 'ತಿರುಕಯಾನ' ನಾಟಕವು ಸ್ವಾಮೀಜಿಯ ಹುಟ್ಟಿನಿಂದ ನಿರ್ವಾ-ಣದವರೆಗಿನ ಘಟನಾವಳಿಗಳನ್ನು ಹದವಾಗಿ ಪೋಣಿಸಿದೆ. ಕೇರಳದಿಂದ ಕರ್ನಾಟಕದ ಕೊಲ್ಲೂರು, ಮಂತ್ರಾಲಯದ ಸಂಪರ್ಕ, ಬರೋಡಾದಲ್ಲಿ ಮಾಣಿಕ್ಯರಾಯರಿಂದ ಕಲಿತ ಕುಸ್ತಿ-ಕತ್ತಿ ವರಸೆ, ಸಿದ್ಧಾರೂಢರು ಮತ್ತು ಶಿವಾನಂದರ ಆಶೀರ್ವಾದ, ಅಂತಿಮವಾಗಿ ಮಲ್ಲಾಡಿಹಳ್ಳಿಯಲ್ಲಿ ಸಂಕಜ್ಜಿಯವರ ಎರಡು ಎಕರೆ ದಾನದಿಂದ ಆರಂಭವಾದ ಸಾಮ್ರಾಜ್ಯದವರೆಗೆ ಕಥೆ ಹರಿಯುತ್ತದೆ. ನಾಟಕದ ಪ್ರತಿ ದೃಶ್ಯವೂ ಸ್ವಾಮೀಜಿಯ ಸೇವಾ ಸೆಲೆಗಳಾದ ಜೋಳಿಗೆ, ಶಿಕ್ಷಣ ಮತ್ತು ದಾಸೋಹವನ್ನು ಪರಿಣಾ-ಮಕಾರಿಯಾಗಿ ಕಟ್ಟಿಕೊಟ್ಟಿತು.

ಹಿರಿಯ ರಂಗಕರ್ಮಿ ವೈ.ಡಿ.ಬದಾಮಿ ಮತ್ತು ಮಂಜುಳಾ ಬದಾಮಿ ದಂಪತಿ ಅವರ ಸಮರ್ಥ ನಿರ್ದೇಶನವು ನಾಟಕದ ಜೀವಾಳವಾಗಿತ್ತು. ನಲವತ್ತಕ್ಕೂ ಹೆಚ್ಚು ಕಲಾವಿದರನ್ನು (ವಿದ್ಯಾರ್ಥಿಗಳು ಹಾಗೂ ಆಶ್ರಮದ ನೌಕರರು) ಒಂದೇ ವೇದಿಕೆಯ ಮೇಲೆ ಸರಿಹೊಂದಿಸಿ, ನಾಟಕಕ್ಕೆ ಬೇಕಾದ ಶಿಸ್ತನ್ನು ಮೂಡಿಸಿದ್ದು ಅವರ ಅನುಭವದ ಹಿರಿಮೆಗೆ ಸಾಕ್ಷಿ.

ಸಾಣೇಹಳ್ಳಿ ಶಿವ ಸಂಚಾರದ ನಾಗರಾಜು ಅವರ ಸಂಗೀತ ನಾಟಕದ ಭಾವಕ್ಕೆ ಪೂರಕವಾಗಿತ್ತು. ವೀರಗಾಸೆಯ ಗತ್ತಿನೊಂದಿಗೆ ಆರಂಭವಾದ ನಾಟಕವು ಸಂಗೀತದ ಏರಿಳಿತಗಳ ಮೂಲಕ ಪ್ರೇಕ್ಷಕರ ಎದೆಯಲ್ಲಿ ಭಾವಸಂಚಾರವನ್ನು ಸೃಷ್ಟಿಸಿತು. ಕಾಲಘಟ್ಟಕ್ಕೆ ತಕ್ಕಂತೆ ವಸ್ತ್ರ ವಿನ್ಯಾಸ ಮತ್ತು ಧ್ವನಿ-ಬೆಳಕಿನ ಸಂಯೋಜನೆ ಕಥಾವಸ್ತುವನ್ನು ಚಿತ್ರಸದೃಶ್ಯವಾಗಿಸಿತ್ತು.

ಎನ್.ಎಸ್.ರುದ್ರೇಶ್ ಅವರು ರಾಘವೇಂದ್ರ ಸ್ವಾಮೀಜಿ ಪಾತ್ರವನ್ನು ತಲ್ಲೀನತೆಯಿಂದ ನಿರ್ವಹಿಸಿದರೆಂದರೆ, ಪ್ರದರ್ಶನದ ನಂತರ ಜನರು ಇವರನ್ನು ಸ್ವಾಮೀಜಿಗಳೆಂದೇ ಭಾವಿಸಿ ನಮಿಸಿದರು! ಅವರ ಧ್ವನಿ ಮತ್ತು ಹಾವಭಾವವು ಪಾತ್ರಕ್ಕೆ ಘನತೆ ತಂದವು. ಉಮೇಶ್ ರಾಂಪುರ ಅವರು ಸೂರ್‌ದಾಸ್‌ಜೀ ಪಾತ್ರದಲ್ಲಿ ಸ್ವಾಮೀಜಿಯ ನೆರಳಿನಂತೆ ಅಭಿನಯಿಸಿ ಮೆಚ್ಚುಗೆಗೆ ಪಾತ್ರರಾದರು. ಮಂಜುಳಾ ಬದಾಮಿ ಅವರು ಪದ್ಮಾಂಬಳ ಮತ್ತು ಸಂಕಜ್ಜಿಯ ಪಾತ್ರಗಳಲ್ಲಿ ತಮ್ಮ ಅನುಭವವನ್ನು ಧಾರೆಯೆರೆದರು. ಸಂತೋಷ್ (ಮಾದಾರ ಚೆನ್ನಯ್ಯ ಸ್ವಾಮೀಜಿ), ಗುರುಮೂರ್ತಿ (ಪದ್ಮನಾಭ), ಶೇಷಣ್ಣ (ಮಾಣಿಕ್ಯರಾಯ), ಹಾಗೂ ಮಧು ಮತ್ತು ಶಿವಲಿಂಗಪ್ಪ ಅವರು ತಮ್ಮ ಪಾತ್ರಗಳ ಮಿತಿಯಲ್ಲಿ ನ್ಯಾಯ ಒದಗಿಸಿದರು.

ವರ್ತಮಾನದ ಕಾಲಘಟ್ಟದಲ್ಲಿ ಇಂತಹ ಸಾಧಕರ ಜೀವನಾಧಾರಿತ ನಾಟಕಗಳನ್ನು ಪ್ರದರ್ಶಿಸುವುದು ಸವಾಲಿನ ಕೆಲಸ. ನಟರಿಗೆ ಮೈಕ್ರೊಫೋನ್ ಬಳಕೆಯ ಸಣ್ಣಪುಟ್ಟ ತರಬೇತಿಯ ಕೊರತೆ ಕೆಲವೊಮ್ಮೆ ಪ್ರೇಕ್ಷಕರಿಗೆ ಕಿರಿಕಿರಿ ಉಂಟು ಮಾಡಿತು. ಆದರೂ ನಾಟಕದ ಒಟ್ಟಾರೆ ಭವ್ಯತೆಯ ಮುಂದೆ ಅದು ಗೌಣವಾಗಿತ್ತು. 165 ಎಕರೆಯಲ್ಲಿ ಆಶ್ರಮ ಕಟ್ಟಿದ ಸಾಧನೆಯ ದೃಶ್ಯಗಳು ಪ್ರೇಕ್ಷಕರ ನೆನಪಿನ ಬುತ್ತಿಯನ್ನು ಬಿಚ್ಚಿಸುವಲ್ಲಿ ಯಶಸ್ವಿಯಾದವು.

ನಾಟಕದ ಅಂತ್ಯದಲ್ಲಿ ಸ್ವಾಮೀಜಿ ಹೇಳುವ 'ಸುತ್ತಿ ಸುತ್ತಿ ಬಂದೆ ಈ ಊರಿಗೆ, ಬುತ್ತಿ ಗಂಟು ತೀರಿತಿಂದು ಮತ್ತೆ ಹೊರಟೆ ನನ್ನೂರಿಗೆ' ಎನ್ನುವ ಮಾತು ಪ್ರೇಕ್ಷಕರ ಕಣ್ಣಂಚನ್ನು ಒದ್ದೆ ಮಾಡಿತು.

'ತಿರುಕಯಾನ' ಕೇವಲ ನಾಟಕವಲ್ಲ; ಅದು ಒಂದು ನಂಬಿಕೆ ಮತ್ತು ಸಂಸ್ಕೃತಿಯ ಅನಾವರಣ. ❖

...ಮರುಸೃಷ್ಟಿಸಿದ ವೀರಭೂಮಿ

10ನೇ ಪುಟದಿಂದ...

ರಾಯಣ್ಣನ ಹಿಡಿದುಕೊಟ್ಟ ಡೋರಿ ಹಳ್ಳದ ದೃಶ್ಯ

ಮೌನಾಲಯದ ಗರ್ಜನೆ

ಇಲ್ಲಿನ ಅತ್ಯಂತ ವಿಶೇಷವೆಂದರೆ ಮೌನಾಲಯ. ರಾಯಣ್ಣ ಸೇರಿ ಏಳೂ ಜನ ಗಲ್ಲಿಗೇರಿದ ಕ್ಷಣಗಳನ್ನು ತ್ರಿಡಿ ಸ್ಪರ್ಶದೊಂದಿಗೆ ಗೋಡೆಗಳ ಮೇಲೆ ಸುಂದರವಾಗಿ ಬಿಡಿಸಲಾಗಿದೆ. ಉಬ್ಬುಚಿತ್ರಗಳಿ-ಗೆ ಬೆಳಕಿನ ಚಾಕಚಕ್ಯತೆ ಮೇಳೈಸಿದೆ.

'ಪ್ರತಿ ಮನೆಯಲ್ಲೂ ಸಂಗೊಳ್ಳಿ ರಾಯಣ್ಣ ಹುಟ್ಟುತ್ತಾನೆ. ನಮ್ಮಂಥವರು ಪ್ರತಿ ಮನೆಯಲ್ಲೂ ಹುಟ್ಟುತ್ತಾರೆ. ಸ್ವಾತಂತ್ರ್ಯ ಸಂಗ್ರಾಮ ನಿರಂತರ' ಎಂದು ಗಲ್ಲಿಗೇರುವ ಮುನ್ನ ರಾಯಣ್ಣ ಗರ್ಜಿಸುತ್ತಾನೆ. ಆ ಗರ್ಜನೆ ಇಲ್ಲಿನ ನೀರವ ಮೌನದಲ್ಲೂ ಕಿವಿಗೆ ಬಡಿಯುತ್ತದೆ.

ರಾಣಿ ಚನ್ನಮ್ಮ ಸೆರೆವಾಸದಲ್ಲೇ ಕೊನೆಯುಸಿರೆಳೆದಾಗ ಬೈಲಹೊಂಗಲದಲ್ಲಿ ಅಂತ್ಯಕ್ರಿಯೆ ನಡೆಯುತ್ತದೆ. ರಾಯಣ್ಣ ಹಾಗೂ ಸಂಗಾತಿಗಳು ಮಾರುವೇಷದಲ್ಲಿ ಅದರಲ್ಲಿ ಪಾಲ್ಗೊಂಡು ರಾಜಮಾತೆಗೆ ಅಂತಿಮ ನಮನ ಸಲ್ಲಿಸುತ್ತಾರೆ. ಇದರ ದೃಶ್ಯಾವಳಿಗ-ಳಂತೂ ಕ್ಷಣ ಮನಸ್ಸನ್ನು ಇತಿಹಾಸದ ಪುಟಕ್ಕೆ ಎಳೆದೊಯ್ಯುತ್ತಿವೆ.

ಸೆನ್ಸರ್ ಮೂಲಕ ಕಥೆ

ಗಮನಾರ್ಹವೆಂದರೆ; ಇಲ್ಲಿನ ಯಾವುದೇ ಪ್ರತಿಮೆ ಬಳಿ ಹೋದರೆ ಅದರ ಕಥೆ ತಾನಾಗಿಯೇ ಕೇಳಿಸಲು ಶುರುವಾಗುತ್ತದೆ. ಪ್ರತಿಮೆಗಳ ಅಡಿ ಸ್ಪೀಕರ್‌ಗಳನ್ನು ಅಳವಡಿಸಿದ್ದು, ಅವುಗಳು ಸೆನ್ಸರ್ ಮೂಲಕ ಕೆಲಸ ಮಾಡುತ್ತವೆ. ಪ್ರವಾಸಿಗರು ಹತ್ತಿರ ಹೋದ ತಕ್ಷಣ ಗೈಡ್‌ನಂತೆ ಎಲ್ಲ ವಿವರವನ್ನು ನೀಡುತ್ತದೆ.

'ವೀರಭೂಮಿ'ಯಲ್ಲಿ ಒಂದು ಸುತ್ತು ಹಾಕಿದರೆ ಸಾಕು. ಇನ್ನೂರು ವರ್ಷಗಳ ಹಿಂದಿನ ಇತಿಹಾಸ ತೆರೆದುಕೊಳ್ಳು-ತ್ತದೆ. ಪ್ರವಾಸಿಗರು, ಇತಿಹಾಸದಲ್ಲಿ ಆಸಕ್ತಿ ಇರುವವರಿಗೆ ನೋಡಲೇಬೇಕಾದ ತಾಣ. ❖

ಆಗಬೇಕಿರುವುದೇನು?

ರಾಯಣ್ಣನ ಜತೆಗೆ ನೇಣಿಗೆ ಕೊರಳೊಡ್ಡಿದ ಇತರ ಆರು ಯೋಧರ ಸಮಾಧಿಗಳನ್ನು ಗುರುತಿಸಬೇಕು. ಅವರ ಕುಟುಂಬದವರನ್ನು ಪತ್ತೆ ಮಾಡಬೇಕು. ಕಾಲಾಪಾನಿ ಶಿಕ್ಷೆಗೆ ಒಳಗಾದ ಇನ್ನೂ ಆರು ವೀರರು ಏನಾದರು ಎನ್ನುವುದನ್ನು ಹುಡುಕಬೇಕು. ಜೊತೆಗೆ ಅವರ ಕುಟುಂಬಗಳನ್ನು ಗುರುತಿಸಬೇಕು. ಕಿತ್ತೂರಿನಲ್ಲಿ ಉತ್ಖನನ ಸಹ ಮಾಡಬೇಕು ಎಂಬುದು ಸಂಶೋಧಕ ಪ್ರೊ.ಸಿ.ಕೆ. ನಾವಲಗಿ ಅವರ ಕೋರಿಕೆ.

'ವೀರಭೂಮಿ' ಸಂಪರ್ಕಿಸಲು ಸುಸಜ್ಜಿತವಾದ ರಸ್ತೆ ಆಗಬೇಕು. ರಾಯಣ್ಣ ಹಾಗೂ ಸಂಗಾತಿಗಳು ಬಳಸುತ್ತಿದ್ದ ಕೆರೆಗಳು, ಧಾರವಾಡ ಜಿಲ್ಲೆಯ ಡೋರಿ ಹಳ್ಳದ ಅಭಿವೃದ್ಧಿ ಆಗಬೇಕು. ಆಶ್ರಯ ಪಡೆದಿದ್ದ ಗುಹೆಗಳನ್ನು ರಕ್ಷಿಸಬೇಕು ಎಂಬ ಬೇಡಿಕೆಯೂ ಜನರಿಂದ ಕೇಳಿಬಂದಿದೆ.

ವಲಸೆ ಹಕ್ಕಿಗಳ ಸಬಲೀಕರಣ...

10ನೇ ಪುಟದಿಂದ...

ಅವರು ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕವನ್ನು ಗಳಿಸಿದರು. ನಂತರದ ಅವರ ಸಂಶೋಧನಾ ಪ್ರಬಂಧವು ವೈಯಕ್ತಿಕ ಜೀವನದ ಹೋರಾಟಗಳಿಂದ ಪ್ರೇರಿತವಾಗಿತ್ತು.

ಸಂಶೋಧನೆಯ ಭಾಗವಾಗಿ ಅವರು, ನಮ್ಮದೇ ರಾಜ್ಯದ ವಿಜಯಪುರ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಗಳ ಗಡಿಭಾಗಗಳಿಂದ ಕೆಲಸ ಅರಸಿ ವಲಸೆ ಹೋಗುತ್ತಿದ್ದ ಸುಮಾರು ಒಂದು ಸಾವಿರ ಮಹಿಳೆಯರೊಂದಿಗೆ ಸಂವಾದ ನಡೆಸಿದರು.

'ಅಲ್ಪಾವಧಿಯ ಕೆಲಸಕ್ಕಾಗಿ ವಲಸೆ ಹೋಗುವ ಮಹಿಳೆಯರ ಸಂಕಷ್ಟವನ್ನು ಹೇಳತೀರದು. ಅಷ್ಟಾಗಿಯೂ ಅವರ ವಾರ್ಷಿಕ ಆದಾಯ ₹60,000 ದಿಂದ ₹1 ಲಕ್ಷ ಮಾತ್ರ. ಭುವನೇಶ್ವರಿ ಅವರು ಇಂಥ ಅಂಶಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ' ಎನ್ನುತ್ತಾರೆ ಭುವನೇಶ್ವರಿ ಅವರ ಸಂಶೋಧನಾ ಗೈಡ್ ಪ್ರೊ. ಎಚ್.ಎಂ.ಹೇಮಲತಾ. ಅವರು ಭುವನೇಶ್ವರಿ ಅವರ ಸಂಶೋಧನೆಗೆ ಆರ್ಥಿಕ ನೆರವನ್ನೂ ನೀಡಿದ್ದರು.

2021ರಲ್ಲಿ ಪಿಎಚ್.ಡಿ ಪೂರ್ಣಗೊಳಿಸಿದ ನಂತರ ಅವರು ಸಂಶೋಧನೆ ಸಂದರ್ಭದಲ್ಲಿ ಭೇಟಿ ಮಾಡಿದ ಮಹಿಳೆಯರಿಗೆ ಮಾರ್ಗದರ್ಶನ ನೀಡಿದರು. ತಮ್ಮ ಕೌಶಲ ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಜೀವನೋಪಾಯ ಕಂಡುಕೊಳ್ಳುವ ಬಗೆಯನ್ನು ತಿಳಿಸಿದರು.

'ವಿಜಯಪುರದ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗ-ಳೊಂದಿಗೆ ಮಾತುಕತೆ ನಡೆಸಿದರು. ವೈಜ್ಞಾನಿಕ ಮಾಹಿತಿ ಲಭ್ಯವಾಗುವಂತೆ ಮಾಡಿದರು ಮತ್ತು ಉತ್ತಮ ಸಲಹೆಯನ್ನು ನೀಡಿದರು' ಎಂದು ವಿಜಯಪುರ ಜಿಲ್ಲೆಯ ಸಾವಳಸಂಗದ ರೈತ ಮಹಿಳೆ ರಾಜೇಶ್ವರಿ ಹೊಸಂದ್ ನೆನಪಿಸಿಕೊಳ್ಳುತ್ತಾರೆ.

ಕೆಲವು ಮಹಿಳೆಯರು ಸುಧಾರಿತ ಕೃಷಿ ತಂತ್ರಜ್ಞಾನವ-ನ್ನು ಕಲಿತು ಉತ್ತಮ ಇಳುವರಿ ತೆಗೆದರು. ಇನ್ನೂ ಕೆಲವರು ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯನ್ನು ಆರಂಭಿಸಿದರು.

ಉದಾಹರಣೆಗೆ ಮಹಾದೇವಿ ಶಿವಸೂರ ಅವರು, ನೆಲ-ಗಡಲೆಯನ್ನು ಬೆಳೆದು, ಶೇಂಗಾ ಹೋಳಿಗೆ ತಯಾರಿಸಿ 'ರಾಗಿ ಕಣ'ದಲ್ಲಿ ಮಾರಾಟ ಮಾಡುತ್ತಿದ್ದಾರೆ. 'ರಾಗಿ ಕಣ' ಎಂಬುದು ಬೆಂಗಳೂರಿನಲ್ಲಿರುವ ರೈತರ ಮಾರುಕಟ್ಟೆ.

ಬದಲಾವಣೆಗಾಗಿ ಧ್ವನಿ ಎತ್ತುವಂತೆ ಒಕ್ಕೂಟದ ಮಹಿಳೆಯನ್ನು ಭುವನೇಶ್ವರಿ ಅವರು ಪ್ರೇರೇಪಿಸಿದರು. '2022–23ರವರೆಗೂ ನಾವು ಗ್ರಾಮ ಪಂಚಾಯಿತಿ ಒಳಗೆ ಕಾಲಿಟ್ಟಿರಲಿಲ್ಲ. ಭುವನೇಶ್ವರಿ ಅವರ ಪ್ರೋತ್ಸಾಹದ ಬಳಿಕ ನಮಗೆ ಕುಡಿಯುವ ನೀರು, ರಸ್ತೆ, ಮನೆ ಮತ್ತು ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನೀಡುವಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅವರಿಗೆ ಆಗ್ರಹಿಸಿದೆವು. ಸತತ ಆಗ್ರಹದ ಬಳಿಕ ಕಳೆದ ವರ್ಷ ಉದ್ಯೋಗ ಖಾತರಿ ಯೋಜನೆಯ ಭಾಗವಾಗಿ ಕೆರೆಯ ಪುನಶ್ಚೇತನ ಕೆಲಸವನ್ನು ಮಹಿಳೆಯರಿಗೆ ನೀಡಲಾಯಿತು' ಎನ್ನುತ್ತಾರೆ ಬಬಲಾದ ನಿವಾಸಿ ಭಾಗ್ಯಶ್ರೀ ಪೂಜಾರಿ.

ವಲಸೆಯನ್ನು ತಗ್ಗಿಸುವ ಮತ್ತು ಗ್ರಾಮೀಣ ಶಿಕ್ಷಣವನ್ನು ಬೆಂಬಲಿಸುವ ಭಾಗವಾಗಿ ಭುವನೇಶ್ವರಿ ಅವರು 2020ರಲ್ಲಿ ಕಲಿಕಾ ಕೇಂದ್ರವನ್ನು ಆರಂಭಿಸಿದ್ದಾರೆ. ಇಲ್ಲಿ ಸೌಲಭ್ಯ ವಂಚಿತ ಮಕ್ಕಳಿಗೆ ಅದರಲ್ಲೂ ವಲಸೆ ಕುಟುಂಬಗಳ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತದೆ. ನಾಲ್ಕು ಗ್ರಾಮಗಳಲ್ಲಿರುವ ಈ ಕೇಂದ್ರಗಳಲ್ಲಿ ಪದವಿ ಪಡೆದ ಗ್ರಾಮದ ಹೆಣ್ಣುಮಕ್ಕಳು ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ.

'ವಲಸೆ ಕುಟುಂಬಗಳ ಬಹುಸಂಖ್ಯಾತ ಮಕ್ಕಳಿಗೆ ಪಠ್ಯಕ್ರ-ಮವನ್ನು ಅನುಸರಿಸುವುದು ಕಷ್ಟವಾಗುತ್ತದೆ. ಈ ಅಂತರವನ್ನು ಕಲಿಕಾ ಕೇಂದ್ರಗಳು ತುಂಬುತ್ತಿವೆ. ಸದ್ಯ ಈ ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ' ಎಂದು ಬಬಲಾದ ಸರ್ಕಾರಿ ಪ್ರೌಢ ಶಾಲೆಯ ಸಹಾಯಕ ಶಿಕ್ಷಕ ಬಸವರಾಜ್ ಹತ್ತಳ್ಳಿ ಹೇಳಿದರು.

ಈ ಮೊದಲು ಮಹಿಳೆಯರು ಸಲೀಸಾಗಿ ವಲಸೆಗೆ ಗಂಟುಮೂಟೆ ಕಟ್ಟುತ್ತಿದ್ದರು. ಆದರೆ, ಭುವನೇಶ್ವರಿಯಿಂದಾಗ ಊರಿನಲ್ಲೇ ಉಳಿದು ಬದುಕಿಗೆ ಬೇಕಾದಷ್ಟನ್ನು ಗಳಿಸುವ, ಉಳಿಸುವ ಮನಸ್ಸು ಮಾಡುತ್ತಿದ್ದಾರೆ.

ಅನುವಾದ: ಕೀರ್ತಿಕುಮಾರಿ ಎಂ. ❖

ಮುನ್ನೋಟ 08-02-2026 ರಿಂದ 14-02-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹೊಂದಾಣಿಕೆಯಾಗುವ ಗುಣ ಇರುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಭೂಮಿಯ ವ್ಯವಹಾರಗಳಲ್ಲಿ ಪ್ರಗತಿಯನ್ನು ಕಾಣಬಹುದು. ಆರೋಗ್ಯದ ಕುರಿತು ಎಚ್ಚರವಹಿಸಿ. ಮಕ್ಕಳಿಂದ ಅಂತಹ ಅನುಕೂಲವಿರುವುದಿಲ್ಲ. ವಿದ್ಯಾರ್ಥಿಗ-ಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಅಲಂಕಾರಿಕವಾಗಿ ಮಾತನಾಡಿ ಜನರನ್ನು ಸೆಳೆಯುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಬಂಧುಗಳಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ಕುಟುಂಬದಲ್ಲಿ ಸ್ವಲ್ಪ ವಾಗ್ವಾದಗಳಾಗಬಹುದು. ಮಕ್ಕಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಶೀತಬಾಧೆ ನಿಮ್ಮನ್ನು ಕಾಡಬಹುದು. ಮಹಿಳೆಯರೊಡನೆ ಹಣಕಾಸಿನ ವ್ಯವಹಾರಗಳು ಬೇಡ. ಅನಿರೀಕ್ಷಿತ ಆದಾಯ ಮತ್ತು ಖರ್ಚುಗಳು ಬರಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಕಡಿಮೆ ಇರುತ್ತದೆ. ಬಂಧುಗಳು ಈಗ ಸಹಕಾರ ಕೊಟ್ಟಂತೆ ನಟಿಸಿ ನುಣುಚಿಕೊಳ್ಳುವರು. ವ್ಯಾಪಾರದಲ್ಲಿ ಮುನ್ನಡೆ ಇರುತ್ತದೆ. ವಿದೇಶಿ ವ್ಯಾಪಾರ ವ್ಯವ-ಹಾರಗಳಲ್ಲಿ ಸ್ಥಿರತೆಯ ಜೊತೆಗೆ ಲಾಭವನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಮುನ್ನಡೆ ಇರುತ್ತದೆ. ಸ್ವಲ್ಪ ತಲೆನೋವು ಬಾಧಿಸಬಹುದು. ಸಂಗಾತಿ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನ ಗತಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭ ಬಹಳ ಆಲಸಿತನದಿಂದ ಕೂಡಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಪಶು ಸಂಗೋಪನೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಎಲೆಕ್ಟ್ರಾನಿಕ್ ವಿಷಯ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಪಿತ್ತ ವಿಕಾರ ಕೆಲವರನ್ನು ಕಾಡಬಹುದು. ಸಂಗಾತಿ ಕಡೆಯವರ ಸಹಕಾರದಿಂದ ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಕೃಷಿಯಿಂದ ಆದಾಯ ಹೆಚ್ಚುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಒಂದು ರೀತಿಯ ನಿರಾಸೆ ನಿಮ್ಮನ್ನು ಆವರಿಸುತ್ತದೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಪಾದಗಳಲ್ಲಿ ಗಾಯವಾಗುವ ಸಾಧ್ಯತೆಗಳಿವೆ. ವಿದೇಶದಲ್ಲಿರುವ ನಿಮ್ಮ ಸಂಗಾತಿಯನ್ನು ಈಗ ಹೋಗಿ ಸೇರಿಕೊಳ್ಳಬಹುದು. ಕಬ್ಬಿಣದ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಏರಿಳಿತವನ್ನು ಕಾಣಬಹುದು. ಸಂಗಾತಿ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸು ಸಂಪೂರ್ಣ ವ್ಯವಹಾರದಲ್ಲಿ ಕೇಂದ್ರೀಕೃತವಾಗಿರುತ್ತದೆ. ಆದಾಯವು ಏರಿಕೆಯತ್ತ ಹೊರಳುತ್ತದೆ. ಬಂಧುಗಳಿಂದ ನಿಮ್ಮ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಸಾಮರ್ಥ್ಯವನ್ನು ತೋರುವ ಅವಕಾಶವಿದೆ. ಮೂಳೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಆಹಾರ ಧಾನ್ಯಗಳನ್ನು ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಮನಸ್ಸಿನಲ್ಲಿ ಆನಂದವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಒಡಹುಟ್ಟಿದವರ ಸಹಾಯ ಪಡೆಯಲು ಸಾಕಷ್ಟು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳು ನಿರೀಕ್ಷಿತ ಫಲಿತಾಂಶ ಪಡೆಯುವುದು ಕಷ್ಟ. ಸಂಬಂಧಿಕರ ಜತೆಗಿನ ಹಣದ ವ್ಯವಹಾರಗಳಿಂದ ನಷ್ಟವಾಗಬಹುದು. ಸಂಗಾತಿಗೆ ಆಸ್ತಿ ದೊರಕುವ ಯೋಗವಿದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮಲ್ಲಿ ಭಯ ಇರುತ್ತದೆ. ಆದಾಯವು ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಕೃಷಿಭೂಮಿ ಖರೀದಿ ಯೋಗವಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರು-ತ್ತದೆ. ಸ್ತ್ರೀರೋಗ ತಜ್ಞರಿಗೆ ಆದಾಯವು ಹೆಚ್ಚುತ್ತದೆ. ಈಗ ಸಂಗಾತಿಯ ಸಹಕಾರದಿಂದ ನಿಮ್ಮ ಆದಾಯ ಹೆಚ್ಚುತ್ತದೆ. ಹೈನುಗಾರಿಕೆ ಕ್ಷೇತ್ರದಲ್ಲಿರುವವರಿಗೆ ಅನಿರೀಕ್ಷಿತ ಲಾಭವಿರುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ವೃತ್ತಿಯಲ್ಲಿ ಸ್ಥಾನಮಾನ ಹೆಚ್ಚುವ ಸಾಧ್ಯತೆಗಳಿವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆದಾಯ ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರಿ ಅನುದಾನಗಳು ದೊರೆಯುತ್ತವೆ. ವಿದೇಶದಲ್ಲಿನ ನಿಮ್ಮ ಸ್ನೇಹಿತರು ನಿಮಗೆ ಸಹಕಾರ ನೀಡುವರು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗಿ ಲಾಭವು ಬರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಒಡಹುಟ್ಟಿದವರ ಜೊತೆಗಿನ ಹಣಕಾಸಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆತ್ಮವಿಶ್ವಾಸ ಹೆಚ್ಚಾಗಿ ಕೆಲಸ ಮಾಡಲು ಮುನ್ನುಗ್ಗುವಿರಿ. ಆದಾಯವು ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಶತ್ರುಗಳನ್ನು ನಿಗ್ರಹಿಸುವ ಯುಕ್ತಿ ನಿಮಗೆ ತಿಳಿಯುತ್ತದೆ. ಸರ್ಕಾರಕ್ಕೆ ಜಮೀನು ಒದಗಿಸುವವರ ಆದಾಯ ಹೆಚ್ಚುತ್ತದೆ. ಲಲಿತ ಕಲೆಗಳನ್ನು ಅಭ್ಯಾಸ ಮಾಡುತ್ತಿರುವ-ವರಿಗೆ ಉತ್ತಮ ಪ್ರಗತಿ ಇರುತ್ತದೆ. ವಾಯು ಪ್ರಕೋಪ ಕೆಲವರನ್ನು ಕಾಡಬಹುದು. ವೃತ್ತಿಯಲ್ಲಿದ್ದ ಜಂಜಾಟಗಳು ನಿವಾರಣೆಯಾಗುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಕಡಿಮೆ ಇರುತ್ತದೆ. ಇತರ ಮೂಲಗಳಿಂದ ಆದಾಯವನ್ನು ಹೆಚ್ಚಿ-ಸಿಕೊಳ್ಳುವ ಅವಕಾಶ ದೊರೆಯುತ್ತದೆ. ಹಿರಿಯರು ನಿರ್ದಿಷ್ಟ ಗುರಿಯೊಂದಿಗೆ ಮುನ್ನಡೆಯುವರು. ಒಡಹುಟ್ಟಿದವರ ಸಹಕಾರ ಸಿಗುವುದು ಕಡಿಮೆ. ನಾಟ್ಯ ಪ್ರವೀಣರಿಗೆ ಹೆಚ್ಚು ಅವಕಾಶಗಳು ದೊರೆತು ಆದಾಯವು ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸನ್ನು ಪಡೆಯುವ ಯೋಗವಿದೆ. ಶೀತ ಸಂಬಂಧಿತ ದೋಷಗಳು ಕೆಲವರನ್ನು ಕಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹೆಚ್ಚು ಶ್ರಮ ಪಡಬೇಕಾದ ಅನಿವಾರ್ಯತೆ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯ-ಮಗತಿಯಲ್ಲಿರುತ್ತದೆ. ಒಡಹುಟ್ಟಿದವರು ನಿಮಗೆ ಸಹಕಾರ ನೀಡಲು ನಿರಾಕರಿಸಬ-ಹುದು. ವ್ಯವಹಾರ ಅಭಿವೃದ್ಧಿ ಉತ್ತಮವಾಗಿರುತ್ತದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮಪಡಬೇಕಾದ ಅನಿವಾರ್ಯತೆ ಇರುತ್ತದೆ. ಬೆನ್ನುನೋವು ಕೆಲವರನ್ನು ಕಾಡಬಹುದು.

ಪದಬಂಧ 2930



ಮೇಲಿನಿಂದ ಕೆಳಕ್ಕೆ

1. ಹರಿದು ಬಂದ ವಿಷ್ಣುವಿನ ಹೆಸರು. ಪ್ರಹ್ಲಾದನಿಗೆ ಪ್ರಿಯ 4
2. ಗ್ರಾಮ್ಯ ಭಾಷೆಯಲ್ಲಿ ಶೂರ್ಪನಖಿಯಂತಹ ಸೋಗಲಾಡಿ ಹೆಣ್ಣು 4
3. ಜನ್ಮ ನಕ್ಷತ್ರದ ಶ್ರೇಷ್ಠ ಗುಂಪು 4
4. ವಶೀಕರಣದ ಮೋಡಿ 3
6. ಹೊಡೆದಾಟಕ್ಕೆ ಹೆಸರಾದ ಹಂಸವೇ ಇದು? 4
7. ನೂರು ಸಾವಿರದ ಹಣದೊಡೆಯ 4
9. ಶಾಂತಿಯನ್ನು ಉಂಟುಮಾಡುವ ಶಂಭುಪತ್ನಿ 3
11. ಮಂತ್ರೋಚ್ಚಾರಣೆಯ ಮುಂಚೆ ಕೈ ಶುದ್ಧಿಗೊಳಿಸುವ ವಿಧಿ 4
12. ಸಿಗದ ಊರಿನಲ್ಲಿ ಶೂನ್ಯ ಸೇರಿದೆ 4
14. ಕಾಮನ ಬಿಲ್ಲಿನ ಬಾಗು 3
16. ಎಲ್ಲರೂ ಒಂದೇ ಎಂದು ಕೊನೆಯಾಗುವ ಕಾರ್ಯಕ್ರಮ 4
17. ಶೂನ್ಯವನ್ನು ಪರಿಚಯಿಸಿದ ಭಾರತದ ಮೂಲನಿವಾಸಿ ಗಣಿತಜ್ಞ 4
18. ವಿನಾಶ ಬುದ್ಧಿಯ ನರಿ ಕರಟಕ ಮಿತ್ರ 4
20. ಆಸಕ್ತಿ ಹುಟ್ಟಿಸುವಂತೆ ಘಟನೆಯನ್ನು ಹೇಳುವ ಕ್ರಮ 3

ಎಡದಿಂದ ಬಲಕ್ಕೆ

1. ಮುಂಗಡ ಪತ್ರದಲ್ಲಿ ಮಂಡಿಸುವ ಆರ್ಥಿಕ ವ್ಯವಸ್ಥೆಯ ಮೂಲ ಧನ 4
3. ಶ್ರೇಷ್ಠ ಶಿವನಿಗೆ ಮೀಸಲಾದ ಇರುಳು 6
5. ಸರ್ಪ ರಾಜನಲ್ಲಿ ಹುಟ್ಟಿನ ಕೊನೆಯಕ್ಷರ ಲೋಪವಾಗಿದೆ 3
6. ಕೆಟ್ಟು ಹೋದ ಸಮಯಕ್ಕೆ ಹೊಣೆ ಹೊತ್ತ ಯುಗ 4
8. ಕದಡಿಹೋಗುವ ಅಂತರ್ಯದ ಸಮಾಧಾನ ಸ್ಥಿತಿ 4
10. ಎಲ್ಲವೂ ಸಡಿಲವಾಗಿ ಪಾಳು ರೂಪ ತಾಳಿದೆ 3
11. ಆತುರ, ಆತಂಕಗಳು ಒಟ್ಟಿಗೆ ಸೇರಿದ ಮನಸ್ಸಿನ ಗೊಂದಲ 4
13. ಕಿಂಚಿತ್ತೂ ಸಂಶಯವಿಲ್ಲದೆ ಎಲ್ಲಾ ಐಶ್ವರ್ಯ ಪಡೆದ ಒಡೆಯ 4
15. ಹುಲ್ಲಿನಲ್ಲಿ ವಾಸ ಮಾಡಿದ ಕುಪಿತ ಮುನಿ 3
17. ತರ್ಕ ಹೊಂದಿಸಿ ಭಾಷೆಯಿಂದ ಭಾಷೆಗೆ ಮಾಡಿದ ತರ್ಜುಮೆ 4
19. ಸಭೆಯಲ್ಲಿ ಉಪಸ್ಥಿತರಿರುವ ಹಲವಾರು ಮಂದಿ 4
21. ಕೇಳುವ ಕಿವಿಗೆ ಮಧುರವಾದದ್ದು 3
22. ರಾಜ್ಯಸಭೆ, ಲೋಕಸಭೆಗಳಲ್ಲಿ ನಡೆಯುವ ಚರ್ಚೆ 6
23. ಅಕಟಕಟ! ಇದು ಬಾಗಿಲು ಬಡಿಯುವ ಸದ್ದು 4

ಪದಬಂಧ ಉತ್ತರ -2929

ಮೇಲಿಂದ ಕೆಳಕ್ಕೆ

1.ಹಂಸಕ್ಷೀರ 2.ನಿಗಮಾಗಮ 3.ಗಜಗಮನ 4.ಸರಸ್ವತಿ 7.ಸಹಾನುಭೂತಿ 9.ಮಧ್ಯಮಾವತಿ 11.ನರಕ 12.ಹಲವಾ 13. ಸಮಯಾಚಾರ 14.ರಸಪಾನಕ 15.ಅನಾಯಾಸ 17.ಸುಗಂಧಿನಿ

ಎಡದಿಂದ ಬಲಕ್ಕೆ

1.ಹಂಸಧ್ವನಿ 3.ಗಮನಿಸ 5.ಗರುಡಧ್ವಜ 6.ರಸಭಂಗ 8.ಮಧುಮತಿ 10.ಮನಮೋಹನ 14.ಸಕಲೇಶಪುರ 15.ಅತಿಕ್ರಮ 16.ಸಮ್ಮತಿಸು 18.ಚಾರುವದನ 19. ಸವಿಸ್ತಾರ 20.ಕಪಾಲಿನಿ

ನಾದ ನಿನಾದದೊಳು ಸಗುಣ ನಿರ್ಗುಣ ಭಾವ ಸಂಚಾರ

• ರಶ್ಮಿ ಎಸ್

ತುಖಾಮಣೆ ಕಾಹೆ ಕಬೀರ್ ಕಾರ್ಯಕ್ರಮದಲ್ಲಿ ಭುವನೇಶ್ ಕೋಮಕಲಿ ಹಾಗೂ ಜಯತೀರ್ಥ ಮೇವುಂಡಿ ಅವರ ಗಾಯನ ಚಿತ್ರ: ಪ್ರಶಾಂತ್ ಎಚ್.ಜಿ.

'ತುಕಾ ಮ್ಹಣೆ ಬೋಲೆ ಕಬೀರ್' ಇದೆಂಥ ಕಾರ್ಯಕ್ರಮ ಎಂದು ಹುಬ್ಬೇರಿಸಿದ್ದು ನಿಜ. ವಾರಾಣಾಸಿಯ ಕಬೀರರು ಬದುಕಿನ ರೀತಿಯನ್ನು ಹೇಳುತ್ತಲೇ ದೇವರನ್ನು ಮೆಚ್ಚಿಸುವ ಕ್ರಮ ಪ್ರಚಾರ ಮಾಡಿದವರು. ಸಂತ ತುಕಾರಾಮರು ತಮ್ಮ ಆರಾಧ್ಯ ದೈವ ಪಂಢರಪುರದ ವಿಟ್ಠಲನನ್ನು ವಿಠೋಬಾ ಎಂದು ಕರೆಯುತ್ತ, ಸಂಪೂರ್ಣ ಶರಣಾಗತಿಯೇ ಭಕ್ತಿಮಾರ್ಗ ಎಂದು ಪ್ರಚುರಪಡಿಸಿದರು.

ಇವರಿಬ್ಬರನ್ನು ಒಂದೇ ವೇದಿಕೆ ಮೇಲೆ ತುಕಾ ಮ್ಹಣೆ ಅಂದ್ರೆ ತುಕಾರಾಮಾರು ಹೇಳ್ತಾರೆ... ಎಂದರ್ಥ. ಬೋಲೆ ಕಬೀರ್ ಕಬೀರರು ತಮ್ಮೆಲ್ಲ ರಚನೆಗಳಲ್ಲಿ ಕಹತ್ ಕಬೀರ್ ಸುನ್ ಸಾಧು ಅಂತಲೇ ಹೇಳುತ್ತ ಹೋಗುತ್ತಾರೆ. ಇವರಿಬ್ಬರ ಹೇಳ್ವಿಕೆಗಳನ್ನು ಹಿಂದೂಸ್ತಾನಿ ಸಂಗೀತದಲ್ಲಿ ಪ್ರಸ್ತುತಪಡಿಸಿದ ಕಾರ್ಯಕ್ರಮ ಇದು.

ಭಕ್ತಿ ಸಂಗೀತದಲ್ಲಿ ತಮ್ಮ ನಾದನಿಧಿಯಿಂದಲೇ ಕೇಳುಗರನ್ನು ಆವರಿಸುವ ಪಂಡಿತ ಜಯತೀರ್ಥ ಮೇವುಂಡಿ ಅವರು ಹಾಗೂ ಮಧ್ಯಪ್ರದೇಶದವರಾದರೂ ಕನ್ನಡದ ಬೇರುಗಳಿರುವ ಕುಮಾರ ಗಂಧರ್ವರ ಮೊಮ್ಮಗ ಭುವನೇಶ ಕೊಮಕಲಿ ಅವರೂ ತಮ್ಮ ಗಾನನಿಧಿಯಲ್ಲಿ ಕೇಳುಗರನ್ನು ಮೀಯಿಸಿದರು.

ಕಾರ್ಯಕ್ರಮದ ಉದ್ದಕ್ಕೂ ದೇವ ನೀನು, ಜೀವ ನಾನು ಎಂಬುದನ್ನು ಮನದುಂಬಿ ಒಪ್ಪಿಕೊಳ್ಳುವಂತಾದರೆ, ನಾನೂನು ದೇವಾಂಶವಲ್ಲವೆ? ಎಳ್ಳಿನ ಮೊನೆಯಲ್ಲಿಯೂ ಸೂಜಿಯ ಕೊನೆಯಲ್ಲಿಯೂ ಇರಬಹುದಾದ ದೇವರೇ ನನ್ನೊಳಗೂ ಇಲ್ಲವೇ ಎಂಬ ತರ್ಕವನ್ನೂ ಒಡಮೂಡಿಸುತ್ತಿತ್ತು.

ಕೆಲವೊಮ್ಮೆ ತುಕಾರಾಮರ ಭಕ್ತಿಮಾರ್ಗ ಸಶಕ್ತವಾಗಿ ಬೆಂಗಳೂರಿನ ಚೌಡಯ್ಯ ಸಭಾಂಗಣದಿಂದ ಚಂದ್ರಭಾಗಾ ನದಿತೀರಕ್ಕೆ ಕೊಂಡೊಯ್ದರೆ, ಕಬೀರರ ದೋಹೆ ಮತ್ತು ವಾಣಿಗಳು ನಮ್ಮದೇ ಮನದ ಕೊಳದಲ್ಲಿ ಪ್ರಶ್ನೆಗಳ ತರಂಗಗಳನ್ನು ಎಳಿಸುತ್ತಿದ್ದವು. ತನ್ನೊಳಗಿನ ಜಗತ್ತನ್ನೂ ತನ್ನ ಹೊರಗಿನ ಬ್ರಹ್ಮಾಂಡವನ್ನೂ ತಂಬೂರಿಯ ತಂತಿಗಳು ಸೇತುವೆಯ ಕಾರ್ಯನಿರ್ವಹಿಸುತ್ತಿದ್ದವು.

ಭಕ್ತಿಮಾರ್ಗದಲ್ಲಿ ವಿಠೋಬಾ ಕೃಷ್ಣವರ್ಣದ ವಿಠಲ ಮದನ ಕುಮಾರನಂತೆ ಕಂಗೊಳಿಸುತ್ತಾನೆ. ಕಬೀರರ ವಾಣಿಯಲ್ಲಿ ರಾಮ ಕಂಗೊಳಿಸುತ್ತಾನೆ. ಆದರೆ ಈ ರಾಮ ಯಾರು? ದಶರಥಸುತ ರಾಮನಲ್ಲ! ರಾಮನೆಂದರೆ ಓಲೈಸುವವನು, ಸಂತಸ ನೀಡುವವನು, ರಮಣನು, ಸ್ಥಾಯಿಯಾಗಿ ನಿಲ್ಲುವವನು. ಈ ರಾಮ ಕಬೀರನನ್ನು ಒಲಿಸಿಕೊಂಡಾತ. ಆ ರಾಮ ಅಲ್ಲಾಹು ಸಹ ಆಗಿರಬಹುದು, ನೀವು ಪ್ರಾರ್ಥಿಸುವ ಯಾವುದೇ ದೈವ ಆಗಿರಬಹುದು. ಕಬೀರರ ವಾಣಿಯಲ್ಲಿ ದೇವರು ಅಮೂರ್ತರು. ಆದರೆ ಸಜ್ಜನನಾಗಿ, ಸಾಧುವಾಗಿ ಬದುಕುತ್ತಲೇ ಜಗಮೆಚ್ಚುವಂತೆ ಬದುಕುವುದನ್ನು ಹೇಳುತ್ತ ಹೋದರು.

ಮೂರ್ತರೂಪದ ದೇವರನ್ನು ಆರಾಧಿಸುವ ತುಕಾರಾಮರು ಹೇಳುವುದೇನು? ತಮ್ಮಿಷ್ಟ ದೈವವನ್ನು ಕೊಂಡಾಡುತ್ತಲೇ, ದೇವರಿಗೆ ಶರಣಾಗಿ ಬದುಕಿನ ಸತ್ಯವನ್ನು ಅರಹುತ್ತಾರೆ. ನಶ್ವರ ಬದುಕಿನ ಸತ್ಯವನ್ನು ಹರವಿಡುತ್ತಾರೆ. ಅನುರಣಿಯಾ ಥೋಕಡಾ ಅಭಂಗವನ್ನು ಆರಂಭಿಸುವ ಮೊದಲೇ ಹಾಡು ಮತ್ತು ಕಬೀರ್ ವಾಣಿಯ ವಿಶ್ಲೇಷಣೆಗೆ ಬಂದಿದ್ದ ಧನಶ್ರೀ ಲೆಲೆ ಅವರ ನಿರೂಪಣೆ ಅರ್ಥವಿವರಣೆಯನ್ನು ಸರಳವಾಗಿಸುತ್ತಿತ್ತು. ಮರಾಠಿ ಮತ್ತು ಹಿಂದಿ ಮಿಶ್ರಣದ ಅವರ ನಿರೂಪಣೆ ನೆರೆದಿದ್ದ ಕನ್ನಡಿಗರಿಗೂ ಅರ್ಥವಾಗುವಂತಿತ್ತು. ಕಣ, ಅಣುವಿಗಿಂತಲೂ ಸಣ್ಣದಾದ ಕಣ ನೀನು ಆದರೂ ಆಕಾಶಕ್ಕಿಂತಲೂ ಅಗಾಧವೆಂಬ ಸಾಲಿನಿಂದ ಆರಂಭವಾಗುವ ಈ ಅಭಂಗ, ಯಾವುದೇ ಭಂಗವಿಲ್ಲದೆಯೇ ಕೊನೆಯ ಸಾಲಿಗೆ ಬಂದಾಗ, ಈ ಶರೀರ ಇರುವುದೇ ಉಪಕಾರಕ್ಕಾಗಿ ಎಂಬುದು ಅಹುದಹುದೆನುವಂತೆ ಮಾಡುತ್ತಿತ್ತು. ತುಕಾ ಮ್ಹಣೆ ಅತಾನ್ ಉರಲೊ ಉಪಕಾರಪುರ್ತಾ ಎಂಬ ಸಾಲು ಮೇವುಂಡಿ ಅವರ ಧ್ವನಿಯಲ್ಲಿ ಆತ್ಮಸೀಳುವಂತೆ ಬಂತು ತಾಕುತ್ತಿತ್ತು.

ಧನಶ್ರೀ ಲೆಲೆ

ಇಡೀ ಕಛೇರಿಯಲ್ಲಿ ತರ್ಕ ಮತ್ತು ಜಿಜ್ಞಾಸೆಯೊಂದಿಗೆ ಧನಶ್ರೀ ಲೆಲೆ ಅವರ ಸುಮಧುರ ಧ್ವನಿಯ ಮಾತು, ಕೇಳುಗರನ್ನು ಕಛೇರಿಯಿಂದಾಚೆ ಹೋಗದಂತೆ ಹಿಡಿದಿಡುತ್ತಿತ್ತು.

ಸಂತ ಕಬೀರ್ ಮತ್ತು ಸಂತ ತುಕಾರಾಮ್ ಇಬ್ಬರೂ ಈ ಬದುಕು ನಶ್ವರ. ದೇವರನ್ನು ಓಲೈಸುವುದೆಂದರೆ ಸೇವೆ ಮಾಡುವುದೇ ಆಗಿದೆ, ಇಲ್ಲಿಯದ್ದು ನಾಲ್ಕು ದಿನಗಳ ಜಾತ್ರೆ, ಉಳಿದಂತೆ ಅವನನ್ನು ಸೇರುವ ಯಾತ್ರೆ ಎಂದೇ ಹೇಳಿದರು. ಅಭಂಗದಲ್ಲಿ ವಧುವಿನ ಮಾತುಗಳು ಹಾಡಾಗಿವೆ. ಮರ್ತ್ಯಲೋಕವನ್ನು ಮಾಹೇರ್ ಎಂದೂ (ತವರು ಮನೆಯೆಂದೂ) ದೇವರನ್ನು ಸೇರಿ, ಒಂದಾಗುವುದೇ ಮದುವೆಯೆಂದೂ ಹೇಳುತ್ತಾರೆ.

ಈ ಮರ್ತ್ಯಲೋಕದಲ್ಲಿರುವ ಜೀವವು, ಸುರಲೋಕದ ದೇವನನ್ನು ಸೇರುವ ತವಕದಲ್ಲಿರುವ ಕುರಿತೇ ಹೇಳುತ್ತಾರೆ. ಹಾಗೆ ಹೇಳುವ ಹಾಡು ಮತ್ತು ಕಬೀರ್ ವಾಣಿ ಒಟ್ಟೊಟ್ಟಿಗೆ ಕೇಳಿದಾಗ ಸಾವನ್ನು ಹೀಗೂ ಸ್ವೀಕರಿಸಬಹುದು, ದೇವರೊಂದಿಗೆ ಮಿಲನಕ್ಕಾಗಿ ಹೊರಡಬಹುದು ಎಂದೆನಿಸುವಾಗ, ಈ ಕ್ಷಣಿಕ ಬದುಕು ಯಾವಾಗ ಬೇಕಾದರೂ ಮಗ್ಗಲು ಬದಲಿಸಬಹುದು ಎಂದೆನಿಸುತ್ತದೆ.

ಇದೇ ಅರ್ಥದ ಕಬೀರರ ಕೌನ್ ಠಗವಾ ನಗರಿಯಾ ಲೂಟಲ್ ಹೋ ಹಾಡನ್ನು ಭುವನೇಶ್ ಪ್ರಸ್ತುತಪಡಿಸಿದರು. ಕಬೀರರ ದೋಹೆಗಳ ಮೂಲ ಭಾಷೆ ಸಾಧುಕ್ಕಡಿ ಎಂದು ಕರೆಯಲಾಗುತ್ತದೆ. ಇದು ಹಿಂದಿ, ಅವಧ್, ಭೋಜಪುರಿ, ಮೈಥಿಲಿ ಮುಂತಾದ ಹಿಂದಿಯ ಇತರ ಅವತರಣಿಕೆಗಳ ಮಿಶ್ರಣವಾಗಿದೆ. ಇದಕ್ಕೆ ಪಂಚಮೇಲ್ ಖಿಚಡಿ ಎಂದೂ ಕರೆಯಲಾಗುತ್ತದೆ. ಅದೇ ಭಾಷೆಯಲ್ಲಿರುವ ಈ ಹಾಡು ವಧುವಿನ ತಲ್ಲಣವನ್ನೇ ಹೇಳುತ್ತದೆ. ಕೊನೆಯ ಸಾಲಿನಲ್ಲಿ ಈ ಜಗದಿಂದ ಎಲ್ಲ ಬಂಧಗಳಿಂದ ಮುಕ್ತವಾಗುವ ಬಗೆಯನ್ನು ಹೇಳಿದಾಗಲೇ ನರಮನುಷ್ಯರು ವಧುವಿನಂತೆಯೂ, ದೇವರು ವರನಂತೆಯೂ, ಸಾವು ಮಿಲನದಂತೆಯೂ ಕಂಡು ಬರುತ್ತದೆ.

ಕಾರ್ಯಕ್ರಮದ ಪರಿಕಲ್ಪನೆ ಮತ್ತು ಪ್ರಸ್ತುತಿಯನ್ನು ಹೇಳುತ್ತ ಪಂಚಮ್ ನಿಷಾದ್‌ನ ನಿರ್ದೇಶಕಿ ಶಶಿ ವ್ಯಾಸ್, ಇದು ಸತ್ಯಶೋಧದ ಯಾನ. ಕಬೀರ ಹಾಗೂ ತುಕಾರಾಮರನ್ನು ನಿಕಷಕ್ಕೆ ಒಡ್ಡಿದಂತೆ ಅವರ ಸಗುಣ ಮತ್ತು ನಿರ್ಗುಣ ತತ್ವವನ್ನು ಪ್ರೇಕ್ಷಕರ ಎದುರಿಗಿಡುತ್ತ ಹೋಗುವುದು. ಎರಡು ವಿಭಿನ್ನ ದಾರಿಗಳೂ ಗಂಗೆ ಮತ್ತು ಚಂದ್ರಭಾಗಾ ನದಿಗಳ ಹರವಿನಂತೆ. ಆದರೆ ಸೇರುವುದು ಮಾತ್ರ ಸಮುದ್ರವನ್ನೇ. ಎರಡೂ ತತ್ವಗಳು ಅಧ್ಯಾತ್ಮವನ್ನೇ ಹೇಳುತ್ತವೆ. ಸರಳವಾಗಿ, ಸುಂದರವಾಗಿ. ಬದುಕುವ ವಿಧಾನವನ್ನು ಹೇಳುತ್ತಲೇ ದೇವ ನಲುಮೆಯತ್ತ ಚಿತ್ತ ಹೊರಳಿಸುವಂತೆ ಮಾಡುತ್ತವೆ. ಈ ವಿಶಿಷ್ಟ ಪ್ರಯೋಗಕ್ಕೆ ಧನಶ್ರೀ ಲೆಲೆ ಅವರ ಅರ್ಥವಿಸ್ತಾರ ಜನರೊಳಗೆ ಒಂದು ಪ್ರಶ್ನೆ ಮಥಿಸುವಂತೆ ಮಾಡುತ್ತದೆ ಎಂದಿದ್ದು, ಕಾರ್ಯಕ್ರಮ ಕೊನೆಗೊಂಡಾಗ ಸತ್ಯವೆನಿಸಿತ್ತು

ಭಾರತದಾದ್ಯಂತ ಸಂಚರಿಸಲಿರುವ ಈ ತಂಡ ದೆಹಲಿ, ಮುಂಬೈ ಮುಗಿಸಿ ಬೆಂಗಳೂರಿನತ್ತ ಬಂದಿತ್ತು. ಮುಂದಿನ ಗಮ್ಯ ಪುಣೆ. ಆದರೆ ಬೆಂಗಳೂರಿಗೆ ಬಂದೂ ಕನ್ನಡದ ಹಾಡು ಹಾಡಲಿಕ್ರ ಹೆಂಗ ಎನ್ನುತ್ತಲೇ ಮೇವುಂಡಿ ಅವರು ರಾಯರನ್ನು ನೆನೆದರು. ಗುರು ರಾಘವೇಂದ್ರ ರಾಯರ ಭಜನೆ ಕನ್ನಡಿಗರ ಕರತಾಡನಗಳು ತುಂಗಭದ್ರೆಯ ಕಿನಾರೆಯವರೆಗೂ ಕೇಳಿಸುವಂತೆ ಅನುರಣಿಸಿದವು.

ಕಾರ್ಯಕ್ರಮ ಮುಗಿದಾಗ ಸಭಾಂಗಣವೇ ಎದ್ದುನಿಂತು ಕರತಾಡನ ಮಾಡಿ ಮೆಚ್ಚುಗೆ, ಗೌರವ ವ್ಯಕ್ತಪಡಿಸಿತು. ಜಯತೀರ್ಥ ಮೇವುಂಡಿ, ಭುವನೇಶ್ ಕೋಮಕಲಿ ಅವರ ಹಾಡುಗಾರಿಕೆ ಜೊತೆಗೆ ಮನ ಗೆದ್ದಿದ್ದು ಅವರ ಸಾಥಿದಾರರು. ತಬಲಾದಲ್ಲಿದ್ದ ಮಂದಾರ ಪುರಾಣಿಕ್ ಅವರು ಅಭಂಗ್‌ನ ಕೊನೆಯಲ್ಲಿ ವಿಠಲ ವಿಠಲ ನಾಮಸ್ಮರಣೆಯಾದಾಗಲಂತೂ ಪ್ರೇಕ್ಷಕರ ಮನಗೆದ್ದರು. ಜ್ಞಾನೇಶ್ವರ್ ಸೋನವಾಣೆ ಅವರ ಹಾರ್ಮೋನಿಯಂನಲ್ಲಿ ಕೀರ್ತನದ ಪದಗಳೇ ನುಡಿಯುತ್ತಿದ್ದವು. ಸುಖದ್ ಮುಂಡೆ ಅವರ ಪಖವಾಜ್ ಹಾಗೂ ಸುನಿಲ್ ಕುಮಾರ್ ಅವರ ಬಾಂಸುರಿ, ತಾಳವಾದ್ಯದಲ್ಲಿ ಸೂರ್ಯಕಾಂತ್ ಸರ್ವೆ ಎಲ್ಲರ ಗಮನಸೆಳೆದರು.

ಕಬೀರರು ಮತ್ತು ತುಕಾರಾಮರು ಕೇಳುಗರ ಮನಸಿನೊಳಗಿಳಿದು ಒಂದಾಗಿದ್ದರು. ಕನ್ನಡದ ಮನದೊಳಗು ಕಾಶಿಯ ಕಬೀರರು, ಮಹಾರಾಷ್ಟ್ರದ ತುಕಾರಾಮರು ಒಂದಾದ ಹಾಗೆ ಮೀರಾಬಾಯಿ ಭಜನ್‌ನಲ್ಲಿಯ ಕೃಷ್ಣ, ಅಕ್ಕಮಹಾದೇವಿಯ ಮಲ್ಲಿಕಾರ್ಜುನರೂ ಒಂದಾದರೆ....

ಮೊದಲ ಓದು

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಪಕ್ಷಿನೋಟ



ಕನ್ನಡ ಮೊದಲೋ ತಮಿಳು ಮೊದಲೋ
ಲೇ: ರಾ.ನಂ. ಚಂದ್ರಶೇಖರ
ಪ್ರ: ಸಪ್ನ ಬುಕ್ ಹೌಸ್
ಸಂ: 080–40114455

ಪ್ರಾಚೀನತೆಯೇ ಶ್ರೇಷ್ಠತೆಯ ಮಾನದಂಡ ಅಲ್ಲ. ಆದರೂ ಆ ಬಗ್ಗೆ ಅನೇಕರಿಗೆ ಅದರ ಒಲವು ಅತಿಯಾಗಿ ಕಾಡುತ್ತದೆ. ನಟ ಕಮಲ್‌ಹಾಸನ್ ಅವರ 'ತಮಿಳಿನಿಂದ ಕನ್ನಡ ಹುಟ್ಟಿತು' ಎನ್ನುವ ಹೇಳಿಕೆ ವಿವಾದದ ಅಲೆಯನ್ನೇ ಎಬ್ಬಿಸಿತ್ತು. ಆ ಹೇಳಿಕೆಗೆ ಲೇಖಕ ರಾ.ನಂ. ಚಂದಶೇಖರ ಪ್ರತಿಕ್ರಿಯಾತ್ಮಕ ಎನ್ನುವಂತೆ 'ಕನ್ನಡ ಮೊದಲೋ ತಮಿಳು ಮೊದಲೋ', 'ಕನ್ನಡಕ್ಕೆ ಆಗುತ್ತಿರುವ ಅವಮಾನಕ್ಕೆ ಕೊನೆ ಎಂದು?', 'ಮಾನವರು ಮಾತನಾಡಿದ ಮೊದಲ ಭಾಷೆ ತಮಿಳು' ಎನ್ನುವ ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳ ಜೊತೆ 'ಕನ್ನಡನಾಡು–ನುಡಿಗೆ ಸಂಬಂಧಿಸಿದ ವರದಿಗಳು', 'ಹೊರನಾಡ ಕನ್ನಡ ಸಂಘಟನೆಗಳು', 'ಚಿರಂಜೀವಿಯಾಗಿರುವ ಕನ್ನಡ ನಾಡು–ನಡಿ: ಸಮಸ್ಯೆಗಳು', 'ಭಾಷಾವಾರು ರಾಜ್ಯಗಳಿಗೆ–70: ಏಳುಬೀಳುಗಳ ಹಿನ್ನೋಟ' ಹೀಗೆ ಭಾಷೆ, ನೆಲ ಮತ್ತು ಜಲಕ್ಕೆ ಸಂಬಂಧಿಸಿದ ವಿಶ್ಲೇಷಣಾತ್ಮಕ 15 ಲೇಖನಗಳನ್ನು ಸಂಗ್ರಹಿಸಿ 'ಕನ್ನಡ ಮೊದಲೋ ತಮಿಳು ಮೊದಲೋ' ಕೃತಿಯಲ್ಲಿ ನೀಡಿದ್ದಾರೆ.

ಸಂಶೋಧಕ ಶಂ.ಬಾ. ಜೋಷಿ ಅವರ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಕೃತಿಯನ್ನು ಆಧರಿಸಿದ ಲೇಖನವೂ ಇದೆ. ಅದರಲ್ಲಿ ನಾಡು, ಜನಾಂಗ, ಐತಿಹ್ಯ, ಪೌರಾಣಿಕ ನಂಬಿಕೆಯೂ ವಿವರ ಬರುತ್ತದೆ. ಕನ್ನಡನಾಡಿನ ವಿಸ್ತಾರ 'ಕಾವೇರಿಯಿಂದ ಗಂಗೆಯವರೆಗೂ ಹಬ್ಬಿತ್ತು' ಎನ್ನುವ ವಿವರವನ್ನು ನಿಡುತ್ತಾರೆ.

ಕನ್ನಡ ಭಾಷೆ ಮತ್ತು ನೆಲದ ಅಭ್ಯುದಯಕ್ಕೆ ಸಂಬಂಧಿಸಿದಂತೆ ರಚನೆಯಾದ ವರದಿಗಳ ವಿವರವನ್ನು 'ಕನ್ನಡನಾಡು–ನುಡಿಗೆ ಸಂಬಂಧಿಸಿದ ವರದಿಗಳು' ಲೇಖನ ನೀಡುತ್ತದೆ. ಭಾಷಾವಾರು ರಾಜ್ಯದ ಒತ್ತಾಸೆಯ ಹಿನ್ನೆಲೆಯಲ್ಲಿ ಕರ್ನಾಟಕ ಏಕೀಕರಣ ಆಗಿದೆ. ಗಡಿ–ಜಲ ಹಂಚಿಕೆ, ಶಿಕ್ಷಣ, ಉದ್ಯೋಗಕ್ಕೆ ಸಂಬಂಧಿಸಿದಂತೆ ನಿರೂಪಿಸಿದ 'ಮಹಾಜನ ವರದಿ', 'ಮಲ್ಲಾರಾಧ್ಯ ವರದಿ', 'ರಾಷ್ಟ್ರೀಯ ಶಿಕ್ಷಣ ಆಯೋಗ', 'ವಿ.ಕೃ. ಗೋಕಾಕ್ ಸಮಿತಿ ವರದಿ', 'ಎಚ್. ನರಸಿಂಹಯ್ಯ ವರದಿ', 'ಚಂಪಾ ವರದಿ', 'ಬರಗೂರು ವರದಿ', 'ಸರ್ಕಾರಿ ಶಾಲೆಗಳ ಸಬಲೀಕರಣ ವರದಿ', ವೃತ್ತಿ ಶಿಕ್ಷಣದಲ್ಲಿ ಕನ್ನಡ ಕಡ್ಡಾಯಕ್ಕೆ ಸಂಬಂಧಿಸಿದ 'ಹಿ.ಚಿ. ಬೋರಲಿಂಗಯ್ಯ ವರದಿ', ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದ 'ಸರೋಜಿನಿ ಮಹಿಷಿ ವರದಿ' ಸೇರಿದಂತೆ ಬೇರೆ ಬೇರೆ ವರದಿಗಳನ್ನೂ ಒಳಗೊಂಡಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪೂರ್ವ ವರದಿಗಳ ಪ್ರಸ್ತಾಪವನ್ನೂ ಇಲ್ಲಿ ತಂದಿದ್ದಾರೆ. ಕನ್ನಡ ಲಿಪಿಯ ಉಗಮ ಮತ್ತು ದ್ರಾವಿಡ ಭಾಷಾ ವಂಶದ ವಿವರಣೆಯನ್ನು ಲೇಖಕರು ನೀಡಿದ್ದಾರೆ.

ಪುಟ: 168 ₹170

...ಸ್ಕಾಲರ್‌ಶಿಪ್ ಯಾತ್ರೆ

10ನೇ ಪುಟದಿಂದ...

ಕೊಯಿಲದ ಯಶಸ್ವಿತಾ ಹೇಳುತ್ತಿದ್ದರು, 'ನನಗೆ ತಂದೆ ಇಲ್ಲ, ತಾಯಿ ಕ್ಯಾನರ್‌ಪೀಡಿತರಾಗಿದ್ದರು. ಪಿಯುಸಿಗೆ ಪ್ರವೇಶ ಪಡೆಯಲು ಬೇಕಾದ ಅಲ್ಪ ಹಣವೂ ನಮ್ಮ ಬಳಿ ಇರಲಿಲ್ಲ. ನಾರಾಯಣ ಮೇಷ್ಟ್ರು ತಾವೇ ಹಣ ಭರಿಸಿ ಪ್ರವೇಶ ಕೊಡಿಸಿದರು. ನನಗೆ ಮತ್ತು ನನ್ನ ತಂಗಿಗೆ ಬಸ್‌ಪಾಸ್ ಮಾಡಿಸಿಕೊಟ್ಟರು. ನಮ್ಮ ಕುಟುಂಬ ನಿರ್ವಹಣೆಗೂ ನೆರವು ನೀಡಿದರು. ನಾನು ಬಿಎಸ್‌ಸಿ (Bachelor of Science in Medical Laboratory Technology)ಗೆ ಪ್ರವೇಶ ಪಡೆಯುವಾಗ ₹10 ಸಾವಿರ ಕೊಟ್ಟಿದ್ದಲ್ಲದೆ, ದಾನಿಗಳಿಂದ ₹35 ಸಾವಿರ ಸಹಾಯ ಕೊಡಿಸಿದರು. ನನಗೆ ಬಂದ ಸ್ಕಾಲರ್‌ಶಿಪ್ ಹಣದಲ್ಲಿ ತಂಗಿಯನ್ನು ಓದಿಸಿದೆ. ಆಕೆಗೆ ಈಗ ಪ್ರಯೋಗಾಲಯದಲ್ಲಿ ನೌಕರಿ ಸಿಕ್ಕಿದೆ. ನಾವು ಬದುಕು ಕಟ್ಟಿಕೊಳ್ಳಲು ನೆರವಾದ ಮೇಷ್ಟ್ರಿಗೆ ನಮ್ಮ ಕುಟುಂಬ ಸದಾ ಚಿರಋಣಿ'.

ಇದು ಯಶಸ್ವಿತಾ ಕುಟುಂಬದ ಮಾತಷ್ಟೇ ಅಲ್ಲ. ಇವರಿಂದ ಉಪಕೃತರಾದ ಎಲ್ಲರೂ ಹೇಳುವುದು ಇದೇ ಮಾತನ್ನು.

ಬೈಕ್ ಮೇಲೆ ಊರು ಊರು ಸುತ್ತುವ ಈ ಮೇಷ್ಟ್ರು, ವಾಸ್ತವದಲ್ಲಿ ಅನೇಕ ಮಕ್ಕಳ ಭವಿಷ್ಯದ ಚಾಲಕರಾಗಿದ್ದಾರೆ.

ಅಂಗನವಾಡಿ ಮಕ್ಕಳೊಂದಿಗೆ ನಾರಾಯಣ ನಾಯಕ್

ಪಟ್ಟು ಬಿಡದೆ ಕೆಲಸ

ವಿದ್ಯಾರ್ಥಿ ವೇತನಕ್ಕಾಗಿ ಮಕ್ಕಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಿತ್ತು. ನಾರಾಯಣ ಮೇಷ್ಟ್ರು ಕಳಕಳಿಗೆ ಸ್ಪಂದಿಸಿದ ಇಲಾಖೆಯ ಸಿಬ್ಬಂದಿಯೊಬ್ಬರು, 'ಎಲ್ಲ ಮಕ್ಕಳ ದಾಖಲೆ ಸಿದ್ಧವಾಗಿಟ್ಟುಕೊಳ್ಳಿ, ರಜಾ ದಿನದಂದು ನಾನೇ ಅವರ ಕಾಲೇಜಿಗೆ ಬಂದು ಅರ್ಜಿ ಭರ್ತಿ ಮಾಡುತ್ತೇನೆ' ಎಂದರು. ಇವರು ಖುಷಿಯಿಂದ ಆ ಕಾಲೇಜಿಗೆ ಹೋಗಿ ಪ್ರಾಚಾರ್ಯರಿಗೆ ವಿಷಯ ತಿಳಿಸಿದರು. ತಮ್ಮದೇ ಕಾಲೇಜಿನ ಮಕ್ಕಳಿಗೆ ನೆರವಾಗಲು ಬಂದಿರುವ ಈ ವಯೋವೃದ್ಧರ ಕಾರ್ಯಕ್ಕೆ ಒಪ್ಪಿಗೆ ಸೂಚಿಸುವ ಬದಲು ಆ ಪ್ರಾಚಾರ್ಯ, 'ಅರ್ಜಿಗಳನ್ನು ಪ್ರಿಂಟ್ ಹಾಕಲು ಪೇಪರ್ ಬೇಕಲ್ಲವೇ?' ಎಂದರು. 'ಆಯ್ತು ಸ್ವಾಮಿ, ಪೇಪರ್ ನಾನು ತರುತ್ತೇನೆ' ಎಂಬ ಉತ್ತರ ಇವರಿಂದ. 'ಪೇಪರ್ ನೀವು ತಂದ್ರೆ, ಪ್ರಿಂಟರ್ ಇಂಕ್ ಯಾರು ತರುತ್ತಾರೆ' ಎಂಬ ಮರುಪ್ರಶ್ನೆ ಅತ್ತಕಡೆಯಿಂದ. ಆ ಪ್ರಾಚಾರ್ಯರ ಮನಸ್ಥಿತಿ ಅರಿತ ಇವರು ಪಕ್ಕದ ಕಾಲೇಜಿಗೆ ಹೋಗಿ ಮನವೊಲಿಸಿದರು. ಈ ಕಾಲೇಜಿನ ಎಲ್ಲ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅರ್ಜಿ ಭರ್ತಿ ಮಾಡಿಸಿ, ಖುಷಿಯಿಂದ ಮನೆಯತ್ತ ಹೆಜ್ಜೆ ಹಾಕಿದರಂತೆ. ನಮ್ಮ ಮಧ್ಯೆ ಇಂತಹವರೂ ಇದ್ದಾರೆ ಎಂದು ನಗುತ್ತಾರೆ ಈ ಮೇಷ್ಟ್ರು.

ಕಥೆ

ಹಳ್ಳಿವೆಂಕಟೇಶ್ ಅವರ ಭವಶಿಕ್ಷೆ

prajavani.net/short-story

ಕವನ

ದೀಪಿಕಾ ಬಾಬು ಅವರ ಉಟ್ಟ ಸೀರೆಯ ಸುಕ್ಕು

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ನಮ್ಮೂರ ಸಂತೆ

ನೋಡು ನೋಡು ನಡೆಯುವುದಿಲ್ಲಿ
ವಾರಕ್ಕೊಮ್ಮೆ ಸಂತೆ
ತರತರದ ತರಕಾರಿ ಸಿಗುವುದಿಲ್ಲಿ
ಮೂಲಂಗಿ ಮತ್ತೆ ಮೆಂತೆ
ದೇಹಕ್ಕೆ ಬೇಕು ಕಬ್ಬಿಣದ ಅಂಶ
ಮಾರುತಿಹುದಿಲ್ಲಿ ಬದನೆ
ಕಣ್ಣಿಗೆ ಬೇಕು ಗಜ್ಜರಿ ಚವಳಿ
ಕೊಳ್ಳುವೆವು ನಾವು ಅದನೆ
ಶಕ್ತಿಗೆ ಬೇಕು ಪೌಷ್ಟಿಕ ಆಹಾರ
ಅದಕಾಗಿ ಬೇಕು ಗೆಣಸು, ಆಲು
ಸಾರಿಗೆ ಬೇಕು ಕರಿಬೇವು ಸೊಪ್ಪು
ಬಾಯ್‌ಸವಿಗೆ ಇದುವೆ ಮೇಲು

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಮ್ಯಾಟ್ ಅಲ್ಲ ನಾಯಿ!

ಗುಂಡ ಆಟವಾಡಲು ಮನೆಯಿಂದ ಹೊರಹೋಗಿದ್ದ. ಮಣ್ಣಿನಲ್ಲಿ ಆಟವಾಡಿ ಬಂದು ಬಾಗಿಲ ಬಳಿ ಬರುತ್ತಲೇ ಹೊಸ ಮ್ಯಾಟ್ ಹಾಕಿದಂತೆ ಕಂಡಿತು. ಅಮ್ಮ ಖರೀದಿಸಿ ತಂದಿರಬೇಕು ಎಂದು ಭಾವಿಸಿ ಮಣ್ಣಾಗಿದ್ದ ತನ್ನ ಕಾಲು ಒರೆಸಲು ಮೆಟ್ಟಿದ. ಆ ಕ್ಷಣದಲ್ಲೇ ಕೈಕಾಲು ಚಾಚಿ ಮಲಗಿದ್ದ ನಾಯಿ ಬೌ..ಬೌ..ಎನ್ನುತ್ತಾ ಗದರಿತು. ಗುಂಡ ಬೆಚ್ಚಿಬಿದ್ದ.



ಪೇಚಿನ ಪ್ರಶ್ನೆ

ಇಲ್ಲಿ ಕೊಟ್ಟಿರುವ ಸಂಖ್ಯೆಗೆ ಸಮವಾಗುವಂತೆ ಮುಂದಿನ ಸಂಖ್ಯೆಗೆ ಯಾವ ಇಂಗ್ಲಿಷ್ ಪದ ಸೇರಿಸಿದರೆ ಸಮೀಕರಣ ಸರಿಯಾಗುತ್ತದೆ.

108 = 9________________

ವರ್ಡ್‌ಗೇಮ್

ಇಲ್ಲಿರುವ ಪದಕ್ಕೆ ಕೊಟ್ಟಿರುವ ಎರಡಕ್ಷರ ಸೇರಿಸಿ ಒಂದೇ ಪದ ಮಾಡಿ.

HONEY + ST = ________________

ಶಬ್ದಾಟ

ಇಲ್ಲಿ ಕೊಟ್ಟಿರುವ ಪದ ಹಾಗೂ ಒಂದಕ್ಷರ ಕೂಡಿಸಿ ಬೇರೊಂದು ಪದ ರಚಿಸಿ.

ಗಿಳಿದರ + ಸ್ತೆ = ________________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜಾಣಪದ ಆಟ

1. ಇಲ್ಲಿರುವ 'ಕೈ' ಅಕ್ಷರಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ಸೇರಿಸಿ ಮೂರಕ್ಷರದ ಪದ ಮಾಡಿ.

1	ಕೈ			
2	ಕೈ			
3	ಕೈ			
4	ಕೈ			
5	ಕೈ			
6	ಕೈ			
7	ಕೈ			
8	ಕೈ			
9	ಕೈ			
10	ಕೈ			

ಅಕ್ಷರ ಪಟ್ಟಿ

ತು	ವಾ	ಗ	ಚಾ	ಲಾ	ತ್ತು	ರ	ಡ	ಚು	ಸ
ಹಿ	ಕೊ	ಎ	ಕಾ	ವ	ಡಿ	ಡು	ತ್ತು	ಉ	ಶ

2. ಇಲ್ಲಿ ಕೊಟ್ಟಿರುವ 'ಅವಿ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಅ	ವಿ			
2	ಅ	ವಿ			
3	ಅ	ವಿ			
4	ಅ	ವಿ			
5	ಅ	ವಿ			

ಅಕ್ಷರ ಪಟ್ಟಿ					
	ಧೇ	ಸ	ಭಾ	ಕ	ರೋ
	ಧ	ವೇ	ಜ್ಯ	ಶ್ವಾ	ಯ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಮುರಿ	+	ಚಿತ್ತ	+	ನ್ನಾ	=	
2	ಸಾರ	+	ಗತಿ	+	ಶಾಂ	=	
3	ಸಲ	+	ಕೆರ	+	ಗಾ	=	
4	ತಿವಿ	+	ಭೂಪ	+	ಟ್ಟ	=	
5	ಲಾಲಿ	+	ಬಕ	+	ಪ	=	

ಗಣಿತದಲ್ಲಿ ಗರ್ದಿಗಮ್ಮತ್ತು

3ನ್ನು ಕೂಡಿಸಿ ಮಜಾ ನೋಡು

9	8	7	6	5	4	3	2	1
9	8	7	6	5	4	3	2	1
9	8	7	6	5	4	3	2	1
1	2	3	4	5	6	7	8	9
1	2	3	4	5	6	7	8	9
1	2	3	4	5	6	7	8	9
0	0	0	0	0	0	0	0	3

ಉತ್ತರ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ
1.ಕಾರಣಕೇಳು 2.ಮಾಗಡಿರಸ್ತೆ
3.ದಿನಸಿಕೊಳ್ಳು 4.ಹಣದಭಾರ
5.ಹಳ್ಳಿಬಾಲಕ

ಶಬ್ದಾಟ
ಸರಕಾರಿ ಸವಲತ್ತು
ವರ್ಡ್‌ಗೇಮ್: HORSE

ಜಾಣಪದ ಆಟ 1
1.ಗುಬ್ಬಿ;ಬ್ರಹ್ಮಾಸ್ತ್ರ 2.ಇಂಗು;ಮಂಗ
3.ಬಾಲ;ಬೆಕ್ಕು 4.ತೋಳ;ತೋಳ
5.ತಾಳ;ಬಾಳು 6.ಆನೆ;ದಾರಿ
7.ಜಾಣ;ಮಾತು 8.ಸೊಸೆ;ಸೌಭಾಗ್ಯ
9.ಓತಿಕ್ಯಾತಕ್ಕೆ;ಸಾಕ್ಷಿ 10.ಸಿಟ್ಟು;ವೈರಿ

ಜಾಣಪದ ಆಟ 2
1.ಪರಿಮಳ 2.ಪರಿಶುದ್ಧ
3.ಪರಿಹಾಸ 4.ಪರಿಮಿತಿ
5.ಪರಿಭಾಷೆ

ಹೊಂದಿಸು ಆನಂದಿಸು
1:H, 2:E, 3:G, 4:F, 5:C,
6:J, 7:D, 8:I, 9:B, 10:A

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಅಭಿಮನ್ಯು
ಬೆಂಗಳೂರು

ತೇಜಸ್ ಸಿ.ಪಿ.
ವಿಜಯನಗರ


ಸ್ನೇಹ ಎಚ್.ಎಂ.
ಹಿರಿಯೂರು

ಸಮನ್ವಿತ ಎಸ್.
ಮಂಡ್ಯ

ರಾಘವ್ ಎ.ಪಿ.
ಹಿರೇಬಾಗೇವಾಡಿ


ಸಂತೋಷ್ ಹಳೆಮನಿ
ನರಗುಂದ

ಮಾರಿಷಸ್ ಸ್ವರ್ಗವೂ ಮಾಸದ ನೆನಪುಗಳೂ

ಹಿಂದೂ ಮಹಾಸಾಗರದಲ್ಲಿರುವ ಮಾರಿಷಸ್ ಎಂಬ ಪುಟ್ಟ ದ್ವೀಪ ಸೌಂದರ್ಯದಲ್ಲಿ ಸ್ವರ್ಗಕ್ಕೆ ಸಮಾನ. ಹಲವು ಕೌತುಕಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಇದು ಪಕ್ಷಿನೋಟದಲ್ಲಿ ನೀಲಮಣಿಯಂತೆ ಕಂಗೊಳಿಸುತ್ತದೆ. ಇಂತಹ ಜಾಗಕ್ಕೆ ಭೇಟಿ ನೀಡಿದ ಲೇಖಕರು ಅಲ್ಲಿನ ಕ್ರೇಟರ್ ಸರೋವರ, ಏಳು ಬಣ್ಣದ ದಿಣ್ಣೆಗಳು, ಕಪ್ಪು ಬಣ್ಣದ ಕಡಲತೀರದಲ್ಲಿ ಹೆಜ್ಜೆ ಹಾಕಿದಾಗ...

ಚಾಮರೆಲ್ ಜಲಪಾತ

• ಚಿತ್ರ–ಲೇಖನ: ಶೇಖರ್ ಗೌಳೇರ್

ಲೇ ಮಾರ್ನ್ ಬ್ರಾಬಂಟ್ ಕಡಲತೀರ

ಪ್ರವಾಸ

ಅರಬ್ ನಾವಿಕರು ಮಾರಿಷಸ್‌ಗೆ ಬಂದು 'ದಿನಾ ಅರೋಬಿ' ಹೆಸರಿಟ್ಟು ನೆಲೆಸಿದರು. ಪ್ರಕ್ಷುಬ್ಧ ವಾತಾವರಣಕ್ಕೆ ಹೆದರಿ ದ್ವೀಪ ತ್ಯಜಿಸಿದರು. 1507ರಲ್ಲಿ ಪೋರ್ಚುಗೀಸರು ಹಂಸಗಳ ತಾಣ ಎಂದು ಬಣ್ಣಿಸಿದರು. 1598ರಲ್ಲಿ ಡಚ್ಚರ ಹಡಗು ಚಂಡಮಾರುತಕ್ಕೆ ಸಿಕ್ಕಿ ಹೈರಾಣಾದಾಗ ಒಳಗೆ ಪ್ರವೇಶಿಸಿ, ನೆದರ್‌ಲ್ಯಾಂಡ್ಸ್ ರಾಜಕುಮಾರನ ಹೆಸರನ್ನಿಟ್ಟು 'ಮಾರಿಷಸ್' ಎಂದು ಕರೆದರು.

1715ರಲ್ಲಿ ಫ್ರೆಂಚರ ಆಳ್ವಿಕೆ ಆರಂಭವಾಯಿತು. 1810ರಲ್ಲಿ ಬ್ರಿಟಿಷರು ದ್ವೀಪದ ಸಮಸ್ಯೆಗಳಿಗೆ ದಾರಿ ಹುಡುಕಿದರು. ಹೀಗೆ ಅರಬರಿಂದ ಆಸ್ಟ್ರೋನೇಷಿಯನ್ ಕಾಲದವರೆಗೆ ಆಡಳಿತ ನಡೆದು ಮಾರಿಷಸ್ ಸ್ವತಂತ್ರವಾಯಿತು. ಇದಕ್ಕೆ ಭಾರತದ ಕಾರ್ಮಿಕರ ಕೊಡುಗೆಯೂ ಮಹತ್ವದ್ದು. ಮಾರಿಷಸ್‌ನ ಪ್ರಥಮ ಪ್ರಧಾನಮಂತ್ರಿ ಶಿವಸಾಗರ್ ರಾಮ್ಗೂಲಂ ಭಾರತದವರು. ಈಗ ಪ್ರಧಾನಮಂತ್ರಿಯಾಗಿರುವವರು ಅವರ ಮಗನೇ.

ಮಾರ್ಕ್ ಟ್ವೇಯನ್ ಬರೆದ 'ಫಾಲೋಯಿಂಗ್ ದಿ ಇಕ್ವೇಟರ್' ಓದುತ್ತಿದ್ದಾಗ, ಸೃಷ್ಟಿಕರ್ತ ಮೊದಲು ಮಾರಿಷಸ್ ಸೃಷ್ಟಿಸಿ ಆನಂತರ ಸ್ವರ್ಗವನ್ನು ಸೃಷ್ಟಿಸಿದ ಎಂಬ ಮಾತು ಬರುತ್ತದೆ. ಇಲ್ಲಿನ ಕೌತುಕದ ಇತಿಹಾಸ ಗಮನಿಸಿ ಈ ದ್ವೀಪಕ್ಕೆ ಹೊರಟೆ. ವಿಮಾನದ ಕಿಟಕಿಯ ಮೂಲಕ ಮಾರಿಷಸ್ ಹಿಂದೂ ಮಹಾಸಾಗರದಲ್ಲಿ ನೀಲಮಣಿಯಂತೆ ಕಂಗೊಳಿಸುತ್ತಿತ್ತು. ಅಂಕುಡೊಂಕು ರಸ್ತೆಯಲ್ಲಿ ಕಾರುಗಳು ಇರುವೆಯಂತೆ ಸಾಲುಗಟ್ಟಿದ್ದವು. ಕಣ್ಣು ಹಾಯಿಸಿದಷ್ಟು ದೂರ ಹಸುರಿನ ಕಬ್ಬಿನ ಗದ್ದೆ, ಆಗಸದಲ್ಲಿ ಅರಳೆ ರಾಶಿಯಂಥ ಮೋಡ, ನೆಲ ಉಳಿಸಲೆಂದೇ ಕಟ್ಟಿದ ಗಗನಚುಂಬಿ ಕಟ್ಟಡಗಳು ಕಾಣಿಸುತ್ತಿದ್ದವು.

ಲೀ ಆ್ಯಕ್ಸ್ ಸರ್ಫ್ ಲಗೂನು ನೀಲಿ ಕಡಲ ಕಿನಾರೆ ನೋಡಲು ಪ್ರಶಾಂತವಾಗಿತ್ತು. ಬಿಸಿಲೇರುತ್ತಿದ್ದಂತೆ ಮಳೆ ಸುರಿದು ಸ್ತಬ್ಧವಾಯಿತು. ಸುತ್ತ ಸ್ನಾರ್ ಕೆಲಿಂಗ್, ಸ್ಕೂಬಾ ಡೈವಿಂಗ್, ಯಾಚಿಂಗ್ ಹಾಗೂ ಸರ್ಫ್ ಬೋಟಿಂಗ್ ಮಾಡುವ ಸಾಹಸಿಗರ ಗುಂಪೇ ಕಾಣುತ್ತಿತ್ತು. ಮಕ್ಕಳು, ಮುದುಕರು, ಮಹಿಳೆಯರು ಗಾಜಿನ ತಳವಿರುವ ಬೋಟಲ್ಲಿ ಕುಳಿತು ಬಣ್ಣಬಣ್ಣದ ಮೀನು, ಹವಳದ ಗುಚ್ಛಗಳನ್ನು ನೋಡುವುದರಲ್ಲಿ ತಲ್ಲೀನರಾಗಿದ್ದರು. ಗಾಲ್ಫ್ ಕೋರ್ಟ್, ತಿಂಡಿ ಅಂಗಡಿ, ಚಾರಣಿಗರ ಟೆಂಟ್ ಗಮನ ಸೆಳೆಯುತ್ತಿದ್ದವು. ಹೈಸ್ಪೀಡ್ ಬೋಟಲ್ಲಿ ಗ್ರ್ಯಾಂಡ್ ರಿವರ್ ಸೌತ್ ಈಸ್ಟ್ ಜಲಪಾತಕ್ಕೆ ಹೊರಟಾಗ ಹಸಿರು ಕೋವಿ ರೋಮಾಂಚನಗೊಳಿಸಿತ್ತು. ಅದು ಮಾರಿಷಸ್ ದ್ವೀಪದ ಅತಿ ಉದ್ದವಾದ ನದಿ. ಡಚ್ಚರು ದಟ್ಟವಾದ ಎಬೋನಿ ಮರಗಳನ್ನು ಕಡಿದು ಸ್ವದೇಶಕ್ಕೆ ಸಾಗಿಸಿದ್ದು ಈ ನದಿಯ ಮೂಲಕವೇ.

ಲಗೂನಿನ ಮತ್ತೊಂದು ಪಾರ್ಶ್ವದಿಂದ 6,574 ಹೆಕ್ಟೇರ್ ವಿಶಾಲವಾದ ಬ್ಲ್ಯಾಂಕ್ ರಿವರ್ ಗಾರ್ಜ್ ಹರಡಿಕೊಂಡಿತ್ತು. ಶಿಲಾ ಪರ್ವತ, ಬಣ್ಣದ ಮರಳುಗಲ್ಲು, ಹುಲ್ಲುಗಾವಲು, ಹೈಕಿಂಗ್ ಸಮಿಟ್, ಗುಹೆ, ಸಸ್ಯರಾಶಿ, ಪ್ರಾಣಿ, ಪಕ್ಷಿಗಳು ಪ್ರವಾಸಿಗರಿಗೆ ಮನತಣಿಸುತ್ತಿದ್ದವು. ದ್ವೀಪದ ಅಳಿದುಳಿದ ಜೀವಿಗಳ ಸಂರಕ್ಷಣೆಗೆ ಅಲ್ಲಿ ಯೋಜನೆ ರೂಪಿಸಿದ್ದರು. ಹತ್ತಿರದ ಬೆಟ್ಟದ ನೆತ್ತಿಯಲ್ಲಿ ಗಂಗಾ ತಾಲೋ ಎಂಬ ಮತ್ತೊಂದು ಜಾಗಕ್ಕೆ ಹೆಜ್ಜೆ ಇರಿಸಿದೆವು. 108 ಅಡಿ ಎತ್ತರದ ಶಿವನ ಪ್ರತಿಮೆ ಹಾಗೂ ದುರ್ಗಾ ಪ್ರತಿಮೆ ಎದ್ದು ಕಾಣುತ್ತಿದ್ದವು. ಗ್ರ್ಯಾಂಡ್‌ಬೇಸಿನ್ ಎಂಬ ಅಗ್ನಿಪರ್ವತದ ಕ್ರೇಟರ್ ಸರೋವರ, ಸುತ್ತ ದಟ್ಟಕಾಡಿನಿಂದ ಕೂಡಿದ್ದು ಆಕರ್ಷಕವಾಗಿದೆ. ಗಂಗಾ ನದಿ ಗುಪ್ತಗಾಮಿನಿಯಾಗಿ ಬಂದು ಗಂಗಾತಾಲೋಗೆ ಬಂದು ಸೇರುತ್ತದೆಂಬುದು ಅಲ್ಲಿಯ ನಂಬಿಕೆ.

ಗಂಗಾತಾಲೋದಿಂದ ಬರೋಬ್ಬರಿ 30 ಕಿ.ಮೀ. ದೂರದ ಆ ತಾಣ ತಲುಪುತ್ತಲೇ ದಟ್ಟಕಾಡಿನ ಗರ್ಭದಿಂದ ಡುಕಸಾನೋ ನದಿ ಬಸಾಲ್ಟ್ ಕ್ಲಿಫ್‌ನ ಆಳ ಬಾವಿಯೊಳಗೆ 300 ಅಡಿ ಜಲಪಾತ ಧುಮುಕಿ ಇಡೀ ಕಣಿವೆಯೇ ಮಾರ್ದನಿಸುತ್ತಿತ್ತು. 1800ರಲ್ಲಿ ಚಾರ್ಲಸ್ ಚಾಮರೆಲ್ ಜಲಪಾತವನ್ನು ಪತ್ತೆ ಮಾಡಿದ್ದಲ್ಲದೇ, ಮನೆ ಕಟ್ಟಿಕೊಂಡು ವಾಸಿಸುತ್ತಿದ್ದ. ಇಂದಿಗೂ ಜಲಪಾತಕ್ಕೆ ಮಾತ್ರವಲ್ಲ, ಹತ್ತಿರದ ಊರಿಗೂ ಚಾಮರೆಲ್ ಎನ್ನುತ್ತಾರೆ.

ಪಕ್ಕದಲ್ಲಿಯೇ ಏಳು ಬಣ್ಣದ ದಿಣ್ಣೆ (Seven Color hill) ಎಂಬ ವಿಸ್ಮಯವಿತ್ತು. ಎಳೆಬಿಸಿಲಿಗೆ ದಿಣ್ಣೆ, ಕಲ್ಲಂಗಡಿ ಹೋಳಿನಂತೆ ಪದರ ಪದರವಾಗಿ ಕೆಂಪು, ಹಳದಿ, ಕಂದು, ನೇರಳೆ ಹಾಗೂ ಕಪ್ಪು ಬಣ್ಣದಲ್ಲಿ ಕಾಣಿಸುತ್ತಿತ್ತು. 'ಲೆಸ್ ಕೋಟ್ಸ್ ಡಿ ಮೆಲಾನ್' ಎಂದು ಮಾರಿಷಸ್ ಭಾಷೆಯಲ್ಲಿ ಅವುಗಳನ್ನು ಕರೆಯಲಾಗಿದೆ. ಐದು ಮಿಲಿಯನ್ ವರ್ಷಗಳ ಹಿಂದೆ ಅಗ್ನಿಪರ್ವತದ ಲಾವಾ ಉಕ್ಕಿ ಹರಿದು ಸುಣ್ಣ, ಪೊಟ್ಯಾಷ್, ಕಬ್ಬಿಣಾಂಶ ಪಾಸ್ಫೋರಿಕ್ ಆಮ್ಲದಂಥ ರಾಸಾಯನಿಕಗಳು ಘನೀರ್ಭವಿಸಿ ದಿಣ್ಣೆ ಸೃಷ್ಟಿಯಾದವೆಂದು ವಿಜ್ಞಾನಿಗಳು ವಿಶ್ಲೇಷಿಸುತ್ತಾರೆ.

ದಕ್ಷಿಣ ಗೋಳಾರ್ಧದ 300 ವರ್ಷ ಇತಿಹಾಸದ ರಾಮ್ಗೂಲಂ ಸಸ್ಯೋದ್ಯಾನಕ್ಕೆ ಭೇಟಿ ನೀಡಿದೆವು. 85 ಜಾತಿಯ ತಾಳೆಮರ, 650 ಬಗೆಯ ದೇಸಿ ಹಾಗೂ ವಿವಿಧ ದೇಶದ ಸಸ್ಯತಳಿಗಳನ್ನು ನೋಡಿ ಬೆರಗಾದೆವು. ಅತಿ ದೊಡ್ಡ ವಾಟರ್ ಲಿಲ್ಲಿ ಹಾಗೂ ಕಮಲದ ಹೂವಿನ ಕೊಳವಂತೂ ಮನಮೋಹಕ. ಅಂಚಿನಲ್ಲಿ ಮಡಿಸಿಕೊಂಡ ಹಣತೆಯಂಥ ಗಂಗಾಳದ ಎಲೆಗಳಂತೂ ಲಿಲ್ಲಿ ಕೊಳದಲ್ಲಿ ರಾರಾಜಿಸುತ್ತಿದ್ದವು. ಕೆಂಪು ಪೋಡಿ, ಅರಿಸಿನ ಗುಬ್ಬಿ, ಜೀಬ್ರಾ ಪಾರಿವಾಳ, ಹಸಿರು ಹಾವ್ರಾಣಿ, ಬಾತುಕೋಳಿ, ಜಿಂಕೆ, ಕಡವೆ, ಆಮೆ ಇವು ಕುತೂಹಲವನ್ನು ತಣಿಸುತ್ತಿದ್ದವು.

ಲಂಡನ್ನಿನ ಕೀವ್ ಗಾರ್ಡನ್ ಬಿಟ್ಟರೆ ಜಗತ್ತಿನಲ್ಲಿ ಇದೇ ದೊಡ್ಡ ಸಸ್ಯೋದ್ಯಾನ ಎಂದು ಗೈಡ್ ಹೆಮ್ಮೆಯಿಂದ ಹೇಳುತ್ತಿದ್ದರು.

ಮಧ್ಯಾಹ್ನ ಕಸೇಲಾ ನೇಚರ್ ಪಾರ್ಕಿಗೆ ಕಾಲಿರಿಸಿದೆವು. ಕ್ವಾಡ್ ಬೈಕಿಂಗ್, ಜಿಪ್ ಲೈನಿಂಗ್, ಹೈಕಿಂಗ್‌ನಂಥ ಸಾಹಸ ಕ್ರೀಡೆ ಒಂದು ಕಡೆಯಾದರೆ, ಮತ್ತೊಂದು ಕಡೆ ಹುಲಿ, ಸಿಂಹ, ಚಿರತೆಯಂಥ ತರಬೇತಿ ಪಡೆದ ಪ್ರಾಣಿಗಳ ಜೊತೆ ನಡೆಯುವ ಪ್ರವಾಸಿಗರ ಧೈರ್ಯ ಮೆಚ್ಚುವಂತಿತ್ತು. ಜಿರಾಫೆ, ಜೀಬ್ರಾ, ಘೇಂಡಾಮೃಗದಂಥ ವೈವಿಧ್ಯಮಯ ಪ್ರಾಣಿಲೋಕದ ತೆರೆದ ಬಯಲು ಕಸೇಲಾ ಪಾರ್ಕ್ ಎಂದರೆ ತಪ್ಪಲ್ಲ.

ಏಳು ಬಣ್ಣದ ದಿಣ್ಣೆ

ಮಾರಿಷಸ್ ವಿಕಾಸವಾದದ್ದು ಎಂಟು ಮಿಲಿಯನ್ ವರ್ಷಗಳ ಹಿಂದೆ. 200 ಮಿಲಿಯನ್ ವರ್ಷಗಳ ಹಿಂದೆ ಗೊಂಡ್ವಾನಾ ಎಂಬ ಸೂಪರ್ ಕಾಂಟಿನೆಂಟ್ ಸಾಗರದಲ್ಲಿ ಮುಳುಗಿದಾಗ ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ ಹಾಗೂ ಅಂಟಾರ್ಕ್ಟಿಕಾ ಭೂಖಂಡಗಳು ಒಡೆದು ದೂರ ಸರಿದವು. ಹಿಂದೂ ಮಹಾಸಾಗರ ಉದ್ಭವಿಸಿತು. ಅಗ್ನಿಪರ್ವತವೊಂದು ಸ್ಫೋಟವಾಗಿ ಮಡಗಾಸ್ಕರ್ ದ್ವೀಪ ಮುರಿದುಹೋಗಿ ಚಿಕ್ಕ ಚಿಕ್ಕ ಚೂರು ಸವಕಳಿಗೊಂಡು ಮುಳುಗಿ ಮಾರಿಷಸ್ ಮಾತ್ರ ಉಳಿದುಕೊಂಡಿತು.

ಮಾರಿಷಸ್ ದ್ವೀಪ ಎನ್ನಲು ಕ್ರೇಟರ್ ಸರೋವರ, ಏಳು ಬಣ್ಣದ ದಿಣ್ಣೆ, ಕಪ್ಪು ಬಣ್ಣದ ಬೀಚು, ಸಿಂಹ ಶಿಖರ, ಸ್ಲೀಪಿಂಗ್ ಲೇಡಿಯಂಥ ಸಾಕ್ಷಾಧಾರಗಳು ಇಂದಿಗೂ ಜೀವಂತವಾಗಿವೆ. ಕೇವಲ 500 ವರ್ಷಗಳ ಹಿಂದೆ ನಿರ್ಜನವಾಗಿದ್ದ ಈ ದ್ವೀಪ ಫ್ರೆಂಚರ ಮತ್ತು ಬ್ರಿಟಿಷರ ಆಡಳಿತಾವಧಿಯಲ್ಲಿ ಬದಲಾವಣೆ ಕಂಡಿತು.

ಡಚ್ಚರೇ ಮಾರಿಷಸ್‌ನಲ್ಲಿ ಜಾವಾದಿಂದ ಕಬ್ಬು ತಂದು ಬೆಳೆದರೂ, ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಿದ್ದು ಫ್ರೆಂಚರು. ಸಾವಿರಾರು ಕಾರ್ಮಿಕರು ಭಾರತ, ಚೀನಾ, ಆಫ್ರಿಕಾಗಳಿಂದ ಬಂದರು. ಮತಾಂತರಕ್ಕೆ ಒಪ್ಪದ, ಹೇಳಿದ ಕೆಲಸ ಮಾಡದವರಿಗೆ ಮರಣದಂಡನೆಯಂಥ ಕ್ರೌರ್ಯ ಅಟ್ಟಹಾಸವನ್ನು ಮೆರೆಯಲಾಯಿತು. ಗುಲಾಮಗಿರಿಯ ವಿರುದ್ಧ ಕಾರ್ಮಿಕರು ದಂಗೆ ಎದ್ದರು. ಸಾವಿರರು ಅಮಾಯಕರು ತಲೆಮರೆಸಿಕೊಂಡು 'ಲೇಮೋರ್ನ್ ಬ್ರಾಬಂಟ್' ಗುಹೆಗಳಲ್ಲಿ ಅಡಗಿ ಕುಳಿತರು.

